ಮನುಷ್ಯ ಜಾತಿ
ತಾನೊಂದೆ ವಲಂ

# ಕಾವ್ಯಾನಂದರ ಬದುಕು ಮತ್ತು ಕಾವ್ಯ

ಪ್ರಕಾಶ ಗಿರಿಮಲ್ಲನವರ ಬೆಳಗಾವಿ



ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.

# ಕಾವ್ಯಾನಂದರ ಬದುಕು ಮತ್ತು ಕಾವ್ಯ

ಡಾ. ಪ್ರಕಾಶ ಗಿರಿಮಲ್ಲನವರ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮.

**KAVYAANANDARA BADUKU MATTU KAAVYA:** Written by: Dr. Prakash Girimallanavara, *Published by*: **Dr. Manu Baligar,** President, **Kannada Sahitya Parishattu,** Pampa Mahakavi Road, Chamarajapete, Bengaluru - 560018, Pages : 96 + viii Price : Rs.100=00 : **2018.**

ಪ್ರಥಮ ಮುದ್ರಣ : ೨೦೧೮
ಪ್ರತಿಗಳು : ೫೦೦
ಬೆಲೆ : ಒಂದು ನೂರು ರೂಪಾಯಿಗಳು

© ಕಾಯ್ದಿರಿಸಿದೆ.

ಪ್ರಕಟಣಾ ಸಮಿತಿ

**ಡಾ. ಮನು ಬಳಿಗಾರ್**
ಅಧ್ಯಕ್ಷರು

ಸದಸ್ಯರು

ಶ್ರೀ ಜರಗನಹಳ್ಳಿ ಶಿವಶಂಕರ್
ಡಾ. ಮೂಡ್ನಾಕೂಡು ಚಿನ್ನಸ್ವಾಮಿ
ಪ್ರೊ. ಧರಣೇಂದ್ರ ಕುರಕುರಿ
ಶ್ರೀ ರಂಜಾನ್ ದರ್ಗಾ
ಡಾ. ಬಿ.ಕೆ. ರವಿ
ಡಾ. ತಮಿಳ್ ಸೆಲ್ವಿ
ಡಾ. ದೊಡ್ಡಮಲ್ಲಯ್ಯ
ಡಾ. ಎಚ್.ಎಲ್. ಪುಷ್ಪ
ಶ್ರೀ ಎ.ಆರ್. ಉಜ್ಜನಪ್ಪ
ಶ್ರೀ ಸಂಜಯ ಅಡಿಗ
ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಗೌರವ ಕಾರ್ಯದರ್ಶಿಗಳು
ಡಾ. ರಾಜಶೇಖರ ಹತಗುಂದಿ
ಶ್ರೀ ವ.ಚ. ಚನ್ನೇಗೌಡ

ಗೌರವ ಕೋಶಾಧ್ಯಕ್ಷರು
ಶ್ರೀ ಪಿ. ಮಲ್ಲಿಕಾರ್ಜುನಪ್ಪ

ಡಾ. ಪದ್ಮರಾಜ ದಂಡಾವತಿ
ಸಂಚಾಲಕರು, ಪ್ರಕಟಣಾ ವಿಭಾಗ

ಸಮ್ಮೇಳನಾಧ್ಯಕ್ಷರು – ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)
೮೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಮುಖಪುಟ ಕಲಾವಿನ್ಯಾಸ : ಚಂದ್ರಕಾಂತ ಪಟ್ಟಣ

ಮುದ್ರಣ : ಬಿ.ಎಂ.ಶ್ರೀ. ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು

## ಅಧ್ಯಕ್ಷರ ನುಡಿ

ಕನ್ನಡ ನಾಡು ಹಾಗೂ ನುಡಿಯನ್ನು ಜಾಗತಿಕವಾಗಿ ಪ್ರತಿನಿಧಿಸುವ ಏಕೈಕ ಸಂಸ್ಥೆ ಎಂದರೆ ಕನ್ನಡ ಸಾಹಿತ್ಯ ಪರಿಷತ್ತು. ಅದಕ್ಕೆ ಈಗ ನೂರಾ ನಾಲ್ಕು ವರ್ಷಗಳು ತುಂಬಿರುವುದು ನಮಗೆಲ್ಲ ಹೆಮ್ಮೆಯ ಹಾಗೂ ಸಂತೋಷದ ಸಂಗತಿ. ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಇತಿಹಾಸ ಇವುಗಳ ರಕ್ಷಣೆ ಹಾಗೂ ಅಭಿವೃದ್ಧಿಯ ಮುಖ್ಯ ಉದ್ದೇಶ ಇಟ್ಟುಕೊಂಡು ೧೯೧೫ ರಲ್ಲಿ ಸ್ಥಾಪಿತವಾದ ಪರಿಷತ್ತು ಕಳೆದ ನೂರಾನಾಲ್ಕು ವರ್ಷಗಳಲ್ಲಿ ನೂರಾರು ಜನ ವಿದ್ವಾಂಸರ, ನಾಡು ಹಾಗೂ ನುಡಿಯ ಅಭಿಮಾನಿಗಳ ಬೆಂಬಲ ಹಾಗೂ ಸರ್ಕಾರದ ಪ್ರೋತ್ಸಾಹ ಪಡೆದುಕೊಂಡು ಜನರಲ್ಲಿ ಹೊಸ ಹುಮ್ಮಸ್ಸನ್ನೂ, ಭಾಷಾ ಅಭಿಮಾನವನ್ನೂ ತುಂಬುತ್ತ ಬಂದಿದೆ. ಕನ್ನಡಕ್ಕೆ ಕಷ್ಟ ಬಂದಾಗಲೆಲ್ಲ ಅದು ಜನಭಾಷೆಯ ಪರವಾಗಿ ಧ್ವನಿ ಎತ್ತಿದೆ. ಅದರಿಂದಾಗಿಯೇ ಕನ್ನಡ ಸಾಹಿತ್ಯ ಪರಿಷತ್ತು ಇಂದು ಕರ್ನಾಟಕದ ಪ್ರಬಲ ಸಾಂಸ್ಕೃತಿಕ ಪ್ರಾತಿನಿಧಿಕ ಕೇಂದ್ರ ಎನಿಸಿದೆ. ಪರಿಷತ್ತಿಗೆ ಇರುವ ಈ ವರ್ಚಸ್ಸು ಕನ್ನಡದ ಇನ್ನು ಯಾವುದೇ ಸಂಸ್ಥೆಗೆ ಇಲ್ಲ. ನಾಡಿನುದ್ದಕ್ಕೂ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಪರಿಷತ್ತು ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸುತ್ತ ಬಂದಿದೆ. ಕನ್ನಡ ಬದುಕಿನ ಬಹುಮುಖಿ ಆಯಾಮಗಳಿಗೆ ಅದು ಆಲೋಚನೆ, ಅಕ್ಷರ ಹಾಗೂ ಕ್ರಿಯೆಗಳ ಮೂಲಕ ಸ್ಪಂದಿಸುತ್ತಿದೆ.

ಪರಿಷತ್ತು ಸಾಹಿತ್ಯ ಸಮ್ಮೇಳನಗಳ ಜೊತೆಗೆ ಪುಸ್ತಕ ಪ್ರಕಟಣೆಗೂ ಒತ್ತಾಸೆಯಾಗಿ ನಿಂತುಕೊಂಡಿದೆ. ಸೃಜನಶೀಲ ಕೃತಿಗಳು ಮಾತ್ರವಲ್ಲದೇ, ಸೃಜನೇತರ ವಲಯದ ಅಂದರೆ ನಿಘಂಟು, ವ್ಯಾಕರಣ, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಸಂಶೋಧನೆ, ತತ್ವವಿಚಾರ, ಶಾಸನ ಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಪತ್ರಿಕೋದ್ಯಮ... ಹೀಗೆ ಹಲವು ಜ್ಞಾನ ಕ್ಷೇತ್ರಗಳ ಸಾವಿರಾರು ಕೃತಿಗಳನ್ನು ಪ್ರಕಟಿಸಿ ಸುಲಭ ದರದಲ್ಲಿ ಕನ್ನಡದ ಕುಲಕೋಟಿಯ ಮನೆ ಹಾಗೂ ಮನಸ್ಸುಗಳನ್ನು ಮುಟ್ಟಿದೆ. ಇದರ ಮುಖ್ಯ ಉದ್ದೇಶ, ಎಲ್ಲ ಬಗೆಯ ಅಭಿವ್ಯಕ್ತಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು. ಈ ಕಾರ್ಯದಲ್ಲಿ ದತ್ತಿ ದಾನಿಗಳೂ ನಮ್ಮ ಜೊತೆಗೆ ಕೈ ಜೋಡಿಸಿದ್ದಾರೆ.

ಡಾ.ಸಿದ್ದಯ್ಯ ಪುರಾಣಿಕರು ಕನ್ನಡದ ಶ್ರೇಷ್ಠ ಲೇಖಕರಲ್ಲಿ ಒಬ್ಬರು. ಆಡಳಿತದಲ್ಲಿ ಮತ್ತು ಸಾಹಿತ್ಯ ಕೃಷಿಗಳೆರಡರಲ್ಲಿಯೂ ಅವರ ಹಾಗೆ ಹೆಸರು ಮಾಡಿದವರು ವಿರಳ. 'ಏನಾದರೂ ಸರಿಯೆ ಮೊದಲು ಮಾನವನಾಗು' ಎಂದು ಹಾಡಿದ ಡಾ.ಪುರಾಣಿಕರು ಮನುಷ್ಯನಿಗೆ ಮಾನವೀಯತೆ ಎಷ್ಟು ಮುಖ್ಯ ಎಂದು ತಮ್ಮ ಕಾವ್ಯದಲ್ಲಿ ಪ್ರತಿಪಾದಿಸಿದವರು. 'ಮಾನವ ಕುಲ ತಾನೊಂದೆ ವಲಂ' ಎಂಬ ಆದಿಕವಿ ಪಂಪನ ಮಾತಿನ ಮುಂದುವರಿಕೆಯಂತೆ ಪುರಾಣಿಕರು ಕಾವ್ಯ ಕೃಷಿ ಮಾಡಿದವರು.

ಅವರ ಜನ್ಮ ಶತಮಾನೋತ್ಸವ ನಡೆದುದು ೨೦೧೭ರಲ್ಲಿ. ಅದರ ಪ್ರಯುಕ್ತ ಎನ್ನುವಂತೆ ಅವರ ಬದುಕು ಮತ್ತು ಕಾವ್ಯ ಕುರಿತು ಪ್ರಕಾಶ ಗಿರಿಮಲ್ಲನವರ ಅವರು ಈ ಪುಸ್ತಕದಲ್ಲಿ ಅತ್ಯಂತ ಸೊಗಸಾಗಿ ಹಾಗೂ ಮಾಹಿತಿಪೂರ್ಣವಾಗಿ ಚಿತ್ರಿಸಿದ್ದಾರೆ. ಕಾವ್ಯಾನಂದ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದ ಡಾ.ಸಿದ್ದಯ್ಯ ಪುರಾಣಿಕರಿಗೆ ಇದಕ್ಕಿಂತ ದೊಡ್ಡ ಶ್ರದ್ಧಾಂಜಲಿ ಇನ್ನೊಂದು ಇರಲಾರದು ಎಂದು ನಾನು ಭಾವಿಸಿದ್ದೇನೆ.

ಇಂಥ ಕೃತಿಯನ್ನು ಪ್ರಕಟಿಸಲು ಕನ್ನಡ ಸಾಹಿತ್ಯ ಪರಿಷತ್ತಿಗೆ ಹೆಮ್ಮೆ ಅನಿಸುತ್ತದೆ. ಓದುಗರಿಗೂ ಈ ಕೃತಿ ಇಷ್ಟವಾಗುತ್ತದೆ ಎಂದು ನಾನು ಭಾವಿಸಿರುವೆ.

೦೧-೧೧-೨೦೧೮

ಡಾ. ಮನು ಬಳಿಗಾರ್
ಅಧ್ಯಕ್ಷರು

# ಲೇಖಕರ ನುಡಿ

ಡಾ. ಸಿದ್ಧಯ್ಯ ಪುರಾಣಿಕರು ನಮ್ಮ ನಾಡು ಕಂಡ ಶ್ರೇಷ್ಠ ವಿದ್ವಾಂಸರು. ತಮ್ಮ ಅಮೂಲ್ಯ ಸಾಹಿತ್ಯ ಸೇವೆಯ ಮೂಲಕ ಕನ್ನಡ ವಿದ್ವತ್‌ಪ್ರಪಂಚವನ್ನು ಸಿರಿವಂತಗೊಳಿಸಿದವರು. ಕವನ, ಕಥೆ, ನಾಟಕ, ಆಧುನಿಕ ವಚನ, ಮಕ್ಕಳ ಸಾಹಿತ್ಯ, ಜೀವನ ಚರಿತ್ರೆ, ಅನುವಾದ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಅವರು ಮಾಡಿದ ಕೃಷಿ ಅಪಾರವಾದುದು. ೭೦ಕ್ಕೂ ಮಿಕ್ಕಿ ಕೃತಿಗಳನ್ನು ಪ್ರಕಟಿಸಿರುವ ಡಾ. ಸಿದ್ಧಯ್ಯ ಪುರಾಣಿಕರು ಆಡಳಿತ ಕ್ಷೇತ್ರದಲ್ಲಿದ್ದವರು. ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರಂತೆ ಇವರೂ ಜಿಲ್ಲಾಧಿಕಾರಿಗಳಾಗಿದ್ದರು. ಹೀಗೆ ಆಡಳಿತ ಕ್ಷೇತ್ರದ ನೂರೆಂಟು ಕೆಲಸಗಳ ಮಧ್ಯೆಯೂ ಅವರು ಸಾಹಿತ್ಯಸೇವೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಬಂದಿದ್ದರು.

ಡಾ. ಸಿದ್ಧಯ್ಯ ಪುರಾಣಿಕರು ಬೆಳಗಾವಿಯಲ್ಲಿ ಜಿಲ್ಲಾಧಿಕಾರಿಗಳಾಗಿದ್ದರು. ಹೀಗಾಗಿ ಸಹಜವಾಗಿಯೇ ನನಗೆ ಒಂದು ಹೆಮ್ಮೆ. ಅಲ್ಲದೆ ಮಿರ್ಜಿ ಅಣ್ಣಾರಾಯರು ಪುರಾಣಿಕರಿಗೆ ಮೊಟ್ಟಮೊದಲು 'ಕಾವ್ಯಾನಂದ' ಎಂಬ ಅಭಿನಂದನ ಗ್ರಂಥವನ್ನು ಪ್ರಕಟಿಸಿ ಅರ್ಪಿಸಿದ್ದರು. ಬೆಳಗಾವಿ ಜಿಲ್ಲೆಯ ಅವರ ನಂಟು ಅತ್ಯಂತ ಆತ್ಮೀಯ ಮತ್ತು ಪ್ರೀತಿಯಿಂದ ಕೂಡಿತ್ತು. ಮುರುಗೋಡ ಮಹಾಂತ ಶಿವಯೋಗಿಗಳು, ನಾಗನೂರು ಶ್ರೀ ಶಿವಬಸವ ಸ್ವಾಮಿಗಳು ಇಬ್ಬರೂ ಶತಾಯುಷಿ ಶ್ರೀಗಳು. ಅವರಿಬ್ಬರ ಕುರಿತು ಡಾ. ಪುರಾಣಿಕರಿಗೆ ಅಪಾರ ಭಕ್ತಿ ಗೌರವ.

ನಾನು ಬಾಲ್ಯದಿಂದಲೂ ಡಾ. ಪುರಾಣಿಕರ ಕೃತಿಗಳನ್ನು ಓದುತ್ತ ಬಂದವನು. ನಾನು ಮೂರನೆಯ ತರಗತಿಯಲ್ಲಿದ್ದಾಗ ಪುರಾಣಿಕರ 'ಕರಡಿ ಕುಣಿತ' ಎಂಬ ಪದ್ಯ ಪಠ್ಯದಲ್ಲಿತ್ತು. ಆ ಹಾಡು ಇಂದಿಗೂ ನನ್ನ ನೆನಪಿನಾಳದಲ್ಲಿದೆ. ಪುರಾಣಿಕರು ಬರೆದ 'ಶರಣ ಚರಿತಾಮೃತ' 'ವಚನೋದ್ಯಾನ' ಕೃತಿಗಳು ನನ್ನ ಮನಸ್ಸಿನಾಳದಲ್ಲಿ ಆಳವಾದ ಪ್ರಭಾವ ಬೀರಿದವು. ಅವರು ಬರೆದ 'ಹರ್ಡೇಕರ ಮಂಜಪ್ಪ' ಮತ್ತು 'ಬಸವಣ್ಣನವರ ಜೀವನ ಮತ್ತು ಸಂದೇಶ' ಪುಸ್ತಕಗಳು ಇನ್ನಷ್ಟು ಪ್ರಭಾವ ಬೀರಿದವು. ಹೀಗಾಗಿ ಪುರಾಣಿಕರ ಬಹುತೇಕ ಕೃತಿಗಳನ್ನು ನಾನು ಓದಿದೆ. ಅವುಗಳ ಓದಿನಿಂದ ನನ್ನ ಜ್ಞಾನದ ಕ್ಷಿತಜ ವಿಸ್ತಾರವಾಯಿತು.

೨೦೧೭ ಈ ವರ್ಷ ಡಾ. ಸಿದ್ಧಯ್ಯ ಪುರಾಣಿಕರ ಜನ್ಮಶತಮಾನೋತ್ಸವ ವರ್ಷ. ಅವರನ್ನು ಕುರಿತು ಒಂದು ಕೃತಿಯನ್ನು ರಚಿಸಬೇಕೆಂದು ಆಲೋಚಿಸಿದೆ. ನನ್ನ ಆಶಯಕ್ಕೆ ಬೆಂಬಲವಾಗಿ ನಿಂತವರು ಡಾ. ಪುರಾಣಿಕರ ಅವರ ಮಗ ಪ್ರೊ. ಪ್ರಸನ್ನಕುಮಾರ ಅವರು. ನನಗೆ ಬೇಕಾದ ಕೃತಿಗಳನ್ನು ಅವರು ಒದಗಿಸಿ ಈ ಕೃತಿ ಪರಿಪೂರ್ಣತಗೆ ಸಾಕ್ಷಿಯಾಗಿದ್ದಾರೆ. ಗದುಗಿನ ತೋಂಟದಾರ್ಯ ಸಂಸ್ಥಾನಮಠದ ಲಿಂಗಾಯತ ಅಧ್ಯಯನ ಸಂಸ್ಥೆಯ ಕಾರ್ಯದರ್ಶಿಗಳಾಗಿರುವ ಶ್ರೀ ಶಿವನಗೌಡ ಗೌಡರ ಅವರು ಪುರಾಣಿಕರು ಬರೆದ ಹರ್ಡೇಕರ ಮಂಜಪ್ಪ ಮತ್ತು ಜಿ.ಎಸ್. ಸಿದ್ಧಲಿಂಗಯ್ಯ ಬರೆದ 'ಸಿದ್ಧಯ್ಯ ಪುರಾಣಿಕ' ಕೃತಿಗಳನ್ನು ಕೊಟ್ಟು ಉಪಕರಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತಾಪೂರ್ವಕ ನಮನಗಳು.

ಕೃತಿ ರಚನೆ ಮಾಡುತ್ತಿರುವ ವಿಷಯ ತಿಳಿದ ಡಾ. ಪುರಾಣಿಕರ ಕಿರಿಯ ಸಹೋದರ ಡಾ. ಬಸವರಾಜ ಪುರಾಣಿಕ ಅವರು ತುಂಬ ಸಂತೋಷ ಪಟ್ಟಿದ್ದರು. ಆದರೆ ನನ್ನ ಕೃತಿ ಪೂರ್ಣಗೊಳ್ಳುವ ಮೊದಲೇ ಅವರು ಲಿಂಗೈಕ್ಯರಾದುದು ನನಗೆ ದುಃಖವನ್ನುಂಟು ಮಾಡಿದೆ.

ನನ್ನ ಸಾಹಿತ್ಯಿಕ ಬೆಳವಣಿಗೆಗೆ ಸದಾಕಾಲ ಆಶೀರ್ವದಿಸುತ್ತಿರುವ ಗದಗ ತೋಂಟದಾರ್ಯ ಸಂಸ್ಥಾನಮಠದ ಪೂಜ್ಯ ಶ್ರೀ ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಅವರ ಶ್ರೀಚರಣಗಳಿಗೆ ನನ್ನ ನಮನಗಳು.

ಪ್ರಸ್ತುತ ಕೃತಿಯನ್ನು ಪ್ರಕಟಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಹಿರಿಯ ಸಾಹಿತಿಗಳೂ ನನ್ನ ಹಿತೈಷಿಗಳೂ ಆದ ಡಾ. ಮನು ಬಳಿಗಾರ ಸಾಹೇಬರಿಗೆ ನನ್ನ ಅನಂತ ವಂದನೆಗಳು. ಸಿದ್ಧಯ್ಯ ಪುರಾಣಿಕರಂತೆ ಡಾ. ಮನು ಬಳಿಗಾರ ಸಾಹೇಬರು ಹಿರಿಯ ಕೆ.ಎ.ಎಸ್. ಅಧಿಕಾರಿಗಳಾಗಿ ಕನ್ನಡ ನಾಡು ನುಡಿಗೆ ಅಪರೂಪದ ಸೇವೆ ಸಲ್ಲಿಸಿದವರು. ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿಯೇ ಅತ್ಯಧಿಕ ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದುದು ಡಾ. ಬಳಿಗಾರ ಸರ್ ಅವರ ಅಪಾರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಇಂಥ ಆದರಣೀಯ ಹಿರಿಯರು ಅಧ್ಯಕ್ಷರಾದ ಅವಧಿಯಲ್ಲಿ ನನ್ನ ಕೃತಿಯೊಂದು ಪರಿಷತ್ತಿನಿಂದ ಪ್ರಕಟವಾಗುತ್ತಿರುವುದು ನನ್ನ ಸೌಭಾಗ್ಯವೆಂದು ಭಾವಿಸಿರುವೆ. ಪರಿಷತ್ತಿನ ಕಾರ್ಯದರ್ಶಿಗಳಿಗೂ ಇತರ ಸಿಬ್ಬಂದಿ ವರ್ಗದವರಿಗೂ ನನ್ನ ವಂದನೆಗಳು.

ನನ್ನ ಸಾಹಿತ್ಯಿಕ ಶ್ರೇಯೋಭಿವೃದ್ಧಿಗೆ ಸದಾಕಾಲ ಬೆನ್ನ ಹಿಂದಿನ ಶಕ್ತಿಯಾಗಿ ನಿಂತಿರುವ ಡಾ. ಸರಜೂ ಕಾಟ್ಕರ್, ಡಾ. ಎಸ್. ಆರ್. ಗುಂಜಾಳ, ಶ್ರೀ ಈಶ್ವರ ಕಾಪಸೆ, ಡಾ. ಬಿ. ನಂಜುಂಡಸ್ವಾಮಿ, ಶ್ರೀ ಶಿವನಗೌಡ ಗೌಡರ ಮೊದಲಾದ ಹಿರಿಯರಿಗೆ ನನ್ನ ನಮನಗಳು.

**ಪ್ರಕಾಶ ಗಿರಿಮಲ್ಲನವರ**

ಬೆಳಗಾವಿ

೧೮-೧೦-೨೦೧೮

ಪರಿವಿಡಿ


ಭಾಗ-೧ : ಕಾವ್ಯಾನಂದರ ಬದುಕು

* ಜನನ-ಬಾಲ್ಯ-ವಿದ್ಯಾಭ್ಯಾಸ ೦೧
* ಸೇವಾ ಜೀವನ ೧೭
* ಕನ್ನಡ ಕಟ್ಟುವ ಕೆಲಸ ೩೪

ಭಾಗ-೨ : ಕಾವ್ಯಾನಂದರ ಕಾವ್ಯ ಸಮೀಕ್ಷೆ ೪೨


# ಕಾವ್ಯಾನಂದರ ಬದುಕು

## ಜನನ-ಬಾಲ್ಯ-ಶಿಕ್ಷಣ

'ಶ್ರೀ ಸಿದ್ಧಯ್ಯ ಪುರಾಣಿಕರನ್ನು ನಾನು ಅನೇಕ ವರ್ಷಗಳಿಂದ ಬಲ್ಲೆ. ಜ್ಞಾನ, ಅಧಿಕಾರ, ವಿನಯ, ಸೌಜನ್ಯ, ಸೃಜನಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬ ಅಪರೂಪ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯವಾಗಿದೆ. ಇದಕ್ಕೆ ಅಪರೂಪವಾಗಿ ನಿಂತ ಪ್ರತಿಭಾಶೀಲ-ಸತ್ಪುರುಷ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಪುರಾಣಿಕರು. ಮೊದಲ ಬಾರಿಗೇ ಅವರು ನನ್ನನ್ನು ತಮ್ಮ ಬರವಣಿಗೆಯಿಂದ ಹೇಗೋ ಹಾಗೆ ಸುಸಂಸ್ಕೃತ ವ್ಯಕ್ತಿತ್ವದಿಂದಲೂ ಆಕರ್ಷಿಸಿದರು. ಆ ಆಕರ್ಷಣೆ ದಶಕಗಳ ಕಾಲ ಮಾಸದೆ ಹಾಗೇ ಉಳಿದಿದೆ. ಅವರ 'ವಚನೋದ್ಯಾನ'ದ ವಚನಗಳು ನನಗೆ ತುಂಬ ಸಂತೋಷವನ್ನು ನೀಡಿವೆ.

ಕನ್ನಡ ನಾಡಿಗೆ ನಾಲ್ಕು ದಶಕಗಳಿಂದಲೂ ಹೆಚ್ಚಿನ ಕಾಲ ಉತ್ತಮ ಸಾಹಿತ್ಯವನ್ನೂ ಸಂಸ್ಕೃತಿಯ ಆದರ್ಶವನ್ನೂ ಶ್ರೀ ಸಿದ್ಧಯ್ಯ ಪುರಾಣಿಕರು ನೀಡಿದ್ದಾರೆ. ಜೊತೆಗೆ ದಕ್ಷ ಆಡಳಿತಗಾರರೆಂದು ಪ್ರಖ್ಯಾತಿಯನ್ನೂ ಪಡೆದಿದ್ದಾರೆ. ಆಡಳಿತದಲ್ಲಿ ದಕ್ಷತೆಯ ಜೊತೆಗೆ ಸ್ವಚ್ಛತೆಯನ್ನು ಬೆರೆಸುವುದು ಸಾಧ್ಯ ಎಂಬುದಕ್ಕೆ ಶ್ರೀ ಪುರಾಣಿಕರು ಉತ್ತಮ ನಿದರ್ಶನವಾಗಿದ್ದಾರೆ. ಅವರ ಶುಭ್ರಜೀವನವನ್ನು ಅನುಸರಿಸಿದರೆ ನಮ್ಮ ಸಾರ್ವಜನಿಕ ಜೀವನವು ಉನ್ನತ ಮಟ್ಟಕ್ಕೆ ಏರುವುದರಲ್ಲಿ ಯಾವ ಸಂದೇಹವೂ ಇಲ್ಲ'

ರಾಷ್ಟ್ರಕವಿ ಕುವೆಂಪು ಅವರು ಹೇಳಿದ ಮಾತುಗಳಿಗೆ ಅಕ್ಷರಶಃ ಆದರ್ಶವಾಗಿ ಬದುಕಿದವರು ಡಾ. ಸಿದ್ಧಯ್ಯ ಪುರಾಣಿಕರು. ತಮ್ಮ ಅಪರೂಪದ ನಡೆನುಡಿಗಳಿಂದ ನಯ ವಿನಯ ಸೌಜನ್ಯಗಳಿಂದ ತಮ್ಮ ವ್ಯಕ್ತಿತ್ವದಿಂದ ನಾಡಜನತೆಯ ಹೃದಯ ಸಿಂಹಾಸನದಲ್ಲಿ ವಿರಾಜಮಾನರಾದ ಡಾ. ಪುರಾಣಿಕರು ಆಧುನಿಕ ಕನ್ನಡ ಸಾಹಿತ್ಯ ಶ್ರೇಷ್ಠರಲ್ಲಿ ಒಬ್ಬರು. ಹೈದರಾಬಾದ ಕರ್ನಾಟಕ ಎಂಬ ಹಿಂದುಳಿದ ಪ್ರದೇಶದಲ್ಲಿ ಕನ್ನಡದ ಕಂಪನ್ನು ಹರಡಿದ ಪ್ರಾತಃಸ್ಮರಣೀಯರಲ್ಲಿ ಒಬ್ಬರಾದ ಡಾ. ಪುರಾಣಿಕರು ನಿಜಾಂ ಶಾಹಿ ಆಡಳಿತದಲ್ಲಿದ್ದರೂ ಕನ್ನಡದ ಪ್ರಜ್ಞೋದಯವನ್ನು ಬೆಳೆಸಿದವರು. ಅಂತೆಯೆ ಅವರು ಪದ್ಮಪತ್ರದ ಜಲಬಿಂದುವಿನಂತೆ ಬದುಕಿದರು. ತಮ್ಮ ಆಡಳಿತ ಸೇವೆ, ಸಾಹಿತ್ಯ ಸೇವೆ ಮೂಲಕ ಕನ್ನಡ ಭಾಷೆ ಸಂಸ್ಕೃತಿಗಳ ಉಳಿವಿಗಾಗಿ ಶ್ರಮಿಸಿದವರು. ಇಂಥ ಮಹನೀಯರ ಬದುಕು ಇಂದಿನ ಯುವಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಿದೆ. ಅವರ ಬದುಕು ಮತ್ತು ಬರಹಗಳನ್ನು ಕುರಿತು ವಿಸ್ತೃತವಾಗಿ ಅಧ್ಯಯನ ಮಾಡುವ ಮೊದಲು ಅವರು ಹುಟ್ಟಿ ಬೆಳೆದ ಪರಿಸರದ ಭಿತ್ತಿಯನ್ನು ಅವಲೋಕಿಸಿದರೆ. ಎಂಥ ಸಂಸ್ಕಾರ ಅವರ ಮೇಲಾಯಿತು ಎಂಬುದರ ಅರಿವು ನಮಗಾಗುತ್ತದೆ.

ಕನ್ನಡದ ಪ್ರಸಿದ್ಧ ಕವಿಗಳನ್ನು ನೀಡಿದ ಕಾವ್ಯಭೂಮಿ ದ್ಯಾಂಪುರ ಕೊಪ್ಪಳ
ಜಿಲ್ಲೆಯ ಒಂದು ಚಿಕ್ಕ ಗ್ರಾಮ. ದ್ಯಾಂಪುರ ಎಂದಾಕ್ಷಣ ನಮ್ಮ ಸ್ಮೃತಿ ಪಟಲದಲ್ಲಿ
ಮೂಡಿಬರುವ ಹೆಸರು ಚೆನ್ನಕವಿಗಳದು. ದ್ಯಾಂಪುರ ಇಂದಿನ ಕೊಪ್ಪಳ ಜಿಲ್ಲೆಯ
ಯಲಬುರ್ಗಾ ತಾಲೂಕಿನ ಒಂದು ಸಣ್ಣ ಹಳ್ಳಿ.

ದ್ಯಾಂಪುರ ಗ್ರಾಮದ ಚೆನ್ನಕವಿಗಳು ಹತ್ತಾರು ಪುರಾಣಗಳನ್ನು ಬರೆದು
ಖ್ಯಾತರಾಗಿದ್ದಾರೆ. ದ್ಯಾಂಪುರ ಮಹಾಲಿಂಗಯ್ಯನವರು ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ
ಮಾಡಿದವರು. ದ್ಯಾಂಪುರ ಗ್ರಾಮಕ್ಕೆ ಹಾಲಕೆರೆ ಅನ್ನದಾನ ಶಿವಯೋಗಿಗಳು, ಕೊಪ್ಪಳದ
ಗವಿಸ್ವಾಮಿಗಳು, ಮುಂಡರಗಿಯ ಅನ್ನದಾನ ಸ್ವಾಮಿಗಳು, ಗಾನಯೋಗಿ ಪಂಚಾಕ್ಷರಿ
ಗವಾಯಿಗಳು, ಹಾನಗಲ್ಲ ಕುಮಾರಸ್ವಾಮಿಗಳು ಮೇಲಿಂದ ಮೇಲೆ ಆಗಮಿಸುತ್ತಿದ್ದರು.
ಈ ಎಲ್ಲ ಮಹಾತ್ಮರು ಬರಲು ಚನ್ನಕವಿಗಳು ಮತ್ತು ಮಹಾಲಿಂಗಯ್ಯನವರು
ಕಾರಣರಾಗಿದ್ದರು.

ದ್ಯಾಂಪುರ ಗ್ರಾಮದ ಪುರಾಣಿಕರ ಮನೆತನ ತುಂಬ ಪ್ರಸಿದ್ಧವಾದದ್ದು. ಕಾರಣ
ಈ ಮನೆತನದ ಅನೇಕ ಹಿರಿಯರು ಪುರಾಣ ಪ್ರವಚನ ಮತ್ತು ಪುರಾಣ ಕೀರ್ತನೆಯಲ್ಲಿ
ಸಿದ್ಧಹಸ್ತರು. ಇವರ ಪೂರ್ವಜರು ಧಾರವಾಡ ಜಿಲ್ಲೆಯ ಕುಂದಗೋಳದವರೆಂದು
ಅನೇಕರು ಹೇಳುತ್ತಾರೆ. ಉಪಜೀವನಕ್ಕಾಗಿ ದ್ಯಾಂಪುರಕ್ಕೆ ಬಂದು ಕಿರಾಣಿ ಅಂಗಡಿಯನ್ನು
ಇಟ್ಟ ಕಾರಣ "ಅಂಗಡಿ"ಯವರು ಎಂದೇ ಜನ ಕರೆಯುತ್ತಿದ್ದರು.

ದ್ಯಾಂಪುರದ ಸಿದ್ಧಯ್ಯನವರು ಯಲಬುರ್ಗಾ ತಾಲೂಕಿನ ತಳಕಲ್ಲ ಗ್ರಾಮದ
"ಸಸಿ"ಯವರ ಮನೆತನದ ಸಾತ್ವಿಕ ಕನ್ಯೆಯಾದ ದೊಡ್ಡ ಹಂಪವ್ವನನ್ನು ಮದುವೆಯಾದರು.
ಈ ದಂಪತಿಗಳ ಪುಣ್ಯದ ಶಿಶುಗಳೇ ಕಲ್ಲಯ್ಯ ಮತ್ತು ವೀರಯ್ಯ.

ಸಿದ್ಧಯ್ಯನವರು ದೊಡ್ಡ ಜಮೀನದಾರರಾಗಿದ್ದರು. ಅವರ ಮನೆ ಒಂದು
ದಾಸೋಹಮನೆಯಾಗಿತ್ತು. ಅಲ್ಲಿ ನಿತ್ಯ ಹತ್ತಾರು ಜನ ಆಗಮಿಸುತ್ತಿದ್ದರು. ನಿಜಗುಣರ
ಶಾಸ್ತ್ರದ ಚರ್ಚೆ, ಶರಣರ ವಚನಗಳ ವಿಶ್ಲೇಷಣೆಯ ಜೊತೆಗೆ ಅನುಭಾವಗೋಷ್ಠಿ
ನಡೆಯುತ್ತಿತ್ತು. ಚರ್ಚೆಯಲ್ಲಿ ಉಪನಿಷತ್ಮಂತ್ರಗಳೂ ಸಿದ್ಧಾಂತ ಶಿಖಾಮಣಿಯ ಶ್ಲೋಕಗಳೂ
ಬಸವಾದಿ ಶಿವಶರಣರ ವಚನಗಳೂ ಸರ್ಪಭೂಷಣ ಶಿವಯೋಗಿ, ಶಿಶುನಾಳ ಶರೀಫ್,
ಬಾಲಲೀಲಾ ಮಹಾಂತ ಶಿವಯೋಗಿಗಳ ತತ್ವಪದಗಳೂ ವಾದಸಮರ್ಥನೆಗಾಗಿಯೋ,
ಅರ್ಥವಿವರಣೆಗಾಗಿಯೋ ವಿಶ್ಲೇಷಣೆಯಾಗುತ್ತಿದ್ದವು. ಇದು ಕಲ್ಲಯ್ಯನವರ ಕಾಲಕ್ಕೂ
ನಡೆದುಕೊಂಡು ಬಂದಿತ್ತು. ಅಂತೆಯೆ ಸಿದ್ಧಯ್ಯ ಪುರಾಣಿಕರು ಈ ಎಲ್ಲ ಸಂಸ್ಕಾರಗಳಿಂದ
ಪರಿಪೂರ್ಣತೆಯತ್ತ ಸಾಗಿದರು.

ಕಲ್ಲಯ್ಯ ತುಂಬಾ ಪ್ರತಿಭಾಶಾಲಿಯಾಗಿದ್ದ. ದ್ಯಾಂಪುರದಲ್ಲಿ ಶಾಲೆಗಳಿಲ್ಲದ ಕಾರಣ
ಚೆನ್ನಕವಿಗಳು ನಡೆಸುತ್ತಿದ್ದ ಗಾಂವಠೀ ಶಾಲೆಯಲ್ಲಿಯೇ ಅಭ್ಯಾಸವನ್ನು ಪ್ರಾರಂಭಿಸಿದ.
ಚೆನ್ನಕವಿಗಳು ಕನ್ನಡ, ಮರಾಠಿ ಮತ್ತು ಉರ್ದು ಭಾಷೆಗಳನ್ನು ಕಲಿಸಿದರು. ಮನೆಯಲ್ಲಿ
ಬಡತನ ಪಿತ್ರಾರ್ಜಿತ ಆಸ್ತಿಯಾಗಿತ್ತು. ಬೇರೆಯವರ ಹೊಲಗಳಲ್ಲಿ ಮತ್ತು ಅಂಗಡಿಯಲ್ಲಿ
ಕೆಲಸವನ್ನು ಮಾಡುತ್ತಲೇ ಅಭ್ಯಾಸದಲ್ಲಿ ನಿರತರಾದರು.



## ಸಂಚಾರಿಯಾಗಿ ಗಾಂವಠಿ ಶಾಲೆಗಳಲ್ಲಿ

ಚೆನ್ನಕವಿಗಳು ನಡೆಸುತ್ತಿದ್ದ ದ್ಯಾಂಪುರದ ಗಾಂವಠಿ ಶಾಲೆ ವಿದ್ಯಾರ್ಥಿಗಳಿಲ್ಲದೆ
ಬಂದಾಯಿತು. ಸುತ್ತಲಿನ ಹಳ್ಳಿಗಳಾದ ಕುಕನೂರ, ರಾಜೂರ, ಸಂಗನಾಳ, ಕಲ್ಲೂರ
ಮೊದಲಾದ ಗ್ರಾಮಗಳಲ್ಲಿ ವಾರದಲ್ಲಿ ಎರಡು ಮೂರು ದಿವಸ ನಡೆಯುತ್ತಿದ್ದ ಶಾಲೆಗಳಿಗೆ
ತೆರಳಿ ಅಭ್ಯಾಸವನ್ನು ಮುಂದುವರಿಸಿದರು. ಕಲ್ಲಯ್ಯನವರು ೧೫ ವರ್ಷದವರಿರುವಾಗಲೇ
ಕವಿತ್ವ ಶಕ್ತಿಯನ್ನು ಪಡೆದಿದ್ದರು. ಚೆನ್ನಕವಿಗಳಿಂದ "ರಾಜಶೇಖರ ವಿಳಾಸ" "ಶಬರಶಂಕರ
ವಿಳಾಸ" ಇತ್ಯಾದಿ ಕಾವ್ಯಗಳನ್ನು ಬಹು ಶ್ರದ್ಧೆಯಿಂದ ಅಧ್ಯಯನ ಮಾಡಿದ್ದರು.

## ದಾಂಪತ್ಯ ಧರ್ಮ

ದ್ಯಾಂಪುರದ ಇನ್ನೊಂದು ಶಿರೂರಮಠ ಎಂಬ ಜಂಗಮ ಮನೆತನದ ಬಸಯ್ಯ
ಮತ್ತು ರುದ್ರಮ್ಮನವರ ಮಗಳು ದಾನಮ್ಮನನ್ನು ಕಲ್ಲಯ್ಯನಿಗೆ ಕೊಟ್ಟು ಮದುವೆ ಮಾಡಿದರು.
ದಾನಮ್ಮ ಹೆಸರಿಗೆ ತಕ್ಕ ಗುಣ ಸ್ವಭಾವದವಳು. ೧೯೧೦-೧೧ರಲ್ಲಿ ಬರಗಾಲ ಬಿದ್ದಾಗ
ಮನೆಯಲ್ಲಿದ್ದ ಮತ್ತು ಅಂಗಡಿಯಲ್ಲಿದ್ದ ಧಾನ್ಯಗಳು ಮುಗಿಯುವವರೆಗೆ ಊರವರಿಗೆಲ್ಲ
ನಿತ್ಯ ಪ್ರಸಾದ ನೀಡಿ ಸಲುಹಿದ ಉದಾರ ಚರಿತರು. ಉದಾತ್ತ ಜೀವದಯಾಪರರು.
ಹೀಗಾಗಿ ಊರ ಜನರೆಲ್ಲ ಅತ್ಯಂತ ಗೌರವ ಮತ್ತು ಪ್ರೀತಿಯಿಂದ ಕಾಣುತ್ತಿದ್ದರು.
ಕಲ್ಲಯ್ಯನವರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ. ದ್ಯಾಂಪುರದಲ್ಲಿ ಬದುಕುವುದು
ತುಂಬ ಕಷ್ಟವಾಗತೊಡಗಿತು. ಚೆನ್ನಕವಿಗಳು ಸಂಗನಾಳ ಗ್ರಾಮದಲ್ಲಿ ಗಾಂವಠಿ ಶಾಲೆ
ನಡೆಸುತ್ತಿದ್ದರು. ಕಲ್ಲಯ್ಯನಿಗೂ ಒಂದು ಶಾಲೆಯನ್ನು ಸಂಗನಾಳದಲ್ಲಿ ತೆರೆಯಲು
ತಿಳಿಸಿದರು. ಸಂಗನಾಳದ ಶಾಸ್ತ್ರೀಮಠದ ಹಿರಿಯರಾದ ಗುರಯ್ಯನವರ ಸಹಾಯ
ಸಹಕಾರದೊಂದಿಗೆ ಕಲ್ಲಯ್ಯನವರು ಒಂದು ಗಾಂವಠಿ ಶಾಲೆಯನ್ನು ಆರಂಭಿಸಿ ಕಲ್ಲಯ್ಯ
ಮಾಸ್ತರ ಆದರು. ಶಾಸ್ತ್ರಿಮಠದ ಗುರಯ್ಯನವರು ಸಾಹಿತ್ಯ ಮತ್ತು ನಾಟಕ ಪ್ರಿಯರಾಗಿದ್ದರು.
ಅವರ ಮನೆಯಲ್ಲಿ ಅನೇಕ ಹಸ್ತಪ್ರತಿಗಳು ಮತ್ತು ತಾಡೋಲೆಗಳ ಸಂಗ್ರಹವಿತ್ತು.
ಅವುಗಳನ್ನು ಬಿಡುವಿನ ವೇಳೆಯಲ್ಲಿ ಓದುತ್ತ ಚೆನ್ನಕವಿಗಳೊಂದಿಗೆ ಆಗಾಗ ಚರ್ಚೆ
ಮಾಡುತ್ತ ತಮ್ಮ ಸಂಶಯಗಳನ್ನು ಬಗೆಹರಿಸಿಕೊಳ್ಳುತ್ತಿದ್ದರು. ಈ ಸಂಗನಾಳದ
ಕಲ್ಲಯ್ಯನವರ ಗಾಂವಠಿ ಶಾಲೆಯಲ್ಲಿ ಕಲಿತ ಶಾಸ್ತ್ರಿಮಠದ ಸಣ್ಣನಾಗಯ್ಯನೆಂಬ ಬಾಲಕ
ಮುಂದೆ ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ಸಾಹಿತ್ಯ ಪ್ರಪಂಚದ ಮರೆಯಬಾರದ
ಮಾಣಿಕ್ಯವಾದವರು ಬೇರೆ ಯಾರೂ ಅಲ್ಲ ಪಂಡಿತ ನಾಗಭೂಷಣ ಶಾಸ್ತ್ರಿಗಳು.

## ಕಲ್ಲಯ್ಯ ಮಾಸ್ತರರ ಗಾಂವಠಿ ಶಾಲೆಗಳು

ದ್ಯಾಂಪುರದ ಕಲ್ಲಯ್ಯ ಮಾಸ್ತರರೆಂದು ಸ್ವಲ್ಪೇ ದಿನಗಳಲ್ಲಿ ಸಂಗನಾಳ ಗ್ರಾಮದಲ್ಲಿ
ಪ್ರಸಿದ್ಧಿ ಪಡೆದರು. ಶಾಲಾ ಮಾಸ್ತರ ಎಂದರೆ ತುಂಬ ಗೌರವಾದರಗಳನ್ನು ನೀಡುತ್ತಿದ್ದ
ಕಾಲವದು. ಊರಲ್ಲಿ ವಿಶೇಷ ಸ್ಥಾನ-ಮಾನಗಳು ಮಾಸ್ತರರಿಗೆ ದೊರೆಯುತ್ತಿದ್ದವು.
ಕಲ್ಲಯ್ಯನವರದೂ ಅಷ್ಟೇ ಶಿಸ್ತುಬದ್ಧ ಜೀವನ. ಸಂಗನಾಳದಲ್ಲಿ ಶಾಲೆಗೆ ಬರುವ
ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಮಕ್ಕಳು ಮೂರು ನಾಲ್ಕು ತರಗತಿ ಮುಗಿದ

ತಕ್ಷಣ ಮುಂದೆ ಶಾಲೆಗೆ ಕಳಿಸದೆ ಕೃಷಿಕಾಯಕಗಳಿಗೆ, ಮನೆಕೆಲಸಗಳಿಗೆ ನೇಮಿಸಿ ಬಿಡುತ್ತಿದ್ದರು. ಶಾಲೆಗೆ ಮಕ್ಕಳು  ಬಾರದೆ ಕಲ್ಲಯ್ಯನವರ ಬದುಕು ಸಾಗಿಸೋದು ತುಂಬ ಕಷ್ಟಕರವಾಗತೊಡಗಿತು. ಅನಿವಾರ್ಯವಾಗಿ ಮತ್ತೆ ಬೇರೆ ಗ್ರಾಮಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಿ ನಡೆಸುತ್ತಿದ್ದರು. ಹೀಗೆ ಕಲ್ಲಯ್ಯನವರು ಸಂಗನಾಳ, ರಾಜೂರ, ಹಂಚಿನಾಳ, ಮುಧೋಳ, ಇಟಗಿ, ಚಿಕ್ಕಮ್ಯಾಗೇರಿ ಇನ್ನೂ ಅನೇಕ ಗ್ರಾಮಗಳಲ್ಲಿ ಶಾಲೆಗಳನ್ನು ನಡೆಸಿದರು. ಈ ಎಲ್ಲ ಸಂದರ್ಭಗಳಲ್ಲಿ ಚೆನ್ನಕವಿಗಳು ಇವರ ನೆರವಿಗೆ ಬರುತ್ತಿದ್ದರು. ಅವರಲ್ಲಿ ಸಾಹಿತ್ಯದ ಅಭಿರುಚಿಯನ್ನು ಬೆಳೆಸಿದರು. ಶಿವಯೋಗಮಂದಿರಕ್ಕೆ ಕರೆದುಕೊಂಡು ಹೋಗಿ ಹಾನಗಲ್ಲ ಕುಮಾರ ಮಹಾಸ್ವಾಮಿಗಳವರ ಪರಿಚಯ ಮಾಡಿಸಿದ್ದರು. ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವಂತೆ ಪ್ರೇರಣೆ ನೀಡುತ್ತಿದ್ದರು. ಕಲ್ಲಯ್ಯ ಮಾಸ್ತರ ಮೇಲೆ ಚೆನ್ನಕವಿಗಳ ಪ್ರಭಾವ ಅಗಾಧವಾಗಿತ್ತು. ಅನೇಕರು ಇವರಿಗೆ ಚೆನ್ನಕವಿಗಳಂತೆ  ಇದ್ದೀರಿ ಎಂದು ಹೇಳುತ್ತಿದ್ದರು.

### ಕಲ್ಲಯ್ಯ ಮಾಸ್ತರ ಪುರಾಣಿಕರಾದುದು

ಬಾಲ್ಯದಿಂದಲೂ ಚೆನ್ನಕವಿಗಳು ಆಗಾಗ ಮಾಡುತ್ತಿದ್ದ ಪುರಾಣ-ಕೀರ್ತನ ಮೊದಲಾದ ಧಾರ್ಮಿಕ ಕಾರ್ಯಗಳಲ್ಲಿ ಕಲ್ಲಯ್ಯ ಮಾಸ್ತರ ಭಾಗವಹಿಸುತ್ತಿದ್ದರು. ಕಲ್ಲಯ್ಯನವರು ನಿಜಗುಣರ ಶಾಸ್ತ್ರ, ಶಬರ ಶಂಕರ ವಿಳಾಸ ಮೊದಲಾದ ಧಾರ್ಮಿಕ ಗ್ರಂಥಗಳ ಶಾಸ್ತ್ರಬದ್ಧ ಅಧ್ಯಯನ ಮಾಡಿದ್ದರು. ಸಂಗನಾಳ ಶಾಸ್ತ್ರಿಮಠದ ಗುರಯ್ಯನವರು ಬಹು ಒತ್ತಾಯದಿಂದ ಸಂಗನಾಳದಲ್ಲಿ ಪ್ರಥಮ ಬಾರಿಗೆ ಭೀಮಕವಿ ವಿರಚಿತ "ಬಸವ ಪುರಾಣ"ವನ್ನು ಕಲ್ಲಯ್ಯ ಮಾಸ್ತರ ಕಡೆಯಿಂದ ಹೇಳಿಸಲು ಪ್ರಾರಂಭಿಸಿದರು. ಊರಿನ ಜನತೆ ಇವರ ಮಾತಿನ ಶೈಲಿಗೆ ಮಾರುಹೋಗುತ್ತಾರೆ.  ಗುರಯ್ಯನವರು ಸ್ವತಃ ಸಂಗೀತದಲ್ಲಿ ಪ್ರಾವಿಣ್ಯ ಹೊಂದಿದವರು. ಕಲ್ಲಯ್ಯನವರು ತಕ್ಕಮಟ್ಟಿಗೆ ಸಂಗೀತವನ್ನು ಕಲಿತಿದ್ದರು. ಹೃದಯದಲ್ಲಿ ಹುದುಗಿದ ಕವಿತ್ವ, ವಾಕ್‌ಪಟುತ್ವ, ಸ್ವರದ ಮಾಂತ್ರಿಕತೆ ಒಂದೇ ಕಾಲಕ್ಕೆ ಮೇಳೈಸಿ ಬಸವ ಪುರಾಣ ಕೀರ್ತನ ಅತ್ಯಂತ ವಿಜೃಂಭಣೆಯಿಂದ ಮುಕ್ತಾಯಗೊಂಡಿತು. ಅಲ್ಲಿಯವರೆಗೆ ಕೇವಲ ಕಲ್ಲಯ್ಯ ಮಾಸ್ತರ ಇದ್ದವರು ಅಪಾರ ಜನಪ್ರೀತಿಯಿಂದ "ಪುರಾಣಿಕ ಕಲ್ಲಯ್ಯ"  ಎಂದು ಕರೆಯತೊಡಗಿದರು. ಶಾಲೆಗಳನ್ನು ನಡೆಸುವುದರ ಜೊತೆಗೆ ಪುರಾಣ-ಕೀರ್ತನ ಮಾಡುವುದನ್ನು ಅತ್ಯಂತ ಪ್ರಭಾವಶಾಲಿಯಾಗಿ ರೂಢಿಸಿಕೊಂಡರು. ಚೆನ್ನಕವಿಗಳು ಈ ವಿಚಾರವಾಗಿ ಹಲವಾರು ಸೂಕ್ತ ಸಲಹೆಗಳನ್ನು ನೀಡುತ್ತಿದ್ದರು. ಹಳೆಯ ರಾಯಚೂರು, ಧಾರವಾಡ, ವಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳ ಗ್ರಾಮಗಳಲ್ಲಿ ಪುರಾಣಿಕ ಕಲ್ಲಯ್ಯನವರ ಪುರಾಣ ಕೀರ್ತನೆಗಳು ಜರುಗಿವೆ. ಹಾಲಕೆರೆಯ ಅನ್ನದಾನೀಶ್ವರಮಠ, ಕೊಪ್ಪಳದ ಕವಿಮಠ, ಕೊಪ್ಪಳದ ಪೇಟೆಯ ಈಶ್ವರ ದೇವಸ್ಥಾನ, ಕುಕನೂರ ಅನ್ನದಾನೀಶ್ವರಮಠ, ರಾಜೂರು ತೋಂಟದಾರ್ಯ ಸ್ವಾಮಿಗಳ ಮಠ, ಅಡೂರ, ಬಾಡಗಿ ಮುರುಗೋಡ ಮಠಗಳಲ್ಲಿ ಮೇಲಿಂದ ಮೇಲೆ ಪುರಾಣಗಳನ್ನು ಹೇಳುತ್ತಿದ್ದರು.



### ನಾಟಕ ರಚನೆ ಮತ್ತು ನಿರ್ದೇಶಕರಾಗಿ

ಪುರಾಣಿಕ ಕಲ್ಲಯ್ಯನವರು ಪುರಾಣ ಕೀರ್ತನಗಳ ಮೂಲಕ ಪ್ರಸಿದ್ಧಿ ಪಡೆದು ಮುಂದೆ "ಪುರಾಣಿಕ ಕಲ್ಲಿನಾಥ ಶಾಸ್ತ್ರಿ"ಗಳಾದರು. ಸಂಗೀತದಲ್ಲಿ ವಿಶೇಷ ಜ್ಞಾನಿಗಳಾದ ಕಾರಣ ಸಾಹಿತ್ಯ ತುಂಬ ನೈಪುಣ್ಯತೆಯಿಂದ ಕೂಡಿರುತ್ತಿತ್ತು. ವೀರಶೈವಾಮೃತ ಮಹಾಪುರಾಣವನ್ನು ಆಧಾರವಾಗಿಸಿಕೊಂಡು ಅದರಲ್ಲಿಯ ಅನ್ನದಾನ ಮಹತಿಯ ಸನ್ನಿವೇಶವನ್ನು ಕೇಂದ್ರವಾಗಿರಿಸಿಕೊಂಡು "ಅನ್ನದಾನ ಮಹತ್ವ" ಎಂಬ ನಾಟಕವನ್ನು ರಚಿಸಿದರು. ಕೇವಲ ನಾಲ್ಕುತಾಸಿನಲ್ಲಿ ಪ್ರಯೋಗವಾಗುವಂತೆ ರಸಿಕ ಹವ್ಯಾಸಿ ಕಲಾವಿದರಿಗೆ ನಿರ್ದೇಶನ ಮಾಡಿದರು. "ಅನ್ನದಾನ ಮಹತ್ವ" ಅವರಿಗೆ ಬಹಳ ಕೀರ್ತಿಯನ್ನು ತಂದುಕೊಟ್ಟ ನಾಟಕವಾಯಿತು. ಮೊದಲನೆಯ ನಾಟಕವೇ ಬಹಳ ಹೆಸರು ಮಾಡಿತು. ಕುಕನೂರ, ಯಲಬುರ್ಗಿ ಹಾಗೂ ಪ್ರಸಿದ್ಧವಾದ ಗುದ್ನೆಪ್ಪನ ಜಾತ್ರೆಗಳಲ್ಲಿ ಹಲವಾರು ಪ್ರಯೋಗಗಳಾಗಿ ಜನರ ಮನದಲ್ಲಿ ಕಲ್ಲಿನಾಥ ಶಾಸ್ತ್ರಿಗಳು ಉಳಿಯುವಂತಾಯಿತು. ಈಗಲೂ ಈ ನಾಟಕದ ಬಗ್ಗೆ ಹಳ್ಳಿಗಳಲ್ಲಿ ಜನ ಮಾತನಾಡುತ್ತಾರೆ. ಅನ್ನವನ್ನು ಒಂದು ಅಗಳು ಚೆಲ್ಲದಂತೆ ಸೇವಿಸಬೇಕೆಂದು "ಅನ್ನದಾನ" ನಾಟಕದಲ್ಲಿ ನೋಡಿದ್ದನ್ನು ನೆನಪಿಸಿಕೊಳ್ಳುತ್ತಾರೆ. ಆದರೆ ಈ ನಾಟಕವು ಮುದ್ರಣವಾಗಿಲ್ಲ. ಅಲ್ಲದೇ ಅದರ ಹಸ್ತಪ್ರತಿಯೂ ಕಳೆದುಹೋಗಿದೆ. ರುಕ್ಮಾಂಗದಾ, ವೈರಾಗ್ಯವಿಜಯ ಮೊದಲಾದ ನಾಟಕಗಳನ್ನು ಬರೆದು ಆಡಿಸಿದ್ದಾರೆ. ಇವುಗಳನ್ನು ಪ್ರಯೋಗ ಮಾಡಿದವರು ನಾಟಕ ಕಂಪನಿಗಳು. ಹವ್ಯಾಸಿ ಕಲಾವಿದರು ಸ್ವತಃ ಹಣಹಾಕಿ ನಾಟಕ ಮಾಡುತ್ತಿದ್ದರು. ಆಗ ಇಂಥ ಜನ ಇದ್ದರು ಎಂದು ಹೇಳಿದರೆ ನಂಬಲಾರದ ಕಾಲವಿದು. ಆದರೆ ಈ ನಾಟಕಗಳೂ ಸಿಕ್ಕಿಲ್ಲ.

### ಸಾಹಿತ್ಯ ಸೇವೆ

ಪುರಾಣಿಕ ಕಲ್ಲಿನಾಥ ಶಾಸ್ತ್ರಿಗಳು ಅಪಾರವಾದ ಕನ್ನಡ ಸಾಹಿತ್ಯದ ಸೇವೆ ಸಲ್ಲಿಸಿದ್ದಾರೆ. ವಿಶೇಷವಾಗಿ ಧಾರ್ಮಿಕ ಸಾಹಿತ್ಯದ ಮೇಲೆ ಅವರಿಗೆ ಅಪಾರ ಭಕ್ತಿ ಮತ್ತು ಆಸಕ್ತಿ. ಕಲ್ಲಿನಾಥ ಶಾಸ್ತ್ರಿಗಳಿಗೆ ಇಂದಿಗೂ ಅದ್ಭುತ ಕೀರ್ತಿ ನೀಡಿದ ಮಹಾಪುರಾಣವೆಂದರೆ "ಕಲಬುರ್ಗಿಯ ಶರಣಬಸವೇಶ್ವರ ಪುರಾಣ". ಕಲಬುರ್ಗಿಯ ಮಹಾದಾಸೋಹಿ ಶರಣ ಬಸವೇಶ್ವರರನ್ನು ಕುರಿತು ಬಹಳ ಕವಿಗಳು ಪುರಾಣ ಕಾವ್ಯಗಳನ್ನು ಬರೆದಿದ್ದಾರೆ. ಆದರೆ ಜನಾದರಣೆಯಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿರುವುದು ಕಲ್ಲಿನಾಥ ಶಾಸ್ತ್ರಿಗಳು ರಚಿಸಿದ ಶರಣಬಸವೇಶ್ವರ ಪುರಾಣ. ಇದೊಂದು ಅತ್ಯಂತ ಸುಂದರ, ಸರಳ ಪುರಾಣ ಕಾವ್ಯ. "ಇಟ್ಟಿಗೆಯ ಭೀಮಾಂಬಿಕಾ" ಪುರಾಣವನ್ನು ರಚಿಸಿದ್ದಾರೆ.

ಸಂಗನಾಳದಲ್ಲಿ ವಾಸವಾಗಿದ್ದಾಗ ಅವರ ಮನೆಯ ಎದುರಿಗೆ ಅನೇಕ ಹಾಲುಮತ ಜನಾಂಗದವರ ಮನೆಗಳಿದ್ದವು. ಅವರು ಊರದೇವರ ಜಾತ್ರೆಯಲ್ಲಿ ಅಮವಾಸ್ಯೆ, ವಿಶೇಷ ಪೂಜೆಗಳಲ್ಲಿ ಒಂದೇರೀತಿಯ ಹಾಡುಗಳನ್ನು ಹಾಡುತ್ತಿದ್ದರು. ಚೆನ್ನಕವಿಗಳು ಮತ್ತು ಕಲ್ಲಿನಾಥ ಶಾಸ್ತ್ರಿಗಳು ಅನೇಕ ಕಲ್ಯಾಣ ಶರಣರ ಜೀವನ ಚರಿತ್ರೆಯನ್ನು ಪದ್ಯಗಳ ಮೂಲಕ ಬರೆದುಕೊಟ್ಟರು. ಅಲ್ಲದೇ ಹಾಡುವುದಕ್ಕೆ ರೂಢಿ ಮಾಡಿಸಿದರು. ಇವು

ಕುರುಬ ಸಮಾಜದವರ ಜೀವನ ಪದ್ಧತಿಯನ್ನು ಬದಲು ಮಾಡಿದವು. ಹಣೆಯಲ್ಲಿ ಭಸ್ಮ ಧರಿಸುವಂತಾದರು. ಅನೇಕರು ಮಾಂಸಾಹಾರ ತ್ಯಜಿಸಿದರು.

ಇಂದಿಗೂ ಈ ಭಾಗದ ಜನರು--ಕೃಷಿಕರು ಹಾಡುವ ಭಜನಾ ಪದ್ಯಗಳು, ಸ್ತೋತ್ರ ಪದ್ಯಗಳು, ಹಂತಿ ಪದಗಳು, ಮಂಗಳ ಗೀತೆಗಳು, ಸೋಬಾನ ಒಗಟು ಅನೇಕ ರೀತಿಯ ಸಾಹಿತ್ಯ ಕಲ್ಲಿನಾಥ ಶಾಸ್ತ್ರಿಗಳು ಮತ್ತು ಚೆನ್ನಕವಿಗಳಿಂದ ರಚಿತವಾದವುಗಳು. ಆದರೆ ಅವು ಯಾವವೂ ಪುಸ್ತಕ ರೂಪದಲ್ಲಿ ಪ್ರಕಟವಾಗಿಲ್ಲವೆಂಬುದೇ ಬೇಸರದ ಸಂಗತಿ. ಅನೇಕ ನಾಟಕಗಳಿಗೆ ನಾಂದಿ ಗೀತೆಗಳನ್ನು ಸಂದರ್ಭಾನುಸಾರ ಬೇಕಾಗುವ ಗೀತೆಗಳನ್ನು ರಚಿಸಿ ನೀಡುತ್ತಿದ್ದರು ಎಂದು ಇಲ್ಲಿಯ ಅನೇಕ ಹಿರಿಯರು ಇಂದಿಗೂ ನೆನೆಯುತ್ತಾರೆ.

**ಬಸವ ಜಯಂತಿ ಆಚರಣೆ**

೧೯೧೨ರಲ್ಲಿ ದಾವಣಗೆರೆಯಲ್ಲಿ ಮೃತ್ಯುಂಜಯ ಸ್ವಾಮಿಗಳು ಮತ್ತು ಹರ್ಡೇಕರ ಮಂಜಪ್ಪನವರ ಮಹತ್ವದ ನಿರ್ಧಾರದ ಸಭೆಯಲ್ಲಿ ಯಾವುದೋ ಕಾರಣದಿಂದ ದಾವಣಗೆರೆಗೆ ಬಂದಿದ್ದ ಕಲ್ಲಿನಾಥ ಶಾಸ್ತ್ರಿಗಳು ಮತ್ತು ಸಂಗನಾಳ ಶಾಸ್ತ್ರಿಮಠದ ಗುರಯ್ಯನವರು ಭಾಗವಹಿಸಿದ್ದರು. ದಾವಣಗೆರೆಯ ಸಭೆಯ ನಿರ್ಣಯದಂತೆ ಸಂಗನಾಳದಲ್ಲಿ ಅತ್ಯಂತ ವೈಭವ ಮತ್ತು ಬಸವ ಚರಿತೆ ಕೀರ್ತನೆಯೊಂದಿಗೆ ಅಕ್ಷಯ ತೃತೀಯಾ ರೋಹಿಣಿ ನಕ್ಷತ್ರದಂದು ಬಸವ ಜಯಂತಿಯನ್ನು ಆಚರಿಸಿದರು. ಇಂದಿಗೂ ಈ ಗ್ರಾಮದಲ್ಲಿ ಬಸವ ಜಯಂತಿ ಆಚರಿಸುತ್ತ ಬರಲಾಗಿದೆ.

ಬಸವಣ್ಣನವರ ತತ್ವಸಿದ್ಧಾಂತಗಳಿಗೆ ಮಾರು ಹೋದ ಕಲ್ಲಿನಾಥ ಶಾಸ್ತ್ರಿಗಳು, ವಚನಗಳಲ್ಲಿ ಅಡಗಿರುವ ನೀತಿತತ್ವಗಳನ್ನು ತಮ್ಮ ಬದುಕಿನಲ್ಲಿ ಅಕ್ಷರಶಃ ಅನುಷ್ಠಾನಕ್ಕೆ ತಂದವರಾಗಿದ್ದರು. ಬಸವಪುರಾಣವನ್ನು ದ್ಯಾಂಪುರದಲ್ಲಿ ನಡೆಸಿ ದೊಡ್ಡ ಕ್ರಾಂತಿಯನ್ನೇ ಮಾಡಿದ್ದರು. ಇದರಿಂದ ಪ್ರಭಾವಿತರಾಗಿ ಅವರು ಮಾಡಿದ ಇನ್ನೊಂದು ಕಾರ್ಯವೆಂದರೆ ಅಸ್ಪೃಶ್ಯತೆಯ ನಿವಾರಣೆಗಾಗಿ ಕೆಳವರ್ಗದ ಜನಸಮುದಾಯಕ್ಕೆ ಲಿಂಗದೀಕ್ಷೆಯನ್ನು ನೀಡಿದರು. ಲಿಂಗಾಯತೇತರರಿಗೆ ಲಿಂಗದೀಕ್ಷೆ ಮಾಡಿದ ಪ್ರಕರಣ ದೊಡ್ಡ ಕೋಲಾಹಲವನ್ನೇ ಸೃಷ್ಟಿಸಿತು. ಶಾಸ್ತ್ರಿಗಳಿಗೆ ಆತ್ಮೀಯರಾದವರು ಅವರ ವಿರೋಧಿಗಳಾದರು. ಲಿಂಗಾಯತ ಸಮಾಜದವರು ಈ ಕೆಳವರ್ಗದ ಹೊಸ ಲಿಂಗಾಯತರೊಂದಿಗೆ ಬೆರೆತುಕೊಂಡರು. ಆದರೆ 'ಉಂಬಲ್ಲಿ ಉಡುವಲ್ಲಿ ಕುಲವಳಿಯಿತ್ತೆಂಬ, ಕೊಂಬಲ್ಲಿ ಕೊಡುವಲ್ಲಿ ಕುಲವನರಸುವ' ಪ್ರವೃತ್ತಿ ಹೋಗಲಿಲ್ಲ. ಇದರಿಂದ ಕಲ್ಲಿನಾಥ ಶಾಸ್ತ್ರಿಗಳು ತುಂಬ ಗಂಭೀರವಾಗಿ ಆಲೋಚಿಸಿದರು. ಈ ಹೊಸ ಬಸವ ಭಕ್ತರನ್ನು ಲಿಂಗಾಯತರು ಒಪ್ಪಿಕೊಳ್ಳದಿದ್ದರೆ ಅವರು ಈ ಧರ್ಮ ಸೇರಿ ಏನು ಪ್ರಯೋಜನ? ಧರ್ಮಸ್ವೀಕಾರ ಸುಲಭ; ಆಚರಣೆ ತುಂಬ ಕಷ್ಟ, ಅನ್ನೋದಕಗಳನ್ನು ಮಾಡುವಂತೆ, ಶರೀರ ಸಂಬಂಧ ಮಾಡುವರೇ? ಎಂದು ಆಲೋಚಿಸಿ ಲಿಂಗದೀಕ್ಷಾ ಕಾರ್ಯವನ್ನು ನಿಲ್ಲಿಸಿ ಬಿಟ್ಟರು.



ಕಲ್ಲಿನಾಥ ಶಾಸ್ತ್ರಿಗಳು ಆಯುರ್ವೇದ ಪಂಡಿತರೂ ಆಗಿದ್ದರು. ಊರಲ್ಲಿ ಜನರಿಗೆ ಕಾಯಿಲೆ ಬಂದಾಗ ಸೂಕ್ತ ಔಷಧಿ ಕೊಡುತ್ತಿದ್ದರು. ಈ ವಿಷಯವಾಗಿ ಡಾ. ಪುರಾಣಿಕರು ಒಂದು ಘಟನೆಯನ್ನು ತುಂಬ ಅರ್ಥಪೂರ್ಣವಾಗಿ ದಾಖಲಿಸಿದ್ದಾರೆ :

'ದಾದಾಸಾಹೇಬರು ನಮ್ಮೂರ ಧನ್ವಂತರಿ. ಯಾರಿಗೆ ಕಾಯಿಲೆ ಬರಲಿ, ತಾವೇ ಕಾಡಿಗೆ ಹೋಗಿ ತಾಜಾ ವನಸ್ಪತಿಗಳನ್ನು ತಂದು, ಅವು ಯಾವ ವನಸ್ಪತಿಗಳೆಬುದು ಜನರಿಗೆ ಗೊತ್ತಾಗದಿರಲೆಂದು ಕುಟ್ಟಿ ಗುಳಿಗೆ ಮಾಡಿಯೋ, ಹಿಂಡಿ ರಸ ಮಾಡಿಯೋ ಕೊಡುತ್ತಿದ್ದರು. ಅಂತ್ಯಕಾಲಕ್ಕೆ ಮೊದಲು ನನ್ನ ತಂದೆಯವರಿಗೆ ಮಾತ್ರ ಆ ವನಸ್ಪತಿಗಳನ್ನೂ ಅವುಗಳು ಯಾವ ರೋಗಗಳಿಗೆ ಔಷಧಿಗಳಾಗಬಹುದು ಎಂಬುದನ್ನೂ ತಿಳಿಸಿ ಪೈಗಂಬರವಾಸಿಗಳಾದರು. ನನ್ನ ತಂದೆಯವರು ಹೀಗೆ ಮುಚ್ಚಿಟ್ಟು ಬಚ್ಚಿಟ್ಟು ಈ ದೇಶದ ಆಯುರ್ವೇದ ವಿಜ್ಞಾನವೊಂದೇ ಅಲ್ಲ, ಇತರ ಅನೇಕ ಶಾಸ್ತ್ರಗಳೂ ಕ್ಷೀಣಿಸಿ ಹೋದುವೆಂಬ ಅಭಿಪ್ರಾಯದವರಾಗಿದ್ದರು. ದಾದಾಸಾಹೇಬರ ಮರಣಾನಂತರ ಅವರ ಬಳಿಗೆ ಬಂದ ಮೊದಲನೆಯ ರೋಗಿಗೇ ಅವನು ಸೇವಿಸಬೇಕಾದ ವನಸ್ಪತಿಯಿದ್ದ ಸ್ಥಳವನ್ನು ತೋರಿಸಿ, ದಿನಕ್ಕೊಂದು ಹಿಡಿಯಂತೆ ಅದರ ಎಲೆಗಳನ್ನು ತಿನ್ನಲು ಹೇಳಿದರು. ಅವನ ಕಾಯಿಲೆಯೇನೋ ವಾಸಿಯಾಯಿತು; ಆದರೆ ಅದೇ ರೋಗದಿಂದ ನರಳುತ್ತಿದ್ದ ಇನ್ನೊಬ್ಬ ಬಂದಾಗ ಆ ಸ್ಥಳಕ್ಕೆ ಹೋಗಿ ನೋಡುತ್ತಾರೆ– ಅಲ್ಲಿ ಆ ವನಸ್ಪತಿಯಿದ್ದ ಗುರುತು ಸಹ ಇರಲಿಲ್ಲ! ಮೊದಲನೆಯ ರೋಗಿ ಅದನ್ನು ಬೇರು ಸಹಿತ ಕಿತ್ತು ತಿಂದುಬಿಟ್ಟಿದ್ದ! ಆಗ ತಂದೆಯವರು ಉದ್ಗರಿಸಿದರು: 'ಎಂಥ ಅಜ್ಞ ಜನ ಈ ದೇಶದಲ್ಲಿ! ಸುತ್ತು ಹತ್ತು ಮೈಲಿಗಳಿಗೆಲ್ಲ ಇದೊಂದೇ ಬಳ್ಳಿ ಔಷಧವನ್ನು ಒದಗಿಸುತ್ತಿತ್ತು. ಹಾಲು ಕರೆದುಕೋ ಎಂದರೆ ಕೆಚ್ಚಲನ್ನೇ ಕೊಯ್ದುಕೊಳ್ಳುವ ಇಂಥ ತಿಳಿಗೇಡಿಗಳಿಂದ ಈ ದೇಶ ತುಂಬಿ ತುಳುಕಾಡುತ್ತಿರುವುದರಿಂದಲೇ ವನಸ್ಪತಿನಾಶವನ್ನು ತಪ್ಪಿಸಲು ದಾದಾಸಾಹೇಬರೂ, ಅವರ ತಲೆಮಾರಿನ ಹಳ್ಳಿಯ ವೈದ್ಯರೂ ಅವುಗಳನ್ನು ಬಚ್ಚಿಡುತ್ತಿದ್ದರೇನೋ' (ಕಾವ್ಯಾನಂದ ಪು. ೩)

ದ್ಯಾಂಪುರ ಕಲ್ಲಿನಾಥ ಶಾಸ್ತ್ರಿಗಳವರ ಬದುಕು ವಿಭಿನ್ನ ನೆಲೆಗಳಲ್ಲಿ ವಿಸ್ತಾರಗೊಂಡಿದೆ. ಅವರು ನೀಡಿದ ಮಹತ್ವದ ಕಾಣಿಕೆಗಳಲ್ಲಿ ಮರೆತೆನಂದರೂ ಮರೆಯದಂಥ ಕಾವ್ಯಾನಂದ "ಡಾ. ಸಿದ್ಧಯ್ಯ ಪುರಾಣಿಕರು". ಕಲ್ಲಯ್ಯ ಶಾಸ್ತ್ರಿಗಳಿಗೆ ಸಿದ್ಧಯ್ಯ, ಅನ್ನದಾನಯ್ಯ, ಬಸವರಾಜು ಮೂರು ಜನ ಗಂಡು ಮಕ್ಕಳು. ಮೂರು ಮಕ್ಕಳಿಗೆ ಉತ್ತಮವಾದ ಶಿಕ್ಷಣ ನೀಡುವುದಕ್ಕಾಗಿ ಹಲವಾರು ಕಷ್ಟಗಳನ್ನು ಅನುಭವಿಸಿದರು. ಮೊದಲನೆಯ ಮಗ ಸಿದ್ಧಯ್ಯನವರು ತುಂಬ ಮೇಧಾವಿಗಳಾದ ಕಾರಣ ಹೈದರಾಬಾದವರೆಗೆ ಹೋಗಿ ಓದುವುದಕ್ಕೆ ಬೇಕಾದ ಸವಲತ್ತು ಕಲ್ಪಿಸುವುದು ಸಣ್ಣ ಮಾತಲ್ಲ. ಕಂಡವರಿಗೆ ಆಗುವ ಕೆಲಸವೂ ಅಲ್ಲ. ಮೂರು ಮಕ್ಕಳು ಉನ್ನತ ಅಧಿಕಾರದಲ್ಲಿ ಇರುವುದನ್ನು ನೋಡಿ ಆನಂದಪಟ್ಟರು. ಅವರು ಮಾತ್ರ ದ್ಯಾಂಪುರ ಬಿಟ್ಟು ಬೇರೆಲ್ಲೂ ಹೋಗಲಿಲ್ಲ. ಪುರಾಣ ಕೀರ್ತನಗಳನ್ನು ಎಂದೂ ಬಿಡದೆ ನಡೆಸಿಕೊಂಡು ಬಂದರು. ಅತ್ಯಂತ ತುಂಬ ಆನಂದದ ಕುಟುಂಬ ಜೀವನವನ್ನು ಕಳೆದರು. ಅಂತ್ಯಕಾಲದ ಸಮಯವನ್ನು ಬೆಂಗಳೂರಲ್ಲಿ

ಸಿದ್ಧಯ್ಯ ಪುರಾಣಿಕರೊಂದಿಗೆ ಕಳೆದರು. ಮಕ್ಕಳು ಮೊಮ್ಮಕ್ಕಳೊಂದಿಗೆ ಆರೋಗ್ಯದಿಂದ ಬದುಕಿದರು. ೧೧-೧೨-೧೯೯೪ರಲ್ಲಿ ಮಂಗಳವಾರ ಬೆಂಗಳೂರಲ್ಲಿ ಲಿಂಗೈಕ್ಯರಾದರು.

## ಜನನ-ಬಾಲ್ಯ

ಸಿದ್ಧಯ್ಯ ಪುರಾಣಿಕರು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ದ್ಯಾಂಪುರ ಎಂಬ ಹಳ್ಳಿಯಲ್ಲಿ ೧೮ ಆಗಸ್ಟ್ ೧೯೧೮ರಂದು ಜನಿಸಿದರು. ತಂದೆ ಕಲ್ಲಿನಾಥ ಶಾಸ್ತ್ರಿಗಳು, ತಾಯಿ ದಾನಮ್ಮನವರು.

ಹುಟ್ಟಿದ ಮನೆ ಜ್ಞಾನಿಗಳ ತವರೂರಾಗಿದ್ದ ಕಾರಣ ಕಕ್ಕಂದಿರಾದ ಚೆನ್ನಕವಿಗಳು ಪ್ರಕಾಂಡ ಪಂಡಿತರು, ತಂದೆ ಕಲ್ಲಿನಾಥ ಶಾಸ್ತ್ರಿಗಳು ಅಪಾರ ಜ್ಞಾನಿಗಳು. ನಿತ್ಯ ಮನೆಯಲ್ಲಿ ಶಾಸ್ತ್ರದ ಚರ್ಚೆ ನಡೆಯುತ್ತಿತ್ತು. ಹೀಗಾಗಿ ಅಕ್ಷರಜ್ಞಾನ ಪಡೆಯುವುದು ಸಿದ್ಧಯ್ಯನವರಿಗೆ ಕಷ್ಟವಾಗಲಿಲ್ಲ. ಆಗ ಇನ್ನೂ ಸರ್ಕಾರಿ ಶಾಲೆಗಳು ಹಳ್ಳಿಯಲ್ಲಿ ಪ್ರಾರಂಭವಾಗಿರಲಿಲ್ಲ. ಗಾಂವಠಿ ಶಾಲೆಗಳೆ ಹೆಚ್ಚಾಗಿದ್ದವು. ದ್ಯಾಂಪುರದಲ್ಲಿದ್ದ ಗಾಂವಠಿ ಶಾಲೆಗೆ ಒಬ್ಬರು ಶಿಕ್ಷಕರಿದ್ದರು. ಅವರೂ ಬಿಟ್ಟು ಹೋಗಿದ್ದರು. ಕಲ್ಲಿನಾಥ ಶಾಸ್ತ್ರಿಗಳೇ ಈ ಶಾಲೆಯನ್ನು ಮುನ್ನಡೆಸುತ್ತಿದ್ದರು. ಹೀಗಾಗಿ ಮನೆಯೇ ಸಿದ್ಧಯ್ಯನವರಿಗೆ ಶಾಲೆಯಾಯಿತು. ಕಲ್ಲಿನಾಥ ಶಾಸ್ತ್ರಿಗಳು ಸಾಹಿತ್ಯ, ವ್ಯಾಕರಣ, ಛಂದಸ್ಸು ಇತ್ಯಾದಿಗಳಲ್ಲದೆ ಜೈಮಿನಿ ಭಾರತ, ಶಬರ ಶಂಕರವಿಳಾಸ, ಪ್ರಭುಲಿಂಗಲೀಲೆಗಳನ್ನು ಓದಿ ಅರ್ಥ ಹೇಳುತ್ತಿದ್ದರು.

ದ್ಯಾಂಪುರದಲ್ಲಿ ಪ್ರಾಥಮಿಕ ಶಾಲೆ ಚೆನ್ನಾಗಿ ನಡೆಯುತ್ತಿದ್ದ ಸಂದರ್ಭದಲ್ಲಿಯೇ ಒಂದು ಕೊಲೆ ಪ್ರಕರಣ ನಡೆದು ಊರಿನಲ್ಲಿ ಹಾಲಾಹಲ ಪ್ರಾರಂಭವಾಯಿತು. ಕೊಲೆಯ ತನಿಖೆಗಾಗಿ ಮೊದಲ ಬಾರಿಗೆ ಪೋಲೀಸರು ದ್ಯಾಂಪುರಕ್ಕೆ ಬಂದರು. ಊರ ಜನ ಆತಂಕಗೊಂಡರು. ಇದರ ಪರಿಣಾಮವಾಗಿ ಮೊದಲೇ ಕುಂಟುತ್ತ ಸಾಗಿದ್ದ ಶಾಲೆ ಮುಚ್ಚಿಬಿಟ್ಟಿತು. ಸಿದ್ಧಯ್ಯನವರಿಗೆ ತುಂಬ ನಿರಾಶೆಯಾಯಿತು. ಕಲ್ಲಿನಾಥ ಶಾಸ್ತ್ರಿಗಳು ಮಗನ ಅಧ್ಯಯನ ಆಸಕ್ತಿ ಗಮನಿಸಿ, ಮಗನಿಗೆ ಹೇಗಾದರೂ ವಿದ್ಯೆ ಕೊಡಿಸಬೇಕೆಂದು ಆಲೋಚಿಸಿದರು. ತಾಯಿ ದಾನಮ್ಮನವರ ಸಹೋದರ ಕಳಕಯ್ಯನವರು ನೆರೆಯ ಗ್ರಾಮ ಚಿಕ್ಕೇನಕೊಪ್ಪದಲ್ಲಿ ಶಿಕ್ಷಕರಾಗಿದ್ದರು. ಸಿದ್ಧಯ್ಯನವರಿಗೆ ಅವರು ಸೋದರ ಮಾವ. ಕಳಕಯ್ಯನವರ ಮನೆಯಲ್ಲಿ ಸಿದ್ಧಯ್ಯನವರನ್ನು ಇಟ್ಟು ಅಧ್ಯಯನ ಮಾಡಿಸಲು ತಂದೆ ಚಿಂತಿಸಿದರು. ವಿದ್ಯೆ ಕಲಿಯಬೇಕೆಂಬ ಆಸಕ್ತಿಯಿದ್ದ ಸಿದ್ಧಯ್ಯನವರು ತಂದೆ ತಾಯಿಗಳನ್ನು ಬಿಟ್ಟು ಮಾವನ ಮನೆಗೆ ಹೋದರು.

ಚಿಕ್ಕೇನಕೊಪ್ಪದ ಹಿರೇಮಠದಲ್ಲಿ ಕಳಕಯ್ಯನವರು ವಾಸಿಸುತ್ತಿದ್ದರು. ಮಠ ಹಗಲಿನಲ್ಲಿ ಶಾಲೆಯಾಗಿ, ರಾತ್ರಿ ಊರ ಹಿರಿಯರು ಕೂಡಿ ಭಜನೆ ಕೀರ್ತನೆ ಪುರಾಣ ಪ್ರವಚನ ಮಾಡುವ ಕೇಂದ್ರವಾಗಿತ್ತು. ಮಾವ ಕಳಕಯ್ಯನವರು ಊರಿನಲ್ಲಿ ಗೌರವಾನ್ವಿತರಾಗಿದ್ದರು. ಊರ ಜನರು ಅವರಿಗೆ ತುಂಬ ಗೌರವ ಕೊಡುತ್ತಿದ್ದರು. ಊರಿನ ಬಹುತೇಕ ಕಾರ್ಯಚಟುವಟಿಕೆಗಳಿಗೆ ಅವರು ಆಧಾರಸ್ತಂಭವಾಗಿದ್ದರು. ಊರಿನ ಜನರ ಹಲವು ಹನ್ನೆರಡು ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಮಾರ್ಗದರ್ಶಕರಾಗಿದ್ದರು. ಮದುವೆ



ಸಾಲಾವಳಿ ಮೊದಲಾದ ಮಂಗಳ ಕಾರ್ಯಗಳ ಪೌರೋಹಿತ್ಯವನ್ನು ಅವರೇ ವಹಿಸುತ್ತಿದ್ದರು. ದನಕರುಗಳಿಗೆ ಕಾಯಿಲೆ ಕಸಾಲೆ ಬಂದರೆ ಔಷಧಿ ನೀಡುವ ನಾಟಿವೈದ್ಯರಾಗಿದ್ದರು. ಭಜನಾ ಮೇಳದವರಿಗೆ, ಬಯಲಾಟ ಆಡುವ ಹುಡುಗರಿಗೆ, ಗರತಿಯರಿಗೆ ಹಾಡುಗಳನ್ನು ಬರೆದುಕೊಡುವ ಆಶುಕವಿ ಯಾಗಿದ್ದರು. ಹಾರ್ಮೋನಿಯಂ ನುಡಿಸುವ ಮೂಲಕ ಸಂಗೀತ ಶಿಕ್ಷಣವನ್ನು ನೀಡುತ್ತಿದ್ದರು. ಹೀಗೆ ಮಾವ ಕಳಕಯ್ಯನವರು ಸಕಲ ಕಲಾವಲ್ಲಭರಾಗಿದ್ದರು. ಊರಿಗೆ ಬೇಕಾದ ಮನುಷ್ಯರಾಗಿದ್ದರು. ಅವರ ಆಶ್ರಯದಲ್ಲಿ ಸಿದ್ಧಯ್ಯನವರ ಶಿಕ್ಷಣ ಮುಂದುವರೆಯಿತು. ಮಾವ ಕಳಕಯ್ಯನವರು ತುಂಬ ಕಟ್ಟುನಿಟ್ಟಿನ ಮನುಷ್ಯರಾಗಿದ್ದರು. ಶಿಸ್ತು ಪಾಲನೆಯಲ್ಲಿ ತಪ್ಪಿದರೆ ಅಳಿಯನೆಂಬ ಕಕ್ಕುಲಾತಿ ತೋರದೆ ಶಿಕ್ಷೆ ನೀಡದೇ ಬಿಡುತ್ತಿರಲಿಲ್ಲ.

ಖ್ಯಾತ ಸಾಹಿತಿಗಳಾದ ದೇವೇಂದ್ರಕುಮಾರ ಹಕಾರಿ ಅವರ ತಂದೆ ಸಿದ್ಧಪ್ಪನವರು ಶ್ರಾವಣಮಾಸದಲ್ಲಿ ಪುರಾಣ ಓದುತ್ತಿದ್ದರು. ಕಳಕಯ್ಯನವರು ಹೇಳುತ್ತಿದ್ದರು. ಇಬ್ಬರೂ ಸಾಹಿತ್ಯಜ್ಞರು, ರಸಿಕರಾಗಿದ್ದರು. ಪುರಾಣ ಪ್ರವಚನ ನಾಟಕಗಳ ಮಧ್ಯೆ ಸಿದ್ಧಯ್ಯನವರು ಬೆಳೆಯುತ್ತ ನಾಲ್ಕನೆಯ ತರಗತಿ ಪೂರೈಸಿದರು.

ಒಂದು ದಿನ ಮಾವ ಕಳಕಯ್ಯನವರು ಪಾಠ ಮಾಡುತ್ತ 'ನಿಮಗೆ ಏನು ಬೇಕು' ಎಂದು ಸ್ಲೇಟುಗಳ ಮೇಲೆ ಬರೆದು ತೋರಿಸಿರಿ ಎಂದು ಅಪ್ಪಣೆ ಕೊಡಿಸಿದರು. ಬಾಲ ಬುದ್ಧಿಯ ಮಕ್ಕಳು ಒಬ್ಬೊಬ್ಬರು ಒಂದೊಂದು ವಸ್ತು ಬೇಕೆಂದು ಬರೆದಿದ್ದರು. ಒಬ್ಬ ತಿಂಡಿ ಬೇಕು, ಮತ್ತೊಬ್ಬ ಹುಂಡಿ ಬೇಕು, ಇನ್ನೊಬ್ಬ ಬಳಪ ಬೇಕು, ಮಗುದೊಮ್ಮ ಹೋಳಿಗೆ ಬೇಕು ಎಂದು ಹೀಗೆ ವಿಧವಿಧವಾದ ತಮ್ಮ ಆಶಯಗಳನ್ನು ಪಾಟಿಯ ಮೇಲೆ ಬರೆದು ತಂದಿದ್ದರು. ಆದರೆ ಒಬ್ಬ ವಿದ್ಯಾರ್ಥಿ ಮಾತ್ರ 'ನನಗೆ ವಿದ್ಯೆ ಬೇಕು' ಎಂದು ಬರೆದಿದ್ದ. ಆ ವಿದ್ಯಾರ್ಥಿಯೇ ಸಿದ್ಧಯ್ಯ ಪುರಾಣಿಕ. ಈ ವಿದ್ಯೆ ಛಲದಿಂದ ಅವರು ಕನ್ನಡ, ಹಿಂದಿ, ಸಂಸ್ಕೃತ, ಇಂಗ್ಲಿಷ್, ಉರ್ದು ಮೊದಲಾದ ಭಾಷೆಗಳನ್ನು ಕಲಿತು ಪ್ರಕಾಂಡ ಪಾಂಡಿತ್ಯವನ್ನು ಗಳಿಸಿದರು.

ತಂದೆ ಕಲ್ಲಿನಾಥ ಶಾಸ್ತ್ರಿಗಳು ಮಗನನ್ನು ಇನ್ನಷ್ಟು ಓದಿಸಬೇಕೆಂಬ ತವಕದಲ್ಲಿದ್ದರು. ಸಮೀಪದ ಕುಕನೂರಿನಲ್ಲಿ 'ವಿದ್ಯಾನಂದ ಗುರುಕುಲ' ಚೆನ್ನಾಗಿ ನಡೆಯುತ್ತಿತ್ತು. ಆದರೆ ಆ ಗುರುಕುಲದಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳೇ ಅಧಿಕವಾಗಿದ್ದರು. ಕಲ್ಲಿನಾಥ ಶಾಸ್ತ್ರಿಗಳು ವಿದ್ಯಾನಂದ ಗುರುಕುಲದ ಮುಖ್ಯಾಧ್ಯಾಪಕರಾಗಿದ್ದ ದೇಸಾಯಿ ರಾಘವೇಂದ್ರರಾಯರನ್ನು (ಖ್ಯಾತ ಶಾಸನ ತಜ್ಞರಾದ ಪಾಂಡುರಂಗ ಭೀ. ದೇಸಾಯಿ ಅವರ ಅಣ್ಣ) ಭೇಟಿಯಾಗಿ ಈ ವಿಷಯವಾಗಿ ಚರ್ಚಿಸಿದರು. ಇದು ರಾಷ್ಟ್ರೀಯ ಶಾಲೆಯಾಗಿರುವುದರಿಂದ ಇಲ್ಲಿ ಎಲ್ಲ ಜಾತಿಯ ವಿದ್ಯಾರ್ಥಿಗಳಿಗೂ ಪ್ರವೇಶವಿದೆ ಎಂದು ಹೇಳಿದರು.

ನಿಜಾಂ ಆಡಳಿತಕ್ಕೆ ಒಳಪಟ್ಟ ಈ ಶಾಲೆಯಲ್ಲಿ ಉರ್ದುಭಾಷೆ ಕಡ್ಡಾಯವಾಗಿತ್ತು. ಉರ್ದು ಭಾಷೆ ಬಗ್ಗೆ ದೇಸಾಯಿ ಅವರು ಸಂದೇಹ ವ್ಯಕ್ತಪಡಿಸಿದಾಗ ಕಲ್ಲಿನಾಥ ಶಾಸ್ತ್ರಿಗಳು ಪರೀಕ್ಷಿಸಬಹುದು ಎಂದು ಹೇಳಿದರು. ಸಿದ್ಧಯ್ಯನವರಿಗೆ ಮನೆಯಲ್ಲಿ

ಉರ್ದು ಅಕ್ಷರಾಭ್ಯಾಸ ಮಾಡಿಸಿದ್ದರು. ತಕ್ಕಮಟ್ಟಿನ ಉರ್ದು ಜ್ಞಾನ ಅವರಿಗಾಗಿತ್ತು. ಇದರಿಂದ ವಿದ್ಯಾನಂದ ಗುರುಕುಲದಲ್ಲಿ ಪ್ರವೇಶ ನಿರಾಯಾಸವಾಗಿ ಲಭಿಸಿತು.

ಸಿದ್ಧಯ್ಯನವರು ಬೆಳಿಗ್ಗೆ ಐದು ಗಂಟೆಗೆ ಏಳುತ್ತಿದ್ದರು. ನಡೆದುಕೊಂಡು ದ್ಯಾಂಪುರದಿಂದ ನಿತ್ಯ ಕುಕನೂರಿಗೆ ಬರುತ್ತಿದ್ದರು. ಏಳುವರೆ ಗಂಟೆಗೆ ಪ್ರಾರ್ಥನೆಯೊಂದಿಗೆ ಶಾಲೆ ಪ್ರಾರಂಭ. ಮಧ್ಯಾಹ್ನ ೧೨ರವರೆಗೆ ಶಾಲೆ. ನಂತರ ಊಟ ಮಾಡಲು ದ್ಯಾಂಪುರಕ್ಕೆ ಬರುತ್ತಿದ್ದರು. ಮಧ್ಯಾಹ್ನ ೧ ರಿಂದ ೫ ರವರೆಗೆ ಮತ್ತೆ ಶಾಲೆ. ಶಾಲೆಯಲ್ಲಿ ಸಾಮೂಹಿಕ ಕವಾಯಿತು; ಲೇಝಿಮ್, ಮಲ್ಲಕಂಬ, ಸಿಂಗಲ್‌ಬಾರ್, ಡಬಲ್ ಬಾರ್, ಸರಮನಿ, ಕಬ್ಬಡಿ ಮೊದಲಾದ ಆಟಗಳನ್ನು ಆಡಿಸುತ್ತಿದ್ದರು. ಇದರಿಂದ ಸಿದ್ಧಯ್ಯನವರಲ್ಲಿ ಹೊಸಶಕ್ತಿ ಸಂಚಾರವಾದಂತಾಯಿತು.

ಆದರೆ ಈ ಗುರುಕುಲದಲ್ಲಿ ಬ್ರಾಹ್ಮಣರೇ ಹೆಚ್ಚು ಶಿಕ್ಷಕರಿದ್ದ ಕಾರಣ, ಲಿಂಗಾಯತ ವಿದ್ಯಾರ್ಥಿಗಳನ್ನು ಕೀಳುದೃಷ್ಟಿಯಿಂದ ಕಾಣುತ್ತಿದ್ದರು. 'ಶೂದ್ರ ಮುಂಡೇದು, ಉರುಳೀಗಡ್ಡೆ ತಿಂಬೋದು' ಎಂದು ಟೀಕಿಸುತ್ತಿದ್ದರು. ಬ್ರಾಹ್ಮಣ ವಿದ್ಯಾರ್ಥಿಗಳೊಂದಿಗೆ ಇವರನ್ನು ಸೇರಿಸುತ್ತಿರಲಿಲ್ಲ. ಕೆಲವು ಶಿಕ್ಷಕರಂತೂ 'ನಿಮ್ಮ ದಪ್ಪನ್ನ ತಲೆಬುರುಡೆಯೊಳಗೆ ಹೊಕ್ಕಿತೋ ಇಲ್ಲವೋ ನಾ ಹೇಳಿದುದು" ಎನ್ನುತ್ತಿದ್ದರು. ರವಿವಾರ ರಜೆಯಿದ್ದರೂ ಸಗಣಿ ಸಂಗ್ರಹಿಸಿ ಶಾಲೆಯನ್ನು ಸಾರಿಸಬೇಕಾಗಿತ್ತು. ಮಾಸ್ತರರ ಮನೆಗಳಿಗೆ ಹೊಲಗಳಿಂದ ತೆಂಗಿನ ಗರಿ, ಬಾಳೆಕಂಬ ಒಯ್ದು ಕೊಡಬೇಕು. ಅವರ ಪತ್ರಾವಳಿಗಳಿಗಾಗಿ ಎಲೆಗಳ ಮೂಟೆ ಒಯ್ದು ಮುಟ್ಟಿಸಬೇಕು. ಮನೆಯ ಅಂದ ಚೆಂದಕ್ಕಾಗಿ ಪರಿಶ್ರಮಿಸಬೇಕಾಗಿತ್ತು. ಇಷ್ಟೆಲ್ಲ ಮಾಡಿದರೂ ಆ ಶಿಕ್ಷಕರು ಇವರನ್ನು 'ಶೂದ್ರ'ರಂತೆಯೇ ಕಾಣುತ್ತಿದ್ದರು. ಇದರಿಂದ ಬೇಸತ್ತ ಸಿದ್ಧಯ್ಯ ಮತ್ತು ಅವನ ಗೆಳೆಯರು ಶಾಲೆಗೆ ಹೋಗುವುದನ್ನೇ ಬಿಟ್ಟರು. ದಾರಿ ಮಧ್ಯದಲ್ಲಿ ಆಟವಾಡಿ ಮನೆ ಸೇರಿತ್ತಿದ್ದರು.

ಹೀಗೆ ಮೂರು ತಿಂಗಳು ಕಾಲ ಶಾಲೆಯ ಹೊರಗೆ ಉಳಿದರು. ಶಿಕ್ಷಕರು ಇವರ ಹೆಸರನ್ನು ತೆಗೆದು ಹಾಕಿದರು. ಒಂದು ದಿನ ಕಲ್ಲಿನಾಥ ಶಾಸ್ತ್ರಿಗಳು ಮಕ್ಕಳ ವಿದ್ಯಾಭ್ಯಾಸದ ಪ್ರಗತಿ ತಿಳಿದುಕೊಳ್ಳಲು ವಿದ್ಯಾನಂದ ಗುರುಕುಲಕ್ಕೆ ಹೋದರು. ವಿಷಯ ತಿಳಿದು ಶಾಸ್ತ್ರಿಗಳಿಗೆ ತುಂಬ ಕೋಪ ಬಂತು. ಊರಿಗೆ ಬಂದರು. ಕೈಯಲ್ಲಿ ಕೋಲು ತೆಗೆದುಕೊಂಡರು. ಸಿದ್ಧಯ್ಯನನ್ನು ಬಡೆಯಬೇಕು ಎಂದು ಕೈ ಎತ್ತಿದರು. ಆಗ ಸಿದ್ಧಯ್ಯನವರು ಶಾಲೆಯಲ್ಲಿ ನಡೆದ ಘಟನೆಗಳನ್ನು ಒಂದೊಂದಾಗಿ ಬಿಡಿಸಿ ಹೇಳಿದರು. ತಕ್ಷಣ ತಂದೆ ಬಡಿಯುವುದನ್ನು ಬಿಟ್ಟು ಶಾಲೆಗೆ ಹೋದರು. ಮುಖ್ಯಸ್ಥರಿಗೆ ಈ ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ವರ್ಣಭೇದ ದೃಷ್ಟಿಯಿಂದ ಕಾಣುವುದು ಸರಿಯಲ್ಲ ಎಂದು ವಾದಿಸಿದರು. ಮುಖ್ಯಸ್ಥರು– ಇನ್ನು ಮುಂದೆ ಹಾಗೆ ಆಗದಂತೆ ನಾವು ನೋಡಿಕೊಳ್ಳುವೆವು ಎಂದು ಮಾತು ಕೊಟ್ಟರು.

ಸಿದ್ಧಯ್ಯನವರನ್ನು ಕರೆದು 'ನೀನು ತುಂಬ ಜಾಣ. ಮುಂದೆ ದೊಡ್ಡ ವ್ಯಕ್ತಿ ಯಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ನೀನು ನಿತ್ಯ ಇಲ್ಲಿಯ ಗ್ರಂಥಾಲಯದಿಂದ



ಒಂದು ಪುಸ್ತಕ ತೆಗೆದುಕೊಂಡು ಹೋಗಿ ಓದಿ ಅದರ ಸಾರಾಂಶವನ್ನು ನನಗೆ ಹೇಳಬೇಕು. ನಂತರ ಮತ್ತೊಂದು ಪುಸ್ತಕ ಓದಲು ಕೊಡುವೆನು' ಎಂದು ಮುಖ್ಯಸ್ಥರು ಹೇಳಿದರು.

ತಮ್ಮ ಸಂಗ್ರಹದಲ್ಲಿದ್ದ ಒಂದು ಪುಸ್ತಕವನ್ನು ಓದಲು ಸಿದ್ಧಯ್ಯನವರಿಗೆ ಕೊಟ್ಟರು. ಕುಕನೂರಿನಿಂದ ದ್ಯಾಂಪುರಕ್ಕೆ ಬರುವವರೆಗೆ ಸಿದ್ಧಯ್ಯ ಪುಸ್ತಕ ಓದುತ್ತ ಬಂದರು. ಮನೆಯಲ್ಲಿ ರಾತ್ರಿಯೆಲ್ಲ ಓದಿದ. ಮರುದಿನ ಶಾಲೆಗೆ ಹೋಗಿ ಮುಖ್ಯಸ್ಥರ ಮುಂದೆ ನಿನ್ನೆ ಓದಿದ ಪುಸ್ತಕದ ಒಟ್ಟು ಸಾರಸಂಗ್ರಹವನ್ನು ಚಾಚೂತಪ್ಪದೆ ಒಪ್ಪಿಸಿದ. ಇದರಿಂದ ಗುರುಗಳಿಗೆ ತುಂಬ ಸಂತೋಷವಾಯಿತು. ಮತ್ತೊಂದು ಪುಸ್ತಕ ಕೊಟ್ಟರು. ಹೀಗೆ ನಿತ್ಯ ಒಂದು ಪುಸ್ತಕ ಕೊಡುವ ಪರಿಪಾಠ ಪ್ರಾರಂಭಿಸಿದರು. ಎಷ್ಟೇ ರಾತ್ರಿಯಾದರೂ ಸಿದ್ಧಯ್ಯನವರು ಪುಸ್ತಕ ಓದಿಯೇ ಮಲಗಿಕೊಳ್ಳುತ್ತಿದ್ದರು. ಅವರ ಜ್ಞಾನದಾಹ ಇನ್ನಷ್ಟು ಹೆಚ್ಚಾಗತೊಡಗಿತು. ತಂದೆಯವರು ಸಂಗ್ರಹಿಸಿದ ಪುಸ್ತಕಗಳನ್ನೆಲ್ಲ ಓದಿದರು. ಓದಿನಿಂದ ವ್ಯಕ್ತಿತ್ವ ಪರಿಪೂರ್ಣವಾಗುವುದೆಂದು ಹೇಳುವಂತೆ ಸಿದ್ಧಯ್ಯನವರ ಜ್ಞಾನದ ಕ್ಷಿತಿಜ ವಿಸ್ತಾರವಾಗತೊಡಗಿತು. ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವಂತೆ ಅವನ ಜ್ಞಾನಲಾಲಸೆಗೆ ಸಿಕ್ಕ ಸಿಕ್ಕ ಪುಸ್ತಕಗಳೆಲ್ಲ ಕರಗಿ ಹೋದವು.

ಸಿದ್ಧಯ್ಯನವರು ಮಿಡಲ್ ಪರೀಕ್ಷೆಯಲ್ಲಿ ಇಡೀ ಜಿಲ್ಲೆ ಪ್ರಥಮ ಸ್ಥಾನ ಪಡೆದಿದ್ದರು. ಊರಿಗೆ ಊರೇ ಸಂಭ್ರಮ ಪಟ್ಟಿತು. ತಂದೆಗೆ ಸಿದ್ಧಯ್ಯ ಇನ್ನು ಹೆಚ್ಚು ಓದಬೇಕೆಂಬ ಕಳಕಳಿಯಿತ್ತು. ಆಗ ನಿಜಾಮ ರಾಜ್ಯದಲ್ಲಿ ಜಿಲ್ಲೆಗೊಂದು ಹೈಸ್ಕೂಲು ಇದ್ದವು. ಕಲ್ಲಿನಾಥ ಶಾಸ್ತ್ರಿಗಳು ಸಿದ್ಧಯ್ಯನವರನ್ನು ಕಲಬುರ್ಗಿಗೆ ಹೈಸ್ಕೂಲು ಶಿಕ್ಷಣಕ್ಕೆ ಕಳಿಸಲು ನಿರ್ಧರಿಸಿದರು.

ಕಲಬುರ್ಗಿಯ ಸರ್ಕಾರಿ ಹೈಸ್ಕೂಲಿಗೆ ಹೆಸರು ಹಚ್ಚಲು ತಂದೆಯವರು ಸಿದ್ಧಯ್ಯನವರನ್ನು ಕರೆದುಕೊಂಡು ಹೋದರು. ಅಲ್ಲಿಯ ಶಿಕ್ಷಕರು ಎಲ್ಲ ರೀತಿಯಿಂದ ಸಿದ್ಧಯ್ಯನವರನ್ನು ಪರೀಕ್ಷಿಸಿದರು. ಇಂಗ್ಲಿಷ್, ಉರ್ದು ಭಾಷೆಯ ಕುರಿತು ಪ್ರಶ್ನೆಗಳನ್ನು ಕೇಳಿದರು. ನಂತರ ಪ್ರವೇಶ ನೀಡಿದರು. ವಸತಿಗಾಗಿ ಕಲಬುರ್ಗಿಯ ಗದ್ದುಗೆಮಠದ ಪ್ರಸಾದ ನಿಲಯದಲ್ಲಿ ವ್ಯವಸ್ಥೆ ಮಾಡಿದರು. ಆದರೆ ಆ ಪ್ರಸಾದ ನಿಲಯದಲ್ಲಿ ಅವರು ಬಹಳ ದಿನ ಇರಲಿಲ್ಲ. ಬಡ ವಿದ್ಯಾರ್ಥಿಗಳಿಗೆ ಅಲ್ಲಿ ತುಂಬ ಅನ್ಯಾಯ ವಾಗುವುದನ್ನು ಸಿದ್ಧಯ್ಯನವರು ಖಂಡಿಸಿ, ಹೊರ ಬಂದರು.

ಹೈಸ್ಕೂಲಿನಲ್ಲಿ ಗಣಿತ ಮುಖ್ಯವಿಷಯ ತೆಗೆದುಕೊಂಡಿದ್ದರು. ಗಣಿತ ಕಲಿಸುವ ಶಿಕ್ಷಕರು ನಿತ್ಯ ಹೋಮ್‌ವರ್ಕ ಬಹಳ ಕೊಡುತ್ತಿದ್ದರು. ಒಂದು ದಿನ ತಪ್ಪಿಸಿ ಹೋದ ಸಿದ್ಧಯ್ಯನವರ ಮೇಲೆ ಹರಿಹಾಯ್ದರು. ಇವರು ಎದುರು ಉತ್ತರ ಕೊಟ್ಟರು. ಪ್ರಕರಣ ದೊಡ್ಡದಾಯಿತು. ಗಣಿತ ಶಿಕ್ಷಕರು ಇವರ ಮೇಲೆ ಕೆಂಡ ಕಾರತೊಡಗಿದರು. ಆಗ ಗೆಳೆಯರು 'ಗಣಿತ ವಿಷಯದ ಬದಲಾಗಿ ಕನ್ನಡವನ್ನು ಆಯ್ಕೆ ಮಾಡಿಕೊಂಡರೆ ಅಲ್ಲಿ ತವಗ ಭೀಮಸೇನರಾಯರೆಂಬ ಒಳ್ಳೆಯ ಶಿಕ್ಷಕರಿದ್ದಾರೆ' ಎಂದು ಸಲಹೆ ನೀಡಿದರು.

ತವಗ ಭೀಮಸೇನರಾಯರು ಕನ್ನಡದ ಪ್ರಕಾಂಡ ಪಂಡಿತರು. ಹೈದರಾಬಾದ

ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಿದ ಶ್ರೇಯಸ್ಸು ಅವರದು. ಅವರು ಕನ್ನಡ ಚಳುವಳಿಗೆ ನಾಂದಿ ಹಾಡಿದ್ದರು. ಇವರ ಪ್ರಭಾವದಿಂದ ಸಿದ್ಧಯ್ಯನವರು ಈ ಕನ್ನಡ ಕಟ್ಟುವ ಹೋರಾಟದಲ್ಲಿ ಸ್ವಯಂ ಸಂತೋಷದಿಂದ ಪಾಲುಗೊಂಡರು.

ಸಿದ್ಧಯ್ಯನವರು ವಸತಿಗಾಗಿ ಗುರುಬಸವ ಮಠವನ್ನು ಸೇರಿಕೊಂಡರು. ಅಲ್ಲಿ ಅವರಿಗೆ ಸಮಾನ ಮನಸ್ಕ ಗೆಳೆಯರು ದೊರೆತರು. ಮಠದ ಅಂಗಳದಲ್ಲಿ ಒಂದು ನಾಟಕ ಆಡಲು ಸಿದ್ಧತೆ ನಡೆಸಿದರು. 'ಸ್ತ್ರೀ' ಎಂಬ ನಾಟಕದಲ್ಲಿ ಸಿದ್ಧಯ್ಯನವರು 'ವಿವೇಕಾನಂದ' ಪಾತ್ರ ನಿರ್ವಹಿಸಿದರು. ಮರು ವರ್ಷ ಗೆಳೆಯರು ಒಂದು ನಾಟಕ ಬರೆಯಲು ಪ್ರೋತ್ಸಾಹಿಸಿದರು. ಗೆಳೆಯರ ಪ್ರೇರಣೆಯಿಂದ ಸಿದ್ಧಯ್ಯನವರು 'ಬೆಳವಡಿ ಮಲ್ಲಮ್ಮ' ಎಂಬ ನಾಟಕವನ್ನು ಬರೆದರು. ಈ ನಾಟಕದಲ್ಲಿ ಶಿವಾಜಿಯ ಪಾತ್ರವನ್ನು ಸಿದ್ಧಯ್ಯನವರೇ ವಹಿಸಿದರು. ಹೀಗೆ ಕಲಬುರ್ಗಿಯಲ್ಲಿದ್ದಾಗಲೇ ಸಿದ್ಧಯ್ಯನವರು ಆತ್ಮಾರ್ಪಣದಂಥ ಅದ್ಭುತ ನಾಟಕವನ್ನು ರಚಿಸಿದರು.

ಕಲಬುರ್ಗಿಯರಲ್ಲಿ ಹೈಸ್ಕೂಲು ಶಿಕ್ಷಣ ಮುಗಿದ ನಂತರ, ಕಾಲೇಜು ಶಿಕ್ಷಣವೂ ಕಲಬುರ್ಗಿಯಲ್ಲಿ ಜರುಗಿತು. ಹಕ್ಕಾನಿ ಸಾಹೇಬರು ಸಿದ್ಧಯ್ಯನವರ ಬದುಕಿಗೆ ಒಂದು ಮಹತ್ವದ ತಿರುವು ಕೊಟ್ಟವರು. ಹಕ್ಕಾನಿ ಸಾಹೇಬರನ್ನು ಸಿದ್ಧಯ್ಯನವರು ಮೇಲಿಂದ ಮೇಲೆ ಸ್ಮರಿಸಿಕೊಳ್ಳುತ್ತಿದ್ದರು. ಒಂದು ದಿನ ಹಕ್ಕಾನಿ ಸಾಹೇಬರು ಕರೆದು ನೀನು ಇರುವುದು ಎಲ್ಲಿ ಎಂದರು. 'ಗುರುಬಸವ ಮಠದಲ್ಲಿ' ಎಂದು ಉತ್ತರ ಕೊಟ್ಟರು. ನೀನು ಮಠ ಬಿಟ್ಟು ಬಾ ಸರ್ಕಾರಿ ಹಾಸ್ಟೆಲಿನಲ್ಲಿ ಇರು. ನೀನು ಇಂಗ್ಲಿಷ್ ಚೆನ್ನಾಗಿ ಅಭ್ಯಾಸ ಮಾಡಬೇಕು. ಈ ಕಾಲೇಜಿಗೆ ಮೊದಲಿಗನಾಗಬೇಕು ಎಂದು ಹೇಳಿದರು. ಸಿದ್ಧಯ್ಯನವರಿಗೆ ಈ ವಿಷಯ ತಿಳಿದು ತುಂಬಾ ಸಂತೋಷ ವಾಯಿತು. ಹಕ್ಕಾನಿ ಸಾಹೇಬರ ನಿರೀಕ್ಷೆಯಂತೆ ಸಿದ್ಧಯ್ಯನವರು ತುಂಬ ಶ್ರಮವಹಿಸಿ ಅಧ್ಯಯನ ಮಾಡಿ ಇಡೀ ಕಾಲೇಜಿಗೆ ಇಂಗ್ಲಿಷ್ ಮತ್ತು ಕನ್ನಡ ವಿಷಯದಲ್ಲಿ ಪ್ರಥಮ ಸ್ಥಾನ ಪಡೆದರು.

ನಂತರ ಹಕ್ಕಾನಿ ಸಾಹೇಬರ ಪ್ರೇರಣೆ ಮೇರೆಗೆ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯನ್ನು ಸಂಪಾದಿಸಿದರು. ತಂದೆಯ ಅಪೇಕ್ಷೆಯಂತೆ ವಕೀಲನಾಗಬೇಕೆಂದು ಬಯಸಿ ಎಲ್.ಎಲ್.ಬಿ. ಪದವಿಗೆ ಪ್ರವೇಶ ಪಡೆದರು. ಅನೇಕರು ಇಂಗ್ಲಿಷ್ ಎಂ.ಎ., ಕನ್ನಡ ಎಂ.ಎ. ಮಾಡು ಎಂದು ಹೇಳಿದರು. ಆದರೆ ಸಿದ್ಧಯ್ಯನವರು ವಕೀಲನಾಗಬೇಕೆಂದು ಬಯಸಿದರು. ಆದರೆ ಮನೆಯಲ್ಲಿ ಆರ್ಥಿಕ ಪರಿಸ್ಥಿತಿ ಸರಿ ಇರದ ಕಾರಣ, ನೌಕರಿ ಮಾಡಬೇಕೆಂದು ಬಯಸಿದರು. ಆರ್ಯಸಮಾಜದ ಶಾಲೆಯೊಂದರಲ್ಲಿ ಶಿಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸಿದರು. ಆದರೆ ಇವರು ಹರ್ಡೇಕರ ಮಂಜಪ್ಪನವರೊಂದಿಗೆ ಸೇರಿ ಬನ್ಸಿಲಾಲ್ ಎಂಬುವರ ವಿರುದ್ಧ ಹೋರಾಟ ಮಾಡಿದ ಕಾರಣವಾಗಿ ಅಲ್ಲಿ ಇವರ ಅರ್ಜಿ ಸ್ವೀಕಾರವಾಗಲಿಲ್ಲ. ನಿಜಾಂ ಸರಕಾರದಲ್ಲಿ ಖಾಲಿ ಇದ್ದ ತಹಶೀಲ್ದಾರ ಹುದ್ದೆಗೆ ಅರ್ಜಿಸಲ್ಲಿಸಿದರು.



## ಹರ್ಡೇಕರ ಮಂಜಪ್ಪನವರ ಆಶ್ರಯ

ರಾಷ್ಟ್ರಧರ್ಮದ್ರಷ್ಟಾರ ಲೋಕಹಿತಚಿಂತಕ ಹರ್ಡೇಕರ ಮಂಜಪ್ಪನವರು ಹಳ್ಳಿ ಹಳ್ಳಿ ತಿರುಗಿ ಜನಜಾಗೃತಿ ಕಾರ್ಯ ಮಾಡುತ್ತಿದ್ದರು. ದ್ಯಾಂಪುರ ಗ್ರಾಮಕ್ಕೂ ಒಮ್ಮೆ ಅವರು ಭೇಟಿಕೊಟ್ಟಿದ್ದರು. ಆಗ ಸಿದ್ಧಯ್ಯನವರು ಅವರನ್ನು ಭೇಟಿಯಾಗಿ ಅವರೊಂದಿಗೆ ಮಾತುಕತೆ ನಡೆಸಿದ್ದರು. ಇವರು ಕಲಬುರ್ಗಿಯಲ್ಲಿ ಅಧ್ಯಯನ ಮಾಡುವ ಕಾಲಕ್ಕೆ ಒಂದು ಘಟನೆ ನಡೆಯಿತು.

ಆರ್ಯಸಮಾಜದ ಪ್ರಚಾರಕರಾಗಿದ್ದ ಬನ್ಸಿಲಾಲ ಅವರು ಒಂದು ಸಾರ್ವಜನಿಕ ಭಾಷಣದಲ್ಲಿ 'ಒಂದು ವರುಷದ ಅವಧಿಯೊಳಗೆ ಒಂದು ಸಾವಿರ ಲಿಂಗಗಳನ್ನು ತೆಗೆಸಿ ಅವರಿಗೆ ಯಜ್ಞೋಪವೀತ ತೊಡಿಸುವೆ' ಎಂದು ಪ್ರತಿಜ್ಞೆ ಮಾಡಿದ್ದರು.

ಮಹರ್ಷಿ ದಯಾನಂದ ಸರಸ್ವತಿ ಅವರು ಆರ್ಯ ಸಮಾಜವನ್ನು ಸ್ಥಾಪಿಸಿದ ಉದ್ದೇಶ– ಅನಿವಾರ್ಯ ಕಾರಣಗಳಿಂದ ಪರಧರ್ಮಕ್ಕೆ ಮತಾಂತರವಾದ ಹಿಂದೂಗಳನ್ನು ಮತ್ತೆ ಹಿಂದೂಧರ್ಮಕ್ಕೆ ಬರುವಂತೆ ಮಾಡಲು ದೀಕ್ಷೆ ನೀಡುವುದಾಗಿತ್ತು. ಆರ್ಯ ಸಮಾಜದ ಮೂಲ ಉದ್ದೇಶಕ್ಕೆ ಪೂರಕವಾಗಿ ಹೈದರಾಬಾದ ಸಂಸ್ಥಾನದಲ್ಲಿ ವೀರಶೈವರು ಕೈಜೋಡಿಸಿದ್ದರು. ಉದಗೀರದ ಸಂಗ್ರಾಮಪ್ಪ, ಶಂಕರರಾವ್, ಪ್ರಭುರಾವ್ ಮೊದಲಾದ ಲಿಂಗಾಯತ ಸಮಾಜದ ಮುಖಂಡರು ಆರ್ಯಸಮಾಜದ ತತ್ವಗಳನ್ನು ಸಮಾಜದಲ್ಲಿ ತಿಳಿಸಿಹೇಳುವ ಪ್ರಯತ್ನ ಮಾಡುತ್ತಿದ್ದರು. ಆದರೆ ಬನ್ಸೀಲಾಲ ರಂಥ ಅಜ್ಞರು ಲಿಂಗಾಯತರನ್ನೇ ಆರ್ಯಸಮಾಜಿಗಳನ್ನಾಗಿ ಮಾಡತೊಡಗಿದರು. ಇದನ್ನು ಉದ್ಗೀರದ ಸಂಗ್ರಾಮಪ್ಪನವರು ಉಗ್ರವಾಗಿ ಖಂಡಿಸಿದರು. ಪರಧರ್ಮಗಳಿಗೆ ಹೋದ ಹಿಂದೂಗಳನ್ನು ಮರಳಿ ತರುವುದಕ್ಕೆ ಇರಬೇಕೆ ಹೊರತು ಆರ್ಯ ಸಮಾಜವೊಂದು ಜಾತಿಯಾಗಿ ಪರಿಣಮಿಸಬಾರದೆಂದು ಅವರು ಹೇಳಿದರು. ಅದಕ್ಕೆ ಪ್ರತಿಯಾಗಿ ಬನ್ಸೀಲಾಲ್ ಒಂದು ಸಾವಿರ ಲಿಂಗ ತೆಗೆಯುವ ಪ್ರತಿಜ್ಞೆ ಮಾಡಿದ. ಈ ವಿಷಯ ತಿಳಿದ ಹರ್ಡೇಕರ ಮಂಜಪ್ಪನವರು ಆಲಮಟ್ಟಿಯಿಂದ ಕಲಬುರ್ಗಿಗೆ ಬಂದು ಪ್ರತಿಭಟನೆ ಮಾಡಿದರು. ಈ ಪ್ರತಿಭಟನೆಯಲ್ಲಿ ಸಿದ್ಧಯ್ಯನವರು ಪಾಲ್ಗೊಂಡರು. ಉಗ್ರ ಪ್ರತಿಭಟನೆಗೆ ಕಲಬುರ್ಗಿ, ಬೀದರ, ರಾಯಚೂರು ಜಿಲ್ಲೆಯ ಜನ ಎಚ್ಚೆತ್ತರು. ಬನ್ಸೀಲಾಲರಿಗೆ ಒಂದು ಸಾವಿರ ಅಲ್ಲ, ಒಂದು ಲಿಂಗವನ್ನೂ ತೆಗೆಯಲು ಸಾಧ್ಯವಾಗಲಿಲ್ಲ. ವೀರಶೈವರ ಜಾಗೃತಿಗಾಗಿ ಒಂದು ಸಮ್ಮೇಳನ ಮಾಡಬೇಕೆಂದು ಸಂಗ್ರಾಮಪ್ಪನವರು ಆಲೋಚಿಸಿದರು.

ಕಲಬುರ್ಗಿಯಲ್ಲಿ ಸಮ್ಮೇಳನ ಅತ್ಯಂತ ವಿಜೃಂಭಣೆಯಿಂದ ಜರುಗಿತು. ಹರ್ಡೇಕರ ಮಂಜಪ್ಪನವರು ಈ ಸಮ್ಮೇಳನದ ಜೀವನಾಡಿಗಳಾಗಿದ್ದರು. ವೇದಿಕೆ ಮೇಲೆ ಕಲಬುರ್ಗಿ ಭಾಗದ ಮುಖಂಡರೂ ಭಾಷಣ ಮಾಡಿದರು. ಸಿದ್ಧಯ್ಯ ಪುರಾಣಿಕರು ಬಸವಣ್ಣನವರ ಜೀವನ ಮತ್ತು ಸಂದೇಶ ಕುರಿತು ಅತ್ಯಂತ ಅರ್ಥವತ್ತಾಗಿ ಭಾಷಣ ಮಾಡಿದರು. ಸಮ್ಮೇಳನ ಮುಗಿದ ನಂತರ ಎಲ್ಲರೂ ಉದಗೀರದಿಂದ ಕಲ್ಯಾಣದವರೆಗೆ 'ವಿಜಯಯಾತ್ರೆ' ಮಾಡಬೇಕೆಂದು ನಿರ್ಧರಿಸಿದರು. ಕಲ್ಯಾಣದಲ್ಲಿ ಹಿಂದೂ ಮುಸ್ಲಿಂ ಗಲಾಟೆ

ಪ್ರಾರಂಭವಾಯಿತು. ಸಿದ್ಧಯ್ಯ ಪುರಾಣಿಕರು ಬಸವಣ್ಣನವರ ಸಮನ್ವಯ ದೃಷ್ಟಿ ಕುರಿತು ಮಾರ್ಮಿಕವಾದ ಭಾಷಣ ಮಾಡಿದರು. ಈ ಭಾಷಣ ಕೇಳಿದ ಮುಸಲ್ಮಾನ ಬಂಧುಗಳು ತಲೆದೂಗಿದರು.

ಸಿದ್ಧಯ್ಯನವರು ಬಿ.ಎ. ಪದವಿ ಮುಗಿದ ತಕ್ಷಣ ಮದುವೆ ಮಾಡಬೇಕೆಂದು ತಂದೆ ತಾಯಿಗಳು ಆಲೋಚಿಸಿದರು. ಸಿದ್ಧಯ್ಯನವರ ತಮ್ಮ ಅನ್ನದಾನಯ್ಯ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಚಳುವಳಿಯೆಂದು ಮನೆ ಬಿಟ್ಟಿದ್ದ. ಈಗ ಸಿದ್ಧಯ್ಯನವರು ಮದುವೆ ವಿಷಯ ಪ್ರಸ್ತಾಪವಾಗುತ್ತಲೇ ರಾತ್ರಿ ಮನೆ ಬಿಟ್ಟು ಹೊರಟರು.

ಸಿದ್ಧಯ್ಯನವರು ಮನೆ ಬಿಟ್ಟು ಆಶ್ರಯ ಪಡೆದದ್ದು ಆಲಮಟ್ಟಿಯಲ್ಲಿ. ಹರ್ಡೇಕರ ಮಂಜಪ್ಪನವರು ಆಲಮಟ್ಟಿಯಲ್ಲಿ 'ವೀರಶೈವ ವಿದ್ಯಾಲಯ' ಪ್ರಾರಂಭಿಸಿದರು. ಅಲ್ಲಿ ಸಿದ್ಧಯ್ಯನವರು ಆಶ್ರಯ ಪಡೆದು ತಂದೆಗೆ ಪತ್ರ ಬರೆದರು.

ಆಲಮಟ್ಟಿಯಲ್ಲಿ ಪುರಾಣಿಕರು ಆರೇಳು ತಿಂಗಳ ಕಾಲ ಆಶ್ರಯ ಪಡೆದರು. ಆ ದಿನಗಳು ಅವರ ಜೀವಮಾನದ ಅತ್ಯಂತ ಮಹತ್ವದ ಅವಧಿಯಾಗಿದ್ದವು. ಈ ವಿಷಯವಾಗಿ ಪುರಾಣಿಕರು ಹೇಳುವ ಮಾತುಗಳು ಅರ್ಥಪೂರ್ಣವಾಗಿವೆ:

'ಪ್ರತಿನಿತ್ಯ ಸಮೀಪದ ಕೃಷ್ಣಾನದಿಯಲ್ಲಷ್ಟೇ ಅಲ್ಲ, ಅಣ್ಣನವರ ಅರಿವಿನ ತೊರೆಯಲ್ಲಿಯೂ ಮಿಂದು ಮಡಿಯಾಗತೊಡಗಿದೆ. ನಿತ್ಯ ಕೋಳಿ ಕೂಗುವ ಮುನ್ನ ಏಳುವುದು, ಅವರೊಡನೆ ಕನ್ನಡ ನಾಡಿನ ಪೆರ್ದೊರೆ ಕೃಷ್ಣಾನದಿಯ ತೀರಕ್ಕೆ ಹೋಗುವುದು, ಉತ್ತರಾಣಿಯ ಬೇರಿನಿಂದ ಹಲ್ಲುಜ್ಜಿ ತೊರೆಯ ತಿಳಿನೀರಿನಲ್ಲಿ ಈಸುವುದು, ಬಟ್ಟೆಗಳನ್ನು ಮಡಿಮಾಡಿಕೊಂಡು ಆಶ್ರಮಕ್ಕೆ ಮರಳಿ, ಲಿಂಗಪೂಜೆ ಮುಗಿಸಿ, ಒಂದು ಬಟ್ಟಲು ಹಾಲು ಸೇವಿಸುವುದು–ನಿಯಮಿತತನದಿಂದ ನಡೆಯಿತು, ನದಿಗೆ ಹೋಗುವಾಗ, ಅಲ್ಲಿಂದ ಹಿಂದಿರುಗುವಾಗ ಹಾದಿಯುದ್ದಕ್ಕೂ ಕೋಕಿಲ ಕೂಜನ, ಹಕ್ಕಿಗಳ ಹಾಡು... ಎಲ್ಲಕ್ಕೂ ಮಿಗಿಲಾಗಿ ಅಣ್ಣನವರಿಂದ ಒಂದಿಲ್ಲೊಂದು ವಿಷಯದ ಬಗ್ಗೆ ವಿವೇಚನೆ. ಒಮ್ಮೆ ವೇದಾಗಮೋಪನಿಷತ್ತುಗಳು ಬಗ್ಗೆ, ಒಮ್ಮೆ ಭಗವದ್ಗೀತೆಯ ಬಗ್ಗೆ, ಒಮ್ಮೆ ಬಸವಾದಿ ಪ್ರಮಥರ ಉಜ್ವಲ ವಿಚಾರಗಳ ಬಗ್ಗೆ, ಒಮ್ಮೆ ರಾಮತೀರ್ಥ, ರಾಮಕೃಷ್ಣ, ವಿವೇಕಾನಂದರ ಬಗ್ಗೆ, ಒಮ್ಮೆ ಡಾರ್ವಿನ್, ಹರ್ಬರ್ಟ್ ಸ್ಪೆನ್ಸರ್, ನ್ಯೂಟನ್, ಐನ್‌ಸ್ಟೀನ್‌ರ ಬಗ್ಗೆ....'

ಹೀಗೆ ಮಂಜಪ್ಪನವರ ಸದ್ಬೋಧೆಯಿಂದ ಸಿದ್ಧಯ್ಯನವರು ತುಂಬ ಪ್ರಭಾವಿತರಾದರು. ಅವರ ಋಷಿಸದೃಶ ಜೀವನ, ಸತತ ಕಾಯಕತತ್ಪರತೆ, ಸ್ವಾಧ್ಯಾಯರತಿ, ವಿಶಾಲ ಹೃದಯ, ದೂರದೃಷ್ಟಿ, ಪ್ರಗತಿಪರ ವಿಚಾರಸರಣಿ, ಸಕಲಧರ್ಮ ಸಮಭಾವ–ಸಮನ್ವಿತ–ಸ್ವಧರ್ಮಶ್ರದ್ಧೆ ಮೊದಲಾದ ಮೌಲ್ಯಗಳಿಂದ ಸಿದ್ಧಯ್ಯನವರು ತಮ್ಮ ಬದುಕನ್ನು ಅರಳಿಸಿಕೊಂಡರು.

ಮಂಜಪ್ಪನವರು ಮಾಡುತ್ತಿದ್ದ ಕಾರ್ಯಗಳನ್ನು ತುಂಬ ಹತ್ತಿರದಿಂದ ಕಂಡರು. ಹೊಗಳಿಕೆ–ತೆಗಳಿಕೆಗಳನ್ನು ಮೀರಿ ನಿಂತ ಅವರ ಸ್ಥಿತಪ್ರಜ್ಞ ನಿಲುವು, ಭಾರತದ ಸ್ವಾತಂತ್ರ್ಯ ಸಂಪಾದನೆ, ಕರ್ನಾಟಕದ ಏಕೀಕರಣ, ಗ್ರಾಮೋದ್ಯೋಗಗಳ ಪುನರುಜ್ಜೀವನದ ಮೂಲಕ



ಗ್ರಾಮಾಭಿಮುಖಿಯಾದ ಅರ್ಥನೀತಿಯ ಮುಖಾಂತರ ಗ್ರಾಮೋದಯ ಸಾಧನೆ, ಆದಿಜನರ ಪುನರುತ್ಥಾನ, ಹೆಣ್ಣುಮಕ್ಕಳ ಹೊಸ ಹುಟ್ಟು, ಶಿಕ್ಷಣ ಪದ್ಧತಿಯ ಸುಧಾರಣೆ, ನೈತಿಕತೆಯ ನವೋದಯ, ಹಿಂದೂ ಸಂಘಟನೆ, ಬಸವಾದಿ ಪ್ರಮಥರ ಪಥದರ್ಶನ, ಮಕ್ಕಳ ಸಾಹಿತ್ಯ ಹಾಗೂ ವಿಚಾರ ಸಾಹಿತ್ಯಗಳ ಸೃಷ್ಟಿ– ಇತ್ಯಾದಿಗಳಲ್ಲಿ ಅವರಿಗಿದ್ದ ನಿಶ್ಚಲ ನಿಷ್ಠೆ, ದೇಶದ ಸಮಸ್ಯೆಗಳ ಬಗ್ಗೆ, ಅವುಗಳ ನಿವಾರಣೋಪಾಯಗಳ ಬಗ್ಗೆ ಅವರಿಗಿದ್ದ ಅಗಾಧವಾದ ತಿಳಿವು, ಇವೆಲ್ಲವು ಗಳಿಗಾಗಿ ಅವರು ನಡೆಸಿದ್ದ ಹೋರಾಟ ಮೊದಲಾದವುಗಳನ್ನು ಪ್ರತ್ಯಕ್ಷದರ್ಶಿಯಾಗಿ ಕಂಡ ಡಾ. ಪುರಾಣಿಕರು ಅವರನ್ನು ಶ್ರೇಷ್ಠ ಮಹಾಪುರುಷ ಎಂದು ಕರೆಯುತ್ತಾರೆ.

ಮಂಜಪ್ಪನವರು 'ಶರಣ ಸಂದೇಶ' ಎಂಬ ಪತ್ರಿಕೆಯನ್ನು ಹೊರಡಿಸುತ್ತಿದ್ದರು. ಈ ಪತ್ರಿಕೆಯಲ್ಲಿ ಪುರಾಣಿಕರ ಕವನಗಳು ಪ್ರಕಟಗೊಂಡವು. ಅನೇಕರು ಮಂಜಪ್ಪನವರನ್ನು ಈ ಪ್ರತಿಭಾವಂತ ಕವಿ ಯಾರು? ಎಂದು ಕೇಳಿದ್ದರು. ಮಂಜಪ್ಪನವರ ಸಮೃದ್ಧ ಗ್ರಂಥಾಲಯದಲ್ಲಿದ್ದ ಸಾವಿರಾರು ಗ್ರಂಥಗಳನ್ನು ಪುರಾಣಿಕರು ಓದಿದರು. ಬೆಂಥಮ್, ಎಮರ್ಸನ್, ಟಾಲಸ್ಟಾಯ್, ರಸ್ಕಿನ್, ಕಾರ್ಲೈಲ್ ಮೊದಲಾದವರ ಮಹತ್ವದ ಕೃತಿಗಳನ್ನು ಪುರಾಣಿಕರು ಓದಿದ್ದು ಇಲ್ಲಿಯೇ. ಅನೇಕ ವಚನ ಸಂಗ್ರಹಗಳನ್ನು ಅಧ್ಯಯನ ಮಾಡಿದರು. ಶರಣ ಸಂದೇಶ ಪತ್ರಿಕೆಗೆ ಪ್ರತಿವಾರ ಕಥೆಯನ್ನೋ, ಕವನವನ್ನೋ, ಅನುವಾದಿತ ಲೇಖನವನ್ನೋ, ನಗೆಬರಹವನ್ನೋ ಬರೆದು ಕೊಡುತ್ತಿದ್ದರು. ಒಮ್ಮೊಮ್ಮೆ ಮಂಜಪ್ಪನವರು ಅನ್ಯಕಾರ್ಯ ನಿಮಿತ್ಯ ಹೊರಹೋದ ಸಂದರ್ಭದಲ್ಲಿ ಪತ್ರಿಕೆಯ ಎಲ್ಲ ಜವಾಬ್ದಾರಿಯನ್ನು ನಿಷ್ಠೆಯಿಂದ ನಿಭಾಯಿಸುತ್ತಿದ್ದರು.

ಮಂಜಪ್ಪನವರು ಮುಪ್ಪಿನ ಷಡಕ್ಷರಿಯ ಕೈವಲ್ಯಪದಗಳನ್ನು ಅತ್ಯಂತ ಭಾವಪೂರ್ಣವಾಗಿ ಓದುತ್ತಿದ್ದರು. ಅವರು ನಿತ್ಯ ಲಿಂಗಪೂಜೆ ಮಾಡುವ ಕಾಲಕ್ಕೆ 'ಸಕಲಕೆಲ್ಲಕೆ ನೀನೇ ಅಕಲಂಕ ಗುರು' ಎಂಬ ಪದ್ಯವನ್ನು ರಾಗಬದ್ಧವಾಗಿ ಹಾಡುತ್ತಿದ್ದರು. ಮುಪ್ಪಿನ ಷಡಕ್ಷರಿಯ ಅನೇಕ ಪದ್ಯಗಳನ್ನು ಅವರು ಸಂಗ್ರಹಿಸಿದ್ದರು. ಇದೇ ಕಾಲಕ್ಕೆ ಜ.ಚ.ನಿ. ಅವರು ಷಡಕ್ಷರಿಯ ಕೆಲವು ಪದ್ಯಗಳನ್ನು ಹಸ್ತಪ್ರತಿಗಳಿಂದ ಪ್ರತಿ ಮಾಡಿಸಿ ಕಳಿಸಿಕೊಟ್ಟಿದ್ದರು. ಮಂಜಪ್ಪನವರಲ್ಲಿದ್ದ ಪದ್ಯಗಳನ್ನು ಜ.ಚ.ನಿಯವರು ಕಳಿಸಿದ ಪದ್ಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಶುದ್ಧವಾದ ಹಸ್ತಪ್ರತಿಯೊಂದನ್ನು ಪುರಾಣಿಕರು ಶ್ರದ್ಧೆಯಿಂದ ಸಿದ್ಧಪಡಿಸಿದರು. 'ಸುಬೋಧಸಾರ' ಎಂಬ ಹೆಸರಿನಲ್ಲಿ ಈ ಕೃತಿಯನ್ನು ಮಂಜಪ್ಪನವರು ಪ್ರಕಟಿಸಿದರು. ಈ ಕೃತಿಗೆ ವಿಸ್ತೃತವಾದ ಮುನ್ನುಡಿಯೊಂದನ್ನು ಬರೆಯಲು ಪುರಾಣಿಕರಿಗೆ ಹೇಳಿದರು. ಮಂಜಪ್ಪನವರ ಆಜ್ಞೆಯನ್ನು ಶಿರೋಧಾರೆಯೆಂದು ಭಾವಿಸಿ, ವಿದ್ವತ್‌ಪೂರ್ಣವಾದ ಮುನ್ನುಡಿಯನ್ನು ಪುರಾಣಿಕರು ಬರೆದರು. ಅದನ್ನು ಓದಿ ಮಂಜಪ್ಪನವರು ತುಂಬ ಸಂತೋಷಪಟ್ಟರು.

ಆಲಮಟ್ಟಿ ಆಶ್ರಮದ ಜೀವನದಿಂದ ಪುರಾಣಿಕರ ಆರು ತಿಂಗಳ ವಿದ್ಯಾಭ್ಯಾಸ ಹಿನ್ನಡೆ ಕಂಡಿತು. ಆದರೆ ಮಂಜಪ್ಪನವರ ಸಹವಾಸದಿಂದ ವಚನಸಾಹಿತ್ಯ, ಆಂಗ್ಲಸಾಹಿತ್ಯದ ಪರಿಜ್ಞಾನ, ಪತ್ರಿಕೋದ್ಯಮ ಪರಿಚಯ, ಅನುವಾದ ಕ್ರಿಯೆ, ಬರಹಗಾರಿಕೆಯ

ಗೊತ್ತುಗುರಿಗಳನ್ನು ಕಂಡುಕೊಂಡರು. ಇದೊಂದು ಅವರ ಜೀವನದ ಸ್ಮರಣೀಯ ಘಟನೆಗಳಲ್ಲಿ ಒಂದಾಯಿತು. ಮಂಜಪ್ಪನವರು ತಮ್ಮ ಆತ್ಮಚರಿತ್ರೆಯ ಕೊನೆಯಲ್ಲಿ– 'ನಾನು ಈ ದಾರಿಯನ್ನು ಹಿಡಿಯದೆ ವಿವಾಹಿತನಾಗಿದ್ದರೆ ಜನಸಂಖ್ಯೆಯಲ್ಲಿ ೪–೫ ಹೆಚ್ಚಿಸಿ, ನಾಲ್ಕೈದು ಸಾವಿರ ಕಾದಿಟ್ಟು, ಈಗ ತಿಂಗಳಿಗೆ ೧೫–೨೦ ರೂಪಾಯಿ ವಿಶ್ರಾಂತಿ ವೇತನ ಹೊಂದುವ 'ಮಾಸ್ತರ'ನಾಗಿರುತ್ತಿದ್ದನು. ಅದಕ್ಕಿಂತ ನಾನು ಈಗ ಎಷ್ಟೋ ಹೆಚ್ಚು ಜನಸೇವೆಯನ್ನು ಮಾಡಿದ್ದೇನೆಂದು ನನಗೆ ಬಹು ಸಮಾಧಾನ' ಎಂದು ಬರೆದುಕೊಂಡಿದ್ದರು. ಈ ಮಾತುಗಳಿಗೆ ಪೂರಕವಾಗಿ ಡಾ. ಪುರಾಣಿಕರು ಹೀಗೆ ಹೇಳುತ್ತಾರೆ:

'೧೯೩೦ರಲ್ಲಿ ಮಹಾನುಭಾವ ಮಂಜಪ್ಪಣ್ಣನವರು ತಮ್ಮ ಆಶ್ರಮದಲ್ಲಿ ನನಗೆ ಆಶ್ರಯ ನೀಡದೆ ಹೋಗಿದ್ದರೆ ನಾನು ಆಗಲೇ ವಿವಾಹಿತನಾಗಿ, ಜನಸಂಖ್ಯೆಯಲ್ಲಿ ೪–೫ ಹೆಚ್ಚಿಸಿ, ನಾಲ್ಕೈದು ಸಾವಿರ ಕಾದಿಟ್ಟು, ಈಗ ವಿಶ್ರಾಂತಿ ವೇತನ ಹೊಂದು 'ಮಾಸ್ತರ'ನೋ, 'ಗುಮಾಸ್ತ'ನೋ ಆಗಿರುತ್ತಿದ್ದೆ. ಅವರು ಆಗ ಆಶ್ರಯವಿತ್ತರೆಂದು ಈಗ ಅಷ್ಟಿಷ್ಟು ನಾಡು–ನುಡಿಗಳ ಸೇವೆ ಮಾಡಿದೆನೆಂಬ ಸಮಾಧಾನವನ್ನು ಹೊಂದಿದ್ದೇನೆ. 'ನಿನ್ನಿಂದ ನಾನು ಬಹಳಷ್ಟು ನಿರೀಕ್ಷಿಸಿದ್ದೇನೆ' ಎಂದು ಅಂದವರು ಉದ್ಘರಿಸಿದ್ದರು. ಅವರ ನಿರೀಕ್ಷೆಯಷ್ಟು ನಾನು ಸಾಧಿಸಿಲ್ಲ, ನಿಜ. ಅವರಂತೆ ನಾನು ನೈಷ್ಠಿಕ ಬ್ರಹ್ಮಚಾರಿಯಾಗಿ ಉಳಿಯಲಿಲ್ಲ; ತಪಸ್ವಿಯಾಗಿ ಬೆಳೆಯಲಿಲ್ಲ. ಅದು ನನ್ನಂಥ ಸಾಮಾನ್ಯರಿಗೆ ನಿಲುಕುವ ಸಿದ್ಧಿಯಲ್ಲ. ಆದರೆ ಅವರು ಅಂದಿತ್ತ ಆಶ್ರಯವನ್ನು ವ್ಯರ್ಥಗೊಳಿಸಿದ್ದೇನೆಂದು ನನಗೆನ್ನಿಸುತ್ತಿಲ್ಲ. ಅವರ ಗರಡಿಯಲ್ಲಿ ಸಿದ್ಧನಾಗಿಯೂ ಜೀವನ ವ್ಯರ್ಥತೆಯ ಪ್ರಲಾಪ ಮಾಡಬೇಕಿಲ್ಲ.' (ಹರ್ಡೇಕರ ಮಂಜಪ್ಪನವರು– ತೋಂಟದಾರ್ಯಮಠ ಗದಗ)

ಮಂಜಪ್ಪನವರ ಆಶ್ರಮದಿಂದ ಹೊರಬಂದ ಪುರಾಣಿಕರು ಎಲ್.ಎಲ್.ಬಿ. ಪರೀಕ್ಷೆ ಬರೆಯುವುದಾಗಲಿಲ್ಲ. ಅವರ ತಂಗಿ ವೀರಾಂಬೆ ಅಕಾಲಿಕ ಮರಣಕ್ಕೆ ತುತ್ತಾದಳು. ಪುರಾಣಿಕರ ಒಂದು ಶಾಲೆಯಲ್ಲಿ ಶಿಕ್ಷಕರಾಗಬೇಕೆಂದು ಅರ್ಜಿ ಹಾಕಿದರು. ಆದರೆ ಅದು ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ನಿಜಾಂ ಸರಕಾರ ತಹಶೀಲ್ದಾರ ಹುದ್ದೆಗೆ ಅರ್ಜಿ ಕರೆಯಿತು

ಇಲ್ಲಿಗೆ ಡಾ. ಸಿದ್ಧಯ್ಯ ಪುರಾಣಿಕರ ಅಧ್ಯಯನ ಪರ್ವ ಮುಕ್ತಾಯಗೊಂಡಿತು. ಕಾಯಕಜೀವಿಯಾಗಿ ಅವರು ಆಡಳಿತ ಕ್ಷೇತ್ರವನ್ನು ಪ್ರವೇಶಿಸಿದರು.

## ಸೇವಾಜೀವನ

ಏನು ಪಡೆದೆವೆಂಬುದು ಮುಖ್ಯವಲ್ಲ,
ಹೇಗೆ ದುಡಿದೆವೆಂಬುದು ಮುಖ್ಯವಯ್ಯ;
ಏನ ನುಡಿದೆವೆಂಬುದು ಮುಖ್ಯವಲ್ಲ,
ಹೇಗೆ ನಡೆದೆವೆಂಬುದು ಮುಖ್ಯವಯ್ಯ;
ಏನು ಗಳಿಸಿದೆವೆಂಬುದು ಮುಖ್ಯವಲ್ಲ,
ಹೇಗೆ ಬಳಸಿದೆವೆಂಬುದು ಮುಖ್ಯವಯ್ಯ;
ಏನ ಕೇಳಿದೆವು, ಹೇಳಿದೆವೆಂಬುದು ಮುಖ್ಯವಲ್ಲ,
ಹೇಗೆ ಬಾಳಿದೆವೆಂಬುದು ಮುಖ್ಯವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಏನ ಗೆದ್ದೆವೆಂಬುದು ಮುಖ್ಯವಲ್ಲ,
ಏನಾಗಿದ್ದೇವೆಂಬುದು ಮುಖ್ಯವಯ್ಯ!

ಡಾ. ಸಿದ್ಧಯ್ಯ ಪುರಾಣಿಕರು ತಂದೆಯ ಬಯಕೆಯಂತೆ ವಕೀಲರಾಗಬೇಕೆಂದು ಆಶಿಸಿದ್ದರು. ತಾನೊಂದು ಬಗೆದರೆ ದೈವವೊಂದು ಬಗೆಯಿತು ಎಂಬಂತೆ. ದೈವ ಅವರನ್ನು ಆಡಳಿತಕ್ಷೇತ್ರದಲ್ಲಿ ಸೇವೆ ಮಾಡಲು ಆಯ್ಕೆ ಮಾಡಿತು. ಅದೇ ಆಗ ಎರಡನೆಯ ಮಹಾಯುದ್ಧದ ಪರಿಣಾಮ ಅನುಭವಿಸಿಯಾಗಿತ್ತು. ಭಾರತದ ಸ್ವಾತಂತ್ರ್ಯ ಇನ್ನೂ ತೂಗುಯ್ಯಾಲೆಯಲ್ಲಿತ್ತು. ಕರ್ನಾಟಕ ಏಕೀಕರಣ ಇನ್ನೂ ಕನಸಾಗಿತ್ತು. ಇಂಥ ಸ್ಥಿತಿಯಲ್ಲಿ ಹೈದರಾಬಾದ ನಿಜಾಂ ಆಡಳಿತ ತಹಶೀಲ್ದಾರ ಹುದ್ದೆಗೆ ಅರ್ಜಿ ಆಹ್ವಾನಿಸಿತು. ಪುರಾಣಿಕರು ಒಲ್ಲದ ಮನಸ್ಸಿನಿಂದ ಅರ್ಜಿ ಹಾಕಿದರು. ಆದರೆ ಸುದೈವದಿಂದ ಅವರು ಸಂದರ್ಶನದಲ್ಲಿ ಪಾಸಾಗಿ ತರಬೇತಿಗೆ ಆಯ್ಕೆಯಾದರು. ಬೀದರ ಜಿಲ್ಲೆಯ ದೇವನಿಯಲ್ಲಿ ಒಂದು ತಿಂಗಳು ತರಬೇತಿ ಪಡೆದು ನಂತರ ಉದ್ಗೀರಕ್ಕೆ ಹೋದರು.

ತರಬೇತಿ ಮುಗಿದ ನಂತರ ೧೯೪೩ರಲ್ಲಿ ನಾಂದೇಡಕ್ಕೆ ಪುರಾಣಿಕರನ್ನು ಅವ್ವಲ್ ತಾಲೂಕದಾರರ ಭೂಮಿ ದಾಖಲೆಗಳ ಸಹಾಯಕನನ್ನಾಗಿ ಆಯ್ಕೆ ಮಾಡಿ ಕಳಿಸಿದರು. ಇದೂ ಕೂಡ ತರಬೇತಿ ಅವಧಿಯೇ ಆಗಿತ್ತು. ನಾಂದೇಡದಲ್ಲಿದ್ದಾಗ ಪ್ಲೇಗ್ ಹಾವಳಿ ಪ್ರಾರಂಭವಾಯಿತು. ಕುಟುಂಬವನ್ನು ಹೈದರಾಬಾದಿಗೆ ಕಳಿಸಿ ತಾವೊಬ್ಬರೇ ಉಳಿದರು.

ನಿಜಾಂ ಶಾಹಿಯ ದರ್ಪದ ಆಡಳಿತ ಕಾರಣವಾಗಿ ಲೇವಿ ವಸೂಲಿ ಮಾಡುವ ಕಾರ್ಯವನ್ನು ಅಧಿಕಾರಿಗಳು ನಿರ್ದಯವಾಗಿ ಮಾಡತೊಡಗಿದರು. ಪುರಾಣಿಕರ ಮೇಲಾಧಿಕಾರಿಯಾಗಿದ್ದ ತಹಶೀಲ್ದಾರ ರಾಮರಾಯರು ಮನೆ ಮನೆ ಹೊಕ್ಕು ಕಾಳು

ಕಡಿಗಳನ್ನು ಜಪ್ತಿ ಮಾಡತೊಡಗಿದ. ಇದರಿಂದ ರೈತರು ರೊಚ್ಚಿಗೆದ್ದರು. ಒಂದು ರಾತ್ರಿ ಆ ತಹಶೀಲ್ದಾರರನ್ನು ಕೊಂದು ಹಾಕಿದರು.

ಮೇಲಾಧಿಕಾರಿಗಳು ಲೇವಿ ವಸೂಲಿ ಮಾಡುವ ಅಧಿಕಾರಿಗಳು ಯಾರು? ಎಂದು ಪ್ರಶ್ನೆ ಮಾಡಿದರು. ರಾಮರಾಯರಿಗೆ ಆದ ಗತಿಯೇ ತಮಗೂ ಆಗುವುದೆಂದು ಎಲ್ಲ ಅಧಿಕಾರಿಗಳು ಹಿಂಜರಿದರು. ಆದರೆ ಪುರಾಣಿಕರು 'ನಾನು ಹೋಗುವೆ' ಎಂದು ಧೈರ್ಯವಾಗಿ ಹೇಳಿದರು. ಆಗ ಮೇಲಾಧಿಕಾರಿ 'ಗೋಲಿಬಾರಿನ ಅಧಿಕಾರ ಬೇಕೋ, ದಸ್ತಗಿರಿ ಅಧಿಕಾರ ಬೇಕೋ, ಮನೆ ಮಾರುಗಳ ಹರಾಜಿನ ಅಧಿಕಾರವೋ? ಯಾವ ಅಧಿಕಾರ ಬೇಕು? ಹೇಳು ಕೊಡುವೆ' ಎಂದ.

ಆಗ ಪುರಾಣಿಕರು 'ನನಗೆ ಪೋಲಿಸ ಸಹಾಯವೂ ಬೇಡ, ಗೋಲಿಬಾರ ಸಹಾಯವೂ ಬೇಡ. ನನಗೆ ಇಬ್ಬರು ಸಹಾಯಕರನ್ನು ಮಾತ್ರ ಕೊಡಿ. ಹಾಗೆಯೇ ಪಡಿತರ ಚೀಟಿ ಕೊಡಿ. ನಿಜವಾದ ಬಡವರಿಗೆ, ನಿರ್ಗತಿಕರಿಗೆ ಈ ಪಡಿತರ ಚೀಟಿಗಳನ್ನು ಕೊಡುತ್ತೇವೆ. ಇದರಿಂದ ಅರಾಜಕತೆ ಕಡಿಮೆಯಾಗಿ, ಲೇವಿ ವಸೂಲಿ ಸರಳವಾಗುತ್ತದೆ ಎಂದು ಹೇಳಿದರು.

ಹಳ್ಳಿಗಳಿಗೆ ಹೊರಟರು. ಪ್ರಾರಂಭದಲ್ಲಿ ಗಂಡಸರೆಲ್ಲಾ ಊರು ಬಿಟ್ಟು ಹೊರಹೋಗಿದ್ದರು. ಹೆಣ್ಣುಮಕ್ಕಳು ಇವರನ್ನು ಅನುಮಾನದ ದೃಷ್ಟಿಯಿಂದ ನೋಡತೊಡಗಿದರು. ಪುರಾಣಿಕರು ಊರ ಪ್ರವೇಶ ಮಾಡಿದ ತಕ್ಷಣ ಹೆಣ್ಣು ಮಕ್ಕಳಿಗೆ ಒಂದು ಪ್ರಶ್ನೆ ಕೇಳಿದರು– 'ನಿಮಗೆ ನಾಳೆಗಾಗಿ ಕಾಳು ಇವೆಯೇ?' ಎಂದು ಕೇಳಿದರು. ಜನರಿಗೆ ಆಶ್ಚರ್ಯ! ನಮ್ಮ ಹತ್ತಿರವಿದ್ದ ಕಾಳುಗಳನ್ನು ಹೊತ್ತು ಒಯ್ಯಲು ಬರುವ ಅಧಿಕಾರಿಗಳೇ ಹೆಚ್ಚಾಗಿರುವಾಗ, ಈ ಅಧಿಕಾರಿ ನಿಮಗೆ ಕಾಳುಗಳಿವೆ? ಎಂದು ಕೇಳುತ್ತಿದ್ದಾನೆ ಎಂದು ಅವರು ಸೋಜಿಗಗೊಂಡರು. ಬಡವರ ಮನೆಗಳಲ್ಲಿ ವಯಸ್ಕರೆಷ್ಟು, ಮಕ್ಕಳೆಷ್ಟು ಲೆಕ್ಕ ಹಾಕಿ, ಅಲ್ಲಿಯೇ ರೇಶನ್ ಕಾರ್ಡ್ ಕೊಡುವ ವ್ಯವಸ್ಥೆ ಮಾಡಿದರು. ಈ ವಿಷಯ ತಿಳಿದ ಊರು ಬಿಟ್ಟು ಹೋದ ಗಂಡಸರೆಲ್ಲ ಬಂದು ಡಾ. ಪುರಾಣಿಕರಿಗೆ ಕೈಮುಗಿದು, ನಮ್ಮ ಕಷ್ಟ ಸುಖ ಕೇಳಲು ಬಂದ ಪುಣ್ಯಾತ್ಮರು ನೀವು! ಎಂದರು. ಸ್ಥಿತಿವಂತರು ತಮ್ಮ ಪಾಲಿನ ಲೇವಿಯನ್ನು ತಂದು ಒಪ್ಪಿಸಿದರು. ಹೀಗೆ ಇಪ್ಪತ್ತು ಮೂವತ್ತು ಹಳ್ಳಿಗಳ ಜನರು ಸ್ವಸಂತೋಷದಿಂದ ಡಾ. ಪುರಾಣಿಕರ ಕಾರ್ಯವೈಖರಿಗೆ ಮೆಚ್ಚಿ ಲೇವಿ ಸಂಗ್ರಹಿಸಿ ಕೊಟ್ಟರು. ಡಾ. ಪುರಾಣಿಕರ ಕಾರ್ಯತತ್ಪರತೆ, ಚಾಣಾಕ್ಷತೆ ಕಂಡ ಕಮೀಷನರ್ ಅವರಿಗೆ ಹೃದಯತುಂಬಿ ಬಂದಿತು. ಇವರ ಕಾರ್ಯತತ್ಪರತೆಯ ಕುರಿತು ಹೈದರಾಬಾದಿಗೆ ವರದಿ ಸಲ್ಲಿಸಿದರು.

೨೨ ಆಗಸ್ಟ್ ೧೯೪೫ ರಂದು ಕಲಬುರ್ಗಿಗೆ ಬಂದು ಲ್ಯಾಂಡ್ ರಿಕಾರ್ಡ್ಸ್ ವಿಭಾಗದ ಅಸಿಸ್ಟಂಟ್ ಕಲೆಕ್ಟರ್ ಆಗಿ ಸೇವೆ ಪ್ರಾರಂಭಿಸಿದರು. ದೇಶದ ತುಂಬ ಸ್ವಾತಂತ್ರ್ಯ ಚಳುವಳಿ ಉಗ್ರ ಸ್ವರೂಪದಿಂದ ನಡೆದಿದ್ದ ಕಾಲವದು.



ಹೈದರಾಬಾದಿನಲ್ಲಿಯೂ ಹಿಂದೂ ಮುಸ್ಲಿಂ ಸೌಹಾರ್ದಭಾವ ಕಡಿಮೆಯಾಗಿ ಪರಿಸ್ಥಿತಿ ಕಹಿಗೊಳ್ಳತೊಡಗಿತು. ಕಾಸಿಮ್ ರಜವಿಯಂಥ ಮದಾಂಧರು ಮುಂದಾಳತ್ವ ವಹಿಸಿದ ಪರಿಣಾಮವಾಗಿ ದ್ವೇಷ–ತ್ವೇಷದ ವಾತಾವರಣ ನಿರ್ಮಾಣವಾಯಿತು. ೧೯೪೭ಕ್ಕೆ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಡಾ. ಪುರಾಣಿಕರು ಕಲಬುರ್ಗಿಯಲ್ಲಿಯೇ ಇದ್ದರು. ಸ್ವಾತಂತ್ರ್ಯದ ಸುಖವನ್ನು ಅನುಭವಿಸುವ ಪರಿಸ್ಥಿತಿ ಪರಿಸರ ಅಲ್ಲಿರಲಿಲ್ಲ. ರಾಷ್ಟ್ರವಿಭಜನೆ ಕಾರಣ ಪಂಜಾಬನಲ್ಲಿ, ಬಂಗ್ಲಾದಲ್ಲಿ ಕೊಲೆ–ಗಲಭೆಗಳು ತೀವ್ರಸ್ವರೂಪ ಪಡೆದವು. ಹಿಂದೂ ಮುಸಲ್ಮಾನರ ರಕ್ತದ ಕಾಲುವೆ ಹರಿಯತೊಡಗಿತು. ಗಾಂಧೀಜಿಯವರು ನವಖಾಲಿ ಯಾತ್ರೆ ಮಾಡಿದರೂ ಪ್ರಯೋಜನವಾಗಲಿಲ್ಲ. ೧೯೪೮ರಲ್ಲಿ ಗಾಂಧೀಜಿಯವರ ಹತ್ಯೆಯಾಯಿತು. ನಂತರದ ಘಟನೆಗಳು ಇನ್ನೂ ಭಯಾನಕವಾದವು. ಭಾರತದಲ್ಲಿದ್ದ ೫೬೩ ಸಂಸ್ಥಾನಗಳ ಒಗ್ಗೂಡಿಸಿ ಒಕ್ಕೂಟ ವ್ಯವಸ್ಥೆಯನ್ನು ತರಲು ಸರದಾರ್ ವಲ್ಲಭಬಾಯಿ ಪಟೇಲ್ ಪರಿಶ್ರಮಿಸುತ್ತಿದ್ದರು. ಈ ೫೬೩ ಸಂಸ್ಥಾನಗಳ ಪೈಕಿ ಜುನಾಗಡ ನವಾಬ್ ಪಾಕಿಸ್ತಾನಕ್ಕೆ ಓಡಿ ಹೋದ. ಹೈದರಬಾದ ನಿಜಾಂ ಪ್ರತ್ಯೇಕತೆ ಬಯಸಿದ. ಈ ಎರಡು ಸಂಸ್ಥಾನಗಳು ಪಟೇಲರಿಗೆ ತಲೆನೋವಾದವು. ಇಂಥ ಸಂದರ್ಭದಲ್ಲಿ ಹೈದರಾಬಾದ ಕರ್ನಾಟಕದಲ್ಲಿ ರಜಾಕಾರರ ಹಾವಳಿ ವಿಪರೀತವಾಯಿತು. ಹಿಂದೂಗಳ ಮೇಲೆ ಅಮಾನವೀಯ ಅತ್ಯಾಚಾರ ಜರುಗಿತು. ಸಿಕ್ಕ ಸಿಕ್ಕಲ್ಲಿ ಹಿಂದೂಗಳ ಕಗ್ಗೊಲೆ ನಡೆಯಿತು. ಹಿಂದೂ ಹೆಣ್ಣುಮಕ್ಕಳ ಮೇಲೆ ಮಾನಭಂಗ ನಡೆಯಿತು. ದೇವಸ್ಥಾನಗಳ ಮೇಲೆ ದಾಳಿ ನಡೆಯಿತು. ಇದರ ಪರಿಣಾಮವಾಗಿ ಹಿಂದೂಗಳು ಊರು ಬಿಟ್ಟು ಸೊನ್ನಲಾಪುರಕ್ಕೊ ವಿಜಯಪುರಕ್ಕೊ ಹೊರಟು ಹೋಗಿದ್ದರು. ಅಸಹಾಯಕರಾದ ನಿರಪರಾಧಿಗಳು ರಜಾಕಾರರ ಸುಲಿಗೆಗೆ, ಹಿಂಸೆಗೆ, ಅತ್ಯಾಚಾರಿಗಳಿಗೆ ಬಲಿಯಾಗತೊಡಗಿದರು. ಕಲಬುರ್ಗಿಯಲ್ಲಿ ತಮ್ಮ ಕಣ್ಣೆದುರಿಗೆ ನಡೆದ ಒಂದು ಘಟನೆಯನ್ನು ಡಾ. ಪುರಾಣಿಕರು ಹೀಗೆ ವಿವರಿಸಿದ್ದಾರೆ:

'ಒಬ್ಬ ಹಿಂದೂ ಅಂಗಡಿಕಾರ ತನ್ನತ್ತ ಇವರ ವಕ್ರದೃಷ್ಟಿ ಬೀಳದಿರಲೆಂದು ನಿಜಾಮರ ಫೋಟೋ ಇಟ್ಟು, ಅದಕ್ಕೆ ಪೂಜೆ ಮಾಡಿ ಕುಂಕುಮದ ಬೊಟ್ಟು ಇಟ್ಟಿದ್ದ. ನಾಲ್ಕು ಜನ ಪಠಾಣರಲ್ಲಿಗೆ ಧಾವಿಸಿದರು. 'ಅರೆ ನಮ್ಮ ನಿಜಾಮ ಪ್ರಭುಗಳ ಫೋಟೋ ಹೊಲಸುಗೊಳಿಸಿರುವೆಯಲ್ಲ! ನಿನ್ನ ಮೈ ಸೊಕ್ಕು ಎಷ್ಟು?' ಎಂದು ಗದ್ದರಿಸಿದರು. ಆ ಬಡಪಾಯಿ ಗಡಗಡ ನಡಗುತ್ತ, 'ಸಾಬ್, ಇದಕ್ಕೆ ನಾನು ಭಕ್ತಿಯಿಂದ ಪೂಜೆ ಮಾಡಿ ನಮ್ಮ ದೇವರಿಗೆ ಹಚ್ಚುವ ಕುಂಕುಮ ಹಚ್ಚಿದ್ದೇನೆ!' ಎಂದು ಅಂಗಲಾಚಿ ಬೇಡಿಕೊಂಡ. ಇದಕ್ಕೆ ಆ ಮುತ್ಠಾಳರು, 'ನಮ್ಮ ನಿಜಾಮ ಪ್ರಭುಗಳನ್ನೂ ಮೂರ್ತಿಪೂಜೆಗೆ ಗುರಿಮಾಡಿದೆಯಾ ಉಲ್ಲೂ' ಎಂದು ಕೂಗಿ ಅವನನ್ನು ಹೊಡೆದು, ಅವನ ಅಂಗಡಿಯನ್ನೆಲ್ಲ ಲೂಟಿಮಾಡಿಕೊಂಡು ಹೋಗಿಬಿಟ್ಟರು! ನಾನಾಗ ಗೆಜೆಟೆಡ್ ಅಧಿಕಾರಿ. ನನ್ನ ಕಣ್ಣೆದುರಿಗೇ ಇದೆಲ್ಲ ನಡೆದುಹೋಯಿತು! ಪಿಟ್ಟೆನ್ನಲೂ ಬರದಂಥ ಉಸಿರುಕಟ್ಟಿಸುವ ಪರಿಸ್ಥಿತಿ!' (ಕಾವ್ಯಾನಂದ ಪು. ೧೮೪)

ಇಂಥ ಕಠಿಣ ಪರಿಸ್ಥಿತಿಯಲ್ಲಿ ಮಡದಿ ಮಕ್ಕಳನ್ನು ಊರಿಗೆ ಕಳಿಸಿದ ಪುರಾಣಿಕರು ತಾವು ಮಾತ್ರ ಧೈರ್ಯದಿಂದ ಏನಾಗುವುದು ಆಗಲಿ ಎಂದು ನಿರ್ಧರಿಸಿ ಉಳಿದರು. ಇವರ ಸಹೋದರ ರಜಾಕಾರರ ವಿರುದ್ಧ ಹೋರಾಟ ಮಾಡುತ್ತಿದ್ದ ಅಳವಂಡಿ ಶಿವಮೂರ್ತಿ ಸ್ವಾಮಿಗಳ ಶಿಬಿರದಲ್ಲಿದ್ದ. ಹೀಗಾಗಿ ಮನೆತನದ ಆರ್ಥಿಕ ಸ್ಥಿತಿ ಪುರಾಣಿಕರನ್ನೇ ಅವಲಂಬಿಸಿತ್ತು. ಪ್ರತಿತಿಂಗಳು ಹಣವನ್ನು ಮನಿ ಆರ್ಡರ್ ಮಾಡುತ್ತಿದ್ದರು. ಒಮ್ಮೆ ರಜಾಕಾರರು ಅದಕ್ಕೂ ಕಲ್ಲು ಹಾಕಿದರು. ಇಡೀ ಮನೆ ಇವರು ಕಳಿಸುತ್ತಿದ್ದ ಹಣದ ಮೇಲೆ ನಡೆಯುತ್ತಿತ್ತು. ಇಂಥ ಪರಿಸ್ಥಿತಿಯಲ್ಲಿ ಹಣ ಕಳಿಸುವುದು ಕೂಡ ದುಸ್ತರವಾಗಿತ್ತು.

ಸರದಾರ ಪಟೇಲರು ಒಮ್ಮೆ ಭಾಷಣ ಮಾಡುತ್ತ 'ಹೈದರಾಬಾದು ಭಾರತದ ಹೊಟ್ಟೆಯೊಳಗೆ ಹುಣ್ಣಾಗಿ ಬೆಳೆಯುತ್ತಿದೆ; ಅದನ್ನು ಕಾಲ ಪಕ್ವವಾದಾಗ ಕೊಯ್ದೊಗೆಯುವೆವು! ಆದರೆ ಹೇಗೆ ಕೊಯ್ಯುವೆವೆಂದರೆ ಆದಷ್ಟು ಕಡಿಮೆ ರಕ್ತ ಹರಿಯಬೇಕು, ಆದಷ್ಟು ಬೇಗ ಕೊಯ್ದ ಗಾಯ ಮಾಯಬೇಕು' ಎಂದು ಹೇಳಿದ್ದರು. ಭಾರತದ ಸೈನ್ಯವನ್ನು ಹೈದರಾಬಾದಿಗೆ ಕಳಿಸಿದರು. ಐದು ದಿನಗಳ ಆಪರೇಶನ್ ಕಾರ್ಯಕ್ರಮದಲ್ಲಿ ಯಶಸ್ವಿಯಾದರು. ಕೇವಲ ಐದು ದಿನದಲ್ಲಿ ನಿಜಾಂ ಶರಣಾದ. ಆದರೆ ರಜಾಕಾರರ ಮುಖಂಡ ಕಾಸಿಮ್ ರಜವಿ ಶರಣಾಗಲಿಲ್ಲ. ಕೊನೆಗೆ ಹೈದರಾಬಾದ ಸಂಸ್ಥಾನ ವಿಮುಕ್ತಿಯಾಯಿತು.

೨೫-೯-೧೯೫೧ರಂದು ಡಾ. ಪುರಾಣಿಕರು ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿಯಾಗಿ ಹೈದರಾಬಾದಿಗೆ ಹೋದರು. ನಂತರ ೭-೨-೧೯೫೨ರಂದು ಕೃಷಿ ಯೋಜನೆ ಮತ್ತು ಪೂರೈಕೆ ಇಲಾಖೆಯ ಸಚಿವರಾಗಿದ್ದ ಚೆನ್ನಾರಡ್ಡಿಯವರ ಕಾರ್ಯದರ್ಶಿಯಾಗಿ ನಿಯೋಜನೆಗೊಂಡರು. ಶ್ರೀನಗರದಲ್ಲಿ ಕೃಷಿ ಮಂತ್ರಿಗಳ ಸಮ್ಮೇಳನ ನಡೆದ ಸಂದರ್ಭದಲ್ಲಿ ಚೆನ್ನಾರಡ್ಡಿ ಅವರೊಂದಿಗೆ ಎರಡು ವಾರಗಳ ಡಾ. ಪುರಾಣಿಕರು ಶ್ರೀನಗರಕ್ಕೆ ಹೋದರು. ಅಲ್ಲಿಯ ಪ್ರಕೃತಿ ರಮ್ಯ ಪರಿಸರ ನೋಡಿ ಅನೇಕ ಕವನಗಳನ್ನು ರಚಿಸಿದರು. ಅದರಲ್ಲೂ 'ಕಾಶ್ಮೀರದಲ್ಲಿ ಕಾರ್ಗಾಲ' ಎಂಬ ಕವಿತೆಯಲ್ಲಿ ಶ್ರೀನಗರದ ಅನುಭವಗಳೆಲ್ಲ ಘನಿಭೂತವಾಗಿವೆ.

೧೯೫೫ರಲ್ಲಿ ತಾಂಡೂರಿನ ಡೆಪ್ಯೂಟಿ ಕಲೆಕ್ಟರ್ ಆಗಿ ನಿಯೋಜನೆಗೊಂಡರು. ೧೯೫೬ರಲ್ಲಿ ಯಾದಗಿರಿಯ ಡೆಪ್ಯೂಟಿ ಕಲೆಕ್ಟರ್ ಆಗಿ ನೇಮಕಗೊಂಡರು. ೧೯೫೮ರಲ್ಲಿ ಅವರು ಭಾರತೀಯ ನಾಗರಿಕೆ ಸೇವೆ(ಐ.ಎ.ಎಸ್.) ದರ್ಜೆಗೆ ಸೇರ್ಪಡೆಯಾದರು. ೧೯೫೬ರಲ್ಲಿಯೇ ಅವರು ಐ.ಎ.ಎಸ್. ದರ್ಜೆಗೆ ಸೇರ್ಪಡೆಯಾಗ ಬೇಕಿತ್ತು. ಕೆಲವು ಮೇಲಾಧಿಕಾರಿಗಳ ಬೇಜವಾಬ್ದಾರಿ ಕಾರಣವಾಗಿ ಮೂರು ವರ್ಷ ತಡವಾಗಿ ಅವರಿಗೆ ಈ ಸ್ಥಾನ ದೊರೆಯಿತು. ಈ ಮೂರು ವರ್ಷ ತಡವಾದ ಕಾರಣವೇ ಅವರು ಕರ್ನಾಟಕ ಸರಕಾರದ ಮುಖ್ಯ ಕಾರ್ಯದರ್ಶಿ ಹುದ್ದೆಯಿಂದ ವಂಚಿತವಾಗಬೇಕಾಯಿತು.



೧೯೬೦ರಲ್ಲಿ ಕರ್ನಾಟಕ ಸರಕಾರದ ಶಿಕ್ಷಣ ಇಲಾಖೆಯ ಡೆಪ್ಯೂಟಿ ಸೆಕ್ರೆಟರಿ ಆಗಿ ಸೇವೆಗೆ ನಿಯುಕ್ತಿಯಾದರು. ಆಗ ಗಣಮುಖಿ ಅಣ್ಣಾರಾಯರು ಶಿಕ್ಷಣ ಮಂತ್ರಿಗಳಾಗಿದ್ದರು. ಅವರು ಲಿಂಗಾಯತ ಸಮುದಾಯದ ಗಣ್ಯರಾಗಿದ್ದರು. ಡಾ. ಪುರಾಣಿಕರು ಲಿಂಗಾಯತ ಸಮುದಾಯದಿಂದ ಬಂದವರಾಗಿದ್ದರು. ಹೀಗಾಗಿ ಕೆಲವು ಜಾತಿಯ ವ್ಯಕ್ತಿಗಳು ಇವರಿಗೆ ಕಿರುಕುಳ ಕೊಟ್ಟರು. ಆದರೂ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿ, ಶಿಕ್ಷಣ ಇಲಾಖೆಗೆ ಒಂದು ಘನತೆಯನ್ನು ತಂದುಕೊಟ್ಟರು. ಡಾ. ಪುರಾಣಿಕರು ಇಲಾಖೆಗೆ ಬಂದಾಗ ಉಳಿದ ಇಲಾಖೆಗಳಿಗಿಂತ ಪ್ರತಿಶತ ೪೦% ಇಲಾಖೆ ಹಿಂದೆ ಬಿದ್ದಿತು. ಆಡಳಿತ ಯಂತ್ರವನ್ನು ಡಾ. ಪುರಾಣಿಕರು ಚುರುಕುಗೊಳಿಸಿದರು. ಇವರ ಪ್ರಾಮಾಣಿಕ ಕಾಳಜಿ ಕಾರಣವಾಗಿ ಕರ್ನಾಟಕದಲ್ಲಿ ಹೊಸ ಹೊಸ ಸಾವಿರಾರು ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು, ಕಾಲೇಜುಗಳು, ಪಾಲಿಟೆಕ್ನಿಗಳು ಅಸ್ತಿತ್ವಕ್ಕೆ ಬಂದವು.

ಡಾ. ಪುರಾಣಿಕರು ಶಿಕ್ಷಣ ಇಲಾಖೆಯಲ್ಲಿ ಇದ್ದಾಗಲೇ ಮೈಸೂರು ವಿಶ್ವವಿದ್ಯಾಲಯದ ಬಹುಮಹತ್ವಾಕಾಂಕ್ಷೆಯ ಯೋಜನೆ 'ಕನ್ನಡ ವಿಶ್ವಕೋಶ ಯೋಜನೆ' ಮತ್ತು ೧೫ ಲಕ್ಷ ರೂ.ಗಳ 'ಕನ್ನಡ ನಿಘಂಟು ಯೋಜನೆ'ಗಳು ಅಂಗೀಕೃತವಾದವು. ಡಾ. ಪುರಾಣಿಕರು ಈ ಎರಡು ಯೋಜನೆಗಳಿಗೆ ಮಂಜೂರಾತಿ ನೀಡಬೇಕೆಂದು ಹಣಕಾಸು ಇಲಾಖೆಗೆ ಕಳಿಸಿಕೊಟ್ಟರು. ಆಗ ಹಣಕಾಸು ಮಂತ್ರಿಗಳಾಗಿದ್ದ ಟಿ. ಮರಿಯಪ್ಪ ಅನುಮತಿ ನೀಡಲು ನಿರಾಕರಿಸಿದರು. ಇವೆರಡೂ ಚಿರಕಾಲ ಉಳಿಯುವ ಕೆಲಸಗಳು ಆದ್ದರಿಂದ ಹೇಗಾದರೂ ಮಾಡಿ ಮಂಜೂರು ಮಾಡಿಸಬೇಕೆಂದು ಅಣ್ಣಾರಾಯರಿಗೆ ಹೇಳಿದರು. ಡಾ. ಪುರಾಣಿಕರು ಮತ್ತು ಅಣ್ಣಾರಾಯರು ಕೂಡಿಕೊಂಡು ಮರಿಯಪ್ಪನವರನ್ನು ಭೇಟಿಯಾದರು. ಆಗ ಮರಿಯಪ್ಪನವರು 'ಅಣ್ಣಾರಾಯರೆ, ಎರಡು ಪುಸ್ತಕಗಳಿಗಾಗಿ ನಾಲ್ವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟ ಉದಾಹರಣೆ ಎಲ್ಲಿಯಾದರೂ ಉಂಟೆ? ಇಷ್ಟು ಹಣದಲ್ಲಿ ಒಂದು ಮಧ್ಯಮ ಗಾತ್ರದ ಜಲಾಶಯವನ್ನೇ ಕಟ್ಟಿಸಬಹುದಲ್ಲ' ಎಂದರು. ಅದಕ್ಕೆ ತಕ್ಷಣ ಅಣ್ಣಾರಾಯರು ಜಾಣತನದಿಂದ ಉತ್ತರಕೊಟ್ಟು ಮರಿಯಪ್ಪನವರನ್ನು ನಿರುತ್ತರರನ್ನಾಗಿ ಮಾಡಿದರು. 'ಹೌದು ಮರಿಯಪ್ಪನವರೇ, ಇವೂ ಎರಡೂ ಜಲಾಶಯಗಳೇ, ಜ್ಞಾನದ ಜಲಾಶಯಗಳು! ಎಂದಿಗೂ ಒಡೆಯದ, ಎಂದಿಗೂ ಬತ್ತದ ಜಲಾಶಯಗಳು! ಇವುಗಳಿಗೆ ಅಡ್ಡ ಬರಬೇಡಿರಿ, ಒಪ್ಪಿ ಬಿಡಿರಿ!' ಎಂದು ಹೇಳಿದರು. ಡಾ. ಪುರಾಣಿಕರ ವಿಶೇಷ ಪ್ರಯತ್ನ ಕಾರಣವಾಗಿ ಈ ಎರಡೂ ಯೋಜನೆಗಳಿಗೆ ಮಂಜೂರಾತಿ ದೊರೆಯಿತು ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ. ದೇಜಗೌ ಅವರು ಅಭಿಮಾನದಿಂದ ಹೇಳುತ್ತಿದ್ದರು.

ಡಾ. ಪುರಾಣಿಕರು ಶಿಕ್ಷಣ ಇಲಾಖೆಯಲ್ಲಿದ್ದಾಗಲೇ ವಯಸ್ಕರ ಶಿಕ್ಷಣ ಸಾಹಿತ್ಯ ಯೋಜನೆ ಮಾಲೆಯಲ್ಲಿ, ಭೂಸನೂರಮಠರ 'ವಚನ ಸಾಹಿತ್ಯ ಸಂಗ್ರಹ', ಉತ್ತಂಗಿಯವರ 'ಸರ್ವಜ್ಞನ ವಚನಗಳು', ಮೊದಲಾದ ಜನಪ್ರಿಯ ಕೃತಿಗಳು ಪ್ರಕಟಗೊಂಡವು. ಜಿಲ್ಲೆಗೊಂದು ಪಾಲಿಟೆಕ್ನಿಕ್ ಯೋಜನೆಯ ಗುರಿ ಮುಟ್ಟಿದರು. ಹಿಂದುಳಿದ ಪ್ರದೇಶಗಳಲ್ಲಿ

ನೂರಾರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾಭವನ ಗಳನ್ನು ಕಟ್ಟಿಸಿದರು. ಸರಕಾರೀ ಮುದ್ರಣಾಲಯದ ಶಾಖೆಗಳನ್ನು ಧಾರವಾಡ ಮತ್ತು ಕಲಬುರ್ಗಿಯಲ್ಲಿ ತೆರೆದರು. ಹೈದರಾಬಾದ ಕರ್ನಾಟಕದಲ್ಲಿದ್ದ ನೂರಾರು ಅಲ್ಪ ವೇತನದ ಹಂಗಾಮೀ ಶಿಕ್ಷಕರನ್ನು ಪೂರ್ಣಾವಧಿ ಶಿಕ್ಷಕರನ್ನಾಗಿ ನಿಯುಕ್ತಿ ಗೊಳಿಸಿದರು. ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಹಾರ ಯೋಜನೆ ಪ್ರಾರಂಭಿಸಿದರು.

೧೯೬೨ರಲ್ಲಿ ಡಾ. ಪುರಾಣಿಕರು ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾದರು. ಆಗ ಆರ್. ಎಂ. ಪಾಟೀಲರು ವಾರ್ತಾ ಮಂತ್ರಿಗಳಾಗಿದ್ದರು. ವಾರ್ತಾ ಇಲಾಖೆಯಲ್ಲಿಯೂ ದಾಖಲೆ ಪ್ರಮಾಣದ ಕೆಲಸ ಮಾಡಿ, ಡಾ. ಪುರಾಣಿಕರು ಜನಮೆಚ್ಚುಗೆ ಗಳಿಸಿದರು. ವರ್ತಮಾನ ಪತ್ರಿಕೆಗಳಿಗೆ ಜಾಹೀರಾತು ನೀಡುವ ವಿಷಯದಲ್ಲಿ ಅವರು ಯಾವುದೇ ಒತ್ತಡ, ಬೆದರಿಕೆಗಳಿಗೆ ಹೆದರಲಿಲ್ಲ.

ಇಲ್ಲೊಂದು ಘಟನೆಯನ್ನು ನಾನು ಉಲ್ಲೇಖಿಸಲೇಬೇಕು. ನಮ್ಮ ನಾಡಿನ ಹಿರಿಯ ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ ಏಕಕಾಲಕ್ಕೆ ಐದು ಪತ್ರಿಕೆಗಳನ್ನು ನಡೆಸುತ್ತಿದ್ದರು. ಇವರಿಗೆ ಇಲಾಖೆಯ ನಿಯಮಕ್ಕನುಗುಣವಾಗಿ ಜಾಹೀರಾತು ಹೋಗುತ್ತಿತ್ತು. ಆದರೂ ಪುಟ್ಟಪ್ಪನವರಿಗೆ ಇವರ ಬಗ್ಗೆ ಅಸೂಹೆ. ತಮ್ಮ ಪತ್ರಿಕೆಯಲ್ಲಿ ಡಾ. ಪುರಾಣಿಕರ ಬಗ್ಗೆ ತುಂಬ ಕೆಟ್ಟದಾಗಿ ಬರೆದರು. ಡಾ. ಪುರಾಣಿಕರನ್ನು ಒಮ್ಮೆ ಅವರ ತಂದೆ ಭೇಟಿಯಾಗಲು ಬಂದಾಗ, ಅಲ್ಲಿದ್ದ ಜನರಿಗೆ, ತಂದೆಯನ್ನು ತಂದೆಯೆಂದು ಪರಿಚಯ ಮಾಡದೆ, ನಮ್ಮ ಮನೆಯ ಆಳು ಎಂದು ಪರಿಚಯಿಸಿದರು. ಎಂಬ ಸುಳ್ಳು ಕಥೆಯನ್ನು ಪುಟ್ಟಪ್ಪ ಸೃಷ್ಟಿ ಮಾಡಿ ಪ್ರಕಟಿಸಿದರು. ತಮಗೆ ಸಹಾಯ ಮಾಡಲಿಲ್ಲವೆಂಬ ಕಾರಣಕ್ಕೆ ಡಾ. ಪುರಾಣಿಕರಂಥ ಪಿತೃಪ್ರೇಮಿಯನ್ನು ಟೀಕಿಸಿದ್ದು ಪುಟ್ಟಪ್ಪನವರ ವ್ಯಕ್ತಿತ್ವಕ್ಕೆ ಶೋಭೆ ತರುವಂಥದ್ದಲ್ಲ. ಪುಟ್ಟಪ್ಪ ಹುಟ್ಟಿಸಿದ್ದ ಇನ್ನೊಂದು ಸುಳ್ಳು ಸೃಷ್ಟಿಯೆಂದರೆ, ಡಾ. ಪುರಾಣಿಕರು ಭ್ರಷ್ಟತೆಯಿಂದ ಆಸ್ತಿಯನ್ನು ಸಂಪಾದಿಸಿದ್ದರು. ಶ್ರೀರಾಮ ಜಾಧವ ಅವರು ಅವರ ಮನೆ ರೇಡ್ ಮಾಡಲು ಹೋಗುವರಿದ್ದರು. ದೊಡ್ಡ ಸಾಹಿತಿಯ ಮಾನ ತೆಗೆಯಬಾರದೆಂದು ಬಿಟ್ಟರೆಂದು ಪುಟ್ಟಪ್ಪ ಕಥೆ ಕಟ್ಟಿದರು. ಡಾ. ಪುರಾಣಿಕರು ಕಾರ್ಮಿಕ ಇಲಾಖೆ ಯಲ್ಲಿದ್ದಾಗಲೂ ಪುಟ್ಟಪ್ಪ ಒಂದು ಸಮಸ್ಯೆಯನ್ನು ಬಗೆಹರಿಸಲು ವಿನಂತಿಸಿ ಕೊಂಡಿದ್ದರು. ನೇರ ನಿಷ್ಠುರ ವ್ಯಕ್ತಿಯಾಗಿದ್ದ ಡಾ. ಪುರಾಣಿಕರು ಪುಟ್ಟಪ್ಪನವರು ಮಾಡಿದ ತಪ್ಪನ್ನು ನೇರವಾಗಿ ಹೇಳಿದ್ದರು. ಆಗ ಪುಟ್ಟಪ್ಪ ತಮ್ಮ ಗೆಳೆಯ ಕೋ. ಚೆನ್ನಬಸಪ್ಪ ಅವರನ್ನು ಕರೆದುಕೊಂಡು ಡಾ. ಪುರಾಣಿಕರ ಮನೆಗೆ ಹೋಗಿ, ಕಾಲು ಬಿದ್ದು, ಸಮಸ್ಯೆಯನ್ನು ಬಗೆ ಹರಿಸಬೇಕೆಂದು ವಿನಂತಿಸಿಕೊಂಡಿದ್ದರು. (ಈ ಘಟನೆಯನ್ನು ಕೋ.ಚೆ ತಮ್ಮ ಆತ್ಮಕಥೆಯಲ್ಲಿ ದಾಖಲಿಸಿದ್ದಾರೆ) ಪುಟ್ಟಪ್ಪನವರಂಥ ಪತ್ರಕರ್ತರು ಹೀಗೆ ಸುಳ್ಳುಸೃಷ್ಟಿಗಳನ್ನು ಮಾಡಿ ಪ್ರಾಮಾಣಿಕ ವ್ಯಕ್ತಿತ್ವಗಳ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಕಾರ್ಯವನ್ನು ಮಾಡಿದ್ದು ವಿಷಾದ ಪಡುವ ಸಂಗತಿಯಾಗಿದೆ.



ಡಾ. ಪುರಾಣಿಕರು ತಮ್ಮ ಬದುಕಿನಲ್ಲಿ ಇಂಥ ಅನೇಕ ನೋವುಗಳನ್ನು ಅನುಭವಿಸಿದರು. ಮೇಲಾಧಿಕಾರಿಗಳ ಶೋಷಣೆಯನ್ನು ಸಹಿಸಿಕೊಂಡರು. ಇವರ ಸಾಹಿತ್ಯಿಕ ಪ್ರಗತಿ ಕಂಡು ಎಷ್ಟೊ ಜನ ಹೊಟ್ಟೆಕಿಚ್ಚು ಪಟ್ಟರು. ಖ್ಯಾತ ಸಾಹಿತಿಗಳಾಗಿದ್ದ ಮಿರ್ಜಿ ಅಣ್ಣಾರಾಯರು, ಕೃಷ್ಣ ಕೋಲ್ಹಾರ ಕುಲಕರ್ಣಿ ಅವರು ಕೂಡಿಕೊಂಡು ಬೆಳಗಾವಿಯಲ್ಲಿ ಡಾ. ಪುರಾಣಿಕರಿಗೆ 'ಕಾವ್ಯಾನಂದ' ಎಂಬ ಅಭಿನಂದನ ಗ್ರಂಥವನ್ನು ಸಮರ್ಪಿಸಲು ಕಾರ್ಯಕ್ರಮವೊಂದನ್ನು ಆಯೋಜಿಸಿದ್ದರು. ಆಗ ಡಾ. ಪುರಾಣಿಕರು ಬೆಂಗಳೂರಿನಲ್ಲಿದ್ದರು. ಈ ಸಮಾರಂಭಕ್ಕೆ ಹೋಗಲು ಅನುಮತಿ ಕೇಳಿದರೆ, 'ರಜೆ ಹಾಕಿ, ಸ್ವಂತ ಖರ್ಚಿನಲ್ಲಿ ಹೋಗಬೇಕೆಂದು' ಇಲಾಖೆಯ ಹಿರಿಯ ಅಧಿಕಾರಿಗಳು ಹೇಳಿದರು. ಇಂಥ ಕುತ್ಸಿತ ಮನೋಭಾವದ ಅನೇಕರು ನೀಡಿದ ಕಿರುಕುಳಗಳನ್ನು ಸಹಿಸಿಕೊಂಡು ತಾವಿದ್ದ ಇಲಾಖೆಗಳಿಗೆ ಅಭಿವೃದ್ಧಿಗಾಗಿ ಕಟಿಬದ್ಧರಾಗಿ ಕೆಲಸ ಮಾಡಿದ್ದು ಡಾ. ಪುರಾಣಿಕರ ಕರ್ತವ್ಯನಿಷ್ಠೆಗೆ ಸಾಕ್ಷಿಯಾಗಿದೆ.

ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಹೊಸ ಜೀವ ತುಂಬಲು ಡಾ. ಪುರಾಣಿಕರು ಅನೇಕ ಹೊಸ ಯೋಜನೆಗಳನ್ನು ರೂಪಿಸಿದರು. ಮೈಸೂರಿನ ದಸರಾ ಪ್ರದರ್ಶನದಲ್ಲಿ ಇಲಾಖೆಯ ಮಳಿಗೆಗೆ ಸುವರ್ಣ ಪದಕ ದೊರೆಯಿತು. ಪ್ರವಾಸೋದ್ಯಮಾಭಿವೃದ್ಧಿಗಾಗಿ ಬಹಳಷ್ಟು ಪರಿಶ್ರಮಿಸಿದರು. ಹಾಸನ, ಜೋಗ, ಗೋಕಾಕ, ಕಲಬುರ್ಗಿ, ಕಲ್ಯಾಣ, ಬೀದರ, ವಿಜಯಪುರ, ಬಾದಾಮಿ, ಐಹೊಳೆ, ಕೆ.ಆರ್.ನಗರ, ಮಂಗಳೂರು, ಹಂಪಿ, ವಾಣೀವಿಲಾಸ ಸಾಗರ, ಮಾಗೋಡು, ತಲಕಾವೇರಿಗಳಲ್ಲಿ ಟೂರಿಸ್ಟ್ ಭವನಗಳ ನಿರ್ಮಾಣ ಕಾರ್ಯ ಪ್ರಾರಂಭಿಸಿದರು.

ಈ ಸಂದರ್ಭದಲ್ಲಿ ಚೀನಾ ಭಾರತದ ಮೇಲೆ ಆಕ್ರಮಣ ಮಾಡಿತು. ದೇಶಕ್ಕೆ ದೇಶವೇ ಒಂದು ವ್ಯಕ್ತಿಯಂತೆ ಎದ್ದು ನಿಂತು, ಸದ್ದು ಹೊಡೆದು, ಸರ್ವಸಾಮರ್ಥ್ಯ ದೊಡನೆ ಈ ದಾಳಿಯನ್ನು ಎದುರಿಸಬೇಕೆಂದು ಪ್ರಧಾನ ಮಂತ್ರಿಗಳು ಭಾಷಣ ಮಾಡಿದರು. ಡಾ. ಪುರಾಣಿಕರು ವಾರ್ತಾ ಇಲಾಖೆಯ ಮೂಲಕ ಸಭೆ ಮೆರವಣಿಗೆ, ಸಂಘಟನೆ ಮಾಡಿದರು. ರಕ್ಷಣಾನಿಧಿ ಸಂಗ್ರಹ, ವೀರಗೀತೆಗಳ ಪ್ರಸಾರ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. 'ಜಯಭೇರಿ' ಎಂಬ ವಾರ ಪತ್ರಿಕೆಯನ್ನು ಪ್ರಕಟಿಸಿದರು. ಅದರ ಸಂಪಾದಕೀಯವನ್ನು ಡಾ. ಪುರಾಣಿಕರೇ ಬರೆದು ಯುವ ಜನರಲ್ಲಿ ಹುರುಪು ಹುಮ್ಮಸ್ಸು ತುಂಬಿದರು. ಡಾ. ಪುರಾಣಿಕರು ಬರೆದ 'ಯುಧ್ಯಸ್ವ' ಎಂಬ ರಣಗೀತೆಯನ್ನು ಆಕಾಶವಾಣಿಯಲ್ಲಿ ಮತ್ತೆ ಮತ್ತೆ ಪ್ರಸಾರ ಮಾಡಲಾಯಿತು. ಇದೇ ಸಂದರ್ಭದಲ್ಲಿ 'ಭಾರತವೀರ' ಎಂಬ ನಾಟಕವನ್ನು ಬರೆದು ವಿದೇಶಿಯರ ಆಕ್ರಮಣವನ್ನು ಭಾರತೀಯರು ಹೇಗೆ ಎದುರಿಸಬೇಕೆಂಬ ಪೌರಾಣಿಕ ಕಥೆಗೆ ಆಧುನಿಕ ಸ್ಪರ್ಶ ನೀಡಿದರು. ಈ ನಾಟಕ ನಾಡಿನ ತುಂಬ ಪ್ರದರ್ಶನಗೊಂಡಿತು. 'ರಕ್ಷಣಾ ಯಾಗ' ಎಂಬ ಸಾಕ್ಷ್ಯಚಿತ್ರವನ್ನು ಸಿದ್ಧಪಡಿಸಿದರು.

ಇಂದಿರಾಗಾಂಧಿ ರಕ್ಷಣಾ ನಿಧಿ ಸಂಗ್ರಹಿಸಲು ಕರ್ನಾಟಕಕ್ಕೆ ಬಂದರು. ಆಗ ಪುರಾಣಿಕರು ನಿಜಲಿಂಗಪ್ಪ, ಇಂದಿರಾ ಮೊದಲಾದವರ ಜೊತೆಗೆ ವಿಜಯಪುರಕ್ಕೆ ಹೋದರು. ವಿಜಯಪುರದ ಜನ ಇಬ್ಬರನ್ನೂ ಸುವರ್ಣತುಲಾಭಾರದಿಂದ ಇಡೀ ದೇಶವೇ ಸೋಜಿಗಗೊಳ್ಳುವಂತೆ ಮಾಡಿದರು. ಈ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ ಪುರಾಣಿಕರು ಈ ವರದಿಯನ್ನು ವಾರ್ತಾ ಇಲಾಖೆಯ ಮೂಲಕ ದೇಶದುದಗಲ್ಲಕ್ಕೂ ತಲುಪುವಂತೆ ಮಾಡಿದರು.

೧೯೬೪ರಲ್ಲಿ ಹಣಕಾಸು ಇಲಾಖೆಯ ಡೆಪ್ಯೂಟಿ ಸೆಕ್ರೆಟರಿ ಆಗಿ ಡಾ. ಪುರಾಣಿಕರು ವರ್ಗವಾದರು. ಆಗ ಭಾರತ ಸರಕಾರ ಚಿನ್ನ ನಿಯಂತ್ರಣ ಮಾಡಿದ ಕಾರಣಕ್ಕಾಗಿ ಸಾವಿರಾರು ಅಕ್ಕಸಾಲಿಗರು ನಿರುದ್ಯೋಗಿಗಳಾಗುವ ಪ್ರಸಂಗ ಬಂದಿತು. ಇಂಥ ಪರಿಸ್ಥಿತಿಯಲ್ಲಿ ಡಾ. ಪುರಾಣಿಕರು ಚಿನ್ನ ನಿಯಂತ್ರಣಾಧಿಕಾರಿಗಳಾಗಿ ಸಮತೂಕದ ಕಾರ್ಯನಿರ್ವಹಿಸಿದರು.

೧೯೬೫ರಲ್ಲಿ ಡಾ. ಪುರಾಣಿಕರು ಮಡಿಕೇರಿ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿ ವರ್ಗಾವಣೆಯಾದರು. ಬಿಸಿಲು ನಾಡಿನಿಂದ ಬಂದ ಡಾ. ಪುರಾಣಿಕರಿಗೆ ಅಲ್ಲಿಯತಿಯಾದ ಮಳೆ, ಮತ್ತು ತಂಪು ವಾತಾವರಣಕ್ಕೆ ಹೊಂದಿಕೊಳ್ಳುವುದು ಒಂದಿಷ್ಟು ಕಷ್ಟವೇ ಆಯಿತು. ಕೊಡಗು ಸಾರ್ವಜನಿಕ ಶಿಕ್ಷಣ, ಸಹಕಾರ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ ಜಿಲ್ಲೆಯಾಗಿತ್ತು. ಆದರೆ ಗ್ರಾಮಾಂತರ ಪ್ರದೇಶದಲ್ಲಿ ರಸ್ತೆಗಳ, ಸೇತುವೆಗಳ, ವಿದ್ಯುದ್ದೀಪಗಳ, ಸಣ್ಣ ನೀರಾವರಿ ಕಾರ್ಯಗಳ ಅಭಾವದಿಂದ ಅದರ ಪ್ರಗತಿ ಕುಂಠಿತವಾಗಿತ್ತು. ಈ ಎಲ್ಲ ಕೆಲಸಗಳಿಗೆ ಮೊದಲ ಆದ್ಯತೆ ನೀಡಿದರು.

ಡಾ. ಪುರಾಣಿಕರು ಮಾಡಿದ ಮತ್ತೊಂದು ಮಹತ್ವದ ಕೆಲಸವೆಂದರೆ, ಕೊಡಗಿನ ಜನ ಮಳೆಗಾಲದ ಒಂದೇ ಭತ್ತದ ಬೆಳೆಯನ್ನು ಬೆಳೆಯುತ್ತಿದ್ದರು. ಹಸಿರು ಕ್ರಾಂತಿಯ ಪರಿಣಾಮವಾಗಿ ಮತ್ತು ದೇಶದ ಜನಸಂಖ್ಯೆಗೆ ಅನುಗುಣವಾಗಿ ಇನ್ನೂ ಆಹಾರದ ಕೊರತೆ ಇದ್ದ ಕಾರಣ ಮತ್ತೊಂದು ಬೆಳೆಯನ್ನು ಬೆಳೆಯಲು ರೈತರಿಗೆ ಪ್ರೋತ್ಸಾಹಿಸಿದರು. ಕೆಲವರು ಮೊದಲ ಬೆಳೆಯಲ್ಲಿ ಸಮೃದ್ಧಿಯನ್ನು ನೀಡಿರುವಾಗ ಇನ್ನೊಂದು ಬೆಳೆ ಏಕೆ? ಎಂದು ಪ್ರಶ್ನೆ ಮಾಡಿದರು. ಡಾ. ಪುರಾಣಿಕರು ಅವರಿಗೆ ಸರಿಯಾದ ಉತ್ತರ ನೀಡಿ, ದೇಶದ ಬೆಳವಣಿಗೆಗೆ ಇದು ಸಹಾಯಕ ಎಂದು ಮನವರಿಕೆ ಮಾಡಿಕೊಟ್ಟರು. ಬೆಳೆಸಾಲ, ಬೀಜ, ಗೊಬ್ಬರ, ಕ್ರಿಮಿನಾಶಕ ಮೊದಲಾದವುಗಳನ್ನು ರೈತರ ಮನೆ ಬಾಗಿಲಿಗೆ ಮುಟ್ಟುವಂತೆ ವ್ಯವಸ್ಥೆ ಮಾಡಿದರು. ಅದೇ ವರ್ಷ ಅಧಿಕ ಇಳುವರಿ ನೀಡುವ ತೈಚುಂಗ್ ಎಂಬ ಹೊಸ ಭತ್ತದ ಬೀಜಗಳು ಬಂದಿದ್ದವು. ಡಾ. ಪುರಾಣಿಕರ ಈ ಪ್ರಯತ್ನದ ಫಲವಾಗಿ ಕೊಡಗಿನಲ್ಲಿ ಬಂಪರ ಬೆಳೆ ಬಂದಿತು. ಎಂದೂ ನಿರೀಕ್ಷೆ ಮಾಡದ ರೈತರಿಗೆ ಇದೊಂದು ಹೊಸ ಕ್ರಾಂತಿ ಎನಿಸಿತು. ಡಾ. ಪುರಾಣಿಕರೇ ಕೃಷಿ ಅಧಿಕಾರಿಗಳೊಂದಿಗೆ ಕೂಡಿ ಬೆಳೆ ಕ್ಷೇತ್ರ ಯಾತ್ರೆಯನ್ನು ಮಾಡಿದರು.



ಡಾ. ಪುರಾಣಿಕರು ಕೊಡಗಿನಲ್ಲಿದ್ದಾಗಲೇ ಪಾಕಿಸ್ತಾನ ಭಾರತದ ಮೇಲೆ ಆಕ್ರಮಣ ಮಾಡಿತು. ಕೊಡಗಿನ ಮುಸ್ಲಿಂ ಬಂಧುಗಳು ಇವರನ್ನು ಭೇಟಿಯಾಗಿ ತಮಗೆ ರಕ್ಷಣೆ ಬೇಕೆಂದು ಕೇಳಿಕೊಂಡರು. ಅವರಿಗೆ ಡಾ. ಪುರಾಣಿಕರು ಅಭಯ ನೀಡಿದರು. ಅಲ್ಲದೆ ಮುಸ್ಲಿಂ ಬಾಂಧವರೇ ಮೊದಲು ರಕ್ಷಣಾ ನಿಧಿಗೆ ಮೂರು ಸಾವಿರ ರೂ.ಗಳನ್ನು ಸಲ್ಲಿಸಿದರು. ಈ ವಿಷಯ ರಾಜ್ಯದ ತುಂಬ ಪ್ರಸಾರವಾಯಿತು. ನಾಡಿನ ಜನತೆ ಮನಸೋ ಇಚ್ಛೆ ರಕ್ಷಣಾನಿಧಿಗೆ ಹಣ ತಂದುಕೊಟ್ಟರು.

ಇದೇ ಸಂದರ್ಭದಲ್ಲಿ ಕೊಡಗಿನಲ್ಲಿ ಸಣ್ಣ ಉಳಿತಾಯ ಯೋಜನೆಯೊಂದನ್ನು ಡಾ. ಪುರಾಣಿಕರು ಜಾರಿಗೆ ತಂದರು. ಇದರ ಪರಿಣಾಮವಾಗಿ ಕೊಡಗಿನ ಎಲ್ಲ ಗ್ರಾಮಗಳು 'ಬಚತ್ ಗ್ರಾಮ'ಗಳಾದವು. ಮಡಿಕೇರಿ ಭಾರತದ ಮೊಟ್ಟಮೊದಲ 'ಬಚತ್ ನಗರ'ವಾಗಿ ದೇಶದ ಗಮನ ಸೆಳೆಯಿತು. ಹೀಗೆ ಕೊಡಗಿನಲ್ಲಿ ಪುರಾಣಿಕರು ಮಾಡಿದ ಅವಿಸ್ಮರಣೀಯ ಘಟನೆಗಳು ಕಾರಣವಾಗಿ ಅಲ್ಲಿಯ ಜನ ಇವರನ್ನು ಇನ್ನೂ ಸ್ಮರಿಸುತ್ತಾರೆ. ಇತ್ತೀಚೆಗೆ ೪೧ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಆಗ 'ಡಾ. ಸಿದ್ಧಯ್ಯ ಪುರಾಣಿಕ ಮಹಾದ್ವಾರ' ಎಂಬ ಒಂದು ಬೃಹತ್ ಬ್ಯಾನರ್ ನೋಡಿ ನನಗೆ ತುಂಬ ಖುಷಿಯಾಯಿತು. ಒಬ್ಬ ಜಿಲ್ಲಾಧಿಕಾರಿ ಇಲ್ಲಿಯವರ ಮನದಾಳದಲ್ಲಿ ಹೇಗೆ ಸ್ಮರಣೀಯನಾಗಿದ್ದಾನೆ ಎಂಬ ಹೆಮ್ಮೆ ನನಗಾಯಿತು.

ಡಾ. ಪುರಾಣಿಕರ ಬೀಳ್ಕೊಡುಗೆ ಸಮಾರಂಭವನ್ನು ಕೊಡಗಿನ ಜನ ಅರ್ಥಪೂರ್ಣವಾಗಿ ಆಚರಿಸಿದರು. ಕೊಡಗು ಪ್ರತ್ಯೇಕ ರಾಜ್ಯದ ಪ್ರತಿಪಾದಕರೂ ಹಿರಿಯರೂ ರಾಜಕೀಯ ಮುತ್ಸದ್ಧಿಗಳೂ ಆಗಿದ್ದ ಕರುಂಬಯ್ಯನವರು ಆ ಸಮಾರಂಭದಲ್ಲಿ ಮಾತನಾಡುತ್ತ– 'ನಮ್ಮದೇ ರಾಜ್ಯವಿದ್ದಾಗ ನಮಗೊಬ್ಬ ಮುಖ್ಯಮಂತ್ರಿಗಳೂ ಮಂತ್ರಿಗಳೂ ಮುಖ್ಯಕಾರ್ಯದರ್ಶಿಗಳೂ ಇದ್ದರು. ೨೫ ಜನ ಶಾಸಕರೂ ಇದ್ದರು. ಅವರೆಲ್ಲರೂ ಸೇರಿ ಮಾಡಿದ ಕೆಲಸಕ್ಕಿಂತಲೂ ಹೆಚ್ಚಿನ ಕೆಲಸವನ್ನು ನಮ್ಮ ಈ ಜಿಲ್ಲಾಧಿಕಾರಿಗಳು ಒಬ್ಬರೇ ಮಾಡಿ ತೋರಿಸಿದ್ದಾರೆ.' ಎಂದು ಹೃದಯತುಂಬಿ ಮಾತನಾಡಿದರು. ಈ ಸಮಾರಂಭದಲ್ಲಿ ನಮ್ಮ ಸ್ವತಂತ್ರ ಭಾರತದ ಮಹಾದಂಡನಾಯಕರಾಗಿದ್ದ ಜನರಲ್ ಎಂ. ಕಾರ್ಯಪ್ಪನವರು ಮುಖ್ಯ ಅತಿಥಿಗಳಾಗಿದ್ದರು.

೧೯೬೭ರಲ್ಲಿ ಡಾ. ಪುರಾಣಿಕರು ಕರ್ನಾಟಕ ಸಾರಿಗೆ ಇಲಾಖೆಯ ಆಯುಕ್ತರಾಗಿ ಬಂದರು. ಇವರು ಇಲಾಖೆಯ ಹೊಣೆ ಹೊತ್ತ ಸಂದರ್ಭದಲ್ಲಿ, ಹಲವಾರು ಸಮಸ್ಯೆಗಳು ಸಾರಿಗೆ ಇಲಾಖೆಯನ್ನು ಕಾಡುತ್ತಿದ್ದವು. ಅವುಗಳಲ್ಲಿ ಮುಖ್ಯವಾಗಿ ಲಂಚದ ಹಾವಳಿ ಕಾರಣವಾಗಿ ಪರ್ಮಿಟ್ಟುಗಳ ಸಲುವಾಗಿ ಹೈಕೋರ್ಟಿನಲ್ಲಿ ಅನೇಕ ದಾವೆಗಳು ಹೂಡಲ್ಪಟ್ಟಿದ್ದವು. ತಕ್ಷಣ ರಾಜ್ಯದ ಎಲ್ಲ ಜಿಲ್ಲೆಗಳನ್ನು ಸುತ್ತಿದ ಡಾ. ಪುರಾಣಿಕರು, ಯಾವ ಜಿಲ್ಲೆಗೆ ಎಷ್ಟು ಪರ್ಮಿಟ್ಟುಗಳು ಬೇಕೆಂದು ಪಟ್ಟಿ ಮಾಡಿದರು. ಅಷ್ಟು ಪರ್ಮಿಟ್ಟುಗಳನ್ನು ನಾನು ಕೊಡುವೆ, ಆದರೆ ಎಲ್ಲ ರಿಟ್ ಅರ್ಜಿಗಳನ್ನು ಹಿಂದಕ್ಕೆ ಪಡೆಯಿರಿ ಎಂದು ಹೇಳಿದರು. ಲಾರಿ ಮತ್ತು ಬಸ್ಸಿನ ಸಮಸ್ಯೆಗಳೆಲ್ಲ ಹೀಗೆ ಬಗೆಹರಿದವು.

ಕರ್ನಾಟಕದ ಗಡಿಗಳೊಂದಿಗೆ ಹೊಂದಿಕೊಂಡಿ ರುವ ಪಂಚರಾಜ್ಯಗಳೊಂದಿಗೆ ಅಂತರರಾಜ್ಯ ಪರ್ಮಿಟ್ಟುಗಳನ್ನು ಪಡೆದುಕೊಂಡರು. ಇದರ ಪರಿಣಾಮವಾಗಿ ಇಲಾಖೆಗೆ ಹೆಚ್ಚಿನ ಆದಾಯ ಬರತೊಡಗಿತು. ಪ್ರಸಿದ್ಧ ಕ್ಷೇತ್ರಗಳಿಗೆ ವಿಶೇಷ ಬಸ್ ಸೌಲಭ್ಯ, ವಿಲಾಸೀ ಬಸ್ಸುಗಳ ವ್ಯವಸ್ಥೆ ಮಾಡಿ ಬಹು ಜನರ ಮೆಚ್ಚುಗೆ ಪಡೆದರು. ಡಾ. ಪುರಾಣಿಕರು ಇಲಾಖೆಗೆ ಬಂದಾಗ ಏಳುಕೋಟಿ ಇಟ್ಟ ಆದಾಯ, ಇಲಾಖೆ ಬಿಡುವಾಗ ಹನ್ನೊಂದು ಕೋಟಿಗೆ ಏರಿತ್ತು. ಯಾವುದೇ ಇಲಾಖೆಗೆ ಹೋದರು, ಡಾ. ಪುರಾಣಿಕರು ತುಂಬ ಜಾಣತನದಿಂದ ಆಡಳಿತ ನಡೆಸಿ, ಇಲಾಖೆಗಳಿಗೆ ಒಂದು ಶಿಸ್ತು-ಘನತೆಯನ್ನು ತಂದುಕೊಟ್ಟವರು.

೧೯೭೦ರಲ್ಲಿ ಡಾ. ಪುರಾಣಿಕರು ಬೆಳಗಾವಿ ಜಿಲ್ಲಾಧಿಕಾರಿಗಳಾಗಿ ನಿಯುಕ್ತಿಗೊಂಡರು. ಬೆಳಗಾವಿ ಕರ್ನಾಟಕದ ಒಂದು ವಿಶಿಷ್ಟ ಜಿಲ್ಲೆ. ಕನ್ನಡ ಮರಾಠಿ ಉಭಯ ಭಾಷಿಕರು ಸೌಹಾರ್ದತೆಯಿಂದ ಬದುಕುತ್ತಿರುವ ಜಿಲ್ಲೆ. ದಕ್ಷಿಣ ಭಾರತವನ್ನು ಉತ್ತರ ಭಾರತಕ್ಕೆ ಪರಿಚಯಿಸುವ ಒಂದು ಆಯಕಟ್ಟಿನ ಸ್ಥಾನ ಬೆಳಗಾವಿ. ಬ್ರಿಟಿಷರು ಬೆಳಗಾವಿ ಪರಿಸರವನ್ನು ತುಂಬ ಮೆಚ್ಚಿಕೊಂಡಿದ್ದರು. ಆದ್ದರಿಂದ ಇದನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿದ್ದರು. ಇಂಥ ಒಂದು ಮಹತ್ವದ ಜಿಲ್ಲೆಗೆ ಡಾ. ಪುರಾಣಿಕರು ಜಿಲ್ಲಾಧಿಕಾರಿಗಳಾಗಿ ಬಂದಾಗ ಅನೇಕ ಸಮಸ್ಯೆಗಳು ತಾಂಡವಾಡುತ್ತಿದ್ದವು.

ಇಡೀ ದೇಶದಲ್ಲಿ ಕಾಂಗ್ರೆಸ್ ಆಪಾದ ಮಸ್ತಕ ಸೀಳಿ ಎರಡು ಹೋಳಾಗಿತ್ತು. ಸಿಂಡಿಕೇಟ್-ಇಂಡಿಕೇಟ್ ಎರಡು ಭಾಗಗಳಾಗಿದ್ದವು. ಇಂಡಿರಾಗಾಂಧಿಯ ಭ್ರಷ್ಟತೆ ವಿರುದ್ಧ ಸಮರ ಸಾರಿದ್ದ ರಾಷ್ಟ್ರನಾಯಕ ಎಸ್. ನಿಜಲಿಂಗಪ್ಪನವರು ಸಂಸ್ಥಾ ಕಾಂಗ್ರೆಸ್‌ನಲ್ಲಿದ್ದರು. ಆದ್ದರಿಂದ ಅವರ ಪ್ರೀತಿಯ ಶಿಷ್ಯ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ನಿಜಲಿಂಗಪ್ಪನವರೊಂದಿಗೆ ಉಳಿದುಕೊಂಡರು. ಇದೇ ಸಂದರ್ಭದಲ್ಲಿ ಲೋಕಸಭೆಯಲ್ಲಿ ಮಹಾಜನ ವರದಿ ಪ್ರಸ್ತಾಪ ಕಾರಣವಾಗಿ ಕರ್ನಾಟಕದ ಗಡಿ ಜಿಲ್ಲೆಗಳಲ್ಲಿ ಹಿಂಸಾಕೃತ್ಯಗಳು ಜರುಗಿದವು. ಜಿಲ್ಲಾಧಿಕಾರಿಯಾಗಿ ಬಂದ ಡಾ. ಪುರಾಣಿಕರು ಈ ಹಿಂಸಾಕೃತ್ಯಗಳನ್ನು ಕೇವಲ ೧೫ ದಿನದಲ್ಲಿ ಅಡಗಿಸಿದರು. ಪ್ರಕ್ಷುಬ್ಧ ಪರಿಸ್ಥಿತಿಯನ್ನು ಶಾಂತಗೊಳಿಸಿದರು.

ಬೆಳಗಾವಿಯಲ್ಲಿ ಡಾ. ಪುರಾಣಿಕರು ಮಾಡಿದ ಜನೋಪಯೋಗಿ ಕೆಲಸಗಳನ್ನು ಜನ ಇಂದಿಗೂ ಕೃತಜ್ಞತೆಯಿಂದ ಸ್ಮರಿಸುತ್ತಾರೆ. ರೈತ ಸಮುದಾಯವಂತೂ ಇಂಥ ಜಿಲ್ಲಾಧಿಕಾರಿ ನಮಗೆ ದೊರತದ್ದು ನಮ್ಮ ಸೌಭಾಗ್ಯವೆಂದು ಹೇಳುತ್ತಾರೆ. ಅವರು ಮಾಡಿದ ಕೆಲಸಗಳನ್ನು ನೆನಪಿಸಿಕೊಂಡು, ಶಾಶ್ವತ ಪರಿಹಾರದ ಯೋಜನೆಗಳನ್ನು ರೂಪಿಸಿದ ಅವರ ಕಾರ್ಯಕುಶಲತೆಗೆ ಮೆಚ್ಚುಗೆ ಸೂಚಿಸುತ್ತಾರೆ.

ಡಾ. ಪುರಾಣಿಕರು ಎಲ್ಲೆ ಹೋಗಲಿ, ಅಲ್ಲಿ ಯಾವುದಾದರೂ ಕಾರ್ಯಗತ ಆಗದ ಕೆಲಸಗಳಿವೆಯೆ ಎಂಬುದನ್ನು ಪರಿಶೀಲಿಸುತ್ತಾರೆ. ಬೆಳಗಾವಿಯಲ್ಲಿ ಅಂಥ ಕೆಲವು ಕಾರ್ಯಗತವಾಗದ ಕೆಲಸಗಳಿದ್ದವು. ಅವುಗಳಲ್ಲಿ ಬಲ್ಲಾರಿ ನಾಲಾ ಯೋಜನೆ.



ಬೆಳಗಾವಿಯ ಕಾಲುವೆ ನೀರೆಲ್ಲ ಈ ಬಳ್ಳಾರಿ ನಾಲೆಯ ಮೂಲಕ ಹೊರ ಹೋಗುತ್ತದೆ. ಮಳೆಗಾಲದಲ್ಲಿ ವಿಪರೀತ ನೀರು ಬಂದು ರೈತರ ಜಮೀನುಗಳಿಗೆ ನುಗ್ಗಿ, ಬೆಳೆಗಳನ್ನು ಹಾಳು ಮಾಡುತ್ತಿತ್ತು. ಅದರಲ್ಲಿ ಕೊಳೆತು ನಾರುವ ನೀರಿನಿಂದ ಜಮೀನಿನಲ್ಲಿ ಕೆಲಸ ಮಾಡುವುದು ರೈತರಿಗೆ ಕಷ್ಟವಾಗುತ್ತಿತ್ತು. ಈ ವಿಷಯವಾಗಿ ಅನೇಕ ವರ್ಷಗಳಿಂದ ರೈತರು ಸರ್ಕಾರಕ್ಕೆ ಮನವಿ ಸಲ್ಲಿಸುತ್ತ ಬಂದಿದ್ದರು. ಸರಕಾರದ ಕೆಲವು ಅಧಿಕಾರಿಗಳು ಆ ಯೋಜನೆಗೆ ಒಂದೂವರೆ ಕೋಟಿ ರೂ. ಬೇಕಾಗುತ್ತದೆ ಎಂದು ಆ ಯೋಜನೆಯನ್ನು ಕೈಬಿಟ್ಟಿದ್ದರು. ಡಾ. ಪುರಾಣಿಕರು ರೈತರ ಜಮೀನುಗಳಿಗೆ ಭೇಟಿ ನೀಡಿದರು. ನಾಲೆ ಹರಿದು ಹೋಗುವ ದಾರಿಯನ್ನು ವೀಕ್ಷಿಸಿದರು. ಕಾಲ್ನಡಿಗೆಯಿಂದ ಕಾಲುವೆಯನ್ನು ಆಮೂಲಾಗ್ರ ಅವಲೋಕನ ಮಾಡಿದರು. ಒಂದು ಕಡೆ ನಾಲೆ ಅರ್ಧ ಚಂದ್ರಾಕಾರದ ಡೊಂಕನಿಂದ ಕೂಡಿತ್ತು. ಇದರಿಂದ ರಭಸವಾಗಿ ಬಂದ ನೀರು, ಇಲ್ಲೆ ತಡೆದು ಹೊಲಗಳಿಗೆ ನುಗ್ಗುತ್ತಿತ್ತು. ರೈತರನ್ನು ಕರೆದು ಈ ಡೊಂಕನ್ನು ಸರಳವಾಗಿಸಿದರೆ ನೀರು ಹರಿದು ಹೋಗುವುದಲ್ಲ ಎಂದು ಕೇಳಿದರು. ರೈತರೂ ಅದಕ್ಕೆ ಒಪ್ಪಿದರು. ಒಂದೂವರೆ ಕೋಟಿ ವೆಚ್ಚದ ಯೋಜನೆ ಬದಲಾಗಿ ಕೇವಲ ಒಂದು ಲಕ್ಷ ರೂ.ಗಳಲ್ಲಿ ಬುಲ್‌ಡೋಜರ್ ಸಹಾಯದಿಂದ ಡೊಂಕು ದಾರಿಯನ್ನು ಸರಳವಾಗಿಸಿದರು. ನಾಲೆಯಲ್ಲಿ ತುಂಬಿದ್ದ ಹೂಳನ್ನೆಲ್ಲ ತೆಗೆಸಿದರು. ಇದರ ಪರಿಣಾಮವಾಗಿ ನೀರು ಸರಾಗವಾಗಿ ಹರಿದು ಹೋಯಿತು. ಭತ್ತದ ಬೆಳೆ ಸಮೃದ್ಧವಾಗಿ ಬೆಳೆಯಿತು. ರೈತರು ಸಂತೋಷದಿಂದ ಐದು ನೂರು ಕ್ವಿಂಟಲ್ ಭತ್ತವನ್ನು ಲೇವಿಯಾಗಿ ನೀಡಿದರು. ಈ ಕರ ಸಂಗ್ರಹದಿಂದ ಗ್ರಾಮ ವಿದ್ಯುದೀಕರಣ, ಪುಟ್ಟ ನೀರಾವರಿ, ಶಾಲಾಭವನ ಇತ್ಯಾದಿ ಅಭಿವೃದ್ಧಿ ಕಾರ್ಯಗಳನ್ನು ಆರಂಭಿಸಿದರು.

ಡಾ. ಪುರಾಣಿಕರು ಮಾಡಿದ ಮತ್ತೊಂದು ಮಹತ್ವದ ಕೆಲಸವೆಂದರೆ, ಎಂ.ಕೆ. ಹುಬ್ಬಳ್ಳಿಯ ಸಕ್ಕರೆ ಕಾರ್ಖಾನೆಗೆ ಪುನರುಜ್ಜೀವನ ನೀಡಿದ್ದು. ಈ ಬಳ್ಳಾರಿ ನಾಲಾ ವಿಷಯವನ್ನು ಬಗೆಹರಿಸಿದ್ದಕ್ಕಾಗಿ ವೀರೇಂದ್ರ ಪಾಟೀಲರು ಡಾ. ಪುರಾಣಿಕರನ್ನು ಅಭಿನಂದಿಸಿ, ಸಕ್ಕರೆ ಕಾರ್ಖಾನೆ ಸಮಸ್ಯೆಯನ್ನು ಹೇಗಾದರೂ ಮಾಡಿ ಬಗೆಹರಿಸಿ ಎಂದರು. ಕಾರ್ಖಾನೆಯ ಎಂ.ಡಿ. ಎಂದು ನಿಯಮಿಸಿ ಆಜ್ಞೆ ಹೊರಡಿಸಿದರು. ಕಾರ್ಖಾನೆಯ ವ್ಯವಸ್ಥೆಯನ್ನು ಕುರಿತು ಆಳವಾಗಿ ಅಧ್ಯಯನ ಮಾಡಿದ ಡಾ. ಪುರಾಣಿಕರು ಮುಖ್ಯಮಂತ್ರಿಗಳಿಗೆ ಭೇಟಿಯಾಗಿ, ಈ ಕಾರ್ಖಾನೆಯ ಸಮಸ್ಯೆ ಪರಿಹರಿಸಲು ಸರಕಾರ ಐದು ಲಕ್ಷ ರೂ.ಗಳನ್ನು ಮಂಜೂರು ಮಾಡಬೇಕು ಎಂದು ಕೇಳಿಕೊಂಡರು. ಮುಖ್ಯಮಂತ್ರಿಗಳು ಒಪ್ಪಿದರು. ಆದರೆ ಅನೇಕ ರಾಜಕೀಯ ಮುಖಂಡರು ತಮ್ಮ ಭಾಗದಲ್ಲಿ ಇರುವ ಕಾರ್ಖಾನೆಗಳಿಗೆ ಸರಕಾರದಿಂದ ಹಣ ಪಡೆಯುವ ತಂತ್ರ ರೂಪಿಸಿದ್ದರು. ಅದಕ್ಕಾಗಿ ವಿಧಾನ ಸಭೆ ಸಚಿವ ಸಂಪುಟದಲ್ಲಿ ಚರ್ಚೆಯಾಗುವ ಸಂದರ್ಭದಲ್ಲಿ, ನೀವೇ ಬಂದು ಉತ್ತರ ನೀಡಿ ಎಂದು ವೀರೇಂದ್ರ ಪಾಟೀಲರು ಪುರಾಣಿಕರಿಗೆ ಹೇಳಿದರು. ಪುರಾಣಿಕರು ವಿಧಾನ ಸಭೆಯಲ್ಲಿ ಈ ಕಾರ್ಖಾನೆಯ ಧನ ಸಹಾಯ ಏಕೆ ಬೇಕೆಂದು ಮನಮುಟ್ಟುವಂತೆ ಮಾತನಾಡಿದರು. ಅಂದೇ ಸಚಿವ

ಸಂಪುಟದಲ್ಲಿ ಹಣ ಸಹಾಯ ಮಂಜೂರಾತಿ ದೊರೆಯಿತು. ಮುಖ್ಯಮಂತ್ರಿಗಳಿಗೆ ಅಭಿನಂದನೆ ಹೇಳಿ ಪುರಾಣಿಕರು ಬೆಳಗಾವಿ ಬಂದರು. ಇಲ್ಲಿಯ ಕೆಲವು ರಾಜಕೀಯ ವ್ಯಕ್ತಿಗಳಿಗೆ ಈ ಕಾರ್ಖಾನೆ ಮತ್ತೆ ಪ್ರಾರಂಭವಾಗುವುದು ಬೇಕಾಗಿರಲಿಲ್ಲ. ಆದ್ದರಿಂದ ಇವರ ಕಾರ್ಯಗಳಿಗೆ ಏನಾದರೊಂದು ವಿಘ್ನ ಮಾಡುವುದು ಅವರ ಉದ್ದೇಶವಾಗಿತ್ತು. ಇಡೀ ದಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕುಳಿತು ಕೆಲಸ ಮಾಡಿ, ಸಾಯಂಕಾಲ ಎಂ.ಕೆ. ಹುಬ್ಬಳ್ಳಿಗೆ ಹೋಗಿ, ರಾತ್ರಿ ೧ ಗಂಟೆಯವರೆಗೆ ನಿಂತು ಕೆಲಸ ಕಾರ್ಯಗಳ ಉಸ್ತುವಾರಿಯನ್ನು ತಾವೇ ಮುತುವರ್ಜಿ ವಹಿಸಿ ನೋಡತೊಡಗಿದರು. ಕೇವಲ ಒಂದು ತಿಂಗಳಲ್ಲಿ ಕಾರ್ಖಾನೆ ಪ್ರಾರಂಭ ವಾಯಿತು. ಮುಖ್ಯಮಂತ್ರಿಗಳೇ ಬಂದು ಬಾಯಲರ್ ಪ್ರದೀಪನ ಕಾರ್ಯ ನೆರವೇರಿಸಿದರು. ಐದು ಸಾವಿರ ರೈತ ಬಾಂಧವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಎಲ್ಲರಿಗೂ ಅನ್ನಸಂತರ್ಪಣೆ ನಡೆಯಿತು. ಮುಖ್ಯಮಂತ್ರಿಗಳಿಗಂತೂ ಹಿಡಿಸಲಾರದಷ್ಟು ಸಂತೋಷವಾಗಿತ್ತು. ಡಾ. ಪುರಾಣಿಕರ ಕರ್ತವ್ಯಪ್ರಜ್ಞೆ–ಕಾರ್ಯ ದಕ್ಷತೆಯನ್ನು ಸಾರ್ವಜನಿಕ ಸಭೆಯಲ್ಲಿ ಮುಕ್ತಕಂಠದಿಂದ ಹೊಗಳಿದರು. ಬೆಳಗಾವಿ, ಬೈಲಹೊಂಗಲ, ಖಾನಾಪುರ ತಾಲೂಕುಗಳ ಕಬ್ಬು ಬೆಳೆಗಾರರು ತಮ್ಮ ಕಬ್ಬನ್ನು ಈ ಕಾರ್ಖಾನೆಗೆ ಕರೆಸಿಕೊಟ್ಟರು. ರೈತರ ಬಾಳಿನಲ್ಲಿ ಸಂತಸದ ಮಿಂಚು ಸಂಚರಿಸಿತು.

ಡಾ. ಸಿದ್ಧಯ್ಯ ಪುರಾಣಿಕರ ಕರ್ತವ್ಯದಕ್ಷತೆ ಕಾರಣವಾಗಿ, ಖ್ಯಾತ ಇಂಜನಿಯರ್ ಎಸ್. ಜಿ. ಬಾಳೇಕುಂದ್ರಿ ಅವರ ದೂರದೃಷ್ಟಿಯ ಫಲವಾಗಿ ಬೆಳಗಾವಿ ಜಿಲ್ಲೆ ಸವದತ್ತಿ ಸಮೀಪ 'ಮಲಪ್ರಭಾ ಜಲಾಶಯ ಯೋಜನೆ' ಕಾರ್ಯಗತವಾಯಿತು. ಈ ಯೋಜನೆಯನ್ನು ತೀವ್ರವಾಗಿ ಮಾಡಲು ಒಂದು ಘಟನೆ ಕಾರಣವಾಗಿತ್ತು. ನ್ಯಾ. ಬಚಾವತ್ ಅವರು ಕೃಷ್ಣಾ ನದಿ ನೀರು ಹಂಚಿಕೆಯ ಬಗ್ಗೆ ನಿರ್ಣಯ ನೀಡಲು ನಿಯಮಿತರಾಗಿದ್ದರು. ಅವರು ಬೆಳಗಾವಿಗೆ ಬಂದಾಗ ಡಾ. ಪುರಾಣಿಕರು ಅವರನ್ನು ಭೇಟಿಯಾದರು. ಜೈನ ಧರ್ಮೀಯರಾಗಿದ್ದ ಅವರು ಪುರಾಣಿಕರಿಗೆ –'ಕರ್ನಾಟಕದಲ್ಲಿ ವೀರಶೈವರಿಂದ ಜೈನರಿಗೆ ಚಿತ್ರಹಿಂಸೆಯಾಗಿದೆಯಂತೆ, ನಿಜವೆ?' ಎಂದರು. ಜೈನ ಸಂಸ್ಕೃತಿಯು ಕರ್ನಾಟಕದಲ್ಲಿ ಬೆಳೆದು ನಿಂತ ಇತಿಹಾಸವನ್ನು ಪುರಾಣಿಕರು ಮನಮುಟ್ಟುವಂತೆ ಹೇಳಿದರೂ ಅವರ ಮನಸ್ಸು ಕೇಳಲಿಲ್ಲ. ಕರ್ನಾಟಕದ ವಿರುದ್ಧ ನಿರ್ಣಯ ಕೊಟ್ಟರು. ಅಂದಿನ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸರು ಈ ವಿಷಯವಾಗಿ ನಿರ್ಲಕ್ಷ್ಯ ತೋರಿಸಿದರು. ಆಗ ಡಾ. ಪುರಾಣಿಕರು 'ಕನ್ನಡಿಗರೆ, ನಿಮಗೇಕೆ ನೀರು? ಇದೆಯಲ್ಲ ಕಣ್ಣೀರು' ಎಂಬ ಲೇಖನ ಬರೆದು ಕನ್ನಡಿಗರಿಗೆ ವಾಸ್ತವ ಸ್ಥಿತಿಯನ್ನು ಮನಗಾಣಿಸಿದ್ದರು. ಆದರೆ ಉತ್ತರ ಕರ್ನಾಟಕದ ಬಗ್ಗೆ ಸರಕಾರ ತಾಳಿದ ತಾರತಮ್ಯ ಧೋರಣೆ ಕಾರಣವಾಗಿ ಈ ಭಾಗದ ರೈತರಿಗೆ ಮೋಸವಾಯಿತು.

ಈ ಘಟನೆಯನ್ನು ಎಸ್. ಜಿ. ಬಾಳೇಕುಂದ್ರಿಯವರಿಗೆ ಡಾ. ಪುರಾಣಿಕರು ಹೇಳಿದಾಗ, ಆದಷ್ಟು ಬೇಗ ಮಲಪ್ರಭಾ ಯೋಜನೆಯನ್ನಾದರೂ ಮುಗಿಸೋಣ. ಇಲ್ಲದಿದ್ದರೆ ಈ ನೀರಿಗೂ ಬಚಾವತ್ ಕಣ್ಣು ಹಾಕಬಹುದು, ನಮ್ಮ ಜನರಿಗೆ



ಅನ್ಯಾಯವಾಗಬಹುದು ಎಂದು ಇಬ್ಬರೂ ಆಲೋಚಿಸಿ, ತಕ್ಷಣವೇ ಕಾರ್ಯಪ್ರವೃತ್ತರಾದರು. ಪುರಾಣಿಕರು ಸ್ವತಃ ಹಡಗಲಿ, ಸಿಂಗಾರಕೊಪ್ಪ, ಗುರ್ಲಹೊಸೂರು, ನಡುವಿನಹಳ್ಳಿ, ಕೊಟ್ರಾಲ್, ಮತ್ತೊಳ್ಳಿ, ಹಿಟ್ಟಣಗಿ, ಸುತಗಟ್ಟಿ, ಕುಸಲಾಪುರ, ಏಣಗಿ, ಅಸುಂಡಿ ಮೊದಲಾದ ಗ್ರಾಮಗಳಿಗೆ ಭೇಟಿ ನೀಡಿ, ಗ್ರಾಮವಾಸಿಗಳಿಗೆ ಈ ಜಲಾಶಯದ ಯೋಜನೆ ವಿವರಿಸಿ, ಅವರ ಮನವೊಲಿಸಿ ಭೂಮಿ ಬಿಡಿಸಿಕೊಂಡರು. ಮುಳುಗಡೆ ಪ್ರದೇಶದ ಕುಟುಂಬಗಳ ಪುನರ್‌ವಸತಿಗಾಗಿ ಸಮಿತಿಯೊಂದನ್ನು ಸರಕಾರ ನೇಮಕ ಮಾಡಿತು. ಈ ಸಮಿತಿಗೆ ಡಾ. ಪುರಾಣಿಕರೇ ಅಧ್ಯಕ್ಷರಾದರು. ತಕ್ಷಣ ಗೃಹಮಂಡಳಿಯಿಂದ ಎರಡು ಸಾವಿರ ಹೊಸ ಮನೆ ನಿರ್ಮಾಣಕ್ಕೆ ಆದ್ಯತೆ ನೀಡಿದರು. ಈ ಹೊಸ ಹಳ್ಳಿಗಳಿಗೆ ಕುಡಿಯುವ ನೀರಿನಿಂದ ಶಾಲೆಯವರೆಗೆ ಎಲ್ಲ ಸೌಕರ್ಯಗಳ ಸೃಷ್ಟಿ ಮಾಡಿದರು. ಯುದ್ಧೋಪಾದಿಯಲ್ಲಿ ಕೆಲಸ ಕಾರ್ಯಗಳು ಪ್ರಾರಂಭವಾದವು. ಎರಡು ಸಾವಿರ ತಾತ್ಪೂರ್ತಿಕ ತಂಗುದಾಣಗಳನ್ನು ಕಟ್ಟಿಸಿದರು.

ಇಷ್ಟೆಲ್ಲ ಮಾಡಿದರೂ ಜನ ಊರು ತೊರೆಯಲು ಸಿದ್ಧರಾಗಲಿಲ್ಲ. ಇದೂ ವರ್ಷ ಜಲಾಶಯದಲ್ಲಿ ನೀರು ನಿಲ್ಲಲಾರದು ಎಂಬ ಭಾವನೆ ಅವರದಾಗಿತ್ತು. ಮಳೆಗಾಲ ಪ್ರಾರಂಭವಾಗಿ ನೀರು ಜಲಾಶಯದಲ್ಲಿ ಸಂಗ್ರಹವಾಗತೊಡಗಿತು. ಹಳ್ಳಿಗರಿಗೆ ಆಗ ಆಪತ್ತಿನ ಅರಿವಾಯಿತು. ಜನರನ್ನು ಸ್ಥಳಾಂತರಿಸಲು ಪುರಾಣಿಕರು ಕಟಿಬದ್ಧರಾಗಿ ನಿಂತರು. ಆಗ ಅವರು ಪ್ರಾಣಾಪಾಯವನ್ನು ಎದುರಿಸಬೇಕಾಯಿತು. ಈ ವಿಷಯವನ್ನು ಅವರೇ ಹೀಗೆ ವಿವರಿಸುತ್ತಾರೆ:

'ಮುಂದಿದ್ದ ಆಪತ್ತು ಸಾಲದೆಂಬಂತೆ ಇನ್ನೊಂದು ವಿಪತ್ತನ್ನು ಕಳಿಸಿತು ಅದೃಶ್ಯ ಶಕ್ತಿ! ಜೋರಾಗಿ ಮಳೆ ಸುರಿಯಲಾರಂಭಿಸಿತು. ಮೊದಲೇ ಎರೆನೆಲ. ಮಳೆಯಿಂದ ಹುದುಲು ಹುಟ್ಟಿ ಲಾರಿಗಳ ಸಾಗಾಟವೂ ಕಷ್ಟಕರವಾಯಿತು. ಅವರ ಎತ್ತು ಕತ್ತೆಗಳನ್ನೇ ಹಿಡಿದು ಅವರ ಸಾಮಾನುಗಳನ್ನು ಅವುಗಳ ಮೇಲೆ ಹೇರಿ ಸ್ಥಳಾಂತರಿಸುವ ಕೆಲಸ ನಡೆಯಿತು. ಅಲ್ಲಲ್ಲಿ ಇದ್ದ ಟ್ರ್ಯಾಕ್ಟರ್‌ಗಳನ್ನು ಕೈವಶಪಡಿಸಿಕೊಳ್ಳಲಾಯಿತು. ಸರಕಾರದ ಜೀಪುಗಳು ಶರಣು ಹೊಡೆದು ಬಿಡಲು ನಾವೂ ಟ್ರ್ಯಾಕ್ಟರಿನಲ್ಲಿಯೋ, ಕಾಲು ನಡಿಗೆಯಲ್ಲಿಯೋ ತಿರುಗಾಡಬೇಕಾಯಿತು. ಹೊತ್ತಿಗೆ ಸರಿಯಾಗಿ ಊಟವಿಲ್ಲ, ನಿದ್ರೆಯಿಲ್ಲ, ವಿಶ್ರಾಂತಿಯಿಲ್ಲ. ಆದರೂ ಜನರ, ಅವರ ಪಶು ಸಂಪತ್ತಿನ ಸ್ಥಾನಾಂತರ ಒಂದೂ ಪ್ರಾಣಹಾನಿ ವಿತ್ತ ಹಾನಿಯಾಗದಂತೆ ಆಗಲೇ ಬೇಕೆಂಬ ಛಲ ನಮ್ಮ ದಣಿದ ದೇಹಗಳಲ್ಲಿಯೂ ಹೊಸ ಚೈತನ್ಯ ಹೊಮ್ಮಿಸುತ್ತ ಮುಂದೆಳೆಯುತ್ತ ಹೊರಟಿದ್ದಿತು ನಮ್ಮನ್ನು. ಒಂದು ಹಳ್ಳಿ ಅರ್ಧ ಮುಳುಗಿದರೂ ಆ ಊರವರು ಸ್ಥಳಾಂತರಕ್ಕೆ ಸಮ್ಮತಿಸದೆ ಹುಟ್ಟಿ ಬೆಳೆದ ಸ್ಥಳದಲ್ಲಿಯೇ ಜಲಸಮಾಧಿ ಹೊಂದುವೆವೆಂದು ಹಟ ಹಿಡಿದಿರುವರೆಂಬ ವಾರ್ತೆ ಬಂದಿತು. ನಾನೂ ಕಾರ್ತಿಕೇಯನ್ನರೂ ಒಂದು ಟ್ರ್ಯಾಕ್ಟರಿನಲ್ಲಿ ಆ ಹಳ್ಳಿಯತ್ತ ಧಾವಿಸಿದೆವು. ಹಳ್ಳಿಯ ಬಳಿಯ ಹಳ್ಳ ತುಂಬಿ ಹರಿಯುತ್ತಲಿದ್ದಿತು. ಅದರಲ್ಲಿಯೇ ಟ್ರ್ಯಾಕ್ಟರ್ ಬಿಟ್ಟೆವು. ಹಳ್ಳದ ಆಚೆ ದಂಡ ಕೈಯಳತೆಯಲ್ಲಿದ್ದಾಗ ಪ್ರವಾಹದ ಸೆಳತಕ್ಕೆ ಟ್ರ್ಯಾಕ್ಟರ್ ಉರುಳಿ ಬಿಟ್ಟಿತು. ಇಬ್ಬರೂ ಹಾರಿ ದಂಡೆ ಸೇರಿದೆವು. ಆ ಟ್ರ್ಯಾಕ್ಟರ್

ದೂರದ ವರೆಗೆ ಹರಿದು ಹೋಗಿ ಹೂತು ಬಿಟ್ಟಿತು ಮರಳಿನಲ್ಲಿ. ಅದನ್ನು ಹೊರದೆಗೆಯಲು ಬೆಂಗಳೂರಿನಿಂದ ಕ್ರೇನು ಬರಬೇಕಾಯಿತು.

ಆ ಊರವರನ್ನು ಒಪ್ಪಿಸಿ ಅವರ ಸ್ಥಳಾಂತರ ಪ್ರಾರಂಭಿಸುವಷ್ಟರಲ್ಲಿ ಗುರ್ಲ ಹೊಸೂರಿನ ಹತ್ತಿರದ ಚಿದಂಬರೇಶ್ವರ ದೇವಾಲಯದೊಳಕ್ಕೆ ನೀರು ನುಗ್ಗಿದ ವರ್ತಮಾನ ಬಂದಿತು. ಮುಳುಗಲಿದ್ದ ಆ ಪ್ರಸಿದ್ಧ ದೇವಾಲಯಕ್ಕೆ ಪ್ರತಿಯಾಗಿ ಸವದತ್ತಿಯಲ್ಲಿ ಬೇರೊಂದು ದೇವಾಲಯವನ್ನು ಅದರಂತೆಯೇ ಕಟ್ಟಿಸಬೇಕೆಂದು ನಾನು ಆರು ತಿಂಗಳುಗಳ ಹಿಂದೆಯೇ ಮಾಡಿದ್ದ ಪ್ರಯತ್ನಗಳೆಲ್ಲ ವಿಫಲವಾಗಿದ್ದವು– ಅರ್ಚಕರ, ಭಕ್ತಾದಿಗಳ ಐಕ್ಯಮತದ ಅಭಾವದಿಂದ. ಈಗ ದೇಗುಲವಂತೂ ಮುಳುಗುವುದು ನಿಶ್ಚಿತ; ಕನಿಷ್ಠ ಅಲ್ಲಿಯ ಶಿವಲಿಂಗವನ್ನಾದರೂ ಉಳಿಸಿದರೆ ಮುಂದೆ ಎಂದಾದರೂ ಮಂದಿರ ಕಟ್ಟಬಹುದೆಂದು ನೆನೆದು, ಧೈರ್ಯ ಮಾಡಿ ದೇಗುಲದೊಳಕ್ಕೆ ನುಗ್ಗಿದೆ. ಗರ್ಭಗುಡಿಯಲ್ಲಿಯೂ ನೀರು ಏರತೊಡಗಿದ್ದಿತು. ಶಿವಲಿಂಗ ನೀರಿನಲ್ಲಿಯೇ ನಿಂತಿದ್ದಿತು. ನಾಲ್ವರ ಸಹಾಯದೊಡನೆ ಶಿವಲಿಂಗವನ್ನೆತ್ತಿ ತಂದು ದೋಣಿಯಲ್ಲಿರಿಸಿ ದೆವು. ನಾವೂ ಕುಳಿತು ದಂಡೆ ತಲುಪುವಷ್ಟರಲ್ಲಿ ದೇವಾಲಯದ ಒಂದು ಭಾಗ ಕಳಚಿ ಭೋರ್ಗರೆಯುತ್ತಲಿದ್ದ ನೀರಿಗೆ ನೈವೇದ್ಯವಾಯಿತು! ನಾವು ಅಲ್ಲಿಂದ ಪಾರಾಗುವುದು ಐದೇ ನಿಮಿಷ ತಡವಾಗಿದ್ದರೂ ನಮಗೂ ಅಲ್ಲಿಯೇ ಸಮಾಧಿ ಯಾಗುತ್ತಿದ್ದಿತೋ ಏನೋ!'

ಇಂಥ ಪ್ರಾಣಾಪಾಯದ ಸಂದರ್ಭದಲ್ಲಿ ಧೈರ್ಯಗೆಡದೆ, ಡಾ. ಪುರಾಣಿಕರು ೧೩. ಹಳ್ಳಿಗಳ ಸಂಪೂರ್ಣ ಸ್ಥಳಾಂತರ ಕಾರ್ಯ ಮಾಡಿದರು. ಇಷ್ಟೆಲ್ಲ ಅನಾಹುತ ನಡೆಯುತ್ತಿದ್ದರೂ ಬೆಳಗಾವಿಯ ಹದಿನೆಂಟು ಜನ ಎಂ.ಎಲ್.ಎ., ನಾಲ್ಕು ಜನ ಎಂ.ಎಲ್.ಸಿ.ಗಳ ಪೈಕಿ ಒಬ್ಬರೂ ಅತ್ತ ಹಣಿಕಿ ಹಾಕಲಿಲ್ಲ. ಮಂತ್ರಿಗಳಾರೂ ಬಂದು ನೋಡಲಿಲ್ಲ. ಆದರೆ ಪುರಾಣಿಕರ ಕಾರ್ಯದಕ್ಷತೆಯನ್ನು ಹೊಗಳಿ ಅನೇಕ ಪತ್ರಿಕೆಗಳು ವಿಶೇಷ ವರದಿ ಪ್ರಕಟಿಸಿದವು.

ಸ್ಥಳಾಂತರಗೊಂಡ ಜನರ ಸ್ಥಿತಿ ಚಿಂತಾಜನಕವಾಗಿತ್ತು. ಮಳೆ ಕಾರಣದಿಂದ ಅವರು ಒಲೆ ಹೊತ್ತಿಸುವುದು ಕಷ್ಟವಾಗಿತ್ತು. ಡಾ. ಪುರಾಣಿಕರು ಹಳ್ಳಿಗಳಿಗೆ ಲಾರಿ ಕಳಿಸಿದರು. ಹಳ್ಳಿಯ ಜನರು ಔದಾರ್ಯದಿಂದ ರೊಟ್ಟಿ ಚಟ್ನಿ, ಪಲ್ಯ ಅನ್ನ ಸಾರು ಎಲ್ಲವನ್ನು ಮಾಡಿ ಲಾರಿಗಟ್ಟಲೆ ಪುನರ್ವಸತಿ ಕೇಂದ್ರಗಳಿಗೆ ಕಳಿಸಿಕೊಟ್ಟರು. ಡಾ. ಪುರಾಣಿಕರ ಧರ್ಮಪತ್ನಿ ಗಿರಿಜಾದೇವಿ ಅವರೂ ಹಳ್ಳಿ ತಿರುಗಿ ಜೋಳ ಕಾಳುಗಳನ್ನು ಸಂಗ್ರಹಿಸಿ, ಹದಿಮೂರು ಹೊಸ ಹಳ್ಳಿಗಳಿಗೆ ಹಂಚಿಬಂದರು. ಪತಿಯ ಸಾರ್ವಜನಿಕ ಸೇವೆಯಲ್ಲಿ ತಮ್ಮನ್ನು ಸರ್ವಾರ್ಪಣ ಮನೋಭಾವದಿಂದ ತೊಡಗಿಸಿಕೊಂಡರು. ಒಂದು ತಿಂಗಳ ಕಾಲ ನಿರಂತರ ಆ ಹಳ್ಳಿಗಳಲ್ಲಿದ್ದು ಪರಿಸ್ಥಿತಿಯನ್ನು ಹತೋಟಿಗೆ ತಂದರು. ಹದಿಮೂರು ಹಳ್ಳಿಗಳ ನಾಲವತ್ತು ಸಾವಿರ ಕುಟುಂಬಗಳನ್ನು ಏಕಕಾಲಕ್ಕೆ ಸ್ಥಳಾಂತರಿಸಿ, ಯಾವುದೇ ಪ್ರಾಣಹಾನಿ–ಆಸ್ತಿಹಾನಿಯಾಗದಂತೆ ಮಾಡಿದ ತೃಪ್ತಿ ಪುರಾಣಿಕರಿಗೆ ಆಯಿತು.



ಈ ಯೋಜನೆಗೆ ಮೊದಲು ಅನುಮೋದನೆ ನೀಡಿದ್ದ ಎಸ್. ನಿಜಲಿಂಗಪ್ಪನವರು ಈ ಜಲಾಶಯವನ್ನು ನೋಡಿ ಹೋದರು. ಅಲ್ಲೊಂದು ಸುಂದರ ಉದ್ಯಾನವನ ನಿರ್ಮಾಣವಾಗಿ 'ನವಿಲುತೀರ್ಥ' ಎಂಬ ಹೆಸರಿನಿಂದ ಪ್ರವಾಸಿ ಕೇಂದ್ರವಾಗಿ ಮಾರ್ಪಟ್ಟಿತು.

ಡಾ. ಪುರಾಣಿಕರು ಬೆಳಗಾವಿಯಲ್ಲಿದ್ದಾಗಲೇ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದರು. ಸಮ್ಮೇಳನ ಜರುಗಿದ ದಿನವೇ ಬಾಂಗ್ಲಾ ಯುದ್ಧ ಪ್ರಾರಂಭವಾಯಿತು. ಡಾ. ಪುರಾಣಿಕರು ಬೆಳಗಾವಿ ಜಿಲ್ಲೆಯಿಂದ ಮೂವತ್ತು ಲಕ್ಷ ರೂ. ನಿಧಿ ಸಂಗ್ರಹಿಸಿ ಕೊಟ್ಟರು. ಯುದ್ಧದಲ್ಲಿ ಭಾರತಕ್ಕೆ ಜಯವಾಯಿತು. ಆದರೆ ಬೆಳಗಾವಿ ಜಿಲ್ಲೆಯ ೨೨ ಯೋಧರು ಯುದ್ಧದಲ್ಲಿ ವೀರಮರಣ ಹೊಂದಿದ್ದರು. ಜಿಲ್ಲೆಗೆ ಒಂದು ವೀರಚಕ್ರ, ನಾಲ್ಕು ಸೇವಾ ಪದಕ, ಎರಡು ವಿಶೇಷ ಸ್ಮರಣೆಗಳನ್ನು ಮಡಿದ ಮತ್ತು ಗಾಯಗೊಂಡ ಯೋಧರು ಪಡೆದುಕೊಂಡಿದ್ದರು. ಮಡಿದ ವೀರಯೋಧರ ಕುಟುಂಬಗಳಿಗೆ ಸರಕಾರದ ಸಹಾಯ ಧನವನ್ನು ತಾವೇ ಸ್ವತಃ ಹೋಗಿ ಕೊಟ್ಟು ಬಂದರು. ಇಪ್ಪತ್ತೆರಡು ಕುಟುಂಬಗಳಿಗೆ ಬೆಳಗಾವಿಯಲ್ಲಿ ಮನೆ ಕಟ್ಟಿಸಿಕೊಟ್ಟರು. ಅವರ ಕುಟುಂಬ ವರ್ಗದವರಿಗೆ ಅರ್ಹತೆಯುಳ್ಳ ಉದ್ಯೋಗಕ್ಕೆ ಸಹಾಯ ಮಾಡಿದರು. ಅಥಣಿ ಮತ್ತು ಬೆಳಗಾವಿಯಲ್ಲಿ ಸೈನಿಕರ ಮಕ್ಕಳ ವಿದ್ಯಾರ್ಥಿನಿಲಯಗಳನ್ನು ಅಭಿವೃದ್ಧಿ ಪಡಿಸಿದರು. ಸೈನಿಕರಿಗೆ ಮಾಡಿದ ಸಹಾಯ ಡಾ. ಪುರಾಣಿಕರಿಗೆ ತೃಪ್ತಿಯನ್ನುಂಟು ಮಾಡಿತು.

ಡಾ. ಪುರಾಣಿಕರು ಬೆಳಗಾವಿಯಲ್ಲಿ ಇದ್ದುದ್ದು ಎರಡೂ ವರ್ಷ. ೧೯೭೧ರಲ್ಲಿ ಜನಗಣತಿ, ಎರಡು ಸಾರ್ವತ್ರಿಕ ಚುನಾವಣೆಗಳು ಜರುಗಿದವು, ಬಾಂಗ್ಲಾ ಯುದ್ಧ ಸಂಭವಿಸಿತು. ಇದೇ ಸಂದರ್ಭದಲ್ಲಿ ಭೀಕರ ಬರಗಾಲ ಬಂದಿತು. ಹಳ್ಳಿಯ ಜನರಿಗೆ ಜೋಳ ಕಾಳುಗಳನ್ನು ಒದಗಿಸುವ ಗುರುತರ ಜವಾಬ್ದಾರಿ ಡಾ. ಪುರಾಣಿಕರ ಮೇಲಿತ್ತು. ನೂರಾರು ಹಳ್ಳಿಗಳಲ್ಲಿ ಬೋರ್ ಹೊಡೆಸಿದರು. ನೀರಿನ ಹಾಹಾಕಾರ ತಪ್ಪುವಂತಾಯಿತು. ಕ್ಷಾಮ ಪೀಡಿತ ಪ್ರದೇಶಗಳಿಗೆ ತಾವೇ ಭೇಟಿಕೊಟ್ಟು ಪರಿಹಾರವನ್ನು ತಾರತಮ್ಯ ಮಾಡದೆ ವಿತರಿಸಿದರು.

ಆಗ ಬೆಳಗಾವಿಗೆ ವರ್ಗವಾಗಿ ಬಂದ ಜಿಲ್ಲಾಧಿಕಾರಿಗಳು ಬಹಳ ದಿನ ಇರುತ್ತಿರಲಿಲ್ಲ. ಡಾ. ಪುರಾಣಿಕರು ಎರಡೂವರೆ ವರ್ಷ ಇದ್ದುದ್ದು ದೊಡ್ಡ ಸಾಹಸವೆಂದೇ ಹೇಳಬೇಕು. ಡಿ.ಸಿ. ಬಂಗ್ಲೆಗೆ ಕಾಯಕಲ್ಪಕೊಟ್ಟರು. ಲೋಕೋಪ ಯೋಗಿ ಇಲಾಖೆಯಿಂದ ನಾಲ್ಕು ನೂರು ಮನೆ ಕಟ್ಟಿಸುವ ಯೋಜನೆಯನ್ನು ಪ್ರಾರಂಭಿಸಿದರು. ಎಂ.ಕೆ. ಹುಬ್ಬಳ್ಳಿ ಸಕ್ಕರೆ ಕಾರ್ಖಾನೆ ಎಂ.ಡಿ.ಆಗಿ, ಉಗಾರ ಸಕ್ಕರೆ ಕಾರ್ಖಾನೆ ಪದನಿಮಿತ್ತ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.

ಸೊಗಲ ಸೋಮೇಶ್ವರ ಕ್ಷೇತ್ರ, ಸವದತ್ತಿ ಎಲ್ಲಮ್ಮನ ಕ್ಷೇತ್ರ, ಗೊಡಚಿ ವೀರಭದ್ರ ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸಿದ ಕೀರ್ತಿ ಡಾ. ಪುರಾಣಿಕರದು.

ಡಾ. ಪುರಾಣಿಕರು ಬೆಳಗಾವಿ ಜಿಲ್ಲಾಧಿಕಾರಿಗಳಾಗಿದ್ದ ಸಂದರ್ಭದಲ್ಲಿ ಬೆಳಗಾವಿ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಡಾ. ಹಾ.ಮಾ.ನಾಯಕ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಕವಿಗೋಷ್ಠಿಗೆ ಡಾ. ಪುರಾಣಿಕರು ಅಧ್ಯಕ್ಷರಾಗಿದ್ದರು. ಮಿರ್ಜಿ ಅಣ್ಣಾರಾಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಇದೊಂದು ಮರೆಯಲಾರದ ಸ್ಮರಣೀಯ ಕಾರ್ಯಕ್ರಮ ಎನಿಸಿತು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜಿ. ನಾರಾಯಣ ಅವರು 'ಇದು ಜಿಲ್ಲಾ ಸಾಹಿತ್ಯ ಸಮ್ಮೇಳನವಲ್ಲ; ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ' ಎಂದು ಮನದುಂಬಿ ಮಾತನಾಡಿದ್ದರು.

ಡಾ. ಪುರಾಣಿಕರು ೧೯೭೨ರಲ್ಲಿ ಬೆಳಗಾವಿಯಿಂದ ಬೆಂಗಳೂರಿಗೆ ಹೋದರು. ಕರ್ನಾಟಕ ಸರಕಾರದ ಕಾರ್ಮಿಕ ಇಲಾಖೆಯ ಆಯುಕ್ತರಾದರು. ಕಾರ್ಮಿಕರ ಅನೇಕ ಸಮಸ್ಯೆಗಳಿಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ರೂಪಿಸಿದರು. ಕಾರ್ಮಿಕರಿಗೆ ಕಡಿಮೆ ವೇತನ ನೀಡಿ ಶೋಷಣೆ ಮಾಡಲಾಗುತ್ತಿತ್ತು. ವೇತನ ತಾರತಮ್ಯ ನಿವಾರಣೆಗಾಗಿ ಡಾ. ಪುರಾಣಿಕರ ಅಧ್ಯಕ್ಷತೆಯಲ್ಲಿ ಸರಕಾರ ಒಂದು ಆಯೋಗವನ್ನು ನೇಮಿಸಿತು. ಕಾರ್ಮಿಕರಿಗಾಗಿ ಐದುನೂರಕ್ಕೂ ಹೆಚ್ಚು ಮನೆಗಳನ್ನು ನಿರ್ಮಿಸಿ ದಾಖಲೆಯನ್ನೇ ಸ್ಥಾಪಿಸಿದರು. ೧೯೭೮ರಲ್ಲಿ ತಮ್ಮ ಸೇವಾ ಜೀವನದಿಂದ ನಿವೃತ್ತರಾದರು. ನಿವೃತ್ತರಾದ ಸಂದರ್ಭದಲ್ಲಿ ಅವರು ಬರೆದ ಒಂದು ವಚನ ಹೀಗಿದೆ:

ಸುಖದೊಡನೆ ಸರಸವಾಡುವಾಗಿನ ದುಃಖವನ್ನು ಅನುಭವಿಸಿದೆ
ದುಃಖದೊಡನೆ ಹೋರಾಡುವಾಗಿನ ಸುಖವನ್ನು ಅನುಭವಿಸಿದೆ
ಸುಖ ದುಃಖಗಳ ಸುದ್ದಿಯನ್ನೇ ಮರೆತಾಗಿನ ಆನಂದವನ್ನು ಅನುಭವಿಸಿದೆ
ಗೆಲವನ್ನು ದಕ್ಕಿಸಿಕೊಳ್ಳುವಾಗಿನ ದುಃಖವನ್ನು ಅನುಭವಿಸಿದೆ
ಸೋಲಿನೊಡನೆ ಸೆಣಸುವಾಗಿನ ಸೊಗವನ್ನು ಅನುಭವಿಸಿದೆ
ಸೋಲು ಗೆಲವುಗಳನ್ನು ಮೀರಿದಾಗಿನ ಮನಃಪ್ರಸಾದವನ್ನೂ ಅನುಭವಿಸಿದೆ
ಸಿರಿಯ ಸೆರೆಯಲ್ಲಿ ಸವೆದೆ; ಬಡತನದ ಸೈಪನ್ನು ಸವಿದೆ
ಸ್ತುತಿಯ ನಂಜನ್ನು ಗುಟುಕರಿಸಿದೆ; ನಿಂದೆಯ ತನಿಯನ್ನು ಮುಕ್ಕಳಿಸಿದೆ
ಸ್ವತಂತ್ರಧೀರ ಸಿದ್ಧೇಶ್ವರಾ,
ಸೇವಾಜೀವನದ ಶಿಕ್ಷೆಯನ್ನೂ ಮುಗಿಸಲಿಹೆನಯ್ಯ–ಅನತಿ ದೂರದಲ್ಲಿ!

ಸರಕಾರಿ ಸೇವೆಯಿಂದ ನಿವೃತ್ತಿಯಾದರೂ ಸಾರ್ವಜನಿಕ ಸೇವೆಯಿಂದ ಡಾ. ಪುರಾಣಿಕರು ನಿವೃತ್ತಿಯಾಗಲಿಲ್ಲ; ಪ್ರವೃತ್ತಿ ಮಾರ್ಗ ಹಿಡಿದರು. ಬಸವ ಸಮಿತಿಯ ಸಂಶೋಧನ ಪ್ರಕಟನಾ ವಿಭಾಗದ ನಿರ್ದೇಶಕರಾಗಿ ಸೇವೆ ಸಲ್ಲಿಸ ತೊಡಗಿದರು. 'ಬಸವ ಪಥ'(ಕನ್ನಡ ಮಾಸಪತ್ರಿಕೆ) ಮತ್ತು 'ಬಸವ ಜರ್ನಲ್' (ಇಂಗ್ಲಿಷ್ ಪತ್ರಿಕೆ) ಗಳ ಪ್ರಧಾನ ಸಂಪಾದಕರಾಗಿ ೯ ವರ್ಷಗಳ ಕಾಲ ದುಡಿದರು.

ತಮ್ಮ ಸಂತೃಪ್ತ ಜೀವನವನ್ನು ಕುರಿತು ಡಾ. ಪುರಾಣಿಕರು ಹೇಳುವ ನುಡಿಗಳು ತುಂಬ ಅರ್ಥಪೂರ್ಣವಾಗಿವೆ:



'ಒಟ್ಟಿನಲ್ಲಿ ಸಂತೃಪ್ತ ನಾನು. ನನ್ನೊಡನೆ ಬದುಕಿದವರಿಗಿದ್ದಂತೆ ಬಾಪೂಜಿಯ ಬಾನೆತ್ತರ ವ್ಯಕ್ತಿತ್ವದ ಬಾವುಟದ ಕೆಳಗೆ ಭಾರತವು ಸ್ವತಂತ್ರವಾದುದನ್ನು ನೋಡುವ ಭಾಗ್ಯ ಇನ್ನಾರಿಗಿದೆ? ನಿಜಾಮನ ಅರಸೊತ್ತಿಗೆಯೇ ನಿರ್ನಾಮವಾದುದನ್ನು ನೋಡುವ ಭಾಗ್ಯ ಇನ್ನಾರಿಗಿದೆ? ಕನ್ನಡ ನಾಡು ಒಂದಾದುದನ್ನು ಕಾಣುವ ಭಾಗ್ಯ ಬೇರಾರಿಗಿದೆ? ನಮ್ಮ ಕನಸುಗಳೆಲ್ಲ ನನಸಾಗಿಲ್ಲ, ನಿಜ. ಆದರೆ ಅದಕ್ಕೆ ಕಾರಣರೂ ನಾವೇ ಅಲ್ಲವೆ? ನಮ್ಮ ನಮ್ಮ ಪಾಲಿನ ಕರ್ತವ್ಯವನ್ನು ನಾವೆಲ್ಲ ನಿರ್ವಹಿಸಿದ್ದರೆ ಇಷ್ಟರಲ್ಲಿ ಈ ರಾಷ್ಟ್ರ ಇಹಲೋಕದ ನಂದನವಾಗುತ್ತಿದ್ದಿತೇನೋ! ಆದರೆ ಕೀಳು ರಾಜಕಾರಣ ಹತ್ತು ಮುಖದ ರಾವಣನಾಗಿ, ಸ್ವಾರ್ಥ ಶೂರ್ಪನಖಿಯ ಮಾತ ಕೇಳಿ, ಸುಗುಣವೆಂಬ ಸೀತೆಯನ್ನು ಕದ್ದು ಶೋಕವನದಲ್ಲಿಟ್ಟುಬಿಟ್ಟಿರುವನೆಂದೂ, ಸಾಹಿತ್ಯದ ಆಂಜನೇಯ ಅವಳನ್ನು ಹುಡುಕಿ, ಸಂಸ್ಕೃತಿಯ ಶ್ರೀರಾಮ ಅವಳನ್ನು ಗೆದ್ದು ತರಬೇಕೆಂದೂ ಈ ಅಲ್ಪನ ಆಸೆ! ಆ ಆಸೆಯನ್ನಿರಿಸಿಕೊಂಡು ಬದುಕಿದೆ; ಆ ಆಸೆಗೆ ತಕ್ಕಂತೆ ಕೈಲಾದಷ್ಟು ದುಡಿದೆ. ಈಗ ದುಡಿದಷ್ಟರಿಂದ, ಪಡೆದಷ್ಟರಿಂದ ಒಂದು ವಿಧದ ತೃಪ್ತಿ.'

# ಕನ್ನಡ ಕಟ್ಟುವ ಕೆಲಸ

ಡಾ. ಸಿದ್ಧಯ್ಯ ಪುರಾಣಿಕರು ಹೈದರಾಬಾದ ಕರ್ನಾಟಕದಲ್ಲಿ ಕನ್ನಡ ಕಟ್ಟುವ ಕೆಲಸವನ್ನು ಸದ್ದಿಲ್ಲದೆ ಮಾಡುತ್ತ ಬಂದವರು. ಗುರುಗಳಾದ ತವಗ ಭೀಮಸೇನರಾಯ ಅವರು ಕಟ್ಟಿದ ಕನ್ನಡ ಸಾಹಿತ್ಯ ಸಂಘ, ಕಲಬುರ್ಗಿ ಸಾಹಿತ್ಯ ಪರಿಷತ್ತು ಮೊದಲಾದ ಸಂಸ್ಥೆಗಳ ಮೂಲಕ ಸಭೆ-ಸಮಾವೇಶ-ಸಮ್ಮೇಳನಗಳನ್ನು ಆಯೋಜಿಸುವ ಮೂಲಕ ಕಲಬುರ್ಗಿ ಭಾಗದಲ್ಲಿ ಕನ್ನಡ ಭಾಷೆ ಸಂಸ್ಕೃತಿಯನ್ನು ಉಳಿಸುವ ಕಾರ್ಯ ಮಾಡಿದರು. ಕಲಬುರ್ಗಿಯಲ್ಲಿ ನಾಡಹಬ್ಬ ಕಾರ್ಯಕ್ರಮ ತುಂಬ ಅದ್ದೂರಿಯಿಂದ ಅರ್ಥಪೂರ್ಣವಾಗಿ ಜರುಗುತ್ತಿತ್ತು. ಈ ಕಾರ್ಯಕ್ರಮಗಳಿಗೆ ನಾಡಿನ ಪ್ರಖ್ಯಾತ ವಿದ್ವಾಂಸರು ಆಗಮಿಸುತ್ತಿದ್ದರು. ಒಂದು ಸಂದರ್ಭದಲ್ಲಿ ಒಮ್ಮೆ ನ್ಯಾಯಮೂರ್ತಿ ಟಿ.ಕೆ.ತುಕೋಳರು ಆಗಮಿಸಿ 'ವಚನಸಾಹಿತ್ಯ' ಕುರಿತು ಮಾರ್ಮಿಕವಾದ ಭಾಷಣ ಮಾಡಿದರು. ಅಲ್ಲಿಯವರೆಗೆ ಬಸವಣ್ಣನವರ ವಚನಗಳನ್ನು ಮಾತ್ರ ಓದಿದ್ದ ಪುರಾಣಿಕರು, ತುಕೋಳರ ಭಾಷಣ ಪ್ರಭಾವದಿಂದ ಉಳಿದೆಲ್ಲ ಶರಣರ ವಚನಗಳನ್ನು ಅಧ್ಯಯನ ಮಾಡಿದರು. ಹಾಗೆಯೇ ಖ್ಯಾತ ಕವಿ ಬೆಟಗೇರಿ ಕೃಷ್ಣಶರ್ಮರು ಒಮ್ಮೆ 'ಆಧುನಿಕ ಕನ್ನಡ ಕವಿತೆ' ಎಂಬ ವಿಷಯ ಕುರಿತು ನಾಡಹಬ್ಬ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಈ ಉಪನ್ಯಾಸದಿಂದ ಪುರಾಣಿಕರಿಗೆ ಹೊಸಗನ್ನಡ ಕವಿತೆಯ ಹೃದಯ ತಿಳಿಯುವಂತಾಯಿತು. ಆನಂದಕಂದರ ಕಂಠದ ಮಾರ್ದವ, ವಿಷಯ ನಿರೂಪಣ ಶೈಲಿ, ಪ್ರಗಾಢ ಪಾಂಡಿತ್ಯಗಳು ಪುರಾಣಿಕರನ್ನು ಮುಗ್ಧರನ್ನಾಗಿಸಿದವು. ಆಗ ಆನಂದಕಂದರು 'ಜಯಂತಿ' ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಪುರಾಣಿಕರು ಅವರನ್ನು ಪರಿಚಯ ಮಾಡಿಕೊಂಡರು. ಈ ಪರಿಚಯ ಮುಂದೆ ಪುರಾಣಿಕರ ಅನೇಕ ಕವನಗಳು ಜಯಂತಿ ಪತ್ರಿಕೆಯಲ್ಲಿ ಪ್ರಕಟವಾಗಲು ಸಹಾಯವಾಯಿತು.

ಕಾವ್ಯಾನಂದರು ಕನ್ನಡದಲ್ಲಿ ಕವನ ರಚನೆ ಪ್ರಾರಂಭಿಸಲು ಕಲಬುರ್ಗಿಯ ಕನ್ನಡ ಸ್ಪರ್ಧೆಯೊಂದು ಕಾರಣವಾದರೂ, ಅವರಿಗೆ ಕನ್ನಡ ಕವಿತೆಗಳ ಹುಚ್ಚು ಹಿಡಿಯಲು ಕವಿವರ ಕುವೆಂಪು ಅವರ ಕೊಳಲು ಕಾರಣವಾಯಿತು. ಕವಿಶ್ರೇಷ್ಠರಾದ ಗೋಕಾಕ-ಬೇಂದ್ರೆ-ಮುಗುಳಿ-ಮಾಸ್ತಿಯವರು ಇವರ ಕಾವ್ಯಾಭಿರುಚಿಯನ್ನು ರೂಪಿಸಲು ಕಾರಣರಾದರು. ಆದರೆ ಕಾವ್ಯಾನಂದರ ಕವನಗಳನ್ನು ತಿದ್ದಿ, ಅವುಗಳಿಗೊಂದು ಸ್ವರೂಪ ಕೊಟ್ಟು, ಜಯಂತಿ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಅವರಿಗೆ ಕವಿ ಎಂಬ ಖ್ಯಾತಿಯನ್ನು ತಂದುಕೊಟ್ಟವರು ಆನಂದಕಂದರು. ಕಾವ್ಯಾನಂದರ ಸುಪ್ರಸಿದ್ಧ ಕವಿತೆಗಳಾದ 'ಸಲಾಮ್ ಸಾಬ್', 'ಬೆಟ್ಟದುರಿ', 'ಭಾವ ಸುಂದರಿ', 'ಹೊಸ ಹೆಂಡತಿಗೆ', 'ಹೊಸ ಗಂಡನಿಗೆ', 'ಎರಡು ಚಿತ್ರಗಳು' ಮೊದಲಾದ ಕವನಗಳನ್ನು ಕವಿಭೂಷಣ ಬೆಟಗೇರಿ ಕೃಷ್ಣಶರ್ಮರು



ಅಲ್ಲಲ್ಲಿ ತಿದ್ದಿ, ಜಯಂತಿಯಲ್ಲಿ ಪ್ರಕಟಿಸಿ, ಕಾವ್ಯಾನಂದರಿಗೆ ಒಂದು ಅದ್ಭುತವಾದ ಪ್ಲಾಟ್‌ಫಾರ್ಮ ದೊರಕಿಸಿಕೊಟ್ಟರು.

ಮತ್ತೊಂದು ವರುಷದ ನಾಡಹಬ್ಬದ ಕಾರ್ಯಕ್ರಮಕ್ಕೆ ಕನ್ನಡದ ಆಚಾರ್ಯ ಪುರುಷ ಬಿ. ಎಂ. ಶ್ರೀ ಆಗಮಿಸಿ 'ಪಂಪ' ಮತ್ತು 'ಷೇಕ್ಸ್‌ಪಿಯರ್'ನ್ನು ಕುರಿತು ಎರಡು ವಿಶೇಷ ಉಪನ್ಯಾಸಗಳನ್ನು ಮಾಡಿದರು. ಶ್ರೀ ಅವರ ಭಾಷಣ ಕಲಬುರ್ಗಿಯ ಕನ್ನಡಿಗರಲ್ಲಿ ನವಚೈತನ್ಯ ತುಂಬಿತು. ಪಂಪನ ಬಗ್ಗೆ ಮೈನವಿರೆಬ್ಬಿಸುವ ಈ ಭಾಷಣ ಪುರಾಣಿಕರ ಮೇಲೆ ಅಚ್ಚಳಿಯದ ಪರಿಣಾಮ ಬೀರಿತು. ಈ ಭಾಷಣ ಕೇಳಿ ಪುರಾಣಿಕರ ಶ್ರೀಯವರ ವ್ಯಕ್ತಿತ್ವದ ಸೆಳೆತಕ್ಕೆ ಒಳಗಾದರು. ಬಿ.ಎಂ.ಶ್ರೀ ಅವರ ಭಾಷಣ ಕೇಳಿ ಮರಾಠಿ ಪ್ರಾಧ್ಯಾಪಕರು ತಲೆದೂಗಿದ್ದರು. ಹೀಗಾಗಿ ಸಹಜವಾಗಿಯೇ ಪುರಾಣಿಕರಿಗೆ ಬಿ.ಎಂ.ಶ್ರೀ ಅವರನ್ನು ಕಂಡು ಪರಮ ಸಂತೋಷವಾಗಿತ್ತು. ಪುರಾಣಿಕರು ಅವರನ್ನು ಮಾತನಾಡಿಸಿ, ಅವರಿಂದ ಕನ್ನಡ ದೀಕ್ಷೆ ಪಡೆದರು.

ಒಮ್ಮೆ ವ್ಯಾಸಂಗಪ್ರವಾಸಕ್ಕೆಂದು ವಿಜಯಪುರಕ್ಕೆ ಹೋಗಿದ್ದರು. ಎಲ್ಲ ವಿದ್ಯಾರ್ಥಿಗಳಿಗೆ ಗೋಲಗುಮ್ಮಟ ನೋಡುವ ಕಾತರ-ತವಕ. ಆದರೆ ಸಿದ್ಧಯ್ಯನವರಿಗೆ ವಚನಗುಮ್ಮಟ ನೋಡುವ ಮಹದಾಶೆ. ಉಪಲಿಬುರಜ ಹತ್ತಿರ ಸಣ್ಣ ಬಾಡಿಗೆ ಮನೆಯೊಂದರಲ್ಲಿ ಇದ್ದ ಡಾ. ಹಳಕಟ್ಟಿಯವರನ್ನು ಕಂಡು ನಮಿಸಿದರು. ಅವರೊಂದಿಗೆ ಕೆಲವು ಗಂಟೆಗಳ ಕಾಲ ಕುಳಿತು ಮಾತನಾಡಿದರು. ಡಾ. ಹಳಕಟ್ಟಿಯವರು ಕಲಬುರ್ಗಿ ಭಾಗದಲ್ಲಿ ಶರಣರ ಸ್ಮಾರಕಗಳು, ಶಾಸನಗಳು, ವಚನಗಳು ದೊರೆತರೆ 'ಶಿವಾನುಭವ' ಪತ್ರಿಕೆಗೆ ಕಳಿಸಿಕೊಡಬೇಕೆಂದು ಕೇಳಿಕೊಂಡರು. ಡಾ. ಹಳಕಟ್ಟಿಯವರು ನಂತರ ಉಸ್ಮಾನೀಯ ವಿಶ್ವವಿದ್ಯಾಲಯದ ಕುರಿತು ಕೆಲವು ವಿಷಯಗಳನ್ನು ಸಿದ್ಧಯ್ಯನವರಿಂದ ತಿಳಿದುಕೊಂಡರು. ಈ ಮಾತುಕತೆಯ ವಿವರವನ್ನು ಸಿದ್ಧಯ್ಯನವರು ತುಂಬ ರಸವತ್ತಾಗಿ ವಿವರಿಸುತ್ತಾರೆ:

'ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಉರ್ದೂ ಭಾಷೆಯನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಮಾಡಿದ್ದುದು ಡಾ. ಹಳಕಟ್ಟಿಯವರ ಆಸಕ್ತಿಯನ್ನು ಕೆರಳಿಸಿತ್ತು. ಆ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿ ನಮ್ಮಿಂದ ಉತ್ತರ ಪಡೆದರು. ಮುಖ್ಯವಾಗಿ ಪಠ್ಯಪುಸ್ತಕಗಳ ಬಗ್ಗೆ ಕೇಳಿದರು. ಎಲ್ಲ ವಿಷಯಗಳನ್ನು ಕುರಿತು ಸಮರ್ಪಕವಾದ ಪಠ್ಯಪುಸ್ತಕಗಳನ್ನು ಹೇಗೆ ಸಿದ್ಧಗೊಳಿಸಿದರು? ಇವುಗಳು ಇಂಗ್ಲಿಷ್ ಪಠ್ಯಪುಸ್ತಕಗಳಷ್ಟೇ ಚೆನ್ನಾಗಿವೆಯೇ? ವೈಜ್ಞಾನಿಕ ಸೂತ್ರಗಳನ್ನು ಉರ್ದೂ ಭಾಷೆಗೆ ಅನುವಾದಿಸಿದ್ದಾರೆಯೆ ಇಲ್ಲವೆ ಇದ್ದಕ್ಕಿದ್ದಂತೆ ಇರಿಸಿಕೊಂಡಿದ್ದಾರೆಯೆ? ಉದಾಹರಣೆಗೆ $H_2SO_4$ ಇದನ್ನು ಏನೆಂದು ಅನುವಾದಿಸಿಕೊಂಡಿದ್ದಾರೆ? ಇತ್ಯಾದಿ ಪ್ರಶ್ನೆಗಳನ್ನು ಕೇಳಿ ದಂಗಾಗಿಸಿದರು ನಮ್ಮನ್ನು. $H_2SO_4$ ಅನ್ನು ಅನುವಾದಿಸುವ ಗೊಡವೆಗೆ ಹೋಗಿಲ್ಲ; ನಾವೂ $H_2SO_4$ ಎಂದೇ ಬರೆಯುತ್ತೇವೆ-ಎಂದು ಹೇಳಿದೆ. ತತ್‌ಕ್ಷಣವೇ ಅವರು ಉದ್ಗರಿಸಿದರು: 'ಬಹಳ ಚೆನ್ನಾಗಿದೆ ಈ ಪದ್ಧತಿ. ನಾಳೆ ನಮ್ಮ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆ ಯಾದರೆ ಕನ್ನಡವನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದು ಸೂಕ್ತ. ಕನ್ನಡದಲ್ಲಿ ವಿಜ್ಞಾನ ವಿಷಯದ

ಪಠ್ಯಪುಸ್ತಗಳನ್ನು ರಚಿಸುವಾಗ ಈ ಪದ್ಧತಿ ನಮಗೆ ಸಹಾಯಕವಾಗುತ್ತದೆ. ಅಲ್ಪಸಂಖ್ಯಾತರ ಉರ್ದೂ ಭಾಷೆಯನ್ನು ಬಹುಸಂಖ್ಯಾತ ರಾದ ಹಿಂದೂಗಳ ಮೇಲೆ ಹೇರಿರುವ ಅನೌಚಿತ್ಯವೊಂದನ್ನುಳಿದರೆ ಉಸ್ಮಾನಿಯಾ ವಿಶ್ವವಿದ್ಯಾಲಯವು ಮಾಡಿದ ಈ ಪ್ರಯೋಗ ದಿಟ್ಟಪ್ರಯೋಗ. ಕರ್ನಾಟಕದ ಏಕೀಕರಣವಾದ ಮೇಲೆ ಕನ್ನಡ ಮಾಧ್ಯಮದ ವಿಶ್ವವಿದ್ಯಾಲಯ ಶಿಕ್ಷಣ ಸಾಧ್ಯವಾಗಿಯೇ ಆಗುತ್ತದೆ'.

ನಾನು ನಡುವೆ ಬಾಯಿ ಹಾಕಿ, 'ಕರ್ನಾಟಕ ಏಕೀಕರಣ ಒಂದಿಲ್ಲೊಂದು ದಿನ ಆಗಿಯೇ ತೀರುವುದೆಂದು ತಾವು ನಂಬಿರುವಿರಾ?' ಎಂದು ಕೇಳಿದೆ. 'ಬಾಪೂಜಿಯವರ ಜೀವಿತಾವಧಿಯಲ್ಲಿ ಭಾರತ ಸ್ವತಂತ್ರವಾಗಿಯೇ ತೀರುತ್ತದೆ; ಆಮೇಲೆ ಅವರದೇ ತತ್ವವಾದ ಭಾಷಾನುಗುಣ ಪ್ರಾಂತ್ಯ ರಚನೆ ಆಗಲೇಬೇಕು' ಎಂದು ನಿಶ್ಚಯದ ಸ್ವರದಲ್ಲಿ ಉತ್ತರವಿತ್ತರು. ಈ ಶರಣರು ಆಡಿದ ಮಾತು ಹುಸಿಯಾಗಲಿಕ್ಕಿಲ್ಲವೆಂದು ನಮಗೆಲ್ಲರಿಗೂ ಎನಿಸಿತು. 'ಗೋಲಗುಮ್ಮಟವನ್ನು ನೋಡಿದುದು ಎಷ್ಟು ಘನ ವಿಷಯವೋ, ಅದಕ್ಕೂ ಘನವಾದ ವಿಷಯ ನಾವು ಈ ಮಹಾನುಭಾವರನ್ನ ನೋಡಿದುದು' (ಕಾವ್ಯಾನಂದ ಪು. ೧೦೦)

ಇದು ೧೯೪೦ರ ಸುಮಾರು ನಡೆದ ಘಟನೆ. ಡಾ. ಹಳಕಟ್ಟಿಯವರು ಅಂದು ಆಡಿದ ನುಡಿಗಳು ಇಂದು ನಿಜವಾಗಿ ಪರಿಣಮಿಸಿವೆ. ಡಾ. ಹಳಕಟ್ಟಿಯವರಂಥ ಹಿರಿಯರನ್ನು ಭೇಟಿಯಾಗುತ್ತಲೇ ಸಿದ್ಧಯ್ಯನವರು ತಮ್ಮ ಜ್ಞಾನ-ಪಾಂಡಿತ್ಯದ ಗಾತ್ರವನ್ನು ಹಿಗ್ಗಿಸಿಕೊಳ್ಳುತ್ತ ನಡೆದರು. ಅಂತೆಯೇ ಡಾ. ಹಳಕಟ್ಟಿಯವರನ್ನು ಒಮ್ಮೆ ಕೊಪ್ಪಳಕ್ಕೆ ಕರೆಯಿಸಿ ಅವರ ನುಡಿಗಳು ಈ ಭಾಗದ ಜನರಿಗೂ ತಲುಪುವಂತೆ ಮಾಡಿದ್ದರು.

ಸಿದ್ಧಯ್ಯನವರು ಹೈದರಾಬಾದಿನಲ್ಲಿದ್ದಾಗ ಹಿರಿಯ ವಿದ್ವಾಂಸರಾದ ರಾಜರತ್ನಂ, ತೀ.ನಂ.ಶ್ರೀ ಮತ್ತು ಬಿ.ಎಂ.ಶ್ರೀ ಅವರನ್ನು ಕರೆಯಿಸಿ ಅವರಿಂದ ತಾವಿದ್ದ ಲಿಂಗಂಪಲ್ಲಿ ವಿದ್ಯಾರ್ಥಿ ನಿಲಯದಲ್ಲಿ ವಿಶೇಷ ಭಾಷಣ ಏರ್ಪಡಿಸಿದರು. ರಾಜರತ್ನಂ ಅವರು ಬಸವಣ್ಣನವರನ್ನು ಕುರಿತು ವಿಶೇಷ ಉಪನ್ಯಾಸ ನೀಡಿ, ಕೊನೆಯಲ್ಲಿ 'ಬಸವಣ್ಣನವರ ವಚನಗಳಲ್ಲಿ ಅಲ್ಲಲ್ಲಿ ಪರದೈವ ಪರಮತಗಳ ದೂಷಣೆ ನುಸುಳಿದೆ. ಅದೊಂದು ಇಲ್ಲದಿದ್ದರೆ ಇನ್ನೂ ಲೇಸಿತ್ತು' ಎಂದು ಹೇಳಿದರು. ಬುದ್ಧನ ಬಗ್ಗೆ ತೀವ್ರ ಅಭಿಮಾನ ಹೊಂದಿದ್ದ ರಾಜರತ್ನಂ ಸಹಜವಾಗಿಯೇ ಬಸವಣ್ಣನವರ ಈ ನ್ಯೂನ್ಯತೆಯನ್ನು ಪ್ರಸ್ತಾಪಿಸಿದ್ದರು. ಕೊನೆಯಲ್ಲಿ ವಂದನಾರ್ಪಣೆ ಮಾಡುತ್ತ ಪುರಾಣಿಕರು- 'ಬಸವಣ್ಣನವರ ವಚನಗಳಲ್ಲಿ ಅವರ ಬೆಳವಣಿಗೆಯ ಚಿತ್ರ ಸ್ಪಷ್ಟವಾಗಿ ಮೂಡಿ ನಿಂತಿರುವುದೇ ಆ ವಚನಗಳ ವೈಶಿಷ್ಟ್ಯ. ಸಿದ್ಧಾರ್ಥನಂತೆ ಬುದ್ಧನಾದ ಮೇಲೆಯೇ ಅವರು ತಮ್ಮ ಬೋಧೆಯನ್ನು ಬೀರಲಿಲ್ಲ: ತಮ್ಮ ಅರಕೆಗಳೊಡನೆ, ದೌರ್ಬಲ್ಯ ಗಳೊಡನೆ ಹೋರಾಡುತ್ತಲೇ ವಚನಗಳನ್ನು ಉಸಿರಿದರು. ಅಲ್ಲಿ ತಾರುಣ್ಯದ ಉದ್ರೇಕವೂ ಇದೆ, ಸಾಧಕನ ಹೋರಾಟ-ಹೊಯ್ದಾಟಗಳೂ ಇವೆ; ಸಿದ್ಧನ ವಿಶ್ವಕುಟುಂಬತ್ವವೂ ಇದೆ. ಅವರು ತಮ್ಮ ದೌರ್ಬಲ್ಯಗಳನ್ನು, ಕುಂದುಕೊರತೆಗಳನ್ನು ಮುಚ್ಚಿಡಬಹುದಾಗಿದ್ದಿತು; ಆದರೆ ಹಾಗೆ ಏನನ್ನೂ ಬಚ್ಚಿಡದೆ ಎಲ್ಲವನ್ನೂ ಬಿಚ್ಚಿಟ್ಟುದೇ ಬಸವಣ್ಣನವರ ಹಿರಿಮೆ, ಗರಿಮೆ' ಎಂದು ಹೇಳಿದರು.



ರಾಜರತ್ನಂ ಅವರು ಕುರ್ಚಿಯಿಂದ ಇಳಿದು ಬಂದು 'ಇಂದು ನನಗೆ ಈ ಕಿರಿಯ ಬಂಧು ಬಸವಣ್ಣನವರನ್ನು ನೋಡಬೇಕಾದ ನೈಜನೋಟವೊಂದನ್ನು ನೀಡಿದ್ದಾರೆ. ಹೈದರಾಬಾದಿನಲ್ಲಿ ನನ್ನ ಕೈ ಹಿಡಿಯುವರಾರು? ಎಂಬ ಬಿಮ್ಮಿನಿಂದ ಬಂದಿದ್ದೆ. ಈ ಬಂಧು ಅದನ್ನು ಕರಗಿಸಿ ಎಂಥವನಿಗೂ ಇನ್ನೂ ಕಲಿಯಬೇಕಾದುದು ಇದ್ದೇ ಇರುತ್ತದೆ ಎಂಬ ಸತ್ಯದ ಅರಿವನ್ನು ಮಾಡಿಕೊಟ್ಟಿದ್ದಾರೆ. ಅದನ್ನು ಹಿರಿಯರಿಂದಲೂ ಕಲಿಯಬಹುದು, ಕಿರಿಯರಿಂದಲೂ ಕಲಿಯಬಹುದು. 'ಅರುಹಿಂಗೆ ಹಿರಿದು ಕಿರಿದುಂಟೆ?' ಎಂಬ ಶರಣರ ವಾಣಿ ಸತ್ಯವಾದುದು. ಈ ಬಂಧು ಇನ್ನೂ ಬೆಳೆಯಲೆಂದು ಹರಸುತ್ತೇನೆ, ಹಾರೈಸುತ್ತೇನೆ' ಎಂದು ಹೇಳಿ ಪುರಾಣಿಕರನ್ನು ತಬ್ಬಿಕೊಂಡರು.

ಮತ್ತೊಬ್ಬ ವಿದ್ವಾಂಸರಾದ ತೀ.ನಂ.ಶ್ರೀ ಅವರು ಮುದ್ದಣ್ಣ ಬಗ್ಗೆ ಉಪನ್ಯಾಸ ನೀಡಿದರು. ಕೆಲವರು ಅವರನ್ನು ಪ್ರಶ್ನೆ ಕೇಳಿದರು. ಸಿದ್ಧಯ್ಯನವರು 'ಕರ್ನಾಟಕ ಏಕೀಕರಣ ನಮ್ಮ ಜೀವಮಾನದಲ್ಲಿಯೇ ಆಗಬಹುದೆ? ಸರ್, ನಮ್ಮ ಕಣ್ಣುಗಳಿಗೆ ಅದನ್ನು ನೋಡುವ ಪುಣ್ಯವಿದೆಯೆ?' ಎಂದು ಕೇಳಿದರು. ತಕ್ಷಣ ತೀ.ನಂ.ಶ್ರೀ ಉತ್ತರವಿತ್ತರು- 'ಏಕಿಲ್ಲ 'ಮಂಗಳೂರಿನ ಮಣ್ಣ ಹಣತೆಯನು ಹದಗೊಳಿಸಿ, ಮೈಸೂರ ಸಿರಿಗಂಧದೆಣ್ಣೆಯೆರೆದು, ರಾಯಚೂರಿನ ಹತ್ತಿಯಲಿ ಬತ್ತಿಯಣಿಗೊಳಿಸಿ, ಧಾರವಾಡದ ಕೆಚ್ಚುಕಡ್ಡಿ ಕೊರೆದು, ಕನ್ನಡದ ಹೊಂದೀವಿಗೆಯ ಹಚ್ಚಲಿನ್ನೊಮ್ಮೆ ಬಸವ ವಿದ್ಯಾರಣ್ಯ ಹುಟ್ಟಿ ಬರಲು' ಎಂದು ಹಾಡಿದ ಕವಿ ಹುಟ್ಟಿದ ಮೇಲೆ ಕನ್ನಡದ ದೀಪ ಹೊತ್ತದಿರುತ್ತದೆಯೇ?'

ತೀ.ನಂ.ಶ್ರೀ ಅವರ ಮಾತು ಕೇಳಿ ಸಿದ್ಧಯ್ಯನವರು ಸೋಜಿಗಗೊಂಡರು. ಯಾಕೆಂದರೆ ಮೇಲೆ ಹೇಳಿದ ನುಡಿಗಳು ಸಿದ್ಧಯ್ಯನವರು ಜಯಂತಿ ಪತ್ರಿಕೆಯಲ್ಲಿ ಪ್ರಕಟಿಸಿದ 'ಕನ್ನಡದ ದೀಪ' ಎಂಬ ಕವನದ ಮೊದಲ ನುಡಿಗಳು. ಸಿದ್ಧಯ್ಯನವರ ಕವನಗಳನ್ನು ತೀ.ನ.ಶ್ರೀ ಅವರಂಥ ಹಿರಿಯ ವಿದ್ವಾಂಸರು ಓದಿ, ನೆನಪಿಟ್ಟುಕೊಂಡ ಸಂಗತಿ ಸಣ್ಣ ವಿಷಯವನೇಲ್ಲ. ಇದು ಡಾ. ಪುರಾಣಿಕರ ಕಾವ್ಯಶಕ್ತಿಗೆ ಹಿಡಿದ ಕನ್ನಡಿ ಎನ್ನಬೇಕು.

೧೯೨೮ರಲ್ಲಿ ಕಲಬುರ್ಗಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಸಮ್ಮೇಳನದ ಅಧ್ಯಕ್ಷರಾದವರು ಬಿ.ಎಂ.ಶ್ರೀ ಅವರು. ತಂದೆ ಕಲ್ಲಿನಾಥ ಶಾಸ್ತ್ರಿಗಳೊಂದಿಗೆ ಈ ಸಮ್ಮೇಳನಕ್ಕೆ ಹೋಗಿ ಬಂದ ಸಿದ್ಧಯ್ಯನವರಿಗೆ ಬಿ.ಎಂ.ಶ್ರೀ ಅವರ ಬಗ್ಗೆ ಅಪಾರ ಅಭಿಮಾನ. ಹೈದರಾಬಾದಿನಲ್ಲಿ ಅಧ್ಯಯನ ಮಾಡುವ ಕಾಲಕ್ಕೆ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಗುರುಗಳಾದ ಭೀಮಸೇನರಾಯರು 'ಕರ್ನಾಟಕ ಸಂಘ'ವನ್ನು ಅಸ್ತಿತ್ವಕ್ಕೆ ತಂದರು. ಈ ಸಮಾರಂಭದಲ್ಲಿ ಸ್ವಾಗತ ಭಾಷಣ ಮಾಡುವ ಅವಕಾಶ ಸಿದ್ಧಯ್ಯನವರಿಗೆ ದೊರೆಯಿತು. ಸ್ವಾಗತ ಭಾಷಣದಲ್ಲಿ ಸಿದ್ಧಯ್ಯನವರು- 'ಮಾಸ್ತಿಯವರು ಈ ಸಾಹಿತ್ಯಾಚಾರ್ಯರನ್ನು ಕನ್ನಡದ ಕಣ್ವಮುನಿಯೆಂದು ಕರೆದಿದ್ದಾರೆ. ಇದು ಅತ್ಯಂತ ಸಾರ್ಥಕವಾದ ಉಪಮೆ. ಪರಿತ್ಯಕ್ತ ಶಕುಂತಲೆಯನ್ನು ಆ ಕಣ್ವಋಷಿ ಸಾಕಿ ಬೆಳೆಸಿದಂತೆ ಅಲಕ್ಷಿತ ಕನ್ನಡ ಶಕುಂತಲೆಯನ್ನು ಈ ಕಣ್ವಋಷಿಗಳು ಸಾಕಿ

ಬೆಳೆಸುತ್ತಿದ್ದಾರೆ' ಎಂದರು ಹೇಳಿದರು. ಸಿದ್ಧಯ್ಯನವರ ವಾಕ್ಚಾತುರ್ಯಕ್ಕೆ ಬಿ.ಎಂ.ಶ್ರೀ ಮಾರುಹೋದರು. ಕಾರ್ಯಕ್ರಮ ಮುಗಿದ ನಂತರ ಸಿದ್ಧಯ್ಯನವರು ಅವರನ್ನು ಲಿಂಗಂಪಲ್ಲಿ ವಿದ್ಯಾರ್ಥಿ ನಿಲಯಕ್ಕೆ ಕರೆದುಕೊಂಡು ಹೋದರು. ಅಲ್ಲಿ ಬಿ.ಎಂ.ಶ್ರೀ ಅವರು ಬಸವಣ್ಣನವರ ಕುರಿತು ಮಾರ್ಮಿಕವಾಗಿ ಮಾತನಾಡಿದರು. ಬಿ.ಎಂ.ಶ್ರೀ ತಮ್ಮ ಮಾತಿನ ಕೊನೆಯಲ್ಲಿ – 'ಬಸವಣ್ಣ ಇದೆಲ್ಲವನ್ನೂ ಮಾಡಿದುದರಲ್ಲಿ ಆಶ್ಚರ್ಯವೇನಿಲ್ಲ–ಅವನ ರಕ್ತ ಯಾರದು?' ಎಂದು ನುಡಿದರು. ವಂದನಾರ್ಪಣೆ ಮಾಡಿದ ಸಿದ್ಧಯ್ಯನವರು ಈ ಮಾತಿಗೆ ಸರಿಯಾದ ಉತ್ತರ ಕೊಟ್ಟರು. 'ಬಸವಣ್ಣನ ರಕ್ತದ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವವರು ಬಸವತತ್ತ್ವಗಳನ್ನು ಅಂಗೀಕರಿಸಿ ಬಿಡಲಿ; ಆಗ ಭಾರತದಲ್ಲೆಲ್ಲ ನಾವು ಕಾಣಬಯಸಿರುವ ಕ್ರಾಂತಿ ಮೂಡುವುದು!' ಈ ನುಡಿಗಳನ್ನು ಬಿ.ಎಂ.ಶ್ರೀ ಹಾರ್ದಿಕವಾಗಿ ಒಪ್ಪಿದರು.

೧೯೪೦ರಲ್ಲಿ ಧಾರವಾಡದಲ್ಲಿ ೨೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಈ ಸಮ್ಮೇಳನಕ್ಕೆ ಸರ್ವಾಧ್ಯಕ್ಷರಾದವರು ಹೊಳಲ ಚಂದ್ರಶೇಖರ ಶಾಸ್ತ್ರಿಗಳು. ಸ್ವಾಗತಾಧ್ಯಕ್ಷರು ಎಸ್.ಎಸ್. ಬಸವನಾಳರು. ಕವಿಗೋಷ್ಠಿಯ ಅಧ್ಯಕ್ಷರಾದವರು ಕೆ.ವಿ.ಪುಟ್ಟಪ್ಪ (ಕುವೆಂಪು). ಈ ಸಮ್ಮೇಳನವನ್ನು ನೋಡಬೇಕೆಂದು ಸಿದ್ಧಯ್ಯನವರು ಧಾರವಾಡಕ್ಕೆ ಆಗಮಿಸಿದರು. ಈ ಸಮ್ಮೇಳನದಲ್ಲಿ ಕುವೆಂಪು ಅವರನ್ನು ಮೊದಲ ಸಲ ನೋಡಿ ಭಾವುಕರಾದರು. ಮಹಾಕವಿಯನ್ನು ನೋಡಿದ ಧನ್ಯತೆಯನ್ನು ಕಂಡರು. ಬೇಂದ್ರೆ, ಬಸವನಾಳ, ಎಸ್. ವಿ. ರಂಗಣ್ಣ, ಮುದವೀಡು ಕೃಷ್ಣರಾಯರು, ವಿ.ಕೆ.ಗೋಕಾಕ, ಮಾಸ್ತಿ ಮೊದಲಾದ ಸಾಹಿತ್ಯಲೋಕದ ಘಟಾನುಘಟಿಗಳನ್ನು ಭೇಟಿಯಾದರು.

ಸಾಯಂಕಾಲ ಮುರುಘಾಮಠಕ್ಕೆ ಹೋದರು. ಅಲ್ಲಿ ಕುವೆಂಪು ಮೃತ್ಯುಂಜಯ ಅಪ್ಪಗಳ ಸಾನಿಧ್ಯದಲ್ಲಿ ಕವನಗಳನ್ನು ಓದುತ್ತಿದ್ದರು. ನಾಗಭೂಷಣ ಶಾಸ್ತ್ರಿಗಳು ಕುವೆಂಪು ಅವರಿಗೆ ಸಿದ್ಧಯ್ಯನವರನ್ನು ಮತ್ತು ಅವರ ಅಜ್ಜಂದಿರಾದ ಚೆನ್ನಕವಿಗಳನ್ನು ಪರಿಚಯ ಮಾಡಿಕೊಟ್ಟರು. ಚೆನ್ನಕವಿಗಳನ್ನು ಕಂಡ ಕುವೆಂಪು ಅವರಿಗೆ ತುಂಬ ಸಂತೋಷವಾಯಿತು. ಇಬ್ಬರೂ ಮಹಾಕವಿಗಳ ಸಂಗಮವಾಗಿತ್ತು. ಇದನ್ನು ನೋಡಿ ಸಿದ್ಧಯ್ಯನವರು ಭಾವಪರವಶರಾದರು.

೧೯೪೧ರಲ್ಲಿ ೨೬ನೇ ಕನ್ನಡ ಸಾಹಿತ್ಯ ಸಮ್ಮೇಳನ ಹೈದರಾಬಾದಿನಲ್ಲಿ ಜರುಗಿತು. ಈ ಸಮ್ಮೇಳನಕ್ಕೆ ಅಧ್ಯಕ್ಷರಾದವರು ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳು. ಈ ಸಮ್ಮೇಳನದ ಕವಿಗೋಷ್ಠಿಯಲ್ಲಿ ಮೊದಲ ಬಾರಿಗೆ ಸಿದ್ಧಯ್ಯನವರು 'ಎರಡು ಚಿತ್ರಗಳು', 'ಮನ್ನಿಸೆನ್ನನು ಚೆನ್ನೆ' ಎಂಬ ಎರಡು ಕವನಗಳನ್ನು ವಾಚನ ಮಾಡಿದರು. ಬೇಂದ್ರೆ, ಗೋಕಾಕ, ಮಾಸ್ತಿ ಅವರಂಥ ಹಿರಿಯ ವಿದ್ವಾಂಸರಿದ್ದ ಈ ಸಭೆಯಲ್ಲಿ ಸಿದ್ಧಯ್ಯನವರು ಮೊಟ್ಟಮೊದಲ ಬಾರಿಗೆ ಅಖಿಲ ಭಾರತ ಮಟ್ಟದ ಸಮ್ಮೇಳನ ವೇದಿಕೆಯಲ್ಲಿ ಕವನ ವಾಚನ ಮಾಡಿದರು. ಸಭಿಕರು ನಿರೀಕ್ಷೆಗೂ ಮೀರಿ ಚಪ್ಪಳೆ ಬಡಿದರು. ಬೇಂದ್ರೆ, ಗೋಕಾಕರು ಆನಂದದಿಂದ ಸಿದ್ಧಯ್ಯನವರನ್ನು ಆಲಂಗಿಸಿದರು. ಮಾಸ್ತಿಯವರಂತೂ ವೇದಿಕೆಯಿಂದ ಹೊರಗೆ ಕರೆದುಕೊಂಡು ಹೋಗಿ ಮತ್ತೆ ಮತ್ತೆ ಕವನಗಳನ್ನು ಓದಿಸಿದರು. ಒಂದೆರಡು ಸಣ್ಣ



ಪುಟ್ಟ ತಿದ್ದುಪಡಿಗಳನ್ನು ಮಾಡಿದರು. 'ಬಹಳ ಚೆನ್ನಾಗಿ ಬರೆಯುತ್ತೀಯಪ್ಪ; ಬರೆಯುವುದನ್ನು ಬಿಡಬೇಡ; ಮುಂದುವರಿಸು; ನೀನು ಒಳ್ಳೆಯ ಕವಿಯಾಗುವಿ' ಎಂದು ಹರಸಿದರು.

ಹೀಗೆ ಡಾ. ಪುರಾಣಿಕರು ಕನ್ನಡ ಸಮ್ಮೇಳನ–ಸಮಾವೇಶ–ನಾಡಹಬ್ಬ ಯಾವುದೇ ಕಾರ್ಯಕ್ರಮವಿರಲಿ, ಅಲ್ಲಿ ಭಾಗವಹಿಸುತ್ತಿದ್ದರು. ಕಲಬುರ್ಗಿ ಜಿಲ್ಲೆಯಲ್ಲಂತೂ ಅವರಿಲ್ಲದೆ ಯಾವುದೇ ಕಾರ್ಯಕ್ರಮಗಳಾಗುತ್ತಿರಲಿಲ್ಲ. ಶಾಲೆ–ಕಾಲೇಜುಗಳ ವಾರ್ಷಿಕೋತ್ಸವ–ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕನ್ನಡ ನಾಡು–ನುಡಿಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿದ್ದರು. ಉರ್ದು–ಮರಾಠಿ ಆವೃತ್ತವಾಗಿದ್ದ ಕನ್ನಡದ ಪ್ರದೇಶಗಳಲ್ಲಿ ಕನ್ನಡ ಭಾಷೆಯ ಕುರಿತು ನಿರಂತರ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡುತ್ತ ಬಂದರು.

೧೯೪೯ರಲ್ಲಿ ಕಲಬುರ್ಗಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯವನ್ನು ಜರುಗಿಸಬೇಕೆಂದು, ಈ ಸಮ್ಮೇಳನದ ಸಂಪೂರ್ಣ ಜವಾಬ್ದಾರಿ ನಿಮ್ಮದೇ ಎಂದು ಪರಿಷತ್ತಿನ ಕಾರ್ಯದರ್ಶಿಯಾಗಿದ್ದ ಎಲ್.ಎಸ್. ಶೇಷಗಿರಿ ರಾಯರು ಡಾ. ಪುರಾಣಿಕರಿಗೆ ಪತ್ರ ಬರೆದರು. ಕಲಬುರ್ಗಿಯಿಂದ ಪದೋನ್ನತಿ ಪಡೆದು, ಹೈದರಬಾದಿಗೆ ಹೋಗಬೇಕೆಂದು ನಿರ್ಧರಿಸಿದ ಪುರಾಣಿಕರಿಗೆ ಇದು ಅನಿರೀಕ್ಷಿತ ಆಹ್ವಾನ. ಕಲಬುರ್ಗಿಯ ಹಿರಿಯ ಮುಖಂಡರಾದ ಶರಣಗೌಡ, ಮಹಾದೇವಪ್ಪ ರಾಂಪುರೆ, ಅವರಾದಿ ದತ್ತಾತ್ರೇಯ, ಗುರುಗಳಾದ ಭೀಮಸೇನರಾಯ, ಕಪಟರಾಳ ಕೃಷ್ಣರಾಯ ಮೊದಲಾದ ಹಿರಿಯರನ್ನು ಭೇಟಿಯಾದರು. ಎಲ್ಲರೂ ಒಮ್ಮತದಿಂದ ಸಮ್ಮೇಳನ ಮಾಡಲು ಒಪ್ಪಿಗೆ ನೀಡಿದರು. ಈ ಸಮ್ಮೇಳನದ ಜೊತೆಗೆ ಕರ್ನಾಟಕ ಏಕೀಕರಣ ಸಮ್ಮೇಳನವನ್ನೂ ನಡೆಸಬೇಕೆಂದು ಹಿರಿಯರು ನಿರ್ಧರಿಸಿದರು. ಡಾ. ಪುರಾಣಿಕರೇ ಈ ಸಮ್ಮೇಳನದ ಸ್ವಾಗತಾಧ್ಯಕ್ಷರಾದರು.

ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಯಾರನ್ನು ಆಯ್ಕೆ ಮಾಡಬೇಕೆಂದು ಚರ್ಚೆ ನಡೆಯಿತು. ಕೊನೆಗೆ ಉತ್ತಂಗಿ ಚೆನ್ನಪ್ಪನವರ ಹೆಸರು ಸೂಚಿತವಾಯಿತು. ಆದರೆ ಕಪಟರಾಳ ಕೃಷ್ಣರಾಯರು ಉತ್ತಂಗಿಯವರ ಬದಲಾಗಿ ಡಾ. ನಂದೀಮಠರ ಹೆಸರು ಸೂಚಿಸಿದರು. ಕಪಟರಾಳ ಕೃಷ್ಣರಾಯರು ಅನುಭವ ಮಂಟಪದ ಅಸ್ತಿತ್ವವನ್ನು ಅಲ್ಲಗಳೆದ ಸಂದರ್ಭದಲ್ಲಿ ಉತ್ತಂಗಿಯವರು 'ಅನುಭವಮಂಟಪದ ಐತಿಹಾಸಿಕತೆ' ಎಂಬ ಕೃತಿಯನ್ನು ಬರೆಯುವ ಮೂಲಕ ಅವರ ಸಂದೇಹಕ್ಕೆ ಉತ್ತರ ನೀಡಿದ್ದರು. ಈ ಕಾರಣದಿಂದ ಕಪಟರಾಳರು ತಮ್ಮ ಕಪಟ ಬುದ್ಧಿ ತೋರಿ ನಂದೀಮಠರ ಹೆಸರನ್ನು ಸೂಚಿಸಿದರು. ಪರಿಷತ್ತಿನ ಅಧ್ಯಕ್ಷರಾಗಿದ್ದ ತಿ.ತಾ.ಶರ್ಮರೂ ಅವರ ಮಾತಿಗೆ ಗೌರವ ಕೊಟ್ಟು ನಂದೀಮಠರ ಹೆಸರನ್ನು ಒಪ್ಪಿದರು.

ತಿ.ತಾ.ಶರ್ಮ ಮತ್ತು ಪುರಾಣಿಕರು ಕೂಡಿ ಬಾಗಲಕೋಟೆಗೆ ಬಂದು ನಂದೀಮಠರನ್ನು ಭೇಟಿಯಾದರು. ಅಧ್ಯಕ್ಷರಾಗಬೇಕೆಂದು ವಿನಂತಿಸಿದರು. ಆಗ ನಂದೀಮಠರು 'ಉತ್ತಂಗಿಯವರನ್ನೇ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರಿ. ಅವರು ನನಗಿಂತಲೂ ವಯಸ್ಸಿನಲ್ಲಿ ವಿದ್ವತ್ತಿನಲ್ಲಿ ದೊಡ್ಡವರು' ಎಂದು ವಿನಯಪೂರ್ವಕವಾಗಿ

ಹೇಳಿದರು. ಈ ಹಿಂದೆ ಬನಹಟ್ಟಿಯಲ್ಲಿ ಜರುಗಿದ ೨೮ನೇ ಸಮ್ಮೇಳನಕ್ಕೂ ಅವರ ಹೆಸರು ಬಂದಿತ್ತು. ಆಗ ಹಿರಿಯರಾಗಿದ್ದ ಶಿ.ಶಿ.ಬಸವನಾಳರಿಗೆ ಈ ಸ್ಥಾನವನ್ನು ನಂದೀಮಠರು ಬಿಟ್ಟುಕೊಟ್ಟಿದ್ದರು. ಈಗ ಎರಡನೆಯ ಸಲವೂ ಅವರು ಬಿಟ್ಟುಕೊಟ್ಟರು. ಕೊನೆಗೆ ಉತ್ತಂಗಿಯವರ ಹೆಸರೇ ಅಂತಿಮವಾಗಿ, ಕಲಬುರ್ಗಿ ಶರಣಬಸವೇಶ್ವರ ದೇವಾಲಯದ ಆವರಣದಲ್ಲಿ ಭವ್ಯವಾದ ಮಂಟಪ ನಿರ್ಮಾಣವಾಗಿ, ಸಮ್ಮೇಳನ ಅತ್ಯಂತ ಅದ್ದೂರಿಯಿಂದ-ವಿಜೃಂಭಣೆಯಿಂದ ಜರುಗಿತು. ಉತ್ತಂಗಿಯವರು ಆರ್ಯ-ದ್ರಾವಿಡ ಸಂಸ್ಕೃತಿಗಳ ಸಂಗಮ ಕುರಿತು ಐತಿಹಾಸಿಕ ಭಾಷಣ ಮಾಡಿದರು. ಇದೇ ವೇದಿಕೆ ಮೇಲೆ ಏಕೀಕರಣ ಸಮ್ಮೇಳನ ಜರುಗಿತು. ಎಸ್. ನಿಜಲಿಂಗಪ್ಪ, ಟಿ. ಸುಬ್ರಹ್ಮಣ್ಯಂ, ಜಿನರಾಜ ಹೆಗಡೆ ಮೊದಲಾದ ಏಕೀಕರಣ ರೂವಾರಿಗಳು ಭಾಗವಹಿಸಿದರು. ಕೋ.ಚನ್ನಬಸಪ್ಪ, ಪಾಟೀಲ ಪುಟ್ಟಪ್ಪನವರು ಮೈಸೂರು ಸಂಸ್ಥಾನದ ವಿಲಯನದ ಗೊತ್ತುವಳಿ ತರಬೇಕೆಂದು ಈ ಸಮ್ಮೇಳನದಲ್ಲಿ ಪ್ರತಿಪಾದಿಸಿದರು. ಒಟ್ಟಾರೆ ಡಾ. ಪುರಾಣಿಕರ ಹಗಲು-ರಾತ್ರಿಯ ದುಡಿಮೆ ಸಾರ್ಥಕವಾಗಿತ್ತು. ಸಮ್ಮೇಳನ ರಾಷ್ಟ್ರಸಭೆಯ ಅಧಿವೇಶನದ ಮಾದರಿಯಲ್ಲಿ ಜರುಗಿತ್ತೆಂದು ನಾಡಜನತೆ ಭಾವಿಸಿತು.

ಈ ಸಮ್ಮೇಳನ ಇನ್ನೂ ಎರಡು ವಾರ ಇರುವಾಗಲೇ ಮಹಾಗಾಂವದ ಚಂದ್ರಶೇಖರ ಪಾಟೀಲರು ಪುರಾಣಿಕರನ್ನು ಭೇಟಿಯಾದರು. ಕಲ್ಯಾಣದಲ್ಲಿ ಏನಾದರು ಮಾಡೋಣ ಎಂದರು. ಆಗ ಪುರಾಣಿಕರು ಅವರಿಗೆ, **'ಹಂಪಿಯಲ್ಲಿ ಈ ಹಿಂದೆ 'ವಿಜಯನಗರ ಸ್ಮಾರಕೋತ್ಸವ' ಜರುಗಿದಂತೆ, 'ಕಲ್ಯಾಣ ಸ್ಮಾರಕೋತ್ಸವ' ಯಾಕೆ ಜರುಗಿಸಬಾರದು?'** ಎಂದು ಸಲಹೆ ಕೊಟ್ಟರು. ಸಮ್ಮೇಳನಕ್ಕೆ ಬಂದಿದ್ದ ಗಣ್ಯರೆಲ್ಲ ಕಲ್ಯಾಣಕ್ಕೆ ಬಂದರು. ಶರಣರ ಕ್ರಾಂತಿಯ ಸ್ಮಾರಕೋತ್ಸವ ಅತ್ಯಂತ ವಿಧಾಯಕವಾಗಿ ಜರುಗಿತು.

ಡಾ. ಪುರಾಣಿಕರ ದಣಿವರಿಯದ ದುಡಿಮೆ ಕಾರಣವಾಗಿ ಸಾಹಿತ್ಯ ಸಮ್ಮೇಳನ, ಏಕೀಕರಣ ಸಮ್ಮೇಳನ, ಕಲ್ಯಾಣ ಸ್ಮಾರಕೋತ್ಸವ ಈ ಮೂರೂ ಮಹತ್ವದ ಕಾರ್ಯಕ್ರಮಗಳು ಒಂದೇ ವಾರದಲ್ಲಿ ಜರುಗಿದವು.

ನಂತರ ಡಾ. ಪುರಾಣಿಕರು ಹೈದರಾಬಾದಿಗೆ ವರ್ಗಾವಣೆಯಾದರು. ಅಲ್ಲಿಯೂ ತಮ್ಮ ಗುರುಗಳಾದ ಭೀಮಸೇನರಾಯರೊಂದಿಗೆ ಕನ್ನಡ ಕಟ್ಟುವ ಕೆಲಸವನ್ನು ಸದ್ದಿಲ್ಲದೆ ಮಾಡಿದರು. ನಾಡಹಬ್ಬ ಕಾರ್ಯಕ್ರಮವನ್ನು ಅಲ್ಲಿಯೂ ವಿಜೃಂಭಣೆಯಿಂದ ಆಚರಿಸತೊಡಗಿದರು.

ಒಮ್ಮೆ ಕರ್ನಾಟಕಾಂಧ್ರ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಿದರು. ಈ ಸಮ್ಮೇಳನದ ಉದ್ಘಾಟನೆಗೆ ಮುಖ್ಯಮಂತ್ರಿ ಬಿ. ರಾಮಕೃಷ್ಣರಾಯರನ್ನು ಆಹ್ವಾನಿಸಿದ್ದರು. ಈ ಸಮ್ಮೇಳನದ ಯಶಸ್ವಿಯ ನಂತರ 'ಕರ್ನಾಟಕಾಂಧ್ರ ಕವಿಸಮ್ಮೇಳನ'ವನ್ನೂ ಆಯೋಜಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಇನ್ನೂ ಜಿಲ್ಲಾ ತಾಲೂಕು ಘಟಕಗಳನ್ನು ಅಸ್ತಿತ್ವಕ್ಕೆ ತರುವ ಮೊದಲೇ ಡಾ. ಪುರಾಣಿಕರು ಅನೇಕ ತಾಲೂಕು-ಪ್ರಾದೇಶಿಕ ಸಾಹಿತ್ಯ



ಸಮ್ಮೇಳನಗಳನ್ನು ಆಯೋಜಿಸಿದರು. ಹೈದರಾಬಾದ ಪ್ರದೇಶದ ಶಹಾಪುರ ತಾಲೂಕಿನ ಯಾಳಗಿ ಗ್ರಾಮದಲ್ಲಿ ಒಮ್ಮೆ ಮೂರನೆಯ ಹೈದರಾಬಾದು ಪ್ರಾದೇಶ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಿದರು.

ಮಹಾರಾಷ್ಟ್ರಕ್ಕೆ ಸೇರಿದ ನಾಂದೇಡ ಜಿಲೆಯ ದೇಗುಲೂರು ತಾಲೂಕಿನಲ್ಲಿ ೧೯೫೫ರಲ್ಲಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜರುಗಿಸಿದ ಶ್ರೇಯಸ್ಸು ಡಾ. ಪುರಾಣಿಕ ಅವರದು. ಈ ಸಮ್ಮೇಳನವನ್ನು ಉದ್ಘಾಟಿಸಲು ಎಸ್. ನಿಜಲಿಂಗಪ್ಪ ಆಗಮಿಸಿದ್ದರು. ವಿದ್ವಾನ್ ನರಸಿಂಗರಾವ್ ಮಾನ್ವಿ ಅವರು ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು.

ಹೈದರಾಬಾದಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಕನ್ನಡಿಗರು ಅಸ್ತಿತ್ವಕ್ಕೆ ತಂದರು. ಸಿದ್ಧಯ್ಯ ಪುರಾಣಿಕರನ್ನೇ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು. ಹೈದರಾಬಾದನಂಥ ನಗರ ಪ್ರದೇಶದಲ್ಲಿ ಪರಿಷತ್ತಿಗೆ ಕಟ್ಟಡವೊಂದನ್ನು ಹುಡುಕುವುದು ತುಂಬ ಪ್ರಯಾಸದ ಕೆಲಸವಾಗಿತ್ತು. ಹೀಗಾಗಿ ಡಾ. ಪುರಾಣಿಕರು ತಮ್ಮ ಮನೆಯನ್ನೇ ಕಾರ್ಯಾಲಯ ವನ್ನಾಗಿ ಮಾಡಿದರು. ಕಾರ್ಯದರ್ಶಿಯಾಗಿದ್ದ ವೀರೇಶ್ವರ ಶಾಸ್ತ್ರಿಗಳು ಯಾದಗಿರಿ ಯಲ್ಲಿದ್ದರು. ಹೀಗಾಗಿ ಪತ್ರಗಳನ್ನು ಬರೆಯುವುದು, ಅವುಗಳಿಗೆ ಅಂಚೆ ಚೀಟಿ ಹಚ್ಚಿ ಪೋಸ್ಟ್ ಮಾಡುವುದು ಹೀಗೆ ಎಲ್ಲ ಕೆಲಸಗಳನ್ನು ಡಾ. ಪುರಾಣಿಕರೇ ಮಾಡುತ್ತಿದ್ದರು. ಸರಕಾರದಿಂದ ಅನುದಾನ ಪಡೆದು, ಅದರ ಲೆಕ್ಕಪತ್ರಗಳನ್ನು ಸರಿಯಾಗಿ ನೀಡಿ, ಮತ್ತೆ ಅನುದಾನಕ್ಕೆ ಅರ್ಜಿ ಹಾಕುವುದು, ನಾಡ ಹಬ್ಬ ಕಾರ್ಯಕ್ರಮ ವನ್ನು ಅತ್ಯಂತ ಅದ್ದೂರಿಯಿಂದ ಆಚರಿಸುವುದು, ಮೊದಲಾದ ಕೆಲಸ ಕಾರ್ಯಗಳನ್ನು ಅತ್ಯಂತ ಶ್ರದ್ಧೆ-ಗೌರವಗಳಿಂದ ಡಾ. ಪುರಾಣಿಕರು ಮಾಡುತ್ತಿದ್ದರು. ಆ ಪ್ರದೇಶದಲ್ಲಿ ಕನ್ನಡ ಶಾಲೆಗಳ ಅಭಿವೃದ್ಧಿಗೆ ಒತ್ತು ನೀಡುವ ಕಾರ್ಯವನ್ನು ಮಾಡಿದರು. ನಾಡಹಬ್ಬಕ್ಕೆ ಕೆ. ಹನುಮಂತಯ್ಯ, ಬಿ.ಎನ್.ದಾತಾರ, ಎಸ್. ನಿಜಲಿಂಗಪ್ಪ, ಹಳ್ಳಿಕೇರಿ ಗುದ್ಲೆಪ್ಪ ಮೊದಲಾದ ರಾಜಕೀಯ ಮುತ್ಸದ್ಧಿಗಳನ್ನುಕರೆಸಿ ಭಾಷಣ ಸಮಾರಂಭ ಏರ್ಪಡಿಸಿದರು. ೧೯೫೪ರಲ್ಲಿ ಹೈದರಾಬಾದಿನ ವಿದ್ಯಾವರ್ಧಕ ಹಾಸ್ಟೆಲಿನಲ್ಲಿ ಎ.ಎನ್. ಮೂರ್ತಿರಾಯ, ವೀ.ಸೀತಾರಾಮಯ್ಯ ಮೊದಲಾದವರು ಬಂದು ಭಾಷಣ ಮಾಡಿದರು.

೧೯೫೫ರಲ್ಲಿ ಮೈಸೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಈ ಸಮ್ಮೇಳನಕ್ಕೆ ಸರ್ವಾಧ್ಯಕ್ಷರಾದವರು ಶಿವರಾಮ ಕಾರಂತರು. ಈ ಸಮ್ಮೇಳನದಲ್ಲಿ ಲೇಖಕರ ಗೋಷ್ಠಿಯ ಅಧ್ಯಕ್ಷ ಸ್ಥಾನ ಡಾ. ಪುರಾಣಿಕರ ಪಾಲಿಗೆ ಬಂದಿತು. ಕುವೆಂಪು, ದೇಜಗೌ, ಹಾ.ಮಾ.ನಾಯಕ ಮೊದಲಾದವರ ಸ್ನೇಹ ಸಂಪಾದಿಸಿದ್ದ ಡಾ. ಪುರಾಣಿಕರು ಮೈಸೂರಿಗೆ ಹೋಗಿ ಅದ್ಭುತವಾದ ಭಾಷಣ ಮಾಡಿದರು. ನಂತರ ಮೈಸೂರು, ಶ್ರವಣಬೆಳಗೊಳ, ಬೇಲೂರು, ಹಳೇಬೀಡು ಮೊದಲಾದ ಐತಿಹಾಸಿಕ ಕ್ಷೇತ್ರಗಳ ಪ್ರವಾಸ ಮಾಡಿ ಬಂದರು.

೧೯೫೬ರಲ್ಲಿ ಮೊಟ್ಟ ಮೊದಲ ಏಕೀಕೃತ ಕರ್ನಾಟಕದಲ್ಲಿ ಮೈಸೂರು ದಸರಾ ಅತ್ಯಂತ ಅದ್ದೂರಿಯಿಂದ ಜರುಗಿತು. ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸಿ 'ರಾಷ್ಟ್ರ ರಾಜೇಶ್ವರಿಗೆ' ಎಂಬ ಕವನವನ್ನು ಓದಿದರು.

೧೯೬೦ರಲ್ಲಿ ಬೀದರನಲ್ಲಿ ೪೧ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಲು ಡಾ. ಪುರಾಣಿಕರು ವಿಶೇಷವಾಗಿ ಪ್ರಯತ್ನಿಸಿದರು. ಈ ಸಮ್ಮೇಳನಕ್ಕೆ ಸರ್ವಾಧ್ಯಕ್ಷರಾಗಿ ಆಯ್ಕೆಯಾದವರು ಡಿ.ಎಲ್.ನರಸಿಂಹಾಚಾರ್ ಅವರು. ಅವರು ಬೀದರಕ್ಕೆ ಬರಲು ತಡವರಿಸಿದರು. ಕಾರಣ–ಸಿದ್ಧರಾಮನು ವೀರಶೈವನಲ್ಲ ಎಂದು ಅವರು ಬರೆದಿದ್ದರು. ತಮ್ಮ ಆತಂಕವನ್ನು ಡಾ. ಪುರಾಣಿಕರಲ್ಲಿ ನಿವೇದಿಸಿಕೊಂಡರು. ಆಗ ಪುರಾಣಿಕರು– ನಮ್ಮ ಬೀದರ ಜನ ಶರಣರಂಥ ಮುಗ್ಧಮನವರು. ಅವರು ನಿಮಗೆ ಏನು ಮಾಡುವುದಿಲ್ಲ. ಧೈರ್ಯದಿಂದ ಬನ್ನಿ ಎಂದು ಹೇಳಿದರು.

ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ, ಡಾ. ಪುರಾಣಿಕರನ್ನು ಕರೆದು– ಕನ್ನಡ ಆಡಳಿತ ಭಾಷೆಯಾಗುವಲ್ಲಿ ಏನು ಮಾಡಬೇಕು? ಎಂದು ಕೇಳಿದರು. ಡಾ. ಪುರಾಣಿಕರ ಸಲಹೆಯಂತೆ, ಮುಖ್ಯಮಂತ್ರಿಗಳು ಡಾ. ಮಾಸ್ತಿ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿದರು. ಈ ಸಮಿತಿಗೆ ಕಾರ್ಯದರ್ಶಿಯನ್ನಾಗಿ ಡಾ. ಪುರಾಣಿಕರನ್ನೇ ನೇಮಿಸಿದರು. ಕನ್ನಡವನ್ನು ಎಲ್ಲ ಹಂತಗಳಲ್ಲಿಯೂ ಆಡಳಿತದ ಭಾಷೆಯನ್ನಾಗಿ ಮಾಡಲು ಕನ್ನಡದಲ್ಲಿ ಕಾರ್ಯಾಲಯ ಕೈಪಿಡಿವೊಂದನ್ನು ರಚಿಸಬೇಕೆಂದು ಆಲೋಚಿಸಿ, ಸಿದ್ಧಪಡಿಸಿದರು. ಆಡಳಿತ ಪದಕೋಶ ಇಂದು ಬೃಹತ್ ಕೋಶವಾಗಿ ಹೊರಹೊಮ್ಮಿದೆ.

ಡಾ. ಪುರಾಣಿಕರು ಬೆಂಗಳೂರಿನಲ್ಲಿದ್ದಾಗ ಗಾಲಿಬ್ ಶತಮಾನೋತ್ಸವ, ಗಾಂಧೀಜಿ ಶತಮಾನೋತ್ಸವ, ಬಸವಣ್ಣನವರ ಅಷ್ಟಶತಮಾನೋತ್ಸವ, ಅರವಿಂದರ ಶತಮಾನೋತ್ಸವ ಮೊದಲಾದ ಮಹತ್ವದ ಕಾರ್ಯಕ್ರಮಗಳು ಜರುಗಿದವು. ಈ ಎಲ್ಲ ಕಾರ್ಯಕ್ರಮಗಳ ಬೆನ್ನ ಹಿಂದಿನ ಶಕ್ತಿಯಾಗಿ ಡಾ. ಪುರಾಣಿಕರು ಕೆಲಸ ಮಾಡಿದರು.

೧೯೮೭ರಲ್ಲಿ ಬೀದರನಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ವಾಧ್ಯಕ್ಷರಾಗಿ ಡಾ. ಪುರಾಣಿಕರು ಆಯ್ಕೆಯಾದರು. ಕನ್ನಡ ನಾಡು ನುಡಿಗಳ ಬಗ್ಗೆ ಅಭೂತಪೂರ್ವ ಚಿಂತನೆಯ ಭಾಷಣ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಬಹು ಮಹತ್ವಾಕಾಂಕ್ಷೆಯ ಯೋಜನೆಯಾದ ಕನ್ನಡ ನಿಂಘಟು ಯೋಜನೆಯಲ್ಲಿ ಡಾ. ಪುರಾಣಿಕರು ಸದಸ್ಯರಾಗಿ ಕಾರ್ಯ ಮಾಡಿದ್ದಾರೆ. ಹೀಗೆ ಕನ್ನಡ ನಾಡು ನುಡಿಗಳ ವಿಷಯದಲ್ಲಿ ಅತ್ಯಂತ ಸರ್ವಾರ್ಪಣ ಮನೋಭಾವದಿಂದ ದುಡಿಯುತ್ತ, ಕನ್ನಡ ಸಾಹಿತ್ಯಲೋಕವನ್ನು ಶ್ರೀಮಂತಗೊಳಿಸುವ ಕಾರ್ಯವನ್ನು ಸದ್ದುಗದ್ದಲವಿಲ್ಲದೆ ಮಾಡಿದ ಡಾ. ಪುರಾಣಿಕರು ಕನ್ನಡದ ರತ್ನಗಳಲ್ಲಿ ಒಬ್ಬರೆನಿಸಿದ್ದಾರೆ.

■■

# ಕಾವ್ಯಾನಂದರ ಕಾವ್ಯ ಸಮೀಕ್ಷೆ

## ೧

ಕನ್ನಡ ಸಾಹಿತ್ಯ ಪರಂಪರೆಯು ತನ್ನ ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸದಲ್ಲಿ ಅನೇಕ ಹೊಸಮಾರ್ಗಗಳನ್ನು ಹುಟ್ಟುಹಾಕಿದೆ. ಕವಿರಾಜಮಾರ್ಗ ದಲ್ಲಿಯೇ ಅನೇಕ ಸಾಹಿತ್ಯರೂಪಗಳ ಉಲ್ಲೇಖವಿದೆ. ಚಂಪೂ, ರಗಳೆ, ತ್ರಿಪದಿ, ಷಟ್ಪದಿ, ವಚನ, ಸ್ವರವಚನ, ಕೀರ್ತನ, ಹಾಡುಗಬ್ಬ, ತತ್ವಪದ, ಅಷ್ಟಕ, ದಂಡಕ, ತಾರಾವಳಿ ಮೊದಲಾದ ಸಾಹಿತ್ಯ ಪ್ರಕಾರಗಳು ಬೆಳೆದು ಕನ್ನಡ ಸಾಹಿತ್ಯಲೋಕವನ್ನು ಶ್ರೀಮಂತಗೊಳಿಸಿದವು. ಇಂಗ್ಲಿಷ್ ಶಿಕ್ಷಣದ ಪ್ರಭಾವ ಕಾರಣವಾಗಿ ೧೯ನೆಯ ಶತಮಾನದ ಕೊನೆಯ ಮೂರು ದಶಕಗಳು ಮತ್ತು ಇಪ್ಪತ್ತನೆಯ ಶತಮಾನದ ಪ್ರಾರಂಭದ ದಶಕದಲ್ಲಿ ಹೊಸಕಾವ್ಯಪ್ರಕಾರದ ಹುಟ್ಟು ಪ್ರಾರಂಭವಾಯಿತು. ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ಆಧುನಿಕ ಕಾವ್ಯಪರಂಪರೆಯ ಹೊಸಹುಟ್ಟು ಪಡೆಯಿತು. ೧೯೨೦ರಿಂದ ೧೯೫೦ ನವೋದಯದ ಉತ್ಕೃಷ್ಟ ಘಟ್ಟವೆಂದು ಈಗಾಗಲೇ ಬಹುತೇಕ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಅದಕ್ಕೂ ಪೂರ್ವದ ನಾಲ್ಕು ದಶಕಗಳಲ್ಲಿ ಈ ನವೋದಯ ಕಾವ್ಯ ಪರಂಪರೆಗೆ ಒಂದು ಗಟ್ಟಿ ನೆಲೆಯನ್ನು, ಘನತೆಯನ್ನು ತುಂಬುವ ಪ್ರಯತ್ನಗಳು ನಡೆದವು. ಹೀಗಾಗಿ ೧೮೭೦ರಿಂದ ೧೯೧೦ರ ವರೆಗಿನ ಕಾಲವನ್ನು ಹೊಸಗನ್ನಡ ಕಾವ್ಯ ಅಥವಾ ನವೋದಯಕಾವ್ಯದ ಪ್ರಾರಂಭದ ಘಟ್ಟಗಳು ಎಂದು ಗುರುತಿಸಲಾಗಿದೆ.

ಕನ್ನಡ ಸಾಹಿತ್ಯ ಪರಂಪರೆಯ ಇತಿಹಾಸದಲ್ಲಿ ಅನೇಕ ಹೊಸ ಸಂಪ್ರದಾಯಗಳು ಕಾಲಕಾಲಕ್ಕೆ ಹುಟ್ಟಿಕೊಂಡಿವೆ. ಸಾಹಿತ್ಯ ಸಂಪ್ರದಾಯಗಳು ಬೆಳೆಯಲು ಆಯಾ ಸಂದರ್ಭದ ಪರಿಸರ, ರಾಜಕೀಯ, ಸಾಮಾಜಿಕ, ಧಾರ್ಮಿಕ ವಿಷಯಗಳು ಕಾರಣವಾಗಿವೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ಪಂಪ–ರನ್ನ ಮೊದಲಾದ ಮಹಾಕವಿಗಳು ಸಂಸ್ಕೃತದಲ್ಲಿದ್ದ ಪ್ರಾಚೀನ ಮಹಾಭಾರತದ ಕಥೆಗಳನ್ನು ಕನ್ನಡಕ್ಕೆ ತರುವ ಮೂಲಕ ತಮ್ಮ ಪ್ರತಿಭೆ ಪಾಂಡಿತ್ಯಗಳನ್ನು ಒರೆಗೆ ಹಚ್ಚಿದರು. ಉತ್ತರದ ಪರಂಪರೆಯನ್ನು ಅನುಕರಿಸಿ ಚಂಪೂ ಕಾವ್ಯಸಂಪ್ರದಾಯವನ್ನು ಶ್ರೀಮಂತಗೊಳಿಸಿದರು. ಚಂಪೂ ಸಂಪ್ರದಾಯ ಎರಡು ಶತಮಾನಗಳ ಕಾಲ ಕನ್ನಡ ಸಾಹಿತ್ಯಲೋಕವನ್ನು ಆಳಿತು. ಆದರೆ ೧೨ನೇ ಶತಮಾನಕ್ಕೆ ಬರುವ ಹೊತ್ತಿಗೆ ಚಂಪೂ ಸ್ವಲ್ಪ ಹಿನ್ನಡೆ ಅನುಭವಿಸಿತು. ೧೩ನೇ ಶತಮಾನದಲ್ಲಿ ಹರಿಹರ ಅದಕ್ಕೆ ಮತ್ತೆ ಜೀವತುಂಬಲು ಪ್ರಯತ್ನಿಸಿದರೂ ಆತನ ಒಲವೆಲ್ಲ 'ರಗಳೆ'ಯ ಕಡೆಗೇ ಇದ್ದ ಕಾರಣ ಮತ್ತೆ ಚಂಪೂ ಮೂರು ಶತಮಾನಗಳ ಕಾಲ ಕಾಣಿಸಲೇ ಇಲ್ಲ. ೧೭ನೆಯ ಶತಮಾನದ ಹೊತ್ತಿಗೆ ಮಹಾಕವಿ ಷಡಕ್ಷರದೇವ ಚಂಪೂ ಸಂಪ್ರದಾಯಕ್ಕೆ

'ಬಸವರಾಜ ವಿಜಯ' ಕೃತಿ ರಚನೆ ಮೂಲಕ ಉಸಿರು ತುಂಬಲು ಪ್ರಯತ್ನಿಸಿದ. ಆದರೆ ಆ ಪ್ರಯತ್ನವೂ ಮುಂದೆ ಸಾಗಲಿಲ್ಲ.

೧೨ನೇ ಶತಮಾನದಲ್ಲಿ ಬಸವಾದಿ ಶಿವಶರಣರು 'ವಚನ' ಎಂಬ ಹೊಸ ಪ್ರಕಾರವನ್ನು ಸೃಷ್ಟಿಸಿದರು. ವಚನಕಾರರು ಮೂಲತಃ ಸಾಹಿತಿಗಳಾಗಿರಲಿಲ್ಲ. ಈ ವಿಷಯವಾಗಿ ಡಾ. ಗಿರಡ್ಡಿ ಗೋವಿಂದರಾಜ ಅವರು ಹೇಳುವ ಮಾತುಗಳು ಸ್ಮರಣೀಯವಾಗಿವೆ. ಸಾಹಿತ್ಯ ನಿರ್ಮಾಣಕ್ಕೆ ಪರಂಪರೆಯ ಪ್ರಜ್ಞೆ ಯಾವಾಗಲೂ ಅನಿವಾರ್ಯವೇ? ಎಂಬ ಪ್ರಶ್ನೆಗೆ ಉತ್ತರವಾಗಿ ಡಾ. ಗಿರಡ್ಡಿ ಅವರು:

> 'ಪರಂಪರೆಯಿಂದ ಭಿನ್ನವಾದ, ಒಳಗಿನ ಅಥವಾ ಹೊರಗಿನ ಯಾವ ಪರಂಪರೆಗೂ ಸಂಬಂಧವೇ ಇಲ್ಲದ ಒಂದು ಹೊಸ ಸಾಹಿತ್ಯಿಕ ಆಂದೋಲನ ಹುಟ್ಟಲಾರದೆ?–ಹುಟ್ಟಬಾರದೆ? ಹುಟ್ಟಿದರೂ ಅದರಿಂದ ಶ್ರೇಷ್ಠ ಸಾಹಿತ್ಯ ನಿರ್ಮಾಣವಾಗಲಾರದೆ? ..... ಈ ಬಗೆಯ ಸಾಹಿತ್ಯಿಕ ಆಂದೋಲನಗಳು ಜಗತ್ತಿನ ಸಾಹಿತ್ಯದ ಇತಿಹಾಸದಲ್ಲಿ ಹುಟ್ಟಿಯೇ ಇಲ್ಲವೆನ್ನುವಂತಿಲ್ಲ. ಯಾಕೆಂದರೆ ನಮ್ಮ ಕನ್ನಡ ಸಾಹಿತ್ಯದ ಪರಂಪರೆಯಲ್ಲೇ ಅಂಥದೊಂದು ವಿಲಕ್ಷಣ ಉದಾಹರಣೆ ಇದೆ– ವಚನ ಸಾಹಿತ್ಯದ್ದು. ಕನ್ನಡದಲ್ಲಿ ವಚನಗಳು ಹುಟ್ಟಿದ್ದೇ ಒಂದು ಅಪೂರ್ವ ಪ್ರಸಂಗ. ಅವು ಹಿಂದಿನ ಯಾವ ಸಾಹಿತ್ಯದ ಪರಂಪರೆಗೂ ಸಂಬಂಧಿಸಿದುವಲ್ಲ. ಅವು ಸಾಹಿತ್ಯವೆಂದು ಹುಟ್ಟಲೇ ಇಲ್ಲ. ಅವುಗಳನ್ನು ರಚಿಸಿದವರು ತಾವು ಸಾಹಿತಿಗಳೆಂದು ಭಾವಿಸಿರಲೂ ಇಲ್ಲ. ವಚನಗಳು ಹುಟ್ಟಿ ಬಹಳ ದಿನಗಳಾದ ನಂತರ ಅವು ನಮ್ಮ ಸಾಹಿತ್ಯ ಪರಂಪರೆಯ ಭಾಗವೆಂದು ಸ್ವೀಕೃತವಾದವು. ಅವುಗಳ ಸ್ವರೂಪ, ಛಂದಸ್ಸು, ಭಾಷೆಯ ಬಳಕೆ, ಲಯ, ಪ್ರತಿಮಾ ಸಂಯೋಜನೆ, ಶಿಲ್ಪ, ಜೀವನದೃಷ್ಟಿಗಳೆಲ್ಲ ಹೊಚ್ಚ ಹೊಸವು. ತಮ್ಮ ಹಿಂದಿನ ಕನ್ನಡ ಸಾಹಿತ್ಯವನ್ನು ವಚನಕಾರರು ಓದಿಕೊಂಡಿದ್ದರೆಂಬುದಕ್ಕೆ ಎಲ್ಲಿಯೂ ಆಧಾರಗಳಿಲ್ಲ.' (ಡಾ. ಗಿರಡ್ಡಿ ಗೋವಿಂದರಾಜ : ಸಮಗ್ರ ವಿಮರ್ಶೆ ಸಂ.೧; ಪು. ೫೯)

ವಚನಗಳನ್ನು ಆಧುನಿಕ ಕನ್ನಡ ಸಾಹಿತ್ಯದ ಪ್ರಾರಂಭದ ಘಟ್ಟದಲ್ಲಿ ಸಾಹಿತ್ಯವೆಂದು ಕುವೆಂಪು ಆದಿಯಾಗಿ ಅನೇಕ ವಿದ್ವಾಂಸರು ಒಪ್ಪಿರಲಿಲ್ಲವೆಂಬುದು ಆಶ್ಚರ್ಯದ ಸಂಗತಿಯಾಗಿದೆ. ಡಾ. ಹಳಕಟ್ಟಿಯವರು ವಚನಗಳನ್ನು ಶಾಸ್ತ್ರವೆಂದು ಕರೆದರು, ಎಂ.ಆರ್.ಶ್ರೀನಿವಾಸಮೂರ್ತಿಗಳು 'ಧರ್ಮ'ವೆಂದು ಕರೆದರು. ರಂಗನಾಥ ದಿವಾಕರರು 'ವಚನಶಾಸ್ತ್ರ'ದ ರಹಸ್ಯವನ್ನು ಕಂಡುಕೊಂಡರು. ಹೀಗಾಗಿ ಧಾರ್ಮಿಕ ಶಾಸ್ತ್ರಗಳೆಂದರೆ ವಚನಗಳೆಂದು ಪರಿಭಾವಿಸಲಾಗಿತ್ತು. ನವ್ಯ ಕಾವ್ಯದ ಸಂದರ್ಭದಲ್ಲಿ ವಚನಗಳು ಸಾಹಿತ್ಯದ ಪ್ರಕಾರವೆಂದು ಲೋಕಮಾನ್ಯವಾಯಿತು ಎಂಬುದು ಅಷ್ಟೇ ಸತ್ಯ.

೧೩ನೇ ಶತಮಾನದಲ್ಲಿ ಈ ಹಿಂದೆ ರೂಪಗೊಂಡಿದ್ದ ಚಂಪೂ, ವಚನ ಪ್ರಕಾರ ಹಿಂದೆ ಸರಿದು, 'ಷಟ್ಪದಿ' ಉಚ್ಛ್ರಾಯಸ್ಥಿತಿ ತಲುಪಿತು. ಮಹಾಕವಿ ರಾಘವಾಂಕ 'ಹರಿಶ್ಚಂದ್ರ ಕಾವ್ಯ' 'ಸಿದ್ಧರಾಮ ಚಾರಿತ್ರ' ಎಂಬ ಎರಡು ಮಹಾಕಾವ್ಯಗಳನ್ನು ರಚಿಸಿ ಷಟ್ಪದಿಗೆ



ಛಂದ್ರಾಜನಾದಿ ಕಲ್ಪಿಸಿದನು. ಹರಿಹರಕವಿ 'ರಗಳೆ' ಎಂಬ ಮುಕ್ತಛಂದಸ್ಸಿನ ಪ್ರಯೋಗವನ್ನು ಯಶಸ್ವಿಯಾಗಿ ಹುಟ್ಟುಹಾಕಿದ. ಈ ಇಬ್ಬರೂ ಮಹಾಕವಿಗಳು ಕನ್ನಡದಲ್ಲಿ ಷಟ್ಪದಿ ಮತ್ತು ರಗಳೆ ಎಂಬ ಎರಡು ಹೊಸಸಂಪ್ರದಾಯಗಳಿಗೆ ನಾಂದಿ ಹಾಡಿದರು. ರಾಘವಾಂಕನ ಷಟ್ಪದಿ ಸಂಪ್ರದಾಯ ತುಂಬ ಜನಪ್ರಿಯವಾಯಿತು. ನಡುಗನ್ನಡ ಸಾಹಿತ್ಯದಲ್ಲಿ ಶೇ ೭೦% ಷಟ್ಪದಿ ಕಾವ್ಯಗಳೇ ನಿರ್ಮಾಣಗೊಂಡು ವಿಜೃಂಭಿಸಿವೆ. ಹೀಗಾಗಿ ರಾಘವಾಂಕನ ಷಟ್ಪದಿ ಪ್ರಯೋಗ ಕನ್ನಡ ಕಾವ್ಯಸಂಪ್ರದಾಯಕ್ಕೆ ಅನನ್ಯವೂ ಅದ್ಭುತವೂ ಆದ ಕೊಡುಗೆ ಎಂಬುದನ್ನು ನಾವು ಮರೆಯಲಾಗದು.

ಕುಮಾರವ್ಯಾಸ, ಚಾಮರಸ, ಜನ್ನ, ಮೊದಲಾದ ಕವಿಗಳು ಷಟ್ಪದಿ ಕ್ಷೇತ್ರದಲ್ಲಿ ಅಸಾಧಾರಣವೆನ್ನುವ ಕಾವ್ಯ ರಚನೆ ಮಾಡಿ ಕನ್ನಡ ಸಾಹಿತ್ಯಲೋಕವನ್ನು ಶ್ರೀಮಂತಗೊಳಿಸಿದರು. ಇದೇ ಕಾಲಘಟ್ಟದಲ್ಲಿ ತ್ರಿಪದಿ, ಸಾಂಗತ್ಯ, ಅಷ್ಟಕ–ದಂಡಕ–ಶಂಕರಾವಳಿ ಮೊದಲಾದ ಸಾಹಿತ್ಯ ಸಂಪ್ರದಾಯಗಳು ನಿರ್ಮಾಣಗೊಂಡವು. ಇವೆಲ್ಲಕ್ಕೂ ಮಿಗಿಲಾಗಿ ಹರಿದಾಸರಿಂದ ಪ್ರಾರಂಭವಾದ ಕೀರ್ತನ ಸಾಹಿತ್ಯ ಕನ್ನಡ ಸಂಗೀತ ಕ್ಷೇತ್ರಕ್ಕೆ ಅಪೂರ್ವ ಕಾಣಿಕೆ ಸಲ್ಲಿಸಿತು. ಕೀರ್ತನೆಗಳು, ಮಂಡಿಗೆಗಳು, ಸುಳಾದಿ ಉಗಾಭೋಗಗಳು ಹರಿದಾಸರ ಕುಂಚದಲ್ಲಿ ಅರಳಿದವು.

ಹೀಗೆ ಕನ್ನಡ ಸಾಹಿತ್ಯವು ಅನೇಕ ಹೊಸ ಸಂಪ್ರದಾಯಗಳನ್ನು ಹುಟ್ಟುಹಾಕುತ್ತ, ಕನ್ನಡ ಸಾಹಿತ್ಯ ಲೋಕವನ್ನು ವಿಭಿನ್ನ ದೃಷ್ಟಿಯಲ್ಲಿ ಶ್ರೀಮಂತಗೊಳಿಸುತ್ತ ಬಂದ ಸಂದರ್ಭದಲ್ಲಿ ಆಂಗ್ಲರ ಆಡಳಿತ ಕಾಲಿಟ್ಟಿತ್ತು. ೧೮ನೆಯ ಶತಮಾನ ಕನ್ನಡ ಸಾಹಿತ್ಯ ಒಂದು ರೀತಿಯ ಶೂನ್ಯದ ನಿರ್ವಾತವನ್ನು ಅನುಭವಿಸಿತು. ಕನ್ನಡ ಕೃತಿಗಳು ರಚನೆಗೊಂಡರೂ ಯಾವುದೇ ಹೊಸತನದ ಚಿಗುರು ಅಲ್ಲಿ ಕಾಣಲಿಲ್ಲ.

> 'ಕನ್ನಡದಲ್ಲಿ ಪ್ರೌಢಕಾವ್ಯ ರಚನೆ ಸುಮಾರು ೧೭೦೦ರ ವೇಳೆಗೆ, ಚಿಕ್ಕದೇವರಾಜ ಒಡೆಯರ ಆಳಿಕೆಯ ಕೊನೆಯ ಹೊತ್ತಿಗೆ ನಿಂತು ಹೋಗಿತ್ತು. ಅಲ್ಲಿಂದ ಮುಂದೆ ದೌರ್ಬಲ್ಯ, ಅಸಾರತೆ, ಅನ್ಯಾಕ್ರಮಣ ಮೊದಲಾದವು ರಾಜಕೀಯ ಪ್ರಪಂಚದಲ್ಲಿ ಕಾಣಿಸಿಕೊಂಡಂತೆಯೇ ಸಾಹಿತ್ಯ ಪ್ರಪಂಚದಲ್ಲಿಯೂ ಕಾಣಿಸಿಕೊಂಡವು' (ತೀ.ನಂ.ಶ್ರೀ ಇಂಗ್ಲಿಷ್ ಗೀತಗಳು ಮುನ್ನುಡಿ ಪು. ೧, ೧೯೫೩)

ಎಂಬ ತೀನಂಶ್ರೀ ಅವರ ಮಾತುಗಳು ಆ ಕಾಲದ ಪರಿಸ್ಥಿತಿಯನ್ನು ತಿಳಿಸುತ್ತವೆ. ಆಂಗ್ಲ ಶಿಕ್ಷಣ ಪದ್ಧತಿ ಕಾರಣವಾಗಿ ಹೊಸ ಶಿಕ್ಷಣ ವ್ಯವಸ್ಥೆ ಜಾರಿಗೆ ಬಂದಿತು. ಇದರಿಂದ ಸಹಜವಾಗಿಯೇ ಎಲ್ಲ ವರ್ಗದ ಜನರು ವಿದ್ಯಾವಂತರಾಗುವ ಅವಕಾಶ ದೊರೆಯಿತು. ಈ ಸಂದರ್ಭದಲ್ಲಿಯೇ ಹೊಸಗನ್ನಡ ಸಾಹಿತ್ಯ ಸಂಪ್ರದಾಯಗಳಿಗೆ ಶುಕ್ರದೆಸೆ ಪ್ರಾರಂಭವಾಯಿತು.

ಹೊಸ ಸಾಹಿತ್ಯ ಸಂಪ್ರದಾಯಗಳು ಯಾವ ಯಾವ ಕಾರಣಕ್ಕೆ ಹುಟ್ಟುತ್ತವೆ

ಎಂಬುದನ್ನು ಡಾ. ಗಿರಡ್ಡಿ ಅವರು 'ಸಾಹಿತ್ಯದಲ್ಲಿ ಸಂಪ್ರದಾಯ, ಹೊಸ ಮಾರ್ಗ ಮತ್ತು ಸಾಹಿತ್ಯ ನಿರ್ಮಿತಿ' ಎಂಬ ಲೇಖನದಲ್ಲಿ ಹೀಗೆ ಹೇಳುತ್ತಾರೆ:

> 'ಯಾವುದೇ ಸಾಹಿತ್ಯದ ಇತಿಹಾಸದಲ್ಲಿಯೂ ಕಾಲಕಾಲಕ್ಕೆ ಬರವಣಿಗೆಯ ಸಂಪ್ರದಾಯಗಳು ಬದಲಾಗುವುದು ಒಂದು ಸಾಮಾನ್ಯ ಸಂಗತಿ. ಪ್ರತಿಯೊಂದು ಹೊಸ ಸಂಪ್ರದಾಯವೂ ತನ್ನ ಹಿಂದಿನ ಸಂಪ್ರದಾಯದಲ್ಲಿಯ ಕೆಲವೊಂದು ಗುಣಧರ್ಮಗಳ ಬಗೆಗೆ ಭಿನ್ನಾಭಿಪ್ರಾಯ ತಳೆದು, ಅದಕ್ಕೆ ಪ್ರತಿಕ್ರಿಯೆಯಾಗಿ, ಪ್ರತಿಭಟನೆಯಾಗಿ ಅರಂಭವಾಗುತ್ತದೆ; ಚಳುವಳಿಯಾಗಿ ಬೆಳೆಯುತ್ತದೆ; ಕೊನೆಗೆ ತಾನೂ ಒಂದು ಸಂಪ್ರದಾಯವಾಗಿ ಪ್ರತಿಷ್ಠಿತವಾಗುತ್ತದೆ. ಹೀಗೆ ಒಂದು ಸಂಪ್ರದಾಯ ಸ್ಥಾಪಿತವಾಗಿ ಅದರಲ್ಲಿ ಸಾಕಷ್ಟು ಪ್ರಮಾಣದ ಕೃತಿ ರಚನೆ ನಡೆದ ಮೇಲೆ ಅದರದೇ ಆದ ಒಂದು ಸಿದ್ಧಮಾರ್ಗ ನಿರ್ಮಾಣವಾಗುತ್ತದೆ. ಅದಕ್ಕೆ ವಿಶಿಷ್ಟವಾದ ವಸ್ತುಗಳು, ಶೈಲಿ, ಧೋರಣೆಗಳು ಹುಟ್ಟಿಕೊಳ್ಳುತ್ತವೆ. ಇಷ್ಟಾದ ಮೇಲೆ ವ್ಯಾಪಕವಾದ ಅನುಕರಣೆ ನಡೆದು ಸಾಹಿತ್ಯ ಜಾಡುಬಿದ್ದು ಹಾದಿಯಾಗುತ್ತದೆ. ಆ ಸಂಪ್ರದಾಯ ಹುಟ್ಟಿಕೊಳ್ಳುವಾಗ ಹೊಸದಾಗಿ ಗೋಚರಿಸಿದ್ದ ಬದುಕಿನ ಹಾಗೂ ಅಭಿವ್ಯಕ್ತಿಯ ಹೊಸ ಅವಕಾಶಗಳು ಮುಗಿದು ಹೋಗಿ ಚರ್ವಿತಚರ್ವಣಕ್ಕೆ ಆರಂಭವಾಗುತ್ತದೆ. ಆಗ ಈ ಸಂಪ್ರದಾಯದ ದೌರ್ಬಲ್ಯಗಳು ಕೂಡ ಬಯಲಿಗೆ ಬೀಳುತ್ತವೆ. ಇಂಥ ದೌರ್ಬಲ್ಯಗಳ ವಿರುದ್ಧ ಮತ್ತೆ ಅಸಮಾಧಾನ, ಪ್ರತಿಭಟನೆ ಆರಂಭವಾಗಿ ಇನ್ನೊಂದು ಹೊಸಮಾರ್ಗದ ಅನ್ವೇಷಣೆ ಆರಂಭವಾಗುತ್ತದೆ. (ಗಿರಡ್ಡಿ ಗೋವಿಂದರಾಜ : ಸಮಗ್ರ ವಿಮರ್ಶೆ ಸಂ.೧, ಪು. ೪೧)

ಡಾ. ಗಿರಡ್ಡಿಯವರ ಮಾತುಗಳ ಹಿನ್ನೆಲೆಯಲ್ಲಿ ಹೊಸಗನ್ನಡ ಸಾಹಿತ್ಯ ಚರಿತ್ರ ಆರಂಭವಾಗುತ್ತದೆ. ಹಿಂದಿನ ಸಾಹಿತ್ಯ ಸಂಪ್ರದಾಯಗಳು ಕನಿಷ್ಠ ಒಂದು ಶತಮಾನ ಕಾಲವಾದರೂ ನಾಡಿನ ಜನರ ಮನಸ್ಸಿನಲ್ಲಿ ನೆಲೆಯೂರಿದ್ದವು. ಆದರೆ ಕಾಲ ಮತ್ತು ಪರಿಸರ ಬದಲಾವಣೆ ಕಾರಣವಾಗಿ, ನಗರೀಕರಣ, ಔದ್ಯೋಗಿಕರಣ, ಜಾಗತೀಕರಣ ಮೊದಲಾದವುಗಳು ಕಾರಣವಾಗಿ ಸಾಹಿತ್ಯಕ್ಷೇತ್ರದಲ್ಲಿ ಕ್ಷಿಪ್ರ ಬದಲಾವಣೆಗಳು ಪ್ರಾರಂಭವಾದವು. ಹೀಗಾಗಿ ೧೯೨೦ರ ದಶಕದಿಂದ ೧೯೮೦ರ ಆರು ದಶಕಗಳ ಅವಧಿಯಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಆರು ಸಾಹಿತ್ಯ ಚಳುವಳಿಗಳು ಹುಟ್ಟಿಕೊಂಡವು. ೧೯೨೦ರಿಂದ ೧೯೫೦ರ ದಶಕದವರೆಗೆ 'ನವೋದಯ' ೧೯೫೦ರಿಂದ ೧೯೭೦ 'ನವ್ಯ' ೧೯೪೫ರಿಂದ ೧೯೭೦ 'ಪ್ರಗತಿಶೀಲ' ೧೯೮೦ರ ದಶಕದಲ್ಲಿ ದಲಿತ ಮತ್ತು ಬಂಡಾಯ ಚಳುವಳಿಗಳು ಹುಟ್ಟಿಕೊಂಡವು. ಈಗಂತೂ ಕನ್ನಡ ಸಾಹಿತ್ಯ ಚಳುವಳಿಗಳು ಮಲಗಿ ಬಿಟ್ಟಿವೆ. ಯಾವುದೇ ಹೊಸ ನೀರು ಇಲ್ಲದೆ ಚರ್ವಿತಚರ್ವಣಕ್ಕೆ ಇಳಿದುಬಿಟ್ಟಿದೆ.

೨

ಡಾ. ಸಿದ್ಧಯ್ಯ ಪುರಾಣಿಕರು ಆಧುನಿಕ ಕನ್ನಡ ಕಾವ್ಯ ಪರಂಪರೆಯನ್ನು



ಉಜ್ವಲಗೊಳಿಸಿದ ಪ್ರಮುಖ ಕವಿಗಳಲ್ಲಿ ಒಬ್ಬರು. ನವೋದಯ ಕಾವ್ಯದ ಘಟ್ಟ ಮುಗಿದು, ನವ್ಯದ ಉತ್ಕರ್ಷ ಕಾಣುತ್ತಿದ್ದ ಸಂದರ್ಭದಲ್ಲಿ ಕಾವ್ಯಜೀವನಕ್ಕೆ ಕಾಲಿಟ್ಟ ಪುರಾಣಿಕರು ನವೋದಯದ ಮಾರ್ಗದಲ್ಲಿ ಬರೆದರು. ಕೆಲವು ಕವನಗಳು ನವ್ಯವೆನಿಸಿದರೂ ಅವುಗಳ ಮೂಲಸ್ಥಾಯಿ ನವೋದಯವೇ ಆಗಿತ್ತು. ಪುರಾಣಿಕರ ಕಾವ್ಯದಲ್ಲಿ ಅನುಭವದ್ರವ್ಯ ನವೋದಯದಿಂದ ಬಂದರೆ, ಅಭಿವ್ಯಕ್ತಿ ಕ್ರಮ ನವ್ಯವಾಗಿರುವುದನ್ನು ಗುರುತಿಸಬಹುದು. ಅಂತೆಯೆ ನವ್ಯದ ಹರಿಕಾರ ವಿ.ಕೃ.ಗೋಕಾಕರು ಇವರ 'ಮೊದಲು ಮಾನವನಾಗು' ಕವನ ಸಂಕಲನಕ್ಕೆ ಮುನ್ನುಡಿ ಬರೆಯುತ್ತ– 'ರಸವಂತಿಕೆಯಿಂದ ಕವನಗಳು ಹೃದಯಸ್ಪರ್ಶಿಯಾಗುತ್ತವೆ. ಈ ಕವನಗಳಲ್ಲಿ ರಸವಂತಿಕೆಯಿದೆ. ಅವುಗಳ ಉಡಿಗೆ-ತೊಡಿಗೆ ಆಧುನಿಕ, ನವ್ಯವಲ್ಲ. ಆದರೆ ಎಲ್ಲರ ವೇಷಭೂಷಣ ನವ್ಯವೇ ಇರಬೇಕೆಂದಿಲ್ಲ. ಇದ್ದರೆ ಇಂದು ಅದೂ ಒಂದು ದೃಷ್ಟಿಯಿಂದ ಅನಾನುಕೂಲ. ಇದು ಸಂಧಿಕಾಲ, ಇದೀಗ ಆಧುನಿಕ ಕನ್ನಡ ಕಾವ್ಯ ಹೆಚ್ಚು ಜನ ರಸಿಕರಿಗೆ ಹೋಗಿ ಮುಟ್ಟುವ ಲಕ್ಷಣಗಳಿವೆ. ...ಆಧುನಿಕ ಕನ್ನಡ ಕಾವ್ಯದ ಸಿದ್ಧಿಯನ್ನು ಒಯ್ದು ಮುಟ್ಟಿಸುವ ಕಾರ್ಯದಲ್ಲಿ ಶ್ರೀ ಪುರಾಣಿಕರು ಶ್ಲಾಘ್ಯ ಪಾತ್ರವನ್ನು ವಹಿಸಿದ್ದಾರೆ.' ಎಂದು ಹೇಳಿದ್ದರು.

೧೯೫೦ರ ದಶಕದ ನಂತರವೇ ಡಾ. ಪುರಾಣಿಕರ ಕಾವ್ಯ ಸಂಕಲನಗಳು ಪ್ರಕಟಗೊಂಡವು. ಈ ದಶಕ ನವ್ಯದ ಭರಾಟೆಯ ಕಾಲವಾಗಿತ್ತು. ಗೋಪಾಲಕೃಷ್ಣ ಅಡಿಗರು, ಗೋಕಾಕರು ಮೊದಲಾದವರು ನವ್ಯದ ಮೂಲಕ ಕಾವ್ಯ ಪರಂಪರೆಗೆ ಒಂದು ಹೊಸ ಛಾಯೆಯನ್ನು ತಂದುಕೊಟ್ಟರು. ಆದರೆ ನವ್ಯದ ತುತ್ತೂರಿ ಗದ್ದಲ್ಲದಲ್ಲಿ ನವೋದಯ–ನವ್ಯದ ಸಮನ್ವಯದ ದಾರಿ ತುಳಿದ ಚೆನ್ನವೀರ ಕಣವಿ, ಜಿ.ಎಸ್. ಶಿವರುದ್ರಪ್ಪ, ಸಿದ್ಧಯ್ಯ ಪುರಾಣಿಕರನ್ನು ಉದ್ದೇಶಪೂರ್ವಕವಾಗಿ ವಿಮರ್ಶಕ ವಲಯ ನಿರ್ಲಕ್ಷಿಸಿ ಬಿಟ್ಟಿತು. ಕಣವಿ–ಜಿ.ಎಸ್.ಎಸ್. ಅವರನ್ನು ಸಮನ್ವಯದ ಕವಿಗಳೆಂದು ವ್ಯಂಗ್ಯವಾಗಿ ಕರೆಯತೊಡಗಿತು. ಇಂಥ ಪ್ರಸಂಗದಲ್ಲಿ ಡಾ. ಪುರಾಣಿಕರು ತಮ್ಮ ಕಾವ್ಯದ ಧಾಟಿಯನ್ನು ಬದಲಾಯಿಸಲಿಲ್ಲ. ತಮ್ಮ ಅನುಭವಕ್ಕೆ ಬಂದುದನ್ನು ಅಭಿವ್ಯಕ್ತಿಗೊಳಿಸಿದರು. 'ಕೂಡಲಸಂಗಮದೇವ ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ' ಎಂಬ ಮುಕ್ತಛಂದದ ದಾರಿಯನ್ನು ಕಂಡುಕೊಂಡರು.

ಆಧುನಿಕ ಕನ್ನಡ ಕಾವ್ಯವನ್ನು ವಿಮರ್ಶೆ ಮಾಡಿದ ತಥಾಕಥಿತ ವಿದ್ವಾಂಸರು ಡಾ. ಪುರಾಣಿಕರಂಥ ಮಹತ್ವದ ಕವಿಗಳನ್ನು ನಿರ್ಲಕ್ಷಿಸಿದ್ದು ವಿಷಾದನೀಯ. ನಾನು ಗ್ರಹಿಸಿದಂತೆ, ಕುರ್ತಕೋಟಿಯವರ 'ನಡೆದು ಬಂದ ದಾರಿ'ಯಿಂದ ಹಿಡಿದು ಅನೇಕ ವಿಮರ್ಶಕರು ಪುರಾಣಿಕರ ಕಾವ್ಯದ ಕುರಿತು ಒಂದೇ ಒಂದು ಮಾತು ಬರೆಯದಿರುವುದು ನನ್ನಲ್ಲಿ ಸೋಜಿಗವನ್ನುಂಟು ಮಾಡಿತು.

೧೯೭೦ರಲ್ಲಿ ಲಂಕೇಶ 'ಅಕ್ಷರ ಹೊಸ ಕಾವ್ಯ' ಎಂಬ ಕವನ ಸಂಕಲನ ಸಂಪಾದಿಸಿ ಪ್ರಕಟಿಸಿದರು, ಮರು ವರ್ಷವೇ ಬುದ್ದಣ್ಣ ಹಿಂಗಮಿರೆ ಅವರು 'ಹೊಸ ಜನಾಂಗದ ಕವಿತೆಗಳು' ಎಂಬ ಆ್ಯಂಥಾಲಜಿಯನ್ನು ಪ್ರಕಟಿಸಿದರು. ಈ ಎರಡು ಆ್ಯಂಥಾಲಜಿಗಳಲ್ಲಿ

ಹೈದರಾಬಾದ ಕರ್ನಾಟಕ ಒಬ್ಬ ಕವಿಯ ಕವಿತೆಗಳೂ ಸೇರಿರಲಿಲ್ಲ. ಈ ತಾರತಮ್ಯ ಧೋರಣೆಯನ್ನು ಮೊದಲ ಬಾರಿಗೆ ಗುರುತಿಸಿ, ಹೋರಾಟ ಮಾಡಿ, ಹೈದರಾಬಾದ ಕರ್ನಾಟಕದ ೨೭ ಜನ ಕವಿಗಳ ಉತ್ತಮೋತ್ತಮ ಕವನಗಳನ್ನು ಆಯ್ದು 'ಬೆನ್ನ ಹಿಂದಿನ ಬೆಳಕು' ಎಂಬ ಆ್ಯಂಥಾಲಜಿಯನ್ನು ಪ್ರಕಟಿಸಿ ಇಡೀ ರಾಜ್ಯದ ಗಮನ ಸೆಳೆದವರು ಶಾಂತರಸರು. ಸಿದ್ಧಯ್ಯ ಪುರಾಣಿಕರಂಥ ಶ್ರೇಷ್ಠ ಕವಿಗಳನ್ನು ಕೈಬಿಟ್ಟ ಬಗ್ಗೆ ಶಾಂತರಸರು ತೀವ್ರವಾಗಿ ಖಂಡಿಸಿದರು.

ಆಧುನಿಕ ಕನ್ನಡ ಕಾವ್ಯದ ಚರಿತ್ರೆಯನ್ನು ಬರೆಯ ಹೊರಟ ವಿಮರ್ಶಕ ವಿದ್ವಾಂಸರಿಗೆ ಡಾ. ಪುರಾಣಿಕರಂಥ ಹಿರಿಯ ಕವಿಗಳು ಕಾಣದೆ ಹೋದುದು ಸಾಹಿತ್ಯ ಚರಿತ್ರೆಯ ದುರಂತವೆಂದೇ ಹೇಳಬೇಕು. ಕುರ್ತಕೋಟಿ, ಗಿರಡ್ಡಿ ಗೋವಿಂದ ರಾಜ, ಜಿ.ಎಸ್. ಆಮೂರ ಅವರಂಥ ಪ್ರಮುಖ ವಿಮರ್ಶಕರ ವರ್ಗ ತಪ್ಪಿಯೂ ಡಾ. ಪುರಾಣಿಕರ ಕಾವ್ಯವನ್ನು ಉಲ್ಲೇಖಿಸದಿರುವುದು ಸಖೇದಾಶ್ಚರ್ಯವೆನಿಸಿದೆ. ಕುರ್ತಕೋಟಿ ಅವರಿಗಂತೂ ಬೇಂದ್ರೆ ಒಬ್ಬರೇ ಮಹಾಕವಿ. ಬೇಂದ್ರೆ ಕಾವ್ಯದ ಮುಂದೆ ಕುವೆಂಪು ಏನೂ ಅಲ್ಲ ಎಂದು ಬರೆಯುತ್ತಿದ್ದ ಅವರಿಗೆ ಡಾ. ಪುರಾಣಿಕರೆಲ್ಲಿ ಕಾಣಬೇಕು. ಇಂಗ್ಲಿಷ್ ಪ್ರಾಧ್ಯಾಪಕರ ಕನ್ನಡ ಸಾಹಿತ್ಯ ಕೃಷಿಯ ಈ ನವ್ಯದ ಪರಾಕಾಷ್ಠೆಯಲ್ಲಿ ನವೋದಯ ಪರಂಪರೆಯ ಸತ್ವವುಳ್ಳ ಪುರಾಣಿಕರಂಥ ಕವಿಗಳು ನೇಪಥ್ಯಕ್ಕೆ ಸರಿದಿದ್ದರೂ, ಅವರು ಇಂದಿಗೂ ಕನ್ನಡ ಸಾರಸ್ವತ ಲೋಕದಲ್ಲಿ ಗಟ್ಟಿಯಾಗಿ ನಿಂತಿದ್ದು ಗಾಯನದ ಮೂಲಕ.

ಪ್ರಕೃತಿಯೆ ಗುರು ಗಗನ ಲಿಂಗವು
ಜಗವೆ ಕೂಡಲಸಂಗಮ
ಹುಡಿಯೆ ಭಸ್ಮವು ಹುಲ್ಲೆ ಪತ್ರೆಯು
ಜಡವಿದೆಲ್ಲವು ಜಂಗಮ

ಆಕಾಶವಾಣಿಯಲ್ಲಿ ಡಾ. ಪುರಾಣಿಕರ ಈ ಕವನ ರಚನೆಯಾದಂದಿನಿಂದ ಇಂದಿನ ತನಕ ಶ್ರೋತೃಗಳ ಕೋರಿಕೆ ಮೇರೆಗೆ ಮತ್ತೆ ಮತ್ತೆ ಪ್ರಸಾರವಾಗಿ, ಜನರ ಮೆಚ್ಚಿನ ಗೀತೆಯಾಗಿ ಪರಿಣಮಿಸಿದೆ. ಈ ಹೊತ್ತಿಗೂ ಈ ಕವಿತೆ ಜನಪ್ರಿಯತೆಯನ್ನು, ಅಲ್ಲ, ಜನಪ್ರೀತಿಯನ್ನು ಒಂದಿಷ್ಟೂ ಕಡಿಮೆ ಮಾಡಿಕೊಂಡಿಲ್ಲ. ಅನಂತರ ಹಲವಾರು ಗಾಯಕರ ಮೂಲಕ ಡಾ. ಪುರಾಣಿಕರ ಇನ್ನೆಷ್ಟೋ ಕವಿತೆಗಳು ಪ್ರಸಾರಗೊಂಡು ಅವರನ್ನು ಒಬ್ಬ ಕವಿ ಎಂದು ಒಪ್ಪಿಕೊಳ್ಳುವಂತೆ ಮಾಡಿದ್ದು ಆಕಾಶವಾಣಿಯೇ ಎನ್ನುವುದು ಚಾರಿತ್ರಿಕವಾಗಿ ಒಂದು ಮಹತ್ವದ ಸಂಗತಿ ಎಂದು ನಾನು ತಿಳಿದಿದ್ದೇನೆ. ಯಾಕೆಂದರೆ ಅದು ಕನ್ನಡ ಕಾವ್ಯದ ಚರಿತ್ರೆಯಲ್ಲಿ ನವ್ಯ ಸಾಹಿತ್ಯ ಚಳವಳಿಯ ಆವೇಶದ ಅಬ್ಬರದ ಕಾಲ. ನವೋದಯದ ರಮ್ಯತೆ, ವಿಸ್ಮಯ, ಆದರ್ಶ, ಆಧ್ಯಾತ್ಮ ಇತ್ಯಾದಿಗಳನ್ನು ವರ್ಜಿಸಿ ನಗರ ಜೀವನದ ಗೊಂದಲಗಳಿಗೆ, ಸ್ವಾತಂತ್ರ್ಯೋತ್ತರ ಕಾಲದ ಭ್ರಮನಿರಸನಗೊಂಡ ಮನಸ್ಸಿಗೆ ಕನ್ನಡಿ ಹಿಡಿದ ಕಾವ್ಯದ ಕಾಲ. ಅಚ್ಚುಕಟ್ಟಾದ ಪದ್ಯಬಂಧಗಳನ್ನು ಮುರಿದು ಕವಿತೆಯನ್ನು ಆಡುಮಾತಿನ ಸಮೀಪಕ್ಕೆ ತರುವ ಪ್ರಯೋಗದ ಕಾಲ. ಕಾವ್ಯವನ್ನು



ಸಂಗೀತದ ಸಾಹಚರ್ಯದಿಂದ ಪಾರುಮಾಡಬೇಕು ಎನ್ನುವ ಘೋಷಣೆಯ ಕಾಲ. ಇಂಥ ಸಂದರ್ಭದಲ್ಲಿ ಈ ಮೊದಲಿನ ನವೋದಯದ ಕಾಲದಲ್ಲಿ ಕನ್ನಡ ಕಾವ್ಯಕ್ಷೇತ್ರವನ್ನು ಪ್ರವೇಶಿಸಿ, ಆ ಕಾಲದ ಮಹಾಸತ್ವಗಳ ಪ್ರೇರಣೆಯಿಂದ ಅಚ್ಚುಕಟ್ಟಾದ ಪದ್ಯಬಂಧಗಳಿಗೆ ಒಲಿದ ಡಾ. ಪುರಾಣಿಕ ಅವರಂಥವರನ್ನು ಅಂದಿನ ಸಾಹಿತ್ಯ ವಲಯ ಕವಿ ಎಂದು ಸ್ವೀಕರಿಸಲು ಸಿದ್ಧವಿರಲಿಲ್ಲ. ಅಷ್ಟೇ ಅಲ್ಲ ಒಟ್ಟಾರೆಯಾಗಿ ನವೋದಯ ಮಾರ್ಗದ ಹಾಗೂ ಕವಿತೆಯ ಬಗ್ಗೆ ಅರುಚಿಯನ್ನೇ ಹುಟ್ಟಿಸುವಂತಿದ್ದ ನವ್ಯ ಚಳುವಳಿಯ ಸಂದರ್ಭದಲ್ಲಿ ಬಹುಮಟ್ಟಿಗೆ ಏಕಾಂಗಿಯೂ ಅಜ್ಞಾತನೂ ಆಗಿ ಉಳಿದ ಡಾ. ಪುರಾಣಿಕರನ್ನು ಅಂದಿನ ಕಾವ್ಯಾಸಕ್ತ ಸಹೃದಯ ಸಮೂಹ ಗಮನಿಸಿತು. ಅವರ ಕಾವ್ಯವನ್ನು ಜನಪ್ರಿಯಗೊಳಿಸಿದವರು ನವ್ಯ ಕವಿಗಳೂ ಅಲ್ಲ, ನವ್ಯ ವಿಮರ್ಶಕರೂ ಅಲ್ಲ– ಡಾ. ಪುರಾಣಿಕರನ್ನು ಒಬ್ಬ ಕವಿ ಎಂದು ಒಪ್ಪಿಕೊಳ್ಳುವಂತೆ ಮಾಡಿದ್ದು ಆಕಾಶವಾಣಿಯ ಗೇಯಗಾರುಡಿಯೇ ಎನ್ನುವುದು ನನ್ನ ತಿಳಿವಳಿಕೆಯಾಗಿದೆ.

ಡಾ. ಪುರಾಣಿಕರನ್ನು ಕಾವ್ಯವಿಮರ್ಶಕ ವಲಯ ನಿರ್ಲಕ್ಷಿಸಿದರೂ ಅವರ ಕಾವ್ಯ ಕಣ್ಣ ಮುಂದಿನ ಬೆಳಕಾಗಿ ತೋರುವುದೆಂದು ಖ್ಯಾತ ಕವಿ ಬಿ.ಎ.ಸನದಿ ಅವರು ಒಂದೆಡೆ ಹೀಗೆ ವಿವರಿಸಿದ್ದಾರೆ:

'ಕಳೆದ ಮೂರು ದಶಕಗಳಲ್ಲಿ ಕಾವ್ಯಾನಂದರು ಬರೆದು ಪ್ರಕಟಿಸಿದ ಕಾವ್ಯಕೃತಿಗಳ ಸಂಖ್ಯೆಯೇನೂ ದೊಡ್ಡದಲ್ಲ. ಆದರೆ ಕಾವ್ಯಗುಣ ಮತ್ತು ಕಾವ್ಯ ಸತ್ವಗಳನ್ನು ಗಣನೆಗೆ ತೆಗೆದುಕೊಂಡರೆ ಇವರ ಕಾವ್ಯ ಕನ್ನಡದ ನವೋದಯ ಕಾವ್ಯಕ್ಕೆ ಸಲ್ಲಿಸಿದ ಮಹತ್ವದ ಕೊಡುಗೆಯೆಂದೇ ಹೇಳಬೇಕು. ಈ ಮಾತಿನೊಡನೆ ಸಹಮತವುಳ್ಳವರಿಗೆ ಕೆಲವೊಂದು ಪ್ರಶ್ನೆಗಳು ಪೀಡಿಸುವ ಸಂಭವವುಂಟು. ಆಧುನಿಕ ಕನ್ನಡ ಕಾವ್ಯ ಪ್ರಗತಿಯ ರೆಕಾರ್ಡಿಕರಣಗೈದ ಚಾರಿತ್ರಿಕ ಗ್ರಂಥಗಳಲ್ಲಿ, ಲೇಖನಗಳಲ್ಲಿ ಕಾವ್ಯಾನಂದರಿಗೆ ಸಮುಚಿತ ಸ್ಥಾನವೇಕೆ ಪ್ರಾಪ್ತವಾಗಲಿಲ್ಲ? ಕೆಲವು ಕನ್ನಡ ಅಂಥಾಲಜಿಗಳಲ್ಲಿ ಇವರ ಕವನಗಳಿಗೆ ಸಲ್ಲಬೇಕಾದ ಪ್ರಾತಿನಿಧ್ಯ ಏಕೆ ದೊರೆಯಲಿಲ್ಲ? ಬೆನ್ನ ಹಿಂದಿನ ಬೆಳಕಿನಲ್ಲಿ ಮಾತ್ರ ಇವರೇ ಮುಂದಿನಲೆಯಾಗಿದ್ದಾರೆಂಬುದೊಂದು ಸಮಾಧಾನದ ಸಂಗತಿಯೇ? ಕಣ್ಣ ಮುಂದಿನ ಬೆಳಕನ್ನೇ ಕಾಣದಿರುವವರ, ಅಥವಾ ಕಂಡೂ ಕಾಣದಂತಿರುವವರ ದೃಷ್ಟಿ ದೌರ್ಬಲ್ಯದಿಂದಾಗಿ ಪ್ರಾಮಾಣಿಕ ಓದುಗ ಐತಿಹಾಸಿಕ ಸತ್ಯವಾದ ಬೆಳಕಿನಿಂದ ವಂಚಿತನಾಗಬಹುದೆಂಬ ಅನುಮಾನದಿಂದ ತಮ್ಮಷ್ಟಕ್ಕೆ ತಾವೇ ಬೆನ್ನ ಹಿಂದಿನ ಬೆಳಕೆಂದುಕೊಂಡು 'ದುಯ್ಯಮಸ್ಥಾನ'ದಲ್ಲಿರಿಸಿ ಕೊಳ್ಳುವುದೊಂದು ಅಭಿಮಾನದ ಸಾಧನೆಯೆ? ಕನ್ನಡದ ಪ್ರಾಮಾಣಿಕ ಓದುಗರು ಸ್ವಯಂ ಪ್ರೇರಣೆಯಿಂದ ಹತ್ತೂ ಕಡೆಯ ಕವಿಗಳ ಕಾವ್ಯವನ್ನೋದಿ ಅದರ ಬೆಲೆಕಟ್ಟಬಲ್ಲವರು ಇಂದಿಲ್ಲ–ನಾಳೆ ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟು ಗೆಲ್ಲಬಹುದು. ಇಲ್ಲವೆ ಸೋಲಬಹುದು. ಪರಿಣಾಮವೇನೇ ಆಗಲಿ, ಈ ಮಾದರಿಯ ಪ್ರಶ್ನೆಗಳ ಅಸ್ತಿತ್ವವನ್ನು ಮಾತ್ರ ಅವರು ಅಲ್ಲಗಳೆಯಲಾರರು, ಆಧುನಿಕ ಕನ್ನಡದ ಸಮಗ್ರ ಕಾವ್ಯದ ಮೇಲೆ ತಮ್ಮ ತಿಳಿಗಣ್ಣಾಡಿಸುವ ಯಾರಾಗಲೀ ಕಾವ್ಯಾನಂದರಂಥ ಕವಿಗಳ ಗಣನೀಯ ಕಾವ್ಯ ಸಾಧನೆಯ ಮೇಲೆ ತಾತ್ಸಾರದ ಪರದೆಯೆಳೆಯಲಾರರು.' (ಕಾವ್ಯಾನಂದ ಪು. ೪೯)

ಇತ್ತೀಚೆಗೆ ಡಾ. ಪುರಾಣಿಕರ ಸುಪುತ್ರ ಪ್ರಸನ್ನಕುಮಾರ್ ಅವರು 'ಸಮಗ್ರ ಕಾವ್ಯ'ವನ್ನು ಪ್ರಕಟಿಸಿದ್ದಾರೆ. ಇದು ಸಮಸ್ತ ನಾಡವರ ಗಮನ ಸೆಳೆದಿದೆ. ಕನ್ನಡ ಕಾವ್ಯ ಪರಂಪರೆಯನ್ನು ಅಧ್ಯಯನ ಮಾಡುತ್ತಿರುವ ಯುವ ವಿದ್ವಾಂಸರು ಇವರ ಕಾವ್ಯಗಳನ್ನು ಚಿಂತನೆಗೈಯುತ್ತಿರುವುದು ಸಮಾಧಾನದ ಸಂಗತಿಯಾಗಿದೆ.

೩

ಮಹರ್ಷಿ ಅರವಿಂದರು ತಮ್ಮ ಭವಿಷ್ಯತ್‌ಕಾವ್ಯ (The Future Poetry) ಎಂಬ ಕೃತಿಯಲ್ಲಿ ಕಾವ್ಯಸೌಂದರ್ಯದ ನಾಲ್ಕು ಬಗೆಗಳನ್ನು ಹೇಳುತ್ತಾರೆ: ೧. ಐಂದ್ರಿಯಿಕ ಸೌಂದರ್ಯ(Sensous beauty) ೨.ಕಾಲ್ಪನಿಕ ಸೌಂದರ್ಯ, (Imaginative beauty) ೩.ಬೌದ್ಧಿಕ ಸೌಂದರ್ಯ (Intellectuual beauty) ೪.ಆಧ್ಯಾತ್ಮಿಕ ಸೌಂದರ್ಯ(Spiritual beauty)

ಕನ್ನಡದ ಮಟ್ಟಿಗೆ ನೋಡುವುದಾದರೆ ಈ ನಾಲ್ಕು ಬಗೆಯ ಸೌಂದರ್ಯ ಪ್ರಜ್ಞೆಯನ್ನಿಟ್ಟುಕೊಂಡು ಕಾವ್ಯರಚಿಸಿದವರು ವಿರಳ. ಕೆಲವು ಕವಿಗಳಲ್ಲಿ ಮೇಲಿನ ಮೂರು ಬಗೆಯ ಸೌಂದರ್ಯಪ್ರಜ್ಞೆ ಕಂಡರೂ ನಾಲ್ಕನೆಯ ಆಧ್ಯಾತ್ಮಿಕ ಸೌಂದರ್ಯಪ್ರಜ್ಞೆಯ ಕೊರತೆ ಕಾಣದಿರದು. ಆದರೆ ಜಿ.ಎಸ್. ಶಿವರುದ್ರಪ್ಪನವರ ಕಾವ್ಯದಲ್ಲಿ ಈ ನಾಲ್ಕೂ ಬಗೆಯ ಸೌಂದರ್ಯಪ್ರಜ್ಞೆಯನ್ನು ನಾವು ಕಾಣಬಹುದು. ಇವರ ಕಾವ್ಯದಲ್ಲಿ ಇಂದ್ರಿಯಗಮ್ಯ ಅನುಭವಗಳಿದ್ದಂತೆ, ಕಲ್ಪನಾವಿಲಾಸವು ಮೆರೆದಿದೆ. ಬೌದ್ಧಿಕ ಚಮತ್ಕಾರವಂತೂ ಕಾವ್ಯದುದ್ದಕ್ಕೂ ಹೆಡೆಎತ್ತಿರುವುದನ್ನು ಯಾರಾದರೂ ಗಮನಿಸಬಹುದು. ಕೊನೆಯದಾದ ಅಧ್ಯಾತ್ಮಿಕ ಸೌಂದರ್ಯ ಅವರ ತೀರ್ಥವಾಣಿ ಕವನ ಸಂಗ್ರಹ ಅವಲೋಕಿಸಿದರೆ ಮನದಟ್ಟಾಗುವುದು. ವೈಚಾರಿಕ ನೆಲೆಯ ಶುದ್ಧ ಅಧ್ಯಾತ್ಮ ತತ್ವ ಅವರ ಕಾವ್ಯದಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಎದ್ದು ತೋರುತ್ತದೆ.

ಡಾ. ಪುರಾಣಿಕ ಅವರ ಕಾವ್ಯದ ಪರಮಗುರಿ ಎಂದರೆ ಮಾನವಪ್ರೀತಿ. ಪ್ರೀತಿಯಿಲ್ಲದ ಜಗತ್ತು ಅವರ ಪಾಲಿಗೆ ಬರೀ ಕತ್ತಲೆ. ಮಾನವ ಪ್ರೀತಿಯೊಂದಿಗೆ ಸಮಕಾಲೀನ ವಸ್ತು ವಿಷಯ ಚಿಂತನೆಗಳು ಅವರ ಕಾವ್ಯದ ಜೀವಾಳವಾಗಿವೆ. ಪ್ರಸ್ತುತ ಸಾಮಾಜಿಕ ಸಂದರ್ಭಕ್ಕೆ ತಕ್ಷಣ ಕಾವ್ಯದ ಮೂಲಕ ಪ್ರತಿಕ್ರಿಯಿಸುವ ಅವರ ರೀತಿ ಅನನ್ಯವಾದುದು. ಕುವೆಂಪು ಅವರಿಂದ ಪ್ರೇರಿತರಾದರೂ ಕುವೆಂಪು–ಬೇಂದ್ರೆ ಕಂಡ ನಿಸರ್ಗಕ್ಕಿಂತಲೂ ಬೇರೆಯಾದ ರೀತಿಯಲ್ಲಿ ಗಮನಿಸುವ ಪುರಾಣಿಕ ಅವರ ಕಾವ್ಯದ ದಾರಿ ವಿನೂತನವಾಗಿದೆ. ಪೂರ್ವ ಕವಿಗಳು ನಿಸರ್ಗದ ಸೌಂದರ್ಯವನ್ನು ಕಲ್ಪನಾತೀತವಾಗಿ ವರ್ಣಿಸಿದರೆ, ಪುರಾಣಿಕ ಅವರಿಗೆ ನಿಸರ್ಗ ಮಾನವ ಬದುಕಿನ ಒಂದು ಅಂಗವಾಗಿ ತೋರುತ್ತದೆ. ರಾಜಕೀಯ ವಿಡಂಬನೆ–ಧಾರ್ಮಿಕ ಅನಾಚಾರ, ಧರ್ಮ ದೇವರು ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಗಳನ್ನು ಕುರಿತು ಅವರು ತೀವ್ರವಾಗಿ ಪ್ರತಿಕ್ರಿಯಿಸುವ ಕವನಗಳು ವಿಶೇಷವಾಗಿ ನಮ್ಮ ಗಮನ ಸೆಳೆಯುತ್ತವೆ.

ಡಾ. ಪುರಾಣಿಕರು ೧೯೩೨ರಲ್ಲಿ ಅಂದರೆ ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ 'ಬೆಳಗು' ಎಂಬ ಕವನವನ್ನು ಬರೆದರು. ಈ ಕವಿತೆ ಹುಟ್ಟಿದ ಸಂದರ್ಭವನ್ನು ಕಾವ್ಯಾನಂದರು ಹೀಗೆ ಸ್ಮರಿಸಿಕೊಂಡಿದ್ದಾರೆ:



'ಕನ್ನಡ ಕವನ ಸ್ಪರ್ಧೆಯೊಂದು ಏರ್ಪಟ್ಟಿತು. ಅದಕ್ಕೆ ಒಂದೇ ಕವಿತೆ ಬಂದಿತ್ತು. ಸ್ಪರ್ಧೆಯೆಂದ ಮೇಲೆ ಕನಿಷ್ಠ ಎರಡು ಕವಿತೆಗಳಾದರೂ ಇರಬೇಕಲ್ಲವೆ? ಸ್ಪರ್ಧೆಯ ಆಯೋಜಕರು ಕನ್ನಡ ಸಭೆಯೊಂದರಲ್ಲಿ ಈ ವಿಷಯದ ಸಖೇದ ಪ್ರಸ್ತಾಪ ಮಾಡಿ ಇಲ್ಲಿ ನೆರೆದವರಲ್ಲಿ, ಯಾರಾದರೂ ಇನ್ನೊಂದು ಕವಿತೆ ಕಳಿಸಿ ಸ್ಪರ್ಧೆ ವಿಫಲವಾಗದಂತೆ ಸಾಗಬೇಕೆಂದು ಕಳಕಳಿಯಿಂದ ಕೇಳಿಕೊಂಡರು. ಅಂದು ರಾತ್ರಿಯೆಲ್ಲ ಅದೇ ಯೋಚನೆ ನನಗೆ. ಯಾವಾಗ ನಿದ್ರೆ ಹತ್ತಿತೋ ಗೊತ್ತಿಲ್ಲ. ಸ್ಪರ್ಧೆಗೆ ಕಳಿಸಬೇಕಾಗಿದ್ದ ಕವಿತೆ ಬೆಳಗನ್ನು ಕುರಿತುದಾಗಿರಬೇಕಿತ್ತು. ಬೆಳಗಾಗುತ್ತಲೇ ಬರೆಯಲು ಕುಳಿತೆ. ಕವಿತೆಯೊಂದು ಕೊನರಿತು ಕಾಗದದ ಮೇಲೆ. ಸ್ಪರ್ಧೆಎಗೆ ಕಳಿಸಿದೆ. ಅದಕ್ಕೇ ಪ್ರಥಮ ಪಾರಿತೋಷಕ ಬಂದಿತು. ಕಲಬುರ್ಗಿಯಲ್ಲೆಲ್ಲ ನಾನು ಕವಿಯೆಂಬ ಖ್ಯಾತಿ ಹರಡಿತು. ಅಂತೂ ಅಂದು ಕವಿಯಾಗಿಬಿಟ್ಟೆ. ... ನನ್ನ ಕನ್ನಡ ಗುರುಗಳೂ ಹಿಗ್ಗಿದರು. ಕವಿತೆಯನ್ನು ಓದಿಸಿ ಕೇಳಿ ಅಲ್ಲಲ್ಲಿ ಸರಿಪಡಿಸಿದರು. ಪೂಜ್ಯ ತಂದೆಯವರೂ ಕವಿತೆಯ ಪ್ರತಿ ತರಿಸಿಕೊಂಡು ನೋಡಿ ತಮ್ಮ ಆನಂದವನ್ನು ತಿಳಿಸಿದ್ದರು.' (ಕಾವ್ಯಾನಂದ ಪು. ೬೦)

**ಇಂದಿನುಷೆ ತಂದಿಹಳು ಸೌಂದರ್ಯ ಸಂದೇಶ**
**ಜಗದ ಜೀವಗಳದರ ವಿವಿಧ ವೇಷ**
**ವಿಶ್ವಗರ್ಭವದೆಲ್ಲ ಒಂದೆ ಜೀವದ ಕೋಶ**
**ವಿಶ್ವಮಾನವ ಮೈತ್ರಿ ಪ್ರಕೃತಿಯಾದೇಶ!**

ಎಂದು ಪ್ರಾರಂಭವಾಗುವ ಈ ಬೆಳಗು ಕವಿತೆ ಕುವೆಂಪು ಅವರ ವಿಶ್ವಮಾನವ ಸಂದೇಶವನ್ನೇ ಹೊತ್ತು ನಿಂತಿದೆ. ಅತಿ ಚಿಕ್ಕ ವಯಸ್ಸಿನಲ್ಲಿಯೇ ಕಾವ್ಯಾನಂದರಿಗೆ ಕಾವ್ಯದೇವತೆ ಒಲಿದಳು ಎಂಬುದಕ್ಕೆ ಈ ಕವಿತೆ ಸಾಕ್ಷಿಯಾಗಿದೆ.

ಕಲಬುರ್ಗಿ ಪರಿಸರದಲ್ಲಿದ್ದ ಕಾರಣ ಉರ್ದು ಭಾಷೆಯ ಅಪಾರ ಅರಿವು ಇದ್ದ ಪುರಾಣಿಕರು ಮಹಮ್ಮದ ಇಕಬಾಲರ ಕಾವ್ಯತಂತ್ರಕ್ಕೆ ಮನಸೋತಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಇಕ್ಬಾಲರ ಒಂದೆರಡು ಕವಿತೆಗಳನ್ನು ಷಟ್ಪದಿ ಛಂದಸ್ಸಿನಲ್ಲಿ ರೂಪಾಂತರಿಸಿದ್ದರು. ಅವು 'ಜಯಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದವು.

ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರಂಥ ಮಹಾನುಭಾವರ ಸಂಗದಲ್ಲಿ ಡಾ. ಪುರಾಣಿಕರು ತಮ್ಮ ಭವಿಷ್ಯದ ಬೆಳಕು ಕಂಡರು. ಆಲಮಟ್ಟಿ ಆಶ್ರಮದಲ್ಲಿ ಇದ್ದ ಸಂದರ್ಭದಲ್ಲಿ ಡಾ. ಪುರಾಣಿಕರ ಕಾವ್ಯಕ್ಕೆ ಒಂದು ಮೂರ್ತಸ್ವರೂಪ ಪ್ರಾಪ್ತವಾಯಿತು. ಇಲ್ಲಿಯೇ ಅವರಿಗೆ 'ಕಾವ್ಯಾನಂದ' ಎಂಬ ಅಪರೂಪದ ಕಾವ್ಯನಾಮ ಲಭ್ಯವಾಯಿತು. ಈ ವಿಷಯವಾಗಿ ಅವರು ಹೇಳುವ ನುಡಿಗಳು ಹೀಗಿವೆ:

'ಆಲಮಟ್ಟಿಯಲ್ಲಿದ್ದಾಗಲೇ ನನ್ನ ಕಾವ್ಯನಾಮ 'ಕಾವ್ಯಾನಂದ' ನನಗೆ ಆಕಸ್ಮಿಕವಾಗಿ ಲಭ್ಯವಾಯಿತು. 'ಕಾವ್ಯದೇವಿ' ಎಂಬ ನೀಳ್ಗವಿತೆ ಬರೆದೆ. ಅದು 'ಶರಣ ಸಂದೇಶ'ದ ಸಂಚಿಕೆಯೊಂದರಲ್ಲಿ ಪ್ರಕಟವಾಗಿ ಈಗ ಮರಹಿನ ಉದರದಲ್ಲಿ ಕರಗಿ ಹೋಗಿದೆ! ಆದರೆ ಅದರ ಕೊನೆಯ ಎರಡು ಸಾಲು ನನ್ನ ಮಟ್ಟಿಗೆ ಎಂದೂ ಮರೆಯಲಾಗದ ಸಾಲುಗಳು:

ನಿಸ್ನಾತ್ಮವಾನಂದ ನಸ್ನಾತ್ಮ ಕಾವ್ಯ!
'ಕಾವ್ಯಾನಂದ' ನಾಮ ಸುಶ್ರಾವ್ಯ

ಅಂದಿನಿಂದ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ನಾದ; 'ಕಾವ್ಯಾನಂದ' ಯಾರು ಎಂಬುದು ಎಲ್ಲರಿಗೂ ಗೊತ್ತಾದ ಮೇಲೆ 'ಕಾವ್ಯಾನಂದ+ಪುರಾಣಿಕ' ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ) ಎಂದು ಏನೇನೋ ಆಗಿ ಈಗ ಬಚ್ಚಬರಿಯ ಸಿದ್ಧಯ್ಯ ಪುರಾಣಿಕ' (ಕಾವ್ಯಾನಂದ ಪು. ೧೨೦–೧೨೧)

ಡಾ. ಪುರಾಣಿಕರಿಗೆ 'ಕಾವ್ಯಾನಂದ' ಎಂಬ ನಾಮ ಅವರ ಕಾವ್ಯಜೀವನಕ್ಕೆ ಒಂದು ಹೊಸತನವನ್ನು ತಂದುಕೊಟ್ಟಿತು. ಮಂಜಪ್ಪನವರ ಶರಣ ಸಂದೇಶ, ಆನಂದಕಂದರ ಜಯಂತಿ, ಜಯಕರ್ನಾಟಕ ಮೊದಲಾದ ಪತ್ರಿಕೆಗಳಲ್ಲಿ ಕಾವ್ಯಾನಂದರ ಕವನಗಳು ಪ್ರಕಟಗೊಂಡು ನಾಡಜನತೆಯ ಗಮನ ಸೆಳೆದವು. ಕಾವ್ಯದ ಪರಮಪ್ರಯೋಜನ ಆನಂದ. 'ಆನಂದ'ಕ್ಕಾಗಿಯೇ 'ಕಾವ್ಯ' ಎಂಬ ಸೂತ್ರ ರೂಪುಗೊಂಡಿತು. ಈ ಆನಂದ ಪುರಾಣಿಕರ ಬಾಳಿನಲ್ಲಿ 'ಕಾವ್ಯಾನಂದ'ವಾಗಿ ಹೊರಹೊಮ್ಮಿತು.

ಕವಿ ಹೃದಯದ ಕಾವ್ಯಾನಂದರಿಗೆ ತಮ್ಮ ಬದುಕಿನಲ್ಲಿ ಸಂಚಯನಗೊಂಡ ಅನುಭವಗಳನ್ನು ಲೋಕದೆದುರು ತೋಡಿಕೊಳ್ಳುವ ಹಂಬಲವಿದೆ. ಅದರಿಂದ ತಮ್ಮೊಳಗಿನ ಅನುಭವಗಳ ಒತ್ತಡದ ವೇದನೆಯಿಂದ ಬಿಡುಗಡೆಯಾಗುವ ಸುಖವಿದೆ ಎಂದು ಅವರು ಭಾವಿಸಿದ್ದಾರೆ. ಓದುಗರ ಮುಂದೆ ತಮ್ಮ ಅನುಭವದ ಅಭಿವ್ಯಕ್ತಿಯನ್ನು ಹೇಳಿಕೊಳ್ಳುವುದರಿಂದ ಮನಸ್ಸಿಗೆ ಸಮಾಧಾನವಿದೆ ಎಂಬುದು ಅವರ ಅಭಿಪ್ರಾಯ. ಅನುಭವಗಳು ಪ್ರಾಯಶಃ ಯಾರನ್ನೂ ಬೆನ್ನತ್ತಿ ಹೋಗುವುದಿಲ್ಲ. ಲೋಕದ ಮಧ್ಯೆ ಬದುಕುವ ಎಂಥವರಿಗೂ ನಿರಂತರವಾದ ಸಂಪರ್ಕ ಸೇತುವೆಯಾಗಿ ಅನುಭವ ನಿಲ್ಲುತ್ತದೆ. ಎಷ್ಟೋ ಅನುಭವಗಳು ಕ್ರಿಯೆ–ಪ್ರತಿಕ್ರಿಯೆಗಳ ಮೂಲಕ ಅಭಿವ್ಯಕ್ತಗೊಂಡರೆ ಇನ್ನೂ ಕೆಲವು ಅನುಭವಗಳು ಅಂತರಂಗದ ತಲಾತಲದಲ್ಲಿ ಮುಳುಗಿ ಹೋಗುತ್ತವೆ. ಇಂಥ ಅನುಭವಗಳಿಗೆ ಆಕಾರಕೊಡುವ ಮೂಲಕ ಕಾವ್ಯಾನಂದರು ಕಾವ್ಯ ನಿರ್ಮಾಣ ಮಾಡಿದ್ದಾರೆ. ತಾವು ಕಂಡುಂಡ ಲೋಕಸತ್ಯಗಳನ್ನು ಅತ್ಯಂತ ನಿರ್ಭೀತಿಯಿಂದ ಹೇಳುವ ದೃಷ್ಟಿ ವಿನೂತನವಾಗಿದೆ. ಕಾವ್ಯಾನಂದರಿಗೆ ಲೋಕದ ಹಂಗು ಇಲ್ಲ. ಎಂಥವರನ್ನು ಎದೆಗಾರಿಕೆಯಿಂದ ಮಾತನಾಡಿಸುವ ಅತುಲ ಶಕ್ತಿ ಇದೆ. ರಾಜಕೀಯ–ಧಾರ್ಮಿಕ ವ್ಯವಸ್ಥೆಯಲ್ಲಿನ ದೋಷ–ದೌರ್ಬಲ್ಯಗಳನ್ನು, ಅಸಂಗತ ಅಪಸವ್ಯಗಳನ್ನು ಕುರಿತು ಕವನಗಳ ಮೂಲಕ ಚಾಟಿ ಬೀಸುವ ಪುರಾಣಿಕರ ಕಾವ್ಯ ಅಧ್ಯಯನ ಯೋಗ್ಯವಾಗಿದೆ.

ಪ್ರತಿಭೆ ಮತ್ತು ಸ್ಫೂರ್ತಿ ಸೃಜನಶೀಲತೆಯ ಮುಖ್ಯ ಲಕ್ಷಣಗಳಾಗಿವೆ. ಸ್ವೋಪಜ್ಞತೆಯ ಮೂಲ ಕಾರಣಗಳಾಗಿವೆ. ಸೃಜನಶೀಲತೆ ಮತ್ತು ಸ್ವೋಪಜ್ಞತೆಗಳು ಸಾರ್ಥಕಗೊಳ್ಳುವುದು ಸೌಂದರ್ಯದೃಷ್ಟಿಯಲ್ಲಿ. ಆದುದರಿಂದ ಜೀವನದ ಎಲ್ಲ ಸೃಷ್ಟ್ಯಾತ್ಮಕ ಕ್ರಿಯೆಗಳಿಗೂ ಪ್ರತಿಭೆ ಮತ್ತು ಸ್ಫೂರ್ತಿಗಳಿಂದಲೇ ಅಪೂರ್ವ ಸಿದ್ಧಿ ಪ್ರಾಪ್ತವಾಗುತ್ತದೆ. ಸೌಂದರ್ಯ ಎನ್ನುವುದು ಒಂದು ಅಮೂರ್ತ ಪರಿಕಲ್ಪನೆ. ಅನುಭವಗಮ್ಯವಾದ ಸೌಂದರ್ಯವನ್ನು ಮೂರ್ತೀಕರಿಸಲು



ಕಾವ್ಯಾನಂದರು ಅಭಿವ್ಯಕ್ತಿ ಮಾಧ್ಯಮವಾಗಿ ಕಾವ್ಯ ಆಯ್ದುಕೊಂಡಿದ್ದಾರೆ. (ಅವರ ವಚನಗಳಲ್ಲಿಯೂ ಸೌಂದಾರ್ಯನುಭೂತಿಯನ್ನು ಗುರುತಿಸಬಹುದು.) ಪ್ರತಿಭೆ ನವನವೋನ್ಮೇಷಶಾಲಿನಿ ಎಂದು ಪ್ರಾಚೀನ ಲಾಕ್ಷಣಿಕರು ಹೇಳುತ್ತಾರೆ. ಸಾಹಿತ್ಯ ರಚನೆ ಮಾಡುವವರು ತಮ್ಮ ಪ್ರತಿಭೆಯನ್ನು ಉಜ್ವಲಗೊಳಿಸಬೇಕಾಗುತ್ತದೆ. ಅಭಿವ್ಯಕ್ತಿಗೆ ಸಮಕಾಲೀನ ಸಂವೇದನೆಗಳ ಹೊಸ ಜೀವ ತುಂಬಬೇಕಾಗುತ್ತದೆ. ಕವನ ಕಲೆಯಲ್ಲಿ ಪರಿಣಿತಿ ಸಾಧಿಸಿದ ಕಾವ್ಯಾನಂದರು ನಾಲ್ಕು ಮುಖ್ಯ ಅಂಶಗಳನ್ನು ಅಳವಡಿಸಿಕೊಂಡಿದ್ದಾರೆ. ಆ ಮೂಲಕ ಕವನಗಳಿಗೆ ಒಂದು ಸೂಕ್ಷ್ಮವೂ ಸಂವೇದನಾಶೀಲವೂ ಆದ ಗುಣವನ್ನು ತಂದುಕೊಟ್ಟಿದ್ದಾರೆ. ೧. ಅದ್ಭುತ ಪ್ರತಿಭೆ, ೨. ಅಕೃತಕ ಚತುರತೆ ಅಥವಾ ಸಹಜ ಬುದ್ಧಿಕೌಶಲ, ೩. ಹಿರಿಯ ವಿದ್ವಾಂಸರಲ್ಲಿ, ಸಾಹಿತ್ಯಲೋಕದ ಪೂರ್ವಸೂರಿಗಳಲ್ಲಿ ಅಚಲವಾದ ಶ್ರದ್ಧೆ–ನಿಷ್ಠೆ, ಅವರ ನಿಕಟ ಸಂಪರ್ಕ, ಮತ್ತು ೪. ಪ್ರಾಚೀನ ವಚನಪರಂಪರೆಯ ವ್ಯಾಸಂಗ ಮತ್ತು ಕಾವ್ಯಪರಂಪರೆಯ ಪ್ರಜ್ಞೆ, ಈ ನಾಲ್ಕು ಮುಖ್ಯ ಅಂಶಗಳ ಮೇಲೆ ಕಾವ್ಯಾನಂದರ ಕಾವ್ಯಸೌಧ ನಿರ್ಮಾಣವಾಗಿದೆ.

ಕವನ ರಚನೆಗೆ ಪ್ರತಿಭೆ ಮಾತ್ರ ಮುಖ್ಯವಲ್ಲ, ಪ್ರಜ್ಞೆಯೂ ಅಗತ್ಯವಾಗಿದೆ. 'ಕಲ್ಪಕತೆಯಿಂದ ಉದ್ದೀಪ್ತವಾದ ಪ್ರಜ್ಞೆ ಕಾವ್ಯಸೃಷ್ಟಿಗೆ ಅಗತ್ಯ' ಎಂದು ಪಾಶ್ಚಾತ್ಯ ವಿಮರ್ಶಕನೊಬ್ಬ ಅಭಿಪ್ರಾಯ ಪಡುತ್ತಾನೆ. ಕಾವ್ಯಾನಂದರ ಸುಪ್ತಪ್ರಜ್ಞೆಯಲ್ಲಿ ಧಾರ್ಮಿಕ–ಸಾಮಾಜಿಕ ಚಿಂತನೆಯ ಆಲೋಚನೆಗಳಿವೆ. ಆ ಆಲೋಚನೆಗೆ ಪ್ರತಿಭೆಯ ಸಂಗ ಒದಗಿ, ಕವನರೂಪದಲ್ಲಿ ಮೈದಾಳಿವೆ. ಕಾವ್ಯಾನಂದರ ವಿಶಾಲವಾದ ಅಧ್ಯಯನದಿಂದ, ಜೀವನದ ಬಹುಮುಖ ಅನುಭವದಿಂದ ರೂಪುಗೊಂಡ ನೈತಿಕ ಮೌಲ್ಯ ವಿವೇಚನೆ ಮತ್ತು ಪರಿಪಕ್ವ ದೃಷ್ಟಿಯನ್ನು ಅವರ ಕವನಗಳಲ್ಲಿ ಕಾಣಬಹುದು. 'ಶಕ್ತಿರ್ನಿಪುಣತಾ ಲೋಕಶಾಸ್ತ್ರ ಕಾವ್ಯಾದ್ಯವೇಕ್ಷಣಾತ್' ಎಂದು ಮಮ್ಮಟ ಹೇಳುತ್ತಾನೆ. ಲೋಕಾನುಭವ, ವಿವಿಧ ಭಾಷೆ–ಶಾಸ್ತ್ರಗಳ ಅಧ್ಯಯನ, ಪ್ರಾಚೀನ ಕಾವ್ಯಚಿಂತನೆ ಇವುಗಳಿಂದ ಕಾವ್ಯಾನಂದರ ಕಾವ್ಯ ಪರಿಪೂರ್ಣಗೊಂಡಿದೆ. ಕಾವ್ಯಾನಂದರ ಕಾವ್ಯ ಪ್ರಭುಸಮ್ಮಿತವಲ್ಲ, ಅದು ಕಾಂತಾ ಸಮ್ಮಿತವಾಗಿದೆ.

೪

೧೯೫೩ರಲ್ಲಿ ಕಾವ್ಯಾನಂದರ ಮೊದಲ ಸಂಕಲನ 'ಜಲಪಾತ' ಪ್ರಕಟವಾಯಿತು. ೧೯೪೮ರಿಂದ ೧೯೫೨ರ ತನಕ ಅವರು ನಡೆಸಿದ ಕಾವ್ಯಚಿಂತನೆಯ ಫಲವಾಗಿ ಈ ಸಂಕಲನ ರೂಪುಗೊಂಡಿದೆ. ಈ ಕೃತಿಗೆ ಮುನ್ನುಡಿ ಬರೆದು ಹರಸಿದವರು ಖ್ಯಾತ ಕವಿ ದ.ರಾ.ಬೇಂದ್ರೆಯವರು.

'ಸಿದ್ಧಯ್ಯನವರ ಕೌಟುಂಬಿಕ ವಾತಾವರಣದಲ್ಲಿ ಮಹಾಕಾವ್ಯದ ಧ್ವನಿಗಳು ಅವರ ಬಾಲ್ಯದಿಂದಲೇ ದುಂದುಭಿಸುತ್ತಿದ್ದವು. ಪ್ರಾಯದ ಪ್ರಥಮ ಗ್ರಾಸದಲ್ಲಿಯೇ ಅವರು ಶರಣರ ಸಾಹಿತ್ಯವನ್ನು ಮುಕ್ಕಿದರು; ದೇಶಸೇವಾತತ್ಪರರಾದವರ ಸಂಗ ಸಹವಾಸಗಳಲ್ಲಿ ಕಾಲ ಕಳೆದರು. ಅವರು ಮಾಡಿದ ವಿದ್ಯಾಭ್ಯಾಸವೂ ಅವರ ಹೃದಯದ ವರೆಗೆ ಪ್ರವೇಶ ಮಾಡಿತು. ಇದೆಲ್ಲದರ ಪರಿಣಾಮವೆಂದರೆ ಅವರಲ್ಲಿ ಭಾವನೆಯ ವಾಯುವೇಗವೂ ಬುದ್ಧಿಯ ಅಗ್ನಿಗುಣವೂ ಸೇರಿಕೊಂಡುದು. ಅಗ್ನಿಪುತ್ರಿಗೆ

> ವಾಯುಪುತ್ರನ ಯುತಿಯಾದಾಗ ಕುರುಕ್ಷೇತ್ರವೂ ಚಿಕ್ಕದಾಯಿತೆಂಬುದನ್ನು ಕನ್ನಡದ ಕವಿ ರನ್ನನು ತನ್ನ ರೌದ್ರರಸಭರಿತವಾದ 'ಗದಾಯುದ್ಧ'ದಲ್ಲಿ ಬಣ್ಣಿಸಿದ್ದಾನೆ. ಕನ್ನಡ ಕಂದ ಕಾವ್ಯಾನಂದರು ಇಪ್ಪತ್ತನೆಯ ಶತಮಾನದ ವಿಶ್ವಗ್ರಾಸಿಯಾದ ಜ್ವಾಲಾಮಾಲೆಯಲ್ಲಿ ಕಂಡ ಕಾಲದ ಘೋರ ರೂಪವನ್ನು ಅನೇಕ ಮುಖವಾಗಿ ವರ್ಣಿಸಿದ್ದಾರೆ. ಅವರ ಕಾವ್ಯವಾಣಿಯಲ್ಲಿ ಆಕರ್ಷಣೆ-ವಿಕರ್ಷಣೆ ಸರಿ ತೂಕವಾಗಿ ಸೇರಿಕೊಂಡಿವೆ. ಇಲ್ಲಿಯ ಓಜಸ್ಸಿನ ಕಾಂತಿಮತ್ತಾದ ಗುಣ ಇದರಲ್ಲಿದೆ.' (ಮುನ್ನುಡಿ)

ಬೇಂದ್ರೆಯವರ ನುಡಿಯಂತೆ ಕಾವ್ಯಾನಂದರ ಈ ಕವನಗಳಲ್ಲಿ ಬೆಂಕಿಯೂ ಇದೆ, ಬೆಳಕೂ ಇದೆ. ಮಾನವ ಸಮಾಜದ ಸಮಕಾಲೀನ ಸಂದರ್ಭವನ್ನು ಕಾವ್ಯದ ಮೂಲಕ ಅಭಿವ್ಯಕ್ತಿಸಿದ್ದಾರೆ. ನಾಡು ನುಡಿ ಚಿಂತನೆ, ರಾಷ್ಟ್ರ ಚಿಂತನೆ, ದೇಶದ ಮೇಲೆ ನಡೆದ ಅನ್ಯಾಯ, ಯುದ್ಧ ಮೊದಲಾದ ಸಮಕಾಲೀನ ಸನ್ನಿವೇಶವನ್ನು ನಿರುದ್ವೇಗ ದೃಷ್ಟಿಯಿಂದ ಪರಿಶೀಲಿಸಿ ಕಾವ್ಯದ ಮೂಲಕ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

ಪ್ರಾರಂಭದ ಕವನ ಜಲಪಾತದಲ್ಲಿ 'ಸಾರಿಬಂದೆನ್ನ ಮನಶ್ಶೈಲಶಿಖರಕೆ ಎರಗಿ, ಬಾಳ ರುಚಿ ನಾಲ್ಕರಲಿ ನಾಲ್ಕುಮುಖವಾಗಿ, ಹಾರಿ ಹರಿಂಯುತಲಿಹುದು ಹಾಡಿ ಮೊರೆಯುತಲಿಹುದು, ಹಾಡಾಗಿ ಹರಿಯುವುದೆ ಬಾಳ ಸುಖವಾಗಿ!' ತಮ್ಮ ಅನುಭವಗಳು ಹಾಡಿನ ಜಲಪಾತವಾಗಿ ಹರಿಯಲಿ ಎಂದು ಆಶಿಸಿದ್ದಾರೆ.

'ಅಬ್ಬರದ ತಡಸಲು' ಎಂಬ ಕವನ ರಜಾಕಾರರ ಹಾವಳಿಯ ಸಂದರ್ಭದಲ್ಲಿ ಬರೆದದ್ದು. ಕವಿ ಯಾವುದೇ ಸೀಮೆಯಿಲ್ಲದ ನಿಸ್ಸೀಮ. ಅವನಿಗೆ ಲೋಕವೇ ಮನೆ, ಲೋಕದ ಸಮಸ್ತರೂ ಬಂಧುಗಳು. 'ನನ್ನ ಸ್ವಾತಂತ್ರ್ಯವೇ ನನ್ನ ರಾಗದ ಗುಟ್ಟು, ನನಗಿಲ್ಲ ಅವರಿವರ ಕಟ್ಟುನಿಟ್ಟು, ಎಡರು ಕಂಟಕಗಳನು ತೊಡೆದು ದಾರಿಯ ಕೊರೆವ, ಕಾರ್ಯ ನನ್ನದು, ನಾನು ಆರದಿಹ ಸಿಟ್ಟು' ಎಂದು ತೊಡೆ ತಟ್ಟಿ ಹೇಳುತ್ತಾರೆ. ನಾಶದಲೆ ವಿಕಾಸವಿದೆ ಆದ್ದರಿಂದ ನನ್ನ ಶಕ್ತಿ ಫಲಕಾರಿ ಎನ್ನುತ್ತಾರೆ.

'ಮಾನವ ಸಮಾಜ' ಎಂಬ ಪದ್ಯವನ್ನು ೧೯೪೫ರಲ್ಲಿಯೇ ಕಾವ್ಯಾನಂದರು ರಚಿಸಿದ್ದರು. ಕವಿತೆ ದೀರ್ಘವಾಗಿದೆ. ಮಾನವರ ಸಂಖ್ಯೆ ಹೆಚ್ಚಾದಷ್ಟು ಮಾನವತೆ ಕಡಿಮೆಯಾಗಿ, ಕ್ರೂರಲೀಲೆಗಳೇ ತಾಂಡವಾಡುವುದನ್ನು ಒಂದು ಅದ್ಭುತ ರೂಪಕದ ಮೂಲಕ ಕಾವ್ಯಾನಂದರು ಕಟ್ಟಿಕೊಟ್ಟಿದ್ದಾರೆ. ಇತಿಹಾಸದುದ್ದಕ್ಕೂ ನಡೆದ ರಾಕ್ಷಸಿ ಅವತಾರಗಳನ್ನು ವರ್ಣಿಸಿದ್ದಾರೆ. ಮಾನವ ಸಮಾಜ ಆದರ್ಶಗಳನ್ನು ಗಾಳಿಗೆ ತೂರಿ, ಜ್ಞಾನ ಯೋಗಿಗಳಿಗೆ ವಿಷ ಕೊಟ್ಟ ನೀಚ ನಾಯಕರ ಮನವನ್ನು ತಣಿಸಿದೆ, ಮೂಕ ಪ್ರಾಣಿಗಳನ್ನು ದೇವರ ಹೆಸರಿನಲ್ಲಿ ಬಲಿಕೊಟ್ಟಿದೆ. ದುಡಿವವರನ್ನು ಹುಡಿಗಟ್ಟಿ ಶ್ರೀಮಂತರ ಮನ ತಣಿಸಿದೆ. ರಾಕ್ಷಸೀ ಲಾಲಸರ ಕ್ರೂರ ತೃಪ್ತಿಗಾಗಿ ಕೋಟಿ ಜೀವಗಳನ್ನು ಕಡಿದು ಕುಣಿದಿದೆ. ದೇಶ ಭಾಷೆಯ ಜಗಳ, ಧರ್ಮ ಪಂಥದ ಜಗಳ, ವರ್ಣ ವಂಶದ ಜಗಳನ್ನು ಪುಟಿಗೊಳಿಸಿದೆ. ಆತ್ಮಗಳನ್ನು ಮಾರಿ, ಪ್ರೀತಿಗಳನ್ನು ತೂರಿದೆ. ಇದರ ಪರಿಣಾಮವಾಗಿ ಮತನೀತಿಶಾಸ್ತ್ರಗಳು ಕೊಳೆತು ನಾರುವಂತಾಗಿವೆ. ಮಾನವರ ಸಂಖ್ಯೆ ಹೆಚ್ಚಾಗಿದೆ ಆದರೆ ಮಾನವತೆ ಉಳಿದಿಲ್ಲ. ಸ್ವಾತಂತ್ರ್ಯ ಸಿಕ್ಕಿಲ್ಲ, ಸುಖಶಾಂತಿ ಬೆಳೆದಿಲ್ಲ, ಮಾನವ ಪ್ರೇಮವೇ ಇನ್ನೂ ಹೊಳೆದಿಲ್ಲ ಎನ್ನುತ್ತಾರೆ ಕಾವ್ಯಾನಂದರು.



ಕುರಿಗಳನ್ನು ಕಾಯಲು ತೋಳಗಳನ್ನು ನಿಯಮಿಸಿದಂತಾಗಿದೆ. ಆದ್ದರಿಂದ ಕುರಿಗಳು ತೋಳಗಳನ್ನು ಕೊಲ್ಲುವ ಕಾಲ ಬಂದಿದೆ. ಸ್ವಾತಂತ್ರ್ಯ ದೊರೆಯದೆ ಹೋದರೆ, ಬಂಡಾಯ ಗುಡುಗಿ, ಮೂಕತೆಯ ಮೋಡದಲ್ಲಿ ಪ್ರತಿಭಟನೆ ಪುಟಿಯುತ್ತದೆ. ಸೇಡು ಸಿಡಿದೇಳುತ್ತದೆ, ಕ್ರಾಂತಿ ಕಿಡಿಗೆದರುತ್ತದೆ ಆದ್ದರಿಂದ ನಿನ್ನ ಅನ್ಯಾಯಗಳನ್ನು ನೀನೇ ಸರಿಪಡಿಸಿಕೋ ಎಂದು ಎಚ್ಚರಿಸುತ್ತಾರೆ ಕಾವ್ಯಾನಂದರು.

ಮುಂದಿನ ಕವನ 'ಬರುತಿದೆ ಬಡವರ ಯುಗ' ಹಿಂದಿನ ಕವನಕ್ಕೆ ಪೂರಕವಾಗಿ ಬಂದಿದೆ. ದಾರಿದ್ರ್ಯವು ದಾವಾನಲವಾಗಿ ಬಡವರನ್ನು ದಹಿಸಿದ ಕಾಲವು ಹೋಗಿ, ಬಡವರ ಯುಗವೊಂದು ಆವಿಷ್ಕಾರವಾಗುತ್ತದೆ ಎಂದು ಕಾವ್ಯಾನಂದರು ೧೯೪೪ ರಲ್ಲಿಯೇ ಕನಸು ಕಂಡಿದ್ದಾರೆ. ಹೆಚ್ಚಿನ ಧನ ಹೆಚ್ಚಿನ ಹಣ ರಾಷ್ಟ್ರದ ಆಸ್ತಿ, ಇದನ್ನು ಅರಿತುಕೊಳ್ಳದಿದ್ದರೆ ಸ್ವಾತಂತ್ರ್ಯ ನಾಶ ಎನ್ನುತ್ತ–

> **ಹೊಸಲೋಕವ ಕಟ್ಟುವ ಹೊಣೆ ಇಂದಿನ ಬಡವನದು**
> **ಹೊಸಬಾಳನು ರಚಿಸುವ ಹೊಣೆ ನಾಳಿನ ದುಡಿವನದು**

ಎಂದು ಹೇಳುತ್ತ ಎಚ್ಚರಿಕೆಯನ್ನು ನೀಡುತ್ತಾರೆ.

ಕಾವ್ಯಾನಂದರ ಕಾವ್ಯದಲ್ಲಿ ಶ್ರೀಮಂತರ ಬಗ್ಗೆ ರೋಷ ಆವೇಶ ಹೆಚ್ಚು ಪ್ರಕಟವಾಗಿದೆ. ಬಡವರನ್ನು ಯಾರೂ ಕೇಳುವುದಿಲ್ಲ. ಎಲ್ಲದಕ್ಕೂ ಬಡವ ಬೇಕು. ಆದರೆ ಬಡವನ ಪರಿಸ್ಥಿತಿ ಏನು ಎಂಬುದನ್ನು 'ನಿನ್ನಿರವೆ ನರಕ ಬಡವ!' ಎಂಬ ಕವಿತೆಯಲ್ಲಿ ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. 'ದೇವ ಧರ್ಮಗಳೆಲ್ಲ ದೈವವುಳ್ಳವರ ಪಾಲು, ಅಳಲೊಂದೆ ನಿನಗುಳಿದ ಸಿರಿಯು ಬಡವ' ಆದ್ದರಿಂದ ನಿನಗೆ ನೀನೇ ಗತಿ-ಮತಿ, ಇಲ್ಲದಿದ್ದರೆ ನಿನ್ನಿರವೆ ನರಕ ಎನ್ನುತ್ತಾರೆ.

ದ್ವಿತೀಯ ಮಹಾಯುದ್ಧದ ಪ್ರಾರಂಭ ಕಾಲದಲ್ಲಿ ಕಾವ್ಯಾನಂದರು 'ಬೆಟ್ಟದುರಿ' ಎಂಬ ರೂಪಕ ಕವನವನ್ನು ರಚಿಸಿದ್ದಾರೆ. ಬೆಂಕಿ-ಗಾಳಿ-ಕವಿ ಈ ಮೂರು ಪ್ರತಿಮೆಗಳ ಮೂಲಕ ಯುದ್ಧದ ಆಳ-ವಿಸ್ತಾರ-ವ್ಯಾಪ್ತಿ ಮತ್ತು ಅದರ ಪರಿಣಾಮಗಳನ್ನು ವಿವರಿಸಿದ್ದಾರೆ.

'ಬಡವರ ದುಃಖವೇ ಬರಸಿಡಿಲು ಧನಿಕ!' ಎಂಬ ಇನ್ನೊಂದು ಪದ್ಯ ಶ್ರೀಮಂತ ರಾಷ್ಟ್ರಗಳಿಗೆ, ಸಂಪತ್ತಿನ ವ್ಯಾಮೋಹಿಗಳಿಗೆ ಬರಸಿಡಿಲು ಎಂಬ ಆಶಯ ಹೊಂದಿದೆ. ಯುದ್ಧದ ಪರಿಣಾಮವಾಗಿ ಶ್ರೀಮಂತ ರಾಷ್ಟ್ರಗಳು ಬಡಿದಾಡುತ್ತಿರುವ ಸಂದರ್ಭದಲ್ಲಿ ಬಡದೇಶ ಭಾರತಕ್ಕೆ ಏನೂ ಆಗದು. ಭಾರತದ ಬಡವನ ಗುಡಿಸಲಿಗೆ ಭಯವಿಲ್ಲ, ಶ್ರೀಮಂತರ ಹೊನ್ನಕೊಪ್ಪರಿಗೆಗೆ ಆ ಭಯ ಎನ್ನುತ್ತಾರೆ.

ದ್ವಿತೀಯ ಯುದ್ಧದ ನಂತರ ನವ ವಿಶ್ವ ರಚನೆಯಾಗಬೇಕೆಂಬ ಆಶಯ ಕಾವ್ಯಾನಂದರದು. 'ನವಯುಗ ಲಕ್ಷ್ಮಿ' ಎಂಬ ಕವನದಲ್ಲಿ ಈ ಆಶಯವನ್ನು ಸಾರಿದ್ದಾರೆ. ಕೀಳು ಮೇಲುಗಳ ಕಾಳಕೂಟ ವಿಷ ಕಳೆದು, ಸ್ವಾರ್ಥ-ಅನ್ಯಾಯಗಳು ಬದಿಗೆ ಸರಿದು, ವರ್ಣದ್ವೇಷದ ಮೂಲ ಅಳಿದು, ಮೈತ್ರಿ ಬೆಳೆಯಬೇಕು. ಅದಕ್ಕಾಗಿ ನವ ವಿಶ್ವ ರಚನೆಯಾಗಬೇಕು ಎಂಬ ಕಲ್ಪನೆ ಇಲ್ಲಿದೆ.

೧೯೪೨ರಲ್ಲಿ 'ಏಷ್ಯಾ' ಕವನದಲ್ಲಿ ಕಾವ್ಯಾನಂದರು ಏಷ್ಯಾಖಂಡಕ್ಕೆ ಒದಗಿದ ದುರ್ಗತಿಯನ್ನು ಕುರಿತು ಕನಿಕರ ವ್ಯಕ್ತಪಡಿಸುತ್ತಾರೆ. 'ನಿನ್ನ ಮೇಲಿದೆ ಜಗದ ವಕ್ರದೃಷ್ಟಿ,

ಸುಲಿಗೆಗಾಗಿಯೆ ಆಯ್ತೆ ನಿನ್ನ ಸೃಷ್ಟಿ' ಎಂದು ಆತಂಕಗೊಳ್ಳುತ್ತಾರೆ. ಇಡೀ ಏಷ್ಯಾಖಂಡ ಹಿರಿಯ ಬಂದೀಖಾನೆಯಾಗಿದೆ. ಪರರ ಬಲೆಯಲ್ಲಿ ಸಿಕ್ಕಿಬಿದ್ದ ಮದ್ದಾನೆಯಾಗಿದೆ. ಅದ್ದರಿಂದ ಇಲ್ಲಿ ಬಡತನ, ದಾಸ್ಯ, ಅಜ್ಞಾನಗಳೆಂಬ ಬೇನೆಗಳು ಬೆಳೆಯುತ್ತಿವೆ, ಇದರ ಮೇಲೆ ಪರರಾಷ್ಟ್ರಗಳ ಆಕ್ರಮಣ ಬೇರೆ. 'ಇದಕುಂಟೆ ಈ ನರಕದಿಂದ ಮುಕ್ತಿ? ಎಂದು ಸಿಡಿದೇಳುವುದು ಇದರ ಶಕ್ತಿ?' ಎಂದು ಪ್ರಶ್ನಿಸುತ್ತಾರೆ.

'ಏಳ್ಕೋಟಿಗೇಳ್ಕೋಟಿಗೇಳ್ಕೋಟಿಗೋ' ಎಂಬ ಪದ್ಯ ಆದಿಜನಗಳ ವೇದನೆಯ ಹಾಡಾಗಿದೆ. ಇದೂ ಕೂಡ ರೂಪಕದಂತೆ ಸೃಷ್ಟಿಯಾಗಿದೆ. ಆದಿಜನಗಳು– ಆಳು ಬಾಳು ಕೀಳು ಬಾಳು ಹೊಟ್ಟೆತುಂಬ ಸಿಗದು ಕೂಳು, ಬಾಳುವೆವು ಗುಲಾಮರಾಗಿ, ಮೇಲಿನವರ ಹಮಾಲರಾಗಿ ಆದ್ದರಿಂದ ವೇದವಿದರು ಹೇಳುವರು– 'ಆಳಿಗೂ ಆಳ್ವಿಕೆಯು ಬೇಕೆ?', 'ಕ್ಷುಲ್ಲಕರಿಗು ಸಮತೆಬೇಕೆ?' ಸಂಸ್ಕೃತಿಯ ಸುಗಂಧವಿಲ್ಲದೆ, ಸ್ವಾತಂತ್ರ್ಯ ನಿರ್ಬಂಧ, ನವಜೀವನ ಸ್ಪಂದನವಿಲ್ಲದೆ ಮೌಢ್ಯ ದಾಸ್ಯ ತಮಂಧ ನಮಗೇಕೆ? ಎನ್ನುತ್ತಾರೆ. ಅದಕ್ಕೆ ಸನಾತನಿಗಳು ನೀಡುವ ಸಮಾಧಾನ–

ಪಟ್ಟ ಪಾಡು ಕೆಟ್ಟ ಕೇಡು
ಹೊಟ್ಟೆಗಾಗಿ ! ನಮ್ಮ ಮೇಲೆ
ಸಿಟ್ಟದೇಕೆ? ಇದಕಾಗಿಯೆ
ಹುಟ್ಟಿಹಿರಿ ! ಮರುಕವೇಕೆ?
ಯಾವ ಪಾಪ ಫಲವೊ ನೀವು
ನೋವಿಗಾಗಿ ಜೀವಿಸಿಹಿರಿ
ಪಾವನರು ನಾವು, ನಮ್ಮ
ಸೇವೆಯಿರಲಿ ದುಃಖವೇಕೆ?

ಎಂದು ಹೇಳುತ್ತಾರೆ. ಇಂಥ ಉತ್ತರಕ್ಕೆ ಕಾವ್ಯಾನಂದರು–

ಹೇ ಮೋರ ದುರ್ಭಾಗ್ಯ ದೇಶ ಜಾಥೇರ ಕರೇಛ ಅಪಮಾನ,
ಅಪಮಾನೇ ಹೋತೇ ಹಬೇ ತಾಹಾದೇರ ಸಭಾರ ಸಮಾನ

ಎಂಬ ವಿಶ್ವಕವಿ ರವೀಂದ್ರರ ವಾಣಿಯೊಂದನ್ನು ಮೂಲ ಬಂಗಾಲಿಯಲ್ಲಿದ್ದಂತೆ ಕೊಟ್ಟು ಕವನವನ್ನು ಮುಕ್ತಾಯ ಮಾಡಿದ್ದಾರೆ.

'ಬಾ ದುಃಖವೆ' ಪದ್ಯ ನಕಾರಾತ್ಮಕ ಚಿಂತನೆಯಿಂದ, ಸಕಾರಾತ್ಮಕ ಚಿಂತನೆಗೆ ಸಾಗುವ ಒಂದು ಅದ್ಭುತ ಕವಿತೆಯಾಗಿದೆ. ದುಃಖ ಏಕೆ ಬರಬೇಕೆಂದರೆ, ಅವಗುಣ ಕಳೆದು, ಕ್ಲೈಬ್ಯ ಸುಟ್ಟು ಹಾಕಲು ಎನ್ನುತ್ತಾರೆ.

ಬಾ ದುಃಖವೇ ನಿನ್ನ ನೂರಾರು ರೂಪದಲಿ
ಪೂರ್ಣ ಬಲ ತಳೆದು ಬಾ ಪೂರ್ಣಪ್ರತಾಪದಲಿ
ನೂಕೆನ್ನ ಉರಿಯುತಿಹ ನಂಜುಗಳ ಕೂಪದಲಿ
ಪಾಪಗಳ ಸುಟ್ಟು ಪೂತನಾಗುವೆನಿಂದು ತಾಪದಲಿ
ಕೊಡು ದೈವವೇ ನನ್ನ ಪಾಲಿಗಿಂತಲು ಹೆಚ್ಚು ದುಃಖ ನನಗೆ
ನನಗಿಂತ ದುಃಖಿಗಳು ಕೋಟಿ ಜನ, ನೀಡವರ ದುಃಖ ನನಗೆ



ಎಂದು ಆಶಿಸುತ್ತಾರೆ. ಈ ಕವನ ಈಶ್ವರ ಸಣಕಲ್ಲರ 'ಜಗವೆಲ್ಲ ನಗುತಿರಲಿ; ಜಗದಳವು ನನಗಿರಲಿ' ಎಂಬ ಪದ್ಯವನ್ನು ನೆನಪಿಸುತ್ತದೆ.

'ಬಿಂದು–ಸಿಂಧು', 'ದೇಹ–ಆತ್ಮ', 'ಪ್ರೇಮ–ಕರ್ಮ', 'ಜ್ಞಾನ–ಪ್ರೇಮ', 'ಸೌಂದರ್ಯ–ಪ್ರೇಮ' ಈ ಪದ್ಯಗಳು ಕಾವ್ಯಾನಂದರ ಕಾವ್ಯಪ್ರತಿಭೆಗೆ, ವ್ಯುತ್ಪತ್ತಿ ಪ್ರಜ್ಞೆಗೆ ನಿದರ್ಶನವಾಗಿವೆ. ಯಾವುದು ಹೆಚ್ಚು? ಯಾವುದು ಕಡಿಮೆ? ಎಂಬ ಜಿಜ್ಞಾಸೆ ಸಂವಾದದ ಮೂಲಕ ಸಾಗಿ, ಎಲ್ಲವೂ ಪರಸ್ಪರ ಪೂರಕವೆಂಬ ಸಮನ್ವಯ ಸೂತ್ರವನ್ನು ಇಲ್ಲಿ ಹೆಣೆಯುತ್ತಾರೆ.

'ಭಗ್ನ ಭಾರತ' ಎಂಬ ಕವಿತೆ ಪ್ರಜಾರಾಜ್ಯೋದಯದ ದಿನ ಆಕಾಶವಾಣಿಯಿಂದ ಪ್ರಸಾರವಾದ ಕವಿತೆ. ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ ಎಂಬ ಸಂಭ್ರಮದ ಜೊತೆಗೆ ದಾಸ್ಯ ತೊಲಗಿ, ವಿದ್ಯೆ–ಕಲೆ–ಶಾಸ್ತ್ರ–ಯುಕ್ತಿ–ಸಂಸ್ಕೃತಿಗಳೆಲ್ಲ ಬೆಳೆಯಲಿ, ಸಮತೆ ಮಮತೆ, ಕಾರ್ಯಕ್ಷಮತೆ, ತತ್ವನಿಷ್ಠೆ ಬೆಳೆಯಲಿ, ಯೋಧ, ಕೃಷಿಕ ಕೂಲಿ ವಣಿಕ ರಾಜದೂತ ಸಾಹಿತಿ ಅರ್ಥವೇತ್ತ ತತ್ವದರ್ಶಿ ದಲಿತ ಧನಿಕ ದಳಪತಿ ಎಲ್ಲರೊಂದೆಯಾಗಿ ದುಡಿದು ಬರಲಿ ಸಕಲ ಸದ್ಗತಿ, ರಾಜ್ಯದಾಹ, ಯುದ್ಧಮೋಹ ಹೋಗಲಿ ಎಂಬ ಕಳಕಳಿ ಕಾವ್ಯಾನಂದರದು.

'ಸ್ವಾಗತವು ಸ್ವಾತಂತ್ರ್ಯ ದಿನವೆ' ಎಂಬ ಪದ್ಯ ಸ್ವಾತಂತ್ರ್ಯ ದಿನೋತ್ಸವದಂದು ಆಕಾಶವಾಣಿಯಿಂದ ಪ್ರಸಾರಿತವಾದುದು. ಸ್ವಾತಂತ್ರ್ಯವೆಂಬುದು ಗಾಂಧೀಜಿಯವರ ಕಾಣಿಕೆಯೆಂದು ಕವಿ ಹೇಳುತ್ತಾರೆ. ನೂರಾರು ವರುಷಗಳ ದಾಸ್ಯದಿಂದ ಬಿಡುಗಡೆಯಾಗಿ, ಸ್ವಾತಂತ್ರ್ಯಯೋಧರ ತ್ಯಾಗ ಮತ್ತು ಬಲಿದಾನ ಸಾರ್ಥಕವಾಗಿದೆ. ಇಂಥ ಸ್ವಾತಂತ್ರ್ಯವನ್ನು ನಾವು ಜತನದಿಂದ ಕಾಯ್ದುಕೊಂಡು ಹೋಗಬೇಕೆಂದು ಹೇಳುತ್ತಾರೆ.

ಭಾರತಕ್ಕೆ ಸ್ವಾತಂತ್ರ್ಯವೇನೋ ಬಂತು; ಆದರೆ ಕರ್ನಾಟಕ ಏಕೀಕರಣವಾಗಲಿಲ್ಲ. ಇನ್ನು ಏಕೀಕರಣಕ್ಕಾಗಿ ನಾವೆಲ್ಲ ಸಿದ್ಧರಾಗಬೇಕೆಂಬ ಕಾಳಜಿಯ ಕಾವ್ಯಾನಂದರು 'ಕನ್ನಡದ ಗೀತವದು ಕಾಣದಿಹುದು' ಎಂಬ ಪದ್ಯವನ್ನು ತುಂಬ ಅರ್ಥವತ್ತಾಗಿ ಬರೆದಿದ್ದಾರೆ. ಕರ್ನಾಟಕದ ಎಲ್ಲ ಜಿಲ್ಲೆಗಳ ಒಂದೊಂದು ವೈಶಿಷ್ಟ್ಯವನ್ನು ಈ ಪದ್ಯ ವಿವರಿಸುತ್ತದೆ. ೧೯೫೫ರಲ್ಲಿಯೇ ಈ ಪದ್ಯವನ್ನು ಕಾವ್ಯಾನಂದರು ಬರೆದು, ಜಯಂತಿ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಈ ಪದ್ಯವನ್ನು ತೀ.ನಂ.ಶ್ರೀ ಓದಿ ಭಾವಪರವಶರಾಗಿದ್ದರು. ಈ ಪದ್ಯದ ಚರಣಗಳನ್ನೆಲ್ಲ ಒಮ್ಮೆ ಹೈದರಾಬಾದಿಗೆ ಬಂದಾಗ ಕಾವ್ಯಾನಂದರಿಗೇ ಹೇಳಿ ಸೋಜಿಗಗೊಳಿಸಿದ್ದರು.

'ಕನ್ನಡದ ಬೆಳೆ' ಎಂಬ ಕವನದಲ್ಲಿಯೂ ಕನ್ನಡ ನಾಡು ನುಡಿಗಳ ಬಗೆಗಿನ ಕಾವ್ಯಾನಂದರ ತುಡಿತಗಳನ್ನು ಅರಿಯಬಹುದು. 'ಹೊನ್ನ ಬೆಳೆ ಬರುತಿದ್ದ ಕನ್ನಡದ ಹುಲುಸು ಹೊಲ, ಕಳೆ ಬಿದ್ದಿಹುದಿಂದು ಬಂಜೆ ಬಯಲಾಗಿ' ಎಂದು ಕೊರಗುತ್ತಲೇ, ನಮ್ಮ ಹೊಲದೊಳು ಮತ್ತೆ ಪಂಪ ಹರಿಹರ ಬುಕ್ಕ, ಬಸವ ಮಾಧವರ ಬೆಳೆ ತಳತಳಿಸಿ ಬೆಳೆದು, ಶರಣದಾಸರ ಜತೆಯು ಮಹಾದೇವಿ ಮಲ್ಲಮ್ಮ, ಚೆನ್ನಮ್ಮ ಹೊನ್ನಿಯರ ರನ್ನದೋಟವು ಮೊಳೆದು' ಬರಬೇಕೆಂದು ಬಯಸುತ್ತಾರೆ. ಕರ್ನಾಟಕ ಏಕೀಕರಣ ವಾದಾಗಲೇ ಇದೆಲ್ಲ ನನಸಾಗುವುದು. 'ನಾವೆಂದು ಬಾಳುವೆವೊ ನಮ್ಮ ನೆಲನಾಳುವೆವೊ, ದಾಸ್ಯವನು ಹೂಳುವೆವೊ ಅಂದು

ನಿಜವಾಗಿ, ಕನ್ನಡ ಬೆಳೆ ಹೆಚ್ಚಿ ಮುನ್ನೀರುಗಳ ದಾಟಿ ಮನುಕುಲವ ತಣಿಸುವುದು ಕಲ್ಪಕುಜವಾಗಿ' ಎಂದು ಸಕಾರಾತ್ಮಕವಾಗಿ ವಿವರಿಸುತ್ತಾರೆ.

'ತಾಯಿ ಬರವು' ಎಂಬ ಪದ್ಯದಲ್ಲಿಯೂ ಕನ್ನಡ ಸಂಸ್ಕೃತಿಯ ವಿಸ್ತೃತ ಸ್ವರೂಪವನ್ನೇ ಕಾಣಬಹುದು. ಪ್ರತಿಯೊಂದು ಪಟ್ಟಣ ನಗರಗಳ ಬೆಳೆ–ಸ್ಮಾರಕಗಳನ್ನು ನೆನಪಿಸಿಕೊಳ್ಳುತ್ತಾರೆ. ಕನ್ನಡದ ಪ್ರಜ್ಞೆ ಕಾವ್ಯಾನಂದರ ದೇಹ ಮನಸ್ಸುಗಳನ್ನು ಆವರಿಸಿದೆ.

ಜಲಪಾತ ಸಂಕಲನದಲ್ಲಿ ಕೆಲವು ದಾಂಪತ್ಯ ಗೀತೆಗಳಿರುವುದು ವಿಶೇಷ. ಮದುವೆಯಾದ ಹೊಸದರಲ್ಲಿ ಕಾವ್ಯಾನಂದರಿಂದ ಮೂಡಿಬಂದ ಈ ಗೀತೆಗಳನ್ನು ನವೋದಯ ಪರಂಪರೆಯ ಹಿನ್ನೆಲೆ ಕಾರಣದಿಂದ ಆಧುನಿಕ ವಿಮರ್ಶಕರು ಪ್ರೇಮಗೀತೆಗಳೆಂದು ಕರೆಯಬಹುದು. ಆದರೆ ಇವು ಪ್ರೇಮಗೀತೆಗಳಾಗಿರದೆ, ದಾಂಪತ್ಯಗೀತೆಗಳಾಗಿವೆ ಎಂಬುದೇ ನಿಜ. 'ಬಾಳು ಕಹಿಯಾದರೂ ನೆನಹು ಕಹಿಯಲ್ಲ', 'ಶಂಕಾ–ಸಮಾಧಾನ', 'ಹೊಸ ಹೆಂಡತಿಗೆ', 'ನನ್ನ ನಲ್ಮೆಯ ಲಕ್ಷ್ಮಿ', 'ಸಮರಸ' ಮೊದಲಾದ ಕವನಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಜಲಪಾತ ಕಾವ್ಯಾನಂದರ ಮೊದಲ ಸಂಕಲನವಾದರು. ವಿದ್ವತ್‌ಲೋಕದ ಗಮನ ಸೆಳೆದು, ಅವರೊಬ್ಬ ಅಪ್ರತಿಮ ಕವಿಯೆಂಬುದು ಸಾಬೀತಾಯಿತು.

೫

ಕಾವ್ಯಾನಂದರ ಎರಡನೆಯ ಸಂಕಲನ 'ಕರುಣಾ ಶ್ರಾವಣ' ೧೯೫೫ರಲ್ಲಿ ಸಹಜೀವನ ಪ್ರಕಾಶನ, ಕಾಚೀಗೂಡಾ ಹೈದರಾಬಾದ್‌ದಿಂದ ಪ್ರಕಟಗೊಂಡಿತು. ೪೫ ಕವನಗಳು ಇಲ್ಲಿವೆ.

ಜಲಪಾತ ಹರಿದು ಕರುಣಾಶ್ರಾವಣವಾಗಿ ಮಾರ್ಪಟ್ಟ ಸೋಜಿಗ ಈ ಕವಿತೆಗಳಲ್ಲಿದೆ. 'ಬಾಳ ಹೊತ್ತಗೆ' ಎಂಬ ಪದ್ಯದಲ್ಲಿ ತಮ್ಮ ಆತ್ಮಕಥನವನ್ನು ಕಾವ್ಯಾನಂದರು ಬರೆದು ಕೊಂಡಂತೆ ತೋರುತ್ತದೆ.

ಬಾಳ ಹೊತ್ತಗೆಯಲ್ಲಿ ಪ್ರತಿದಿನವು ಪುಟವೊಂದು
ಬರೆ ನಿತ್ಯ ಪ್ರತಿಪುಟದಿ ನವ್ಯ ಕೃತಿಯ
ಬರಿ ಹಾಳೆಗಳನುಳಿಸಿ ಪಾಳ್ಗೈಯದಿರು ಅದನು
ತುಂಬ ಬರೆ ನಿನ್ನ ಸ್ಮೃತಿ ಶೃತಿಯ ಕೃತಿಯ

ಎಂದು ಪ್ರಾರಂಭವಾಗುವ ಈ ಕವಿತೆಯಲ್ಲಿ ಕವಿ ಏನೇನು ಬರೆಯಬಹುದೆಂದು ವಿವರಿಸುತ್ತಾರೆ. ಆನಂದ ಮಕರಂದ ಸೌಂದರ್ಯ ಮಧುಬಿಂದು ಬೆರೆಸಿ ಒಲವಿನ ಗಲಗು ಬರೆಯಬಹುದು, ಬಾಳ ಹೊತ್ತಗೆಯಲ್ಲಿ ಬರಿಯ ಗೆಲವಿನ ಗಲಗೆ ಬರೆಯ ಬೇಕೆಂಬ ಕಟ್ಟುನಿಟ್ಟಿಲ್ಲ, ತನ್ನ ಸುಖ–ದುಃಖಗಳನ್ನು ನಿವೇದಿಸಿಕೊಳ್ಳಬಹುದು. ಜನ ಓದುವರೆಂಬ ಆಶೆಯಿಂದ ಈ ಬರೆಯಬೇಡ, ನಿನ್ನ ರುಚಿಯೆತ್ತರಕೆ ಓದುಗರೆ ಬರಬೇಕು ಎನ್ನುತ್ತಾ ಕಾವ್ಯಾನಂದರು –

ಸ್ನೇಹವೋ ಕರುಣೆಯೋ ದಾರುಣವೊ ದೈನ್ಯವೋ
ಶ್ರೀಕರವೊ ಭೀಕರವೊ ಚೀತ್ಕಾರವೊ
ನಿನ್ನ ಪಾಲಿಗೆ ಬಂದುದನೆ ನೀನು ಬರೆ ಸಖನೆ
ಧಿಕ್ಕಾರವೇ ಸಿಗಲಿ ಸತ್ಕಾರವೊ!

ಪಾಲಿಗೆ ಬಂದುದನ್ನು ಅಕ್ಷರರೂಪಕ್ಕಿಳಿಸಬೇಕೆಂಬುದು ಆಶಿಸುತ್ತಾರೆ.



ಈ ಸಂಕಲನದಲ್ಲಿ ಕವಿ ಪ್ರಕೃತಿಯ ಸಮಸ್ತ ವ್ಯಾಪಾರವನ್ನು ಬೆರಗುಗಣ್ಣುಗಳಿಂದ ಗಮನಿಸುತ್ತಾನೆ. ನವೋದಯ ಕಾವ್ಯ ಪರಂಪರೆಯ ಮುಖ್ಯ ಲಕ್ಷಣಗಳಲ್ಲಿ 'ಪ್ರಕೃತಿ' ಕುರಿತಾದ ಚಿಂತನೆಯು ಒಂದು. ಕುವೆಂಪು ಮಲೆನಾಡಿನ ಪ್ರಕೃತಿಯ ರಮ್ಯ ಪರಿಸರವನ್ನು ಚಿತ್ರಿಸಿದಂತೆ, ಕಾವ್ಯಾನಂದರು ತಾವು ಕಂಡುಂಡ ನಾಡಿನ ಪ್ರಕೃತಿ ವಿಸ್ಮಯವನ್ನು ತುಂಬ ಸೊಗಸಾಗಿ ಬಣ್ಣಿಸಿದ್ದಾರೆ.

ಕಾವ್ಯಾನಂದರ ಕವಿತೆಗಳಲ್ಲಿ ಪ್ರಕಟಗೊಳ್ಳುವ ನಿಸರ್ಗಾನುಭವ ಉಳಿದ ಕವಿಗಳಿಂತ ಭಿನ್ನವಾಗಿದೆ. ಅವರು ಪ್ರಕೃತಿಯೊಂದಿಗೆ ನಡೆಸುವ ಅನುಸಂಧಾನವೂ ಅತ್ಯಂತ ಉತ್ಕಟವಾದುದು. ಅನುರಕ್ತಿಯ ರೂಪದ ಈ ಪ್ರಕ್ರಿಯೆ ಆರಾಧನೆಯ ಸ್ವರೂಪವನ್ನೂ ಪಡೆದಿರುವುದು ಗಮನಿಸುವ ಅಂಶ. ಪ್ರಕೃತಿಯ ವರ್ಣನೆಯಲ್ಲಿ ಕಾವ್ಯಾನಂದರು ರಸಾನುಭೂತಿಯನ್ನು ಅನುಭವಿಸಿದ್ದಾರೆ.

'ಕವಿತೆಗೆ' ಎಂಬ ಕವಿತೆಯಲ್ಲಿ ಪ್ರಕೃತಿಯೊಂದಿಗೆ ಅವರು ನಡೆಸುವ ಅನುಸಂಧಾನದ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಅಕ್ಕಮಹಾದೇವಿ ಪ್ರಕೃತಿಯನ್ನು ಮಾತನಾಡಿಸುತ್ತ, ಚೆನ್ನಮಲ್ಲಿಕಾರ್ಜುನನನ್ನು ಅರಸುತ್ತ ಸಾಗಿದಂತೆ, ಮಧುರಚೆನ್ನರು 'ನನ್ನ ನಲ್ಲ'ನನ್ನು ಹುಡುಕುತ್ತ ಸಾಗಿದಂತೆ ಕವಿತೆಗೆ ಅವರು ನಿವೇದಿಸಿಕೊಳ್ಳುವ ರೀತಿ ಅನನ್ಯವಾಗಿದೆ.

ಕೆರೆತೊರೆಯ ತೆರೆಯಾಗಿ ಮುತ್ತಿಟ್ಟು ಓಡದಿರು
ತಾರೆಗಳ ಹಿಂದಡಗಿ ನೀ ಕದ್ದು ನೋಡದಿರು
ಮರಮರಕೆ ಸ್ವರವಾಗಿ ಕರೆಕರೆದು ಹಾಡದಿರು
ಎಂದಾದರೊಂದು ದಿನ ಬಂದೆನ್ನ ಕಾಡದಿರು
ಇದು ನಿರಂತರವಾಗಿ ನನ್ನ ಮನದಿ
ಮೊರೆ ಚಿಂತನವಾಗಿ ಹೃದಯವನದಿ!

ಕವಿತೆಯ ರಸಧಾರೆ ನಿರಂತವಾಗಿ ಹೃದಯವನದಲ್ಲಿ ನೆಲೆಸುವಂತಾಗಲೆಂದು ಕವಿ ಬಯಸುತ್ತಾನೆ. ಕೋಗಿಲೆಯ ಕುಕಿಲಿನಲಿ ಕೆಣಕದಿರು ಸ್ಮೃತಿಗಳನ್ನು... ಮುಂಗಾರ ಸಿಡಿಲಿನಲಿ ಗುಳಿಗೊಮ್ಮೆ ಗದರದಿರು, ಹಿಂಗಾರ ಮೋಡದಲಿ ಬಿಡುಮುಡಿಯ ಕೆದರದಿರು, ಚಿಗರಿಗಂಗಳೊಳವಿತು ಚಣಕೊಮ್ಮೆ ಬೆದರದಿರು, ಬಿಸಿಲುಗುದಿರೆಯನೇರಿ ಬಳಿಸಾರಿ ಚೆದುರದಿರು ಎಂದು ಪ್ರಕೃತಿಯನ್ನು ಆಡಿಸುವ ಮುಂಗಾರು–ಹಿಂಗಾರು ಮೋಡಗಳನ್ನು, ಕೋಗಿಲೆ, ಚಿಗರಿಗಳನ್ನು ವಿನಂತಿಸುತ್ತಾರೆ. ಕಾವ್ಯಾನಂದರ ಕಣ್ಣಿಗೆ ಹೊನ್ನಿಯ ಹುಳುವು ಮುಖ್ಯವಾಗುತ್ತದೆ. ಕೊನೆಗೆ ಕವಿತೆಯು 'ಹೊಸ ಜಗದ ಹೊಸ ಯುಗದ ಚಿಂತನೆಯ ಗಣಿಯಾಗಿ, ಬಾಳ ಪೂರ್ಣತೆಯ ಹೋರಾಟಕಣಿಯಾಗಲಿ' ಎನ್ನುತ್ತಾರೆ.

'ಬಾರೆ ಮಧುರ ಗಾನದೇವಿ' ಎಂಬ ಪದ್ಯದಲ್ಲಿಯೂ 'ಹಕ್ಕಿ ಪಕ್ಕಿ ಹಳ್ಳ ಕೊಳ್ಳ ಜಲದಿ ಘೋಷ ಜಲತರಂಗ, ವೀಣೆ ಕೊಳಲು ಮೃದಮೃದಂಗ, ಶುಕದ ಪಿಕದ ಮತ್ತ ಭೃಂಗನಾದದಲ್ಲಿ ಬಂದು ನಿಲ್ಲೆ' ಎಂದು ಹೇಳಿರುವುದು ಅವರ ಪ್ರಕೃತಿಯ ಪ್ರೇಮಕ್ಕೆ ಸಾಕ್ಷಿಯಾಗಿದೆ. 'ಬಳ್ಳಿಯ ಬಿನ್ನಹ' ಎಂಬ ಪದ್ಯವೊಂದರಲ್ಲಿ ಬಳ್ಳಿಯೊಂದು ಬೆಳೆಯಲು ಪಟಟ ಕಷ್ಟವನ್ನು ನಿವೇದಿಸುವ

ರೀತಿ ಅಪರೂಪವಾಗಿದೆ. 'ನೀಲಕಮಲ', 'ಯಾರಿವಳು?' 'ಹೂ' 'ಸರಸಿಯ ಮೇಲೆ ಸೂರ್ಯೋದಯ' 'ಮೋಡ' 'ಮಳೆ', 'ಬಾ ನನ್ನೀ ತೋಟಕ್ಕೆ' ಮೊದಲಾದ ಕವಿತೆಗಳಲ್ಲಿ ಕಾವ್ಯಾನಂದರ ಪ್ರಕೃತಿಯ ವರ್ಣನೆ ಮತ್ತು ಅದರೊಂದಿಗೆ ಅವರು ನಡೆಸಿದ ಸಂವೇದನಾಶೀಲ ಅನುಸಂಧಾನವನ್ನು ಗಮನಿಸಬಹುದು.

'ಸರಸಿಯ ಮೇಲೆ ಸೂರ್ಯೋದಯ' ಪದ್ಯ ಹೈದರಾಬಾದು ಸಿಕಂದರಾಬಾದಗಳ ನಡುವಿರುವ ಹುಸೇನಸಾಗರ ಸರೋವರ ನೋಡಿದಾಗ ಮೂಡಿಬಂದ ಪದ್ಯವಾಗಿದೆ. ಅದೇ ರೀತಿ 'ಸೇತುವೆಯ ಮೇಲೆ ಸೂರ್ಯಾಸ್ತ' ಪದ್ಯ ಹೈದರಾಬಾದಿನ 'ನಯಾಪುಲ್' ಸೇತುವೆ ಮೇಲೆ ನಿಂತು ಸೂರ್ಯ ಅಸ್ತಂಗತವಾಗುವುದನ್ನು ಕಂಡು ಬರೆದ ಕವಿತೆಯಾಗಿದೆ.

ಕಾವ್ಯಾನಂದರು ಹೈದರಾಬಾದಿನಲ್ಲಿ ಆಡಳಿತ ಸೇವೆಯಲ್ಲಿದ್ದಾಗ ಮಂತ್ರಿಗಳೊಂದಿಗೆ ಕಾಶ್ಮೀರಕ್ಕೆ ಹೋಗುವ ಸಂದರ್ಭ ಒದಗಿ ಬಂದಿತು. ಕಾರ್ಗಿಲದ ಪ್ರಕೃತಿ ಸೌಂದರ್ಯವನ್ನು ಕಂಡು ಕಾವ್ಯಾನಂದರ ಕಾವ್ಯ ಓತಪ್ರೋತವಾಗಿ ಹರಿಯಿತು. ಅವರ ದೃಷ್ಟಿಯಲ್ಲಿ ಕಾರ್ಗಿಲವು ಕಾಶ್ಮೀರದ ಶ್ರೀಗಂಧವಾಗಿ ಮೂಡಿಬಂದಿದೆ. ಅಲ್ಲಿ ಕಾಲಿಡಲು ಸ್ಥಳವಿಲ್ಲದಷ್ಟು ಹೂವುಗಳು, ಹಣ್ಣುಗಳು ಇವುಗಳನ್ನು ನೋಡಿ ಕಾವ್ಯಾನಂದರ ಕಣ್ಣು ಮನಸ್ಸಿಗೆ ಮಹದಾನಂದವಾಗಿದೆ.

> ಗಜಚರ್ಮ ಮೇಘ, ಭಸಿತಾಂಗ ಹಿಮವು, ಗಂಗೋತ್ತಮಾಂಗ ಶೃಂಗ;
> ಈ ಬೆಟ್ಟ ರುದ್ರ, ಶ್ರೀನಗರ ಗೌರಿ, ರಮಣೀಯ ಉಭಯ ಸಂಗ
> ಮಳೆ ಉದಕ, ಆಲಿ ಸುಮ, ಮಿಂಚು ದೀಪ ಶಿವಶಿವೆಯ ಪೂಜೆಗಾಗಿ
> ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಸೌಂದರ್ಯ ಸ್ನಾನಮಾಗಿ

ಗಿರಿಶಿಖರಗಳ ರುದ್ರ ಭಯಂಕರ ಪ್ರತಾಪ ಸೌಂದರ್ಯವನ್ನು ಕಣ್ಣಿಗೆ ಕಟ್ಟುವಂತೆ ಕಾವ್ಯಾನಂದರು ಇಲ್ಲಿ ವರ್ಣಿಸಿದ್ದಾರೆ. ಇದೇ ರೀತಿ 'ತಾಜಮಹಲು' ಕುರಿತು ಕವಿ ಅರ್ಥಪೂರ್ಣವಾಗಿ ವರ್ಣಿಸಿದ್ದಾರೆ. ಮೂಕವಿಸ್ಮಿತವಾದ ಲಾಲಿತ್ಯ ಔನ್ನತ್ಯ ಸೌಮ್ಯತ್ವ ಶೃಂಗಾರ ಗಾಂಭೀರ್ಯ ಸೌಂದರ್ಯದ ಪ್ರತೀಕವಾದ ತಾಜಮಹಲ ಪ್ರೇಮಿಗಳ ಅಮರ ಸ್ಮಾರಕವಾಗಿ ಮೆರೆಯುತಿರುವುದನ್ನು ಸೂಚಿಸಿದ್ದಾರೆ. ಪ್ರೀತಿಯಿದ್ದರೆ ಗುಡಿಸಲೇ ತಾಜಮಹಲಾಗುವುದು, ಇಲ್ಲದಿರೆ ಅರಮನೆಯೆ ಸೆರೆಮನೆಯಾಗುವುದು ಎನ್ನುತ್ತಾರೆ.

ಕಾವ್ಯಾನಂದರು ಪ್ರವಾಸಕ್ಕೆ ಹೋದ ಸಂದರ್ಭದಲ್ಲಿ, ಅಲ್ಲಿಯ ಐತಿಹಾಸಿಕ ಸ್ಮಾರಕಗಳನ್ನು, ದೇಗುಲಗಳನ್ನು ಕಂಡು ವಿಸ್ಮಯದ ಸೋಜಿಗದ ಕಲ್ಪನೆಯನ್ನು ಮಾಡಿಕೊಂಡು ಕವನ ಕಟ್ಟಿದ್ದಾರೆ. ವೇರೂಳಿನ ಕೈಲಾಸ ಗುಹೆ ಕಂಡು ಬರೆದಿರುವ 'ಕಲೆಯ ಕೈಲಾಸ' ಕವನ ಮಾರ್ಮಿಕವಾಗಿ ಮೂಡಿಬಂದಿದೆ. 'ಇದೊ ಬುದ್ಧನ ನಿರ್ವಾಣವು ಅದೊ ಇಂದ್ರನ ಶಾಲೆ, ಗಜಲಕ್ಷ್ಮಿಯ ಅಭಿಷೇಕವು ಭಿಕ್ಷಾಟನ ಲೀಲೆ, ಕುಕ್ಕುರಿಸಿಹ ದಶಕಂಠನು ಶಿತಿಕಂಠನ ಮೇಲೆ, ಹೂಬಳ್ಳಿಗೆ ಕೋಮಲತೆಯ ಕಲಿಸುತಿಹ ಬಾಲೆ, ನಿಶ್ಚಲತೆಯೆ ಚಂಚಲತೆಗೆ ಕಲಿಸುತ್ತಿದೆ ಸಾಲೆ! ಇದು ಪ್ರಕೃತಿಯ ಮೇಲೆ; ಕೃತಿ ಜ್ಯೋತಿರ್ಮಾಲೆ!' ಎಂದು ಕೈಲಾಸ ಪರ್ವತವನ್ನು ನೆನಪಿಸಿಕೊಳ್ಳುತ್ತಾರೆ.

ಜೀವನದಲ್ಲಿ ಬರುವ ಎಡರು ತೊಡರುಗಳನ್ನು ಸಹಿಸಿಕೊಂಡು, ಸಕಾರಾತ್ಮಕವಾಗಿ ಬದುಕುವ ಜೀವನ ನಮ್ಮದಾಗಬೇಕು. ನಮ್ಮ ಆಶಾ ಪ್ರದೀಪ ಆರಬಾರದೆಂಬುದು ಕವಿಯ



ಬಯಕೆ. 'ಆರಿಲ್ಲ ಈವರೆಗೆ ಆಶಾ ಪ್ರದೀಪ' ಎಂಬ ಕವನದಲ್ಲಿ ಸಾವಿರಾರು ವರುಷಗಳಿಂದ ನಡೆದ ಶೋಷಣೆ-ಕೋಪ-ತಾಪಗಳ ಇತಿಹಾಸವನ್ನು ತಿಳಿಸುತ್ತಾರೆ. ಪೌರಾಣಿಕ ಪಾತ್ರಗಳ ಶಪಥ-ಕೋಪ-ತಾಪ-ಶಾಪಗಳನ್ನು ನೆನಪಿಸಿಕೊಳ್ಳುತ್ತಾರೆ. ಗೋಲ್ಗೋಥಾ ಕರ್ಬಲಾ ಕುರುಕ್ಷೇತ್ರ ಮೊದಲಾದ ಕಡೆ ನಾಶದ ನಾಟ್ಯ ಸಂಹಾರ ಸತ್ರ, ಏಸುವಿನ ಶಿಲುಬೆ, ಕಾಲ್ವಿನನ ಕೌಟಿಲ್ಯ ಮೊದಲಾದವರ ಮೇಲೆ ನಡೆದ ಹಲ್ಲೆ-ಹಿಂಸೆ, ಸಾಕ್ರೇಟಿಸನ ಹನನ, ಬ್ರೂನೋನ ದಹನ, ಗ್ಯಾಲಿಲಿಯೋ, ಡಾರ್ವಿನ್, ಪೆಯಿನ, ಐನ್‌ಸ್ಟೈನ್ ಮೊದಲಾದವರಿಗೆ ಒದಗಿದ ದುರ್ಗತಿ, ಮಿಲ್ಟನನ ಅಂಧತ್ವ, ಹೋಮರನ ಭಿಕ್ಷೆ, ಡಾಂಟೆಯ ಗಡಿಪಾರು ಮಾಯಕಲ್ ಏಂಜೆಲೊನ ವ್ಯಥೆ ಮೊದಲಾದ ಕವಿಗಳು ಜೀವನ ಸಂತಾಪದ ಸ್ತೂಪವಾಗಿರುವುದು, ಸೀತೆಯ ಪರಿತ್ಯಾಗ, ದ್ರೌಪದಿಯ ವ್ಯಥೆ ಹೀಗೆ ಇತಿಹಾಸದುದ್ದಕ್ಕೂ ನಡೆಯುತ್ತಲೇ ಬಂದಿದೆ ಕ್ರೌರ್ಯ-ಹಿಂಸೆ-ಅಪಮಾನಗಳ ಕಥೆ. ಇಷ್ಟೆಲ್ಲ ವ್ಯಥೆಯ ಕಥೆಯ ನಡುವೆಯೂ ನಾವು ನಿರಾಶಾವಾದಿಗಳಾಗಬಾರದು–

> ಆರದಿರಲೀ ದೀಪ, ಬರಲಿ ಬಿರುಗಾಳಿ
> ನಡೆದಿರಲಿ ನಿಂತಿರಲಿ ಸಂಹಾರ ಕೇಳಿ
> ಬರಗಾಲ ಭೂಕಂಪ ಬೇನೆಗಳ ದಾಳಿ
> ಯುಗಯುಗದಿ ವಿಧವಿಧದ ರೂಪಗಳ ತಾಳಿ
> ಮುಕುಟಗಳು ಹಾರಲಿ, ಭಿಕ್ಷೆ ಬೇಡಲಿ ಭೂಪ
> ಆರದಿರಲೆಂದಿಗೂ ಆಶಾ ಪ್ರದೀಪ

ಕಾವ್ಯಾನಂದರ ಈ ಆಶಾವಾದಿತ್ವ ನೈರಾಶ್ಯದಾಕಳಿಕೆಯಲ್ಲಿದ್ದ ಯುವಜನಾಂಗಕ್ಕೆ ಸ್ಫೂರ್ತಿಯನ್ನೂ ಚೈತನ್ಯವನ್ನು ನೀಡುತ್ತದೆ.

'ಪಥಿಕ' ಒಂದು ಸುದೀರ್ಘವಾದ ಕವಿತೆಯಾಗಿದೆ. ಮಾನವ ಜನಾಂಗದ ಯಾತ್ರೆಯನ್ನು ಕುರಿತು ದಾರ್ಶನಿಕ ಹಿನ್ನೆಲೆಯಿಂದ ಅರಿಯುವ ಪ್ರಯತ್ನ ಇಲ್ಲಿದೆ. ಕಾಲಪಥದಲ್ಲಿ ಬಹುದೇವತಾರಾಧನೆ, ಪಶುಬಲಿ, ಧರ್ಮಾಭಿಮಾನ, ದೇಶಭಕ್ತಿ, ಭೋಗಲಾಲಸೆಯ ಪಥ ಸಾಗಿ ಬಂದಿತ್ತು. ಪಥಗಳು, ಪಂಥಗಳು, ತಂತ್ರಗಳು, ಗ್ರಂಥಗಳು, ತರ್ಕ-ನ್ಯಾಯ ಸಿದ್ಧಾಂತಗಳು, ಜಾತಿಗಳು, ನೀತಿ-ನೇತಿ-ರೀತಿಗಳು, ಅನುಮಾನ ಪ್ರಾಮಾಣ್ಯ ದೃಷ್ಟಾಂತ, ದರ್ಶನ, ಘರ್ಷಣ, ಶಾಸ್ತ್ರಾರ್ಥ, ವೇದಗಳು, ವಾದಗಳು, ವಿಜ್ಞಾನ-ಪ್ರಜ್ಞಾನ, ಚರಿತಾರ್ಥ ಪುರುಷಾರ್ಥ-ಪರಮಾರ್ಥ ಮೊದಲಾದ ಪಥಗಳಲ್ಲಿ ಮಾನವ ಜೀವನ ಸಾಗಿ ಬಂದಿದೆ. ಅದ್ದರಿಂದ ಪಥಿಕನು ತನಗೆ ತಾನೇ ಬೆಳಕು ಎಂದು ಪರಿಭಾವಿಸಿ, ತನ್ನ ದಾರಿಯನ್ನು ತಾನೇ ಹುಡುಕಿಕೊಳ್ಳಬೇಕೆಂದು ಕಾವ್ಯಾನಂದರು ಕರೆ ಕೊಡುತ್ತಾರೆ. 'ಉಳಿದವರು ಹೋದುದೇ ಹಾದಿಯೆಂದರಿಯದಿರು; ಇದ್ದಾವು ದಾರಿಗಳು ಬೇರೆ ಪಥಿಕ' ಎಂಬ ನುಡಿಯಲ್ಲಿ ಮನುಷ್ಯ ತನ್ನ ಬಳ್ಳಿಗೆ ತಾನೇ ಶಿಲ್ಪಿಯಾಗ ಬೇಕೆಂಬ ತುಡಿತವಿರುವುದನ್ನು ಕಾಣಬಹುದು.

'ಕರುಣಾ ಶ್ರಾವಣದಲ್ಲಿ ಕಾವ್ಯಧಾರೆ ಜೋರಾಗಿ ಬಂದಿದೆ. ಹೊಸ ಹೊಸ ಕಲ್ಪನೆಗಳು; ಹೊಸ ಹೊಸ ಉಪಮಾನಗಳು; ಹೊಸ ಹೊಸ ಪ್ರಾಸಗಳು; ಹೊಸ ಹೊಸ ಓಟ ಕುಣಿತಗಳು-ಎಲ್ಲ ಸೊಗಸು' ಎಂದು ಹಿರಿಯ ಕವಿ ಡಿ.ವಿ.ಜಿಯವರು ಹಾರೈಸಿದ್ದರು.

ಭಾರತೀಯ ಕಾವ್ಯಮೀಮಾಂಸೆಯ ಅನನ್ಯಪ್ರತಿಪಾದಕ ತೀ.ನಂ.ಶ್ರೀ ಅವರು ಕರುಣಾಶ್ರಾವಣ ಕೃತಿಯನ್ನು ಕುರಿತು ಹೇಳಿದ ಮಾತುಗಳು ಮೌಲಿಕವಾಗಿವೆ:

'ಹಲವು ಒಳ್ಳೆಯ ಭಾವಗೀತೆಗಳನ್ನು ಈ ಸಂಕಲನದಲ್ಲಿ ಜೊತೆಗೂಡಿಸಿರುವುದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಕಾವ್ಯದಲ್ಲಿ ಜೀವನದಲ್ಲಿ ರಸ ಎಲ್ಲಿದೆ ಎಂಬುದನ್ನು ನೀವು ಅರಿತಿದ್ದೀರಿ. ಜೀವನದ ಅಮೃತ, ವಿಷಗಳೆರಡರಲ್ಲೂ ಲೇಖನಿಯನ್ನು ಅದ್ದಿ ಕಾವ್ಯ ಬರೆಯಬಹುದೆಂದು ಸಾರಿದ್ದೀರಿ, ತೋರಿಸಿದ್ದೀರಿ.

ಕಲಾ ಪ್ರೇಮಿಗಳಾದ ಮೈಸೂರಿನ ಶ್ರೀಮನ್ಮಹಾರಾಜರವರ ಶುಭ ಹಸ್ತದಿಂದ ನಿಮ್ಮ 'ಕರುಣಾ ಶ್ರಾವಣ'ದ ಪ್ರಕಾಶನ ನೆರವೇರುವುದೆಂದು ತಿಳಿದು ನನಗೆ ತುಂಬ ಸಂತೋಷವಾಯಿತು. ಈ ಮಂಗಲಕಾರ್ಯ ರಮ್ಯವಾಗಿ ನಡೆಯಲೆಂದೂ, ನಿಮ್ಮ ಕಾವ್ಯದ ನೆರವಿನಿಂದ 'ಧರೆಯ ಉತ್ಥಾನ ಹರನ ಅವತರಣ' ಈ ಎರಡನ್ನೂ ಎಲ್ಲೆಡೆಯಲ್ಲೂ ಕಾಣುವ ಶಕ್ತಿ ನಮ್ಮ ಜನತೆಗೆ ಒದಗಲೆಂದೂ ಹಾರೈಸುತ್ತೇನೆ.'

ಕನ್ನಡ ಸಂಶೋಧನ ಕ್ಷೇತ್ರದ ದಿಗ್ಗಜ ಡಿ.ಎಲ್.ನರಸಿಂಹಾಚಾರ್ ಅವರು ಕರುಣಾ ಶ್ರಾವಣ ಸಂಕಲನ ಕುರಿತು ಹೇಳಿದ ನುಡಿಗಳು ಸ್ಮರಣೀಯವಾಗಿವೆ:

'ಪುರಾಣಿಕರವರ ಕೆಲವು ಭಾವಗೀತೆಗಳನ್ನು ಬಿಡಿಬಿಡಿಯಾಗಿ ಪತ್ರಿಕೆಗಳಲ್ಲಿ ಓದಿ ತುಂಬಾ ಸಂತೋಷಪಟ್ಟಿದ್ದೇನೆ. ಈಗ ಪ್ರಕಟವಾಗಲಿರುವ 'ಕರುಣಾ ಶ್ರಾವಣ' ಎಂಬ ಕವಿತಾ ಸಂಗ್ರಹ ಇಮ್ಮಡಿ ಆನಂದದಾಯಕವಾಗಿದೆ. ಅವರ ನೈಜವಾದ ನೈಸರ್ಗಿಕ ಪ್ರೇಮ ಇಲ್ಲಿ ಬಣ್ಣ ಬಣ್ಣವಾಗಿ ಕಂಗೊಳಿಸುತ್ತಿದೆ. ಹೂವು, ಹಣ್ಣು, ಹಕ್ಕಿ, ಬಾನು, ಬೆಳದಿಂಗಳು, ತಿಂಗಳು ಮುಂತಾದ ಚಿರಂತನ ರಮಣೀಯವಾದ ವಸ್ತುಗಳು ಇಲ್ಲಿ ಸಪ್ರಾಣಿಸಿ ತಂತಮ್ಮ ಸೊಗಸುಗಳನ್ನು ಸೂಸಿವೆ. ಕವಿಹೃದಯವನ್ನು ಅವು ಯಾವ ಯಾವ ತೆರದಲ್ಲಿ ಎಚ್ಚರಗೊಳಿಸಿ ಎಂಥೆಂಥ ಭಾವಗಳನ್ನು ಅರಳಿಸಿವೆಯೆಂಬುದನ್ನು ರಸಿಕಹೃದಯ ಅನುಭವಿಸಿ ಆನಂದಿಸುತ್ತದೆ. ಕವಿತೆಗಳಲ್ಲಿ ತುಂಬಿರುವ ಅಚ್ಚ ಸರಳತೆ, ಭವ ಲಾಲಿತ್ಯ, ಶಬ್ದ ಮಾಧುರ್ಯಗಳು 'ಕಾವ್ಯಾನಂದ'ರ ಕಲೋಪಾಸನೆಯ ವೈಶಿಷ್ಟ್ಯ ಅವರ ಸಾಧನೆ ಮುಂದುವರಿದು ಗಂಭೀರವಾಗಿ, ಶಕ್ತಿಯುತವಾಗಿ, ಆತ್ಮ-ಸಿದ್ಧಿ ಸೌಂದರ್ಯದ ಅನ್ವೇಷಣೆಯಲ್ಲಿ ಅವರಿಗೆ ದೊರೆಯಲೆಂದು ಹಾರೈಸುತ್ತೇನೆ.'

ಒಟ್ಟಾರೆ, ಕಾವ್ಯಾನಂದರ ಎರಡನೆಯ ಕವನ ಸಂಕಲನ ಕರುಣಾ ಶ್ರಾವಣ, ಅವರೊಬ್ಬ ಪ್ರತಿಭಾವಂತ ರಸಜ್ಞ ಕವಿಯೆಂಬುದನ್ನು ತೋರಿಸಿಕೊಟ್ಟಿತು.

೬

'ಮಾನಸ ಸರೋವರ' ಕಾವ್ಯಾನಂದರ ಮೂರನೆಯ ಕವನ ಸಂಕಲನ, ೧೯೫೯ರಲ್ಲಿ ಬೆಂಗಳೂರಿನ ಶಾರದಾ ಪ್ರಕಟನಾಲಯದಿಂದ ಪ್ರಕಟಗೊಂಡಿತು. ಈ ಸಂಕಲನದಲ್ಲಿ ೪೪ ಪದ್ಯಗಳಿವೆ. ಈ ಕೃತಿಗೆ ಮುನ್ನುಡಿಯ ತಿಲಕವಿಟ್ಟವರು, ಖ್ಯಾತ ಕವಿ ಪು.ತಿ.ನರಸಿಂಹಾಚಾರ್ ಅವರು.



ಕಾವ್ಯಾನಂದರ ಕವಿತೆಗಳಲ್ಲಿ ಬರುವ ಕಲ್ಪನೆಯ ಭಾವಾಭಿವ್ಯಕ್ತಿ ಸೋಪಜ್ಞತೆಯಿಂದ ಕೂಡಿದೆ. ಯಾವುದೇ ಸಾಹಿತ್ಯ ಪ್ರಕಾರ ತೆಗೆದುಕೊಂಡರು ಅಲ್ಲಿ ಅನೇಕ ವಿನ್ಯಾಸಗಳು ಕಂಡು ಬರುತ್ತವೆ. ಸಂಸ್ಕೃತಭೂಯಿಷ್ಠ ಕುವೆಂಪು ಪಾತಳಿ, ಜನಪದ ದೇಶಿ ಪ್ರತಿಭೆಯ ಬೇಂದ್ರೆ ಪಾತಳಿ, ನವ್ಯ-ನವೋದಯದ ಅಡಿಗ-ಗೋಕಾಕರ ಪಾತಳಿ, ಸಾಹಿತ್ಯದ ಗಾಢ ಅನುಸಂಧಾನದಿಂದ ಮೂಡಿದ ಜಿ.ಎಸ್.ಎಸ್. ಕಣವಿ ಸಮನ್ವಯ ಪಾತಳಿ ಹೀಗೆ ಹಲವು ಪಾತಳಿಗಳ ಗೊಂದಲದಲ್ಲಿ ಬೀಳದ ಕಾವ್ಯಾನಂದರು ತಮ್ಮ ಕಾವ್ಯದ ದಾರಿಯಲ್ಲಿ ಯಾರನ್ನೂ ಅನುಕರಿಸದೆ ಹೋಗಿರುವುದು ಅವರೊಬ್ಬ ಉತ್ತಮ ಕವಿಯಾಗಿ ಬೆಳೆದರೆಂಬುದಕ್ಕೆ ಸಾಕ್ಷಿಯಾಗಿದೆ. ವಾಕ್ಯ 'ಕಾವ್ಯ'ವಾಗುವುದು ಒಂದು ಬದಲಾವಣೆಯ ಪ್ರಕ್ರಿಯೆಯಾಗಿದೆ. ಹೀಗೆ ಬದಲಾವಣೆ ಆಗುವಾಗ ಅದರ ಎಲ್ಲ ಮಗ್ಗಲುಗಳನ್ನು ದುಡಿಸಬೇಕಾಗುತ್ತದೆ. ಪ್ರತಿಭಾಶಕ್ತಿ ಮತ್ತು ವ್ಯುತ್ಪತ್ತಿ ಸಂಪತ್ತಿನ ಸಹಾಯದಿಂದ ನಿರಂತರ ಕಾವ್ಯಕೃಷಿ ಮಾಡುವವರಿಗೆ ಕಾವ್ಯಶಕ್ತಿ ಒಲಿದು ಬರುವುದರಲ್ಲಿ ಎರಡು ಮಾತಿಲ್ಲ. ಈ ಎಲ್ಲ ಹಂತಗಳಲ್ಲಿ ಪರಿಶ್ರಮಿಸಿದ ಕಾವ್ಯಾನಂದರ ಮಾನಸ ಸರೋವರ ಸಂಕಲನ ಅವರ ಅತ್ಯುತ್ತಮ ಕವನ ಸಂಕಲನಗಳಲ್ಲಿ ಒಂದಾಗಿದೆ. ಜೀವನದ ಬಗೆಗಿನ ಗಾಢಪ್ರೀತಿ ಕಾರಣವಾಗಿ ಕಾವ್ಯಾನಂದರು ನೆನಪುಗಳ ಹುಡುಕಾಟದಲ್ಲಿ ಕಾವ್ಯ ಹೆಣೆಯುವ ರೀತಿ, ಭಾಷೆಯನ್ನು ದುಡಿಸಿಕೊಳ್ಳುವ ಪರಿ, ಕಾವ್ಯಶಿಲ್ಪ ದೃಷ್ಟಿ ವಿಶೇಷವೆಂದೇ ಹೇಳಬೇಕು.

ಕಾವ್ಯಾನಂದರು ಕವನದ ವಸ್ತುವಿಗಾಗಿ ಹುಡುಕಾಡಿದವರಲ್ಲ. ತಮ್ಮ ಅನುಭವಕ್ಕೆ ಕಂಡುದೆಲ್ಲವನ್ನು ಅವರು ಕಾವ್ಯವಾಗಿಸಬಲ್ಲರು. 'ವಿಂಧ್ಯಾದ್ರಿಯಲ್ಲಿ ಚಂದ್ರೋದಯ' ಎಂಬ ಕವನ ಬರೆಯಲು ಅವರಿಗೆ ಮುಖ್ಯ ಪ್ರೇರಣೆಯಾಗಿದ್ದು ಕುಮಾರವ್ಯಾಸ ಭಾರತದ ಒಂದು ಪದ್ಯ. ನಮ್ಮ ಕನ್ನಡದ ಬಹುತೇಕ ಕವಿಗಳು ಸೂರ್ಯೋದಯವನ್ನು ಕುರಿತು ನೂರಾರು ಕವನಗಳನ್ನು ಬರೆದಿದ್ದಾರೆ. ಆದರೆ ಚಂದ್ರೋದಯ ಕುರಿತು ವರ್ಣಿಸಿರುವವರು ವಿರಳ. ಕಾವ್ಯಾನಂದರಿಗೆ ಸೂರ್ಯೋದಯದಷ್ಟೇ ಮುಖ್ಯವಾದುದು ಚಂದ್ರೋದಯ. ಈ ಚಂದ್ರನ ಉದಯವು ವಿಂಧ್ಯಾದ್ರಿಯಲ್ಲಿ ಆಗುತ್ತಿರುವ ಸಂದರ್ಭದಲ್ಲಿ ನಡೆದ ಪ್ರಕೃತಿ ವಿಸ್ಮಯದ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ.

ಕಾವ್ಯಾನಂದರು ಕೈಲಾಸ ಮಾನಸ ಸರೋವರಕ್ಕೆ ಹೋದ ಸಂದರ್ಭದಲ್ಲಿ 'ಮಾನಸಕೆ ಜೊತೆ' ಎಂಬ ಅದ್ಭುತ ಕವನ ರಚನೆ ಮಾಡಿದ್ದಾರೆ. ಮಾನಸ ಸರೋವರಕ್ಕೆ ಹತ್ತಿರದಲ್ಲಿಯೇ ಒಂದು ರಾಕ್ಷಸ ತಾಳ ಎಂಬ ಸರಸಿಯೊಂದಿದೆ. ಒಂದು ಸಣ್ಣ ಕಾಲುವೆ ಮಾನಸ ಸರೋವರದಿಂದ ಹೊರಟು ರಾಕ್ಷಸತಳ ಸರಸಿಯನ್ನು ಸೇರುತ್ತದೆ. ಮೊದಲು ರಾಕ್ಷಸ ತಳದ ನೀರನ್ನು ಯಾರೂ ಕುಡಿಯುತ್ತಿರಲಿಲ್ಲವೆಂದೂ, ಮಾನಸದಿಂದ ರಾಕ್ಷಸಕ್ಕೆ ಕಾಲುವೆಯುಂಟಾಗಿ ಮಾನಸದ ನೀರು ರಾಕ್ಷಸಕ್ಕೆ ಸೇರಿದ ಮೇಲೆ ಅದೂ ಪವಿತ್ರವೆನಿಸಿ ಕುಡಿಯತೊಡಗಿದರೆಂದು ದಂತಕಥೆಯಿದೆ. ಇದು ರಾಕ್ಷಸವು ಮಾನಸಕ್ಕೆ ಮೊರೆಯಿಡು ಕೃತಜ್ಞ ಹಾಡು ಎಂಬ ಸಣ್ಣ ಟಿಪ್ಪಣಿಯೊಂದನ್ನು ಕಾವ್ಯಾನಂದರು ನೀಡಿದ್ದಾರೆ.

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗ್
ತೇನ ತ್ಯಕ್ತೇನ ಭುಂಜೀಥಾಃ ಮಾಗೃಧಃ ಕಸ್ಯಸ್ವಿದ್ಧನಂ

ಈ ವಿಶ್ವದಲ್ಲಿ ಜಡಚೇತನ ರೂಪದಿಂದಿರುವ ಜಗವೆಲ್ಲ ಪರಮಾತ್ಮನಿಂದ ವ್ಯಾಪ್ತವಾಗಿದೆ. ಅವನ ಅರಿವಿನಿಂದೊಡಗೂಡಿ ತ್ಯಾಗಭಾವ ದಿಂದ ಭೋಗಿಸು. ಭೋಜ್ಯ ಪದಾರ್ಥಗಳಲ್ಲಿ ಆಸಕ್ತನಾಗಬೇಡ, ಏಕೆಂದರೆ, ಭೋಗ ಪದಾರ್ಥವು ಯಾರದು? ಯಾರದೂ ಅಲ್ಲ. ಅದು ಕೇವಲ ಪರಮಾತ್ಮನದು. ಜಗತ್ತಿನಲ್ಲಿರುವು ದೆಲ್ಲವು ಶಿವನ ಅಂಶವೇ ಆಗಿದೆ ಎಂದು ಈಶ್ಯಾವಾಸ್ಯೋಪನಿಷತ್ತು ಸಾರುತ್ತದೆ. ಈ ಹಿನ್ನೆಲೆಯಲ್ಲಿ ಮೂಡಿಬಂದ ಕಾವ್ಯಾನಂದರ 'ಜಗವೆ ಕೂಡಲಸಂಗಮ' ಎಂಬ ಕವನ ತನ್ನ ಅನನ್ಯತೆಯಿಂದ ಇಂದಿಗೂ ಜನಪ್ರಿಯತೆಯನ್ನು ಉಳಿಸಿಕೊಂಡಿದೆ. ಕವಿಯ ಹೆಸರನ್ನು ಅಜರಾಮರಗೊಳಿಸಿದೆ. ಆಕಾಶವಾಣಿಯಲ್ಲಿ ಸಾವಿರಾರು ಬಾರಿ ಪ್ರಸಾರವಾದ ಕವನವೆಂಬ ಕೀರ್ತಿ ಈ ಪದ್ಯಕ್ಕಿದೆ. ಈ ಪದ್ಯದ ಆಶಯವೂ ಕೂಡ ಕಾವ್ಯಾನಂದರ ಕವಿ ಹೃದಯದ ಪರಿಪಕ್ವ ಫಲವೆನಿಸಿದೆ.

ಪ್ರಕೃತಿಯೇ ಗುರು ಗಗನ ಲಿಂಗವು
ಜಗವೆ ಕೂಡಲಸಂಗಮ
ಹುಡಿಯೆ ಭಸ್ಮವು ಹುಲ್ಲೆ ಪತ್ರಿಯು
ಜಡವಿದೆಲ್ಲವು ಜಂಗಮ
ಕುಡಿವ ನೀರೇ ತೀರ್ಥ ತಿನ್ನುವ
ರೊಟ್ಟಿ ಶಿವನ ಪ್ರಸಾದವು
ಶ್ರಮದ ಬೆಮರೇ ಸ್ನಾನ ದುಡಿತದ
ಜಾಡೆ ಮಂತ್ರನಿನಾದವು
ಭದ್ರವನ್ನೇ ನೋಳ್ಪ ಅಕ್ಷಿಯೆ
ಭಾವಿಸಲು ರುದ್ರಾಕ್ಷಿಯು
ಭದ್ರವನ್ನೇ ನುಡಿವೆ ಮಾಡುವೆ
ನೆಂಬ ಬುದ್ಧಿಯೆ ದೀಕ್ಷೆಯು
ಸರ್ವವೂ ಶಿವನಂಶವೆನ್ನುವ
ಧರ್ಮವೊಂದೇ ಧರ್ಮವು
ಅನ್ಯರನು ಅಳಲಿಸದ ಹಿತಕರ
ಕರ್ಮವೊಂದೇ ಕರ್ಮವು
ಎಲ್ಲರೆಲ್ಲರಿಗಾಗಿಯೆನ್ನುವ
ಜ್ಞಾನವೊಂದೇ ಜ್ಞಾನವು
ಒಲಿದು ಒಲಿಸುವ ನಲಿದು ನಲಿಸುವ
ಕಲೆಯೆ ಅಮೃತನಿಧಾನವು
ಉಣಿಸಿ ಉಣ್ಣುವ ಭಾವ ಭಕ್ತಿಯು
ಒಲ್ಲೆನೆನೆ ಸುವಿರಕ್ತಿಯು
ಕೂಡಿ ಕಲಿಯಲು ಕೂಡಿ ಬೆಳೆಯಲು
ಕೂಡಿ ನಲಿಯಲು ಮುಕ್ತಿಯು

ಧರ್ಮ-ಅಧ್ಯಾತ್ಮ ಸಂಸ್ಕಾರಗಳ ಹಿನ್ನೆಲೆಯಲ್ಲಿ ಬೆಳೆದ ಕಾವ್ಯಾನಂದರಿಗೆ ಕಾಶಿ-ರಾಮೇಶ್ವರಕ್ಕಿಂತಲೂ ಕೂಡಲಸಂಗಮವೇ ಪ್ರಿಯವಾದ ರೂಪಕವಾಗಿ ಈ ಪದ್ಯದಲ್ಲಿ ಮೂಡಿದೆ. 'ಜಗತ್ತಿನ ಎಲ್ಲ ಧರ್ಮಗಳ ಜನರೂ ಅರಿಯಬೇಕಾದ ದರ್ಶನ ದೀಪ್ತಿ' ಇದು ಎಂದು ದೇಜಗೌ ಅವರು ಹೇಳಿರುವುದು ತುಂಬ ಔಚಿತ್ಯಪೂರ್ಣವಾಗಿದೆ.



ಈ ಸಂಕಲನದಲ್ಲಿಯ 'ಕೋವಿಯ ಕೋರಿಕೆ' ಎಂಬ ಪದ್ಯ ತುಂಬ ಮಾರ್ಮಿಕವಾಗಿದೆ. ಗೋಡಸೆ ಮಹಾತ್ಮಾ ಗಾಂಧೀಜಿಯವರನ್ನು ಗುಂಡಿಟ್ಟು ಕೊಂದ. ಗೋಡಸೆ ಕೈಯಲ್ಲಿದ್ದ ಕೋವಿಯ ಅಂತರಂಗದ ಮಾತುಗಳನ್ನು ಕಾವ್ಯಾನಂದರ ಕಲ್ಪನೆಯಲ್ಲಿ ಕಾವ್ಯವಾಗಿ ಮೂಡಿಬಂದಿದೆ. 'ಏಕೆ ಹುಟ್ಟಿಸಿದೆಯೊ ಬ್ರಹ್ಮ, ಯಾವ ಜನ್ಮದಾವ ಕರ್ಮ, ಕೊಟ್ಟಿತೆನಗೆ ಕೋವಿಜನ್ಮ, ಗೈಸಿತಿಂಥ ಪಾಪಕರ್ಮ! ಎಂಥ ಎದೆಯ ಭೇದಿಸಿದೆನು, ಎಂಥ ಹೃದಯ ಛೇಧಿಸಿದೆನು, ಎಂಥ ಮಹಿಮನನ್ನು ಕೊಂದೆ, ಅಯ್ಯೊ ನೊಂದೆ, ನೊಂದೆ, ನೊಂದೆ' ಎಂದು ಕೋವಿ ಪ್ರಲಾಪಿಸುತ್ತದೆ. ಕೋವಿ ಪಶ್ಚಾತ್ತಾಪದ ಕಣ್ಣೀರಿನಲ್ಲಿ ಅನುತಾಪದಿಂದ ಪರಿ ಪರಿಯಾಗಿ ನಿವೇದಿಸಿಕೊಳ್ಳುತ್ತದೆ. ಏನು ಮಾಡಬೇಕೆಂದು ಕಾಲವನ್ನೇ ಕೋವಿ ಕೇಳುತ್ತದೆ. ನನ್ನನ್ನು ಮಳೆಮಾಡಿ ರಾಜಘಾಟದ ಮೇಲೆ ಸುರಿಯುವಂತೆ ಮಾಡು, ಅದೇ ಅಭಿಷೇಕವಾಗುತ್ತದೆ. ಮಹಾತ್ಮರ ಸಮಾಧಿಗೆ ನನ್ನನ್ನು ಒಂದು ಮಾಲೆಯನ್ನಾದರೂ ಮಾಡು, ಅಥವಾ ನನ್ನನ್ನು ಒಂದು ಧೂಪವನ್ನು ಮಾಡು ಇಲ್ಲದಿರೆ ದೀಪವನ್ನಾದರೂ ಮಾಡು. ಮಹಾತ್ಮರ ಸಮಾಧಿಯ ಎದುರು ನಾನು ಸುಟ್ಟು ನನ್ನ ಪಾಪವನ್ನು ಕಳೆದುಕೊಳ್ಳುವೆ. ಮುಂದೆಂದೂ ನನಗೆ ಕೋವಿಯ ಜನ್ಮ ನೀಡಬೇಡ ಎಂದು ಪ್ರಾರ್ಥಿಸುತ್ತದೆ. ಕಾವ್ಯಾನಂದರ ಹೃದಯ ಮಹಾತ್ಮರಿಗಾಗಿ ಮರುಗಿ ಇಂಥ ಅಪರೂಪದ ಕವನ ಸೃಷ್ಟಿಯಾಗುವಂತೆ ಮಾಡಿದೆ.

ಸರದಾರ ಪಟೇಲರು ತೀರಿಕೊಂಡಾಗ ಕಾವ್ಯಾನಂದರ ಶೋಕತಪ್ತ ಮನಸ್ಸು 'ಸರದಾರಗೆ ಶ್ರದ್ಧಾಂಜಲಿ' ಎಂಬ ಕವನ ರೂಪದಿಂದ ಹೊರಹೊಮ್ಮಿದೆ. ಪಟೇಲರ ಬಗ್ಗೆ ಕಾವ್ಯಾನಂದರಿಗೆ ತುಂಬ ಪ್ರೀತಿ. ಏಕೆಂದರೆ ಇವರು ಆಡಳಿತ ಸೇವೆ ಸಲ್ಲಿಸುತ್ತಿದ್ದ ಹೈದರಾಬಾದ ಸಂಸ್ಥಾನದ ನವಾಬ ಭಾರತದ ಒಕ್ಕೂಟ ವ್ಯವಸ್ಥೆಯನ್ನು ಸೇರಲು ನಿರಾಕರಿಸಿದ ಸಂದರ್ಭದಲ್ಲಿ, ಪಟೇಲರು ನವಾಬನ ಸೊಕ್ಕನ್ನು ಮುರಿದು, ಹೈದರಾಬಾದ ಸಂಸ್ಥಾನವನ್ನು ವಿಲೀನಗೊಳಿಸಿದರು. ಇಂಥ ಮಹಾನುಭಾವನ ಬಗ್ಗೆ ಕಾವ್ಯಾನಂದರಿಗೆ ಗೌರವ. ಪಟೇಲರನ್ನು ಭಾರತದ ವೈರಿಗಜಸಿಂಹಸ್ವಪ್ನ, ಉಕ್ಕಿನ ಮಹಾಬಾಹು, ಸೋಲರಿಯದಿಹ ಶೂರ, ರಿಪು ಭಯಂಕರ, ದೀನಬಂಧು, ಕ್ಷಮಾಶೀಲ, ಸ್ವಾತಂತ್ರ್ಯ ಸಂಗ್ರಾಮದ ಸೇನಾನಿ ಎಂದು ಕರೆಯುತ್ತಾರೆ.

**ಖಡ್ಗವನು ಕೈಕೊಳದೆ ಹೂಂಕಾರ ಮಾತ್ರದಲಿ**
**ರಾಜನವ್ವಾಬರನು ನತಮಸ್ತಕರ ಮಾಡಿ**
**ಬುವಿ ಬೆರಳು ಕಚ್ಚುತಿರೆ ಭಾರತದ ಏಕತೆಯ**
**ಭೀಮವಿಕ್ರಮದಿಂದ ಸಾಧಿಸಿದ ಸಾಹಸಿಯೆ**

ಎಂದು ವರ್ಣಿಸುತ್ತ ಪಟೇಲರು ಮೊದಲು ಬ್ರಿಟಿಷರ ವಿರುದ್ಧ ನಂತರ ಭಾರತೀಯ ಒಳಗಿನ ದೇಶದ್ರೋಹಿಗಳಾದ ಜುನಾಗಡ ನವಾಬ, ಹೈದರಾಬಾದಿನ ನಿಜಾಮರ ವಿರುದ್ಧ ಮಾಡಿದ ಹೋರಾಟ ಅವಿಸ್ಮರಣೀಯ. ಸೌರಾಷ್ಟ್ರದ ಸೋಮನಾಥನ ಮೇಲೆ ಗಜನಿ ದಾಳಿ ಮಾಡಿದ, ಇಂಥ ಸೌರಾಷ್ಟ್ರ ಪ್ರದೇಶದಿಂದ ಬಂದ ಪಟೇಲರು ದೇಶದ್ರೋಹಿ ಇಸ್ಲಾಂ ದೊರೆಗಳನ್ನು ಬಗ್ಗು ಬಡಿದರು.

೧೯೫೬ರಲ್ಲಿ ಶಿ.ಶಿ.ಬಸವನಾಳ ಸ್ಮಾರಕ ಸಂಪುಟಕ್ಕೆ ಬರೆದ 'ನಮನ' ಎಂಬ ಪದ್ಯ ಈ ಸಂಕಲನದಲ್ಲಿ ಸೇರಿದೆ. ಕರ್ನಾಟಕದ ಶಿಕ್ಷಣ ಪ್ರೇಮಿ, ಅಜಾತ ಶತ್ರು, ಉತ್ತುಂಗ ಸಾಹಿತಿ ಬಸವನಾಳರು ಬಸವನ ಆಳಾದವರು; ಶರಣ ಜನರು. ನಡೆ–ನುಡಿ ಒಂದಾದ ಆಧುನಿಕ ಶರಣರು. ಅವರು ನಾಡನಂದಾದೀಪ, ಔದಾರ್ಯ, ಮಾಧುರ್ಯ, ಆತ್ಮದೈಶ್ವರ್ಯ, ಶೀಲಸೌಂದರ್ಯ, ಚಿತ್ತಸ್ಥೈರ್ಯ ಇವು ಅವರ ಮುಖ್ಯ ಗುಣಗಳು. ಕರದಲ್ಲಿ ಕ್ರಿಯೆ ತುಂಬಿ, ಉರದಲ್ಲಿ ಪ್ರೀತಿ ತುಂಬಿ, ಶಿರದಲ್ಲಿ ಜ್ಞಾನ ತುಂಬಿ, ಮೊಗದಲ್ಲಿ ಶಾಂತಿ ತುಂಬಿ, ಕಣ್ಗಳಲ್ಲಿ ಕಾಂತಿ ತುಂಬಿ, ಬಾಳಿದ ತುಂಬು ಜೀವಿ ಅವರು. ಬಿರುದು ಬಾವಲಿಗಾಗಿ ಹೋರಾಡದೆ ತತ್ವನಿಷ್ಠೆಗೆ ಹೋರಾಡಿದ ಕಲಿ. 'ಕೇಡು ಬಗೆದವನಿಗೂ ಹಿತಮಾಡು' ಎನ್ನುವ ಏಸು ಮನ ಅವರದು. ಪ್ರಸನ್ನ ಮುಖಿ, ಹಿತಮಿತ ವಚನ, ಮಧ್ಯಮತನುವಿದ್ದ ಈ ಮಹಾತ್ಮ, ಸಾಹಿತ್ಯ ಶೋಧಕ, ತತ್ವಬೋಧಕ, ಶಿವದ ಆರಾಧಕ ಎಂದು ಕಾವ್ಯಾನಂದರು ಬಣ್ಣಿಸುತ್ತಾರೆ.

೧೯೫೬ರಲ್ಲಿ ಕರ್ನಾಟಕ ಏಕೀಕರಣವಾಯಿತು. ಅಂದು ಕನ್ನಡದ ದೀಪ ಹೊತ್ತಿತು ಎಂದು ಕಾವ್ಯಾನಂದರು ಸಂಭ್ರಮಪಟ್ಟು 'ಕನ್ನಡದ ದೀಪ' ಕವನವನ್ನು ರಚಿಸಿದ್ದಾರೆ.

**ಹೊತ್ತಿತೋ ಹೊತ್ತಿತು**
**ಕನ್ನಡದ ದೀಪ**
**ಮುಗಿಯಿತೋ ಮುಗಿಯಿತು**
**ಶತಮಾನಗಳ ಶಾಪ**

ಕಣ್ಣು ಕುಕ್ಕಿಸುವಂಥ ದೇದೀಪ್ಯಮಾನದ ಹರ್ಷ ಅವರಲ್ಲಿ ಮೂಡಿ ನಿಂತಿತು. ನೂರಾರು ವರುಷಗಳ ಶಾಪದಿಂದ ಮುಕ್ತವಾದ ಈ ಕನ್ನಡದ ದೀಪ ಆರದಂತೆ ಕಾಪಾಡುವ ಜನರು ಬೇಕೆಂದು ಕವಿ ಕರೆಕೊಡುತ್ತಾರೆ.

**ಉರಿವವರು ಬೇಕಿನ್ನು**
**ಇದರೆಣ್ಣೆಯಾಗಿ**
**ಸುಡುವವರು ಬೇಕಿನ್ನು**
**ನಿಡುಬತ್ತಿಯಾಗಿ**
**ಧರಿಸುವರು ಬೇಕಿದನು**
**ಸಿರಿಹಣತೆಯಾಗಿ**

ಕನ್ನಡವನ್ನು ಉಳಿಸಲು ಎಲ್ಲ ರೀತಿಯ ತ್ಯಾಗಕ್ಕೂ ನಾವು ಸಿದ್ಧರಾಬೇಕೆಂದು ಕವಿ ಹೇಳುತ್ತಾರೆ. ಈ ಕನ್ನಡದ ದೀಪದಿಂದಲೇ ಭಾರತದ ಬೆಳಕು ಉಜ್ವಲವಾಗುವುದೆಂದು ಭಾವಿಸುತ್ತಾರೆ.

ವೀರವಿರಾಗಿಣಿ ವೈರಾಗ್ಯನಿಧಿ ಅಕ್ಕಮಹಾದೇವಿ ವಚನ ಚಳವಳಿಯಲ್ಲೊಂದು ಭಿನ್ನಸ್ವರ. ಅಧ್ಯಾತ್ಮದ ಹಂಬಲದಿಂದ ದಿಗಂಬರೆಯಾಗಿ ಲೋಕಲಜ್ಜೆಯನಳಿದು ಅನುಭವ ಮಂಟಪದಲ್ಲಿ ನಮೋ ನಮೋ ಎನಿಸಿಕೊಂಡ ಅಕ್ಕನಂಥ ಮಹಾ ಅನುಭಾವಿಗಳ ಸ್ಮಾರಕಗಳ ಬಗ್ಗೆ ಕನ್ನಡಿಗರು ತಾಳಿದ ದಿವ್ಯನಿರ್ಲಕ್ಷ್ಯ ಕುರಿತು ಕಾವ್ಯಾನಂದರು 'ಏತಕಿಲ್ಲ?' ಎಂಬ ಪದ್ಯದಲ್ಲಿ ವಿಷಾದ ವ್ಯಕ್ತಪಡಿಸುತ್ತಾರೆ. ಭಾವವೆಂಬ ಹಾಲಹರಿಸಿ, ಜ್ಞಾನವೆಂಬ ತುಪ್ಪ ಸುರಿಸಿ, ಪರಮಾರ್ಥದ ಸವಿಯ ಬೆರಸಿ, ಜಗದಾತ್ಮನ ನಿಲುವ ತಿಳಿಸಿ, ಅಧ್ಯಾತ್ಮದ ಅಮಲಲತೆಯೆನಿಸಿದ ಅಕ್ಕನ ನಾಡಿನಲ್ಲೆ ಅಕ್ಕನ ಕುರುಹೇತಕ್ಕಿಲ್ಲ? ಎಂದು ಪ್ರಶ್ನಿಸಿದ್ದಾರೆ.



ಸ್ವಾತಂತ್ರ್ಯ ಬಂದ ನಂತರದ 'ಜಮಾ–ಖರ್ಚು' ಕುರಿತು ಒಂದು ಕವನ ಕಾವ್ಯಾನಂದರ ಮನದಾಳದಿಂದ ಮೂಡಿದೆ. ಸಾವಿರಾರು ಜನರ ತ್ಯಾಗ ಮತ್ತು ಬಲಿದಾನದಿಂದ ಸಿಕ್ಕ ಈ ಸ್ವಾತಂತ್ರ್ಯದ ಪರಿಣಾಮ ಏನಾಯಿತ್ತೆಂದು ಕಾವ್ಯಾನಂದರು ಲೆಕ್ಕ ಹಾಕಿದ್ದಾರೆ. ಸ್ವಾತಂತ್ರ್ಯ ಬಂತು ಸೌಜನ್ಯ ಮಾತ್ರ ಹೋಯಿತು, ಗಣರಾಜ್ಯ ಬಂತು ಗುಣರಾಜ್ಯ ಕರಗಿ ಹೋಯ್ತು, ಆದ್ದರಿಂದ

**ಬಂದದ್ದು ಹೋದದೆಷ್ಟು**
**ಯಾವುದಕೆ ಬೆಲೆಯು ಹೆಚ್ಚು**
**ನೀನೊಮ್ಮೆ ಮಾಡಿ ನೋಡೋ**
**ಈ ನಾಡ ಜಮಾ ಖರ್ಚು**

ಪದ್ಯದ ಕೊನೆಯಲ್ಲಿ ಹೇಳುವ ಈ ನುಡಿಗಳು ಮರ್ಮಭೇದಕವೆನಿಸುತ್ತವೆ.

ಸ್ವಾತಂತ್ರ್ಯ ಬಂದ ಏಳುವರ್ಷಗಳ ಸಿಂಹಾವಲೋಕನವನ್ನು ಕಾವ್ಯಾನಂದರು 'ಸ್ವಾತಂತ್ರ್ಯದ ಸಪ್ತವರ್ಷಗಳು' ಎಂಬ ಕವನದಲ್ಲಿ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಸ್ವಾತಂತ್ರ್ಯ ಸಿಕ್ಕ ಪ್ರಾರಂಭದಲ್ಲಿ ಹೈದರಾಬಾದ ಕರ್ನಾಟಕದಲ್ಲಿ ರಜಾಕಾರರ ಹಾವಳಿ, ಮುಸ್ಲಿಂ ಸಂಸ್ಥಾನಿಕರ ಮೊಂಡುತನ ಕಾರಣವಾಗಿ ಭಾರತ ತತ್ತರಿಸಿತು. ಕಾಶ್ಮೀರದಲ್ಲಿ ಕೊಲೆ ಸುಲಿಗೆಗಳು ನಡೆದು, ದೇಶ ವಿಭಜನೆಯ ದುರಂತ ಜರುಗಿತು. ಸ್ವಾತಂತ್ರ್ಯ ತಂದುಕೊಟ್ಟ ಗಾಂಧಿ ಮಹಾತ್ಮನ ಹತ್ಯೆಯಾಯಿತು. ಹೊಸ ರಾಜ್ಯ ಘಟನಾವಳಿಗಳ ಸಲುವಾಗಿ ನಿರಂತರ ಹೋರಾಟ ನಡೆಯಿತು. ಇವೆಲ್ಲದರ ನಡುವೆ ಭಾರತದ ಆಂತರಿಕ ಸಮಸ್ಯೆಗಳಾದ ಅಜ್ಞಾನ, ಅನಕ್ಷರತೆ, ಬಡತನದಂತಹ ಸಮಸ್ಯೆಗಳು–ಇವೆಲ್ಲವುಗಳ ನಡುವೆ ಭಾರತ ಹೇಗೆ ಮೈಕೊಡವಿ ಮೇಲೇಳುತಿದೆ ಎಂಬುದನ್ನು ಕವಿಕಾಣ್ಕೆ ಹೀಗೆ ವಿವರಿಸುತ್ತದೆ–

**ಏಳು ವರ್ಷಗಳಾಚೆ ಹೋಳಾಗಿ ಸ್ವಾತಂತ್ರ್ಯ**
**ಪಡೆದ ಭಾರತವರ್ಷ ಪಟ್ಟಕಷ್ಟಗಳೆನಿತೊ!**
**ಎದುರಿಸಿದ ಎಡರುಗಳು ತೊಡರು ಎನಿತೊ!**
**ಪ್ರಕೃತಿಕ್ಷೋಭೆಗಳೆನಿತೊ ಹಗೆಯ ಹಾವಳಿಯೆನಿತೊ**
**ಸಾಮ್ರಾಜ್ಯಶಕ್ತಿಗಳ ಕುಹಕವೆನಿತೊ**
**ಆದರೂ ಬಗ್ಗಿಲ್ಲ ಭಾರತವು ಭಯಗಳಿಗೆ**
**ಬಲಶಾಲಿಯಾಗುತ್ತ ನಡೆದಿರುವುದು**
**ಶಾಂತಿ ಸತ್ಯದ ಧ್ವಜವ ಧವಳಗಿರಿಯಲಿ ನಿಲಿಸಿ**
**ಜಗಕೆ ಬೆಳಕಾಗುತ್ತ ಸಾಗಿರುವುದು**
**ವಿಜಯೋಸ್ತು ಭಾರತವೆ**
**ವರ್ಧಿಷ್ಣು ಭಾರತವೆ**
**ಅಡಗದಿರಲೆಂದಿಗೂ ನಿನ್ನ ಗೆಲವಿನ ಸದ್ದು**

ಈ ಸಂಕಲನದ ಕೊನೆಯ ಪದ್ಯ 'ಮಾನಸ ಸರೋವರ' ಸಂಕಲನದ ಹೆಸರಾಗಿಯೂ ಮಹತ್ವ ಪಡೆದಿದೆ. ಹಲವು ಅರ್ಥಗಳನ್ನು ಏಕಕಾಲಕ್ಕೆ ಹೊರಡಿಸುವ ಒಂದು ಧ್ವನಿತರಂಗ ಅನುಭಾವದ ಸಂವೇದನೆ ಈ ಪದ್ಯದಲ್ಲಿದೆ.

ಕಾವ್ಯಾನಂದರ ಕವನಗಳು ಹೂವುಗಳ ಹೃದಯವನ್ನು ಹೂಬಿಸಿಲು ಹೊಕ್ಕಂತೆ ನಮ್ಮ ಮನಸ್ಸನ್ನು ಆಕರ್ಷಿಸುತ್ತವೆ ಎಂಬ ಪು.ತಿ.ನ. ಅವರ ನುಡಿ ಅಕ್ಷರಶಃ ನಿಜವೆನಿಸಿದೆ.

೭

ಕಾವ್ಯಾನಂದರ ಮಾನಸ ಸರೋವರ ಪ್ರಕಟವಾಗಿ ಒಂಬತ್ತು ವರ್ಷಗಳ ನಂತರ ೧೯೬೮ರಲ್ಲಿ 'ಕಲ್ಲೋಲಮಾಲೆ' ಪ್ರಕಟಗೊಂಡಿತು. ಆಧುನಿಕ ಕನ್ನಡ ಕಾವ್ಯ ಪ್ರಪಂಚ ದಲ್ಲಿಯೇ ಒಂದು ವಿಶಿಷ್ಟ ಪ್ರಕಾರದ ಸಂಕಲನವಿದು. ಕಾವ್ಯಾನಂದರ ಅಪ್ರತಿಮ ಪ್ರತಿಭಾ ಶಕ್ತಿಗೆ ಅಪರೂಪದ ಕೈಗನ್ನಡಿಯಾಗಿದೆ ಕಲ್ಲೋಲಮಾಲೆ. ವಿಶ್ವಕವಿ ರವೀಂದ್ರರ 'ಸ್ಟ್ರೇ ಬರ್ಡ್ಸ್' ಎಂಬ ಸಂಕಲನವನ್ನು ನೆನಪಿಸುವ ಈ ಸಂಕಲನ ಕಾವ್ಯಾನಂದರಿಗೆ ಅಪಾರ ಕೀರ್ತಿ ಮತ್ತು ಗೌರವವನ್ನು ತಂದುಕೊಟ್ಟಿದೆ.

'ಕಲ್ಲೋಲಮಾಲೆ' ಕಾವ್ಯಾನಂದರ ಇತರ ಕವನ ಸಂಕಲನಗಳಿಗಿಂತ ತೀರ ಭಿನ್ನವಾದುದು. ಈ ಮೊದಲು ಅವರು 'ತುಷಾರಹಾರ' ಎಂಬ ಕಥಾ ಸಂಕಲನವನ್ನು ಪ್ರಕಟಿಸಿದ್ದರು. ಅದೇ ಮಾದರಿಯಲ್ಲಿ ಈ ಸಂಕಲನ ರೂಪುಗೊಂಡಿದೆ. ರವೀಂದ್ರರ 'ಸ್ಟ್ರೇ ಬರ್ಡ್ಸ್' ಮತ್ತು ಖಲೀಲ್ ಗಿಬ್ರಾನ್‌ರ ಕಾವ್ಯದ ದಟ್ಟ ಪ್ರಭಾವ ಮತ್ತು ಪ್ರೇರಣೆಗಳು ಈ ಸಂಕಲನದ ಮೇಲೆ ಆಗಿದೆ ಎಂಬುದನ್ನು ದೇಜಗೌ–ಸದಾಶಿವ ಒಡೆಯರ ಮೊದಲಾದ ವಿದ್ವಾಂಸರು ಗ್ರಹಿಸಿದ್ದಾರೆ.

ಕಾವ್ಯಾನಂದರು ತಮ್ಮ ನೆನಪಿಗೆ ಬಂದ ಆಲೋಚನೆ–ವಿಚಾರಗಳನ್ನು ಸುಂದರವಾದ ಉಪಮೆ, ಸಂಕೇತಗಳಿಂದ ಈ ಸಣ್ಣ ಕವನಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಅವರೇ ಹೇಳುವಂತೆ ಇವು– 'ಹೂವಿನ ಎಸಳಿನಂತೆ', 'ತೆನೆಗಳ ಕಾಳಿನಂತೆ', 'ಹಕ್ಕಿಯ ಗರಿಗಳಂತೆ' ತಲೆ ಎತ್ತಿನಿಂತಿವೆ. 'ಕರಿಘನ; ಅಂಕುಶ ಕಿರಿದೆನ್ನಬಹುದೆ?' ಎಂಬ ಬಸವಣ್ಣನವರ ನುಡಿಯಂತೆ ಗಾತ್ರದಲ್ಲಿ ಚಿಕ್ಕವಿರುವ ಈ ಕವನಗಳು ಪಾತ್ರದಲ್ಲಿ ತುಂಬ ಹಿರಿದಾಗಿವೆ. ಸಣ್ಣ ಬಿಂದುವಿನಲ್ಲಿ ಘನವಾದ ವಿಚಾರಗಳನ್ನು ಪ್ರತಿಪಾದಿಸುತ್ತವೆ.

'ಕಾವ್ಯವೆಂದರೆ ಮನುಷ್ಯನ ದುಃಖ ದುಮ್ಮಾನಗಳನ್ನು ಶಮನಗೊಳಿಸಿ, ಮನಸ್ಸಿಗೆ ನೆಮ್ಮದಿ ನೀಡುವ, ಅವನ ವಿಚಾರಗಳನ್ನು ಉನ್ನತ ಮಟ್ಟಕ್ಕೆ ಒಯ್ಯುವ ಶ್ರೇಷ್ಠ ಸಾಧನ' ಎಂಬ ನುಡಿಯನ್ನು ಸಾರ್ಥಕ್ಯಗೊಳಿಸುವ ಕವನಗಳು ಇಲ್ಲಿವೆ. ಪ್ರಕೃತಿಯ ವಿಸ್ಮಯದಲ್ಲಿರುವ ಪ್ರತಿಯೊಂದು ಪಶು–ಪಕ್ಷಿ–ಪ್ರಾಣಿ–ಗಿಡಮರಗಳಿಂದ ನಾವು ಕಲಿಯಬೇಕಾದುದು ಬಹಳಷ್ಟಿದೆ ಎನ್ನುವುದನ್ನು ಕಾವ್ಯಾನಂದರು ಇಲ್ಲಿ ತೋರಿಸಿಕೊಟ್ಟಿದ್ದಾರೆ.

ಕಾವ್ಯಾನಂದರ ಕಾವ್ಯದಲ್ಲಿ ಕೇವಲ ಅರ್ಭಟವಿಲ್ಲ; ಅಂತರ ನಿರೀಕ್ಷಣೆ ಇದೆ. ಪ್ರಚಾರದ ಅಬ್ಬರವಿಲ್ಲ–ಪ್ರಶಾಂತ ಪರಿಣಿತಿಯಿದೆ. ಉದಾತ್ತ ಆಶಯವಿದೆ, ಆದರ್ಶವಿದೆ, ಜೀವನದ ಅನುಭವವಿದೆ, ಅನುಕಂಪವಿದೆ, ಪೂರ್ಣದೃಷ್ಟಿಯಿದೆ, ಸೃಷ್ಟಿಶಕ್ತಿಯಿದೆ.



ಕಾವ್ಯಾನಂದರ ಕವನಗಳ ವೈವಿಧ್ಯ ಹಾಗು ವ್ಯಾಪ್ತಿ ಆಶ್ಚರ್ಯವೆನಿಸುತ್ತದೆ. ಅಭಿವ್ಯಕ್ತಿಯಲ್ಲಿ ನೇರತನ, ಖಚಿತತೆ ಮತ್ತು ಆತ್ಮೀಯ ಗುಣಗಳು ಇವರ ಅನೇಕ ಕವಿತೆಗಳಲ್ಲಿ ಎದ್ದು ಕಾಣುತ್ತವೆ. ಕನ್ನಡವನ್ನು ಔಚಿತ್ಯಪೂರ್ಣವಾಗಿ ಬಳಸುವ ರೀತಿ, ಗೇಯಗುಣಕ್ಕೆ ಕೊಡುವ ಪ್ರಾಧಾನ್ಯ ಮತ್ತು ಬಿಗಿಯೂ ಆದ ಲಯಬದ್ಧ ಸಾಲುಗಳನ್ನು ನಿರ್ಮಿಸುವಲ್ಲಿ ತೋರುವ ಎಚ್ಚರ ಅವರನ್ನು ಅನನ್ಯಕವಿಯನ್ನಾಗಿಸಿದೆ.

ಕಾವ್ಯಾನಂದರು ಕೊಡುವ ಉಪಮೆ, ರೂಪಕಗಳೆಲ್ಲವು ಸಾದೃಶ್ಯವಾದವು. ಅವು ಓದುಗರ ಮನದಾಳದಲ್ಲಿ ಅಚ್ಚಳಿಯದೆ ಮೂಡಿನಿಲ್ಲುವ ಸಾಮರ್ಥ್ಯ ಹೊಂದಿವೆ. ಒಲೆಯ ಉರಿಯೊಂದು– 'ನಾನು ಅಡುಗೆ ಮಾಡಬಲ್ಲೆ, ಬೆಳಕನ್ನು ನೀಡಲಾರೆ' ಎಂದಿತು. ಒಲೆಯ ಮೇಲಿನ ದೀಪ– 'ನಾನು, ಬೆಳಕನ್ನು ಬೀರಬಲ್ಲೆ, ಅಡುವೆ ಮಾಡಲಾರೆ' ಎಂದಿತು. ಅದಕ್ಕೆ ಗೃಹಿಣಿ– 'ನನಗೆ ಅಡುಗೆ ಮಾಡುವ ಉರಿಯೂ ಬೇಕು; ಬೆಳಕು ನೀಡುವ ದೀಪವೂ ಬೇಕು' ಎನ್ನುತ್ತಾಳೆ. ಕೊನೆಯ ನುಡಿಯಲ್ಲಿ ಬೆಂಕಿಯಷ್ಟೆ ಬೆಳಕು ಮುಖ್ಯ ಎನ್ನುವ ಸೌಮ್ಯಸಂದೇಶವನ್ನು ಕಾಣಬಹುದು.

ಸುಟ್ಟ ಸಗಣಿ ಶುದ್ಧವಾಗಿ ಭಸ್ಮವಾಗುತ್ತದೆ
ಸುಟ್ಟ ಅದಿರು ಶುದ್ಧವಾಗಿ ಧಾತುವಾಗುತ್ತದೆ
ಸುಟ್ಟ ಗಂಧದ ಚೆಕ್ಕೆ ಹೊಗೆಯಾಗಿ ಮಗಮಗಿಸುತ್ತದೆ
ಸುಟ್ಟ ಕಣಕ ಪಕ್ವವಾಗಿ ರೊಟ್ಟಿಯಾಗುತ್ತದೆ.
ಸುಡು ನಿನ್ನ ದುರ್ಗುಣವ–
    ಸುಟ್ಟ ದುರ್ಗುಣ ಶುದ್ಧವಾಗಿ ಸದ್ಗುಣವಾಗುತ್ತದೆ
ಸುಡು ನಿನ್ನ ಕರ್ಮವ
    ಸುಟ್ಟ ಕರ್ಮ ನಿರ್ಮಲವಾಗಿ ಧರ್ಮವಾಗುತ್ತದೆ;
ಸುಡು ನಿನ್ನ ಹಮ್ಮು ಬಿಮ್ಮುಗಳ
    ಸುಟ್ಟ ಹಮ್ಮು ಶುದ್ಧವಾಗಿ ಶಿವವಾಗುತ್ತದೆ!

ಒಂದು ಧನಾತ್ಮಕವಾದ ಸಂದೇಶವನ್ನು ನಿಷೇಧಾರ್ಥಗಳ ಮೂಲಕ ತಿಳಿಸುವ ಕಾವ್ಯಾನಂದರ ರೀತಿ ಅನನ್ಯವಾಗಿದೆ. ಸುಡುವುದು ಎಂದರೆ ನಾಶವೆಂದೇ ಅರ್ಥ. ಬೆಂಕಿಯಿಂದ ಆವೃತವಾದ ಯಾವ ವಸ್ತುವು ತನ್ನ ಮೂಲ ರೂಪವನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ. ಸುಟ್ಟ ವಸ್ತುಗಳೆಲ್ಲ ಪರ್ಯಾಯ ರೂಪಧಾರಣೆ ಮಾಡುತ್ತವೆ. ಇಂಥ ಸುಡುವ ನಕಾರಾತ್ಮಕ ಚಿಂತನೆಯ ಮೂಲಕ, ಯಾವುದನ್ನು ಸುಟ್ಟರೆ, ಮನುಷ್ಯ ಜನ್ಮ ಸಾಫಲ್ಯ ಪಡೆಯಲು ಸಾಧ್ಯ ಎಂಬುದನ್ನು ಕಾವ್ಯಾನಂದರು ತುಂಬ ಅರ್ಥಪೂರ್ಣವಾಗಿ ಇಲ್ಲಿ ತೋರಿಸಿಕೊಟ್ಟಿದ್ದಾರ. ಮನುಷ್ಯನೇ ಸುಡು ನೀನು ನಿನ್ನ ದುರ್ಗುಣ, ನಿನ್ನ ಕರ್ಮ, ನಿಮ್ಮ ಹಮ್ಮು ಬಿಮ್ಮು ಎನ್ನುತ್ತಾರೆ. ಹೀಗೆ ಸುಡುವುದರಿಂದ ದುರ್ಗುಣ ಸದ್ಗುಣವಾಗಿ, ಕರ್ಮ ನಿರ್ಮಲ ಧರ್ಮವಾಗಿ, ಹಮ್ಮು–ಬಿಮ್ಮು ಶುದ್ಧ ಶಿವವಾಗಿ ಪರಿಣಮಿಸುತ್ತದೆ. ನಿಷೇಧಾರ್ಥ ಶಬ್ದಗಳಿಂದಲೂ ಮೌಲ್ಯಗಳನ್ನು ಪ್ರತಿಪಾದಿಸಬಹುದು. ಶರಣರ ವಚನಗಳಲ್ಲಿಯೂ ಇಂಥ ನಿದರ್ಶನ ಕಾಣಬಹುದು. 'ಕಾಮ' ಬೇಡವೆನ್ನುವುದು ಸರಿ, ಆದರೆ ಚನ್ನಬಸವಣ್ಣ ಹೇಳುವಂತೆ 'ಕಾಮ' ಬೇಕು– ಯಾವುದರಲ್ಲಿ

'ಲಿಂಗಪೂಜೆ'ಯಲ್ಲಿ ಎಂಬ ಉತ್ತರ, ಇಲ್ಲಿ ವಿಶೇಷವೆನಿಸುತ್ತದೆ. ಇಂಥ ಒಂದು ಪರಿಣಾಮಕಾರಿ ಭಾವವನ್ನು ಕಾವ್ಯಾನಂದರು ಇಲ್ಲಿ ಸೃಷ್ಟಿಸಿದ್ದಾರೆ.

ದಾಸರ ಕೀರ್ತನಗಳಲ್ಲಿ ಒಂದು ನುಡಿ ಬರುತ್ತದೆ–

ಆರು ಹಿತವರು ನಿನಗೆ ಈ ಮೂವರೊಳಗೆ?
ನಾರಿಯೊ, ಧಾರುಣಿಯೊ, ಬಲುಧನದ ಸಿರಿಯೊ?

ಮೊದಲ ನುಡಿಯಲ್ಲೇ ಕೆಳಗಿನ ಮೂವರೂ ಅಹಿತರು ಎಂಬ ಭಾವ ಮೂಡುತ್ತದೆ. ದಾಸರು ಸಂಸಾರ ಜೀವನವನ್ನು ಅಹಿತವೆಂದು, ನಿಸ್ಸಾರವೆಂದು, ಹೆಣ್ಣು ಹೊನ್ನು ಮಣ್ಣುಗಳು ನಶ್ವರವೆಂದು ಸಾರುತ್ತಾರೆ. ಆದರೆ ಕಾವ್ಯಾನಂದರು ಲೋಕಜೀವನವನ್ನು ತೆರೆದ ಮನಸ್ಸಿನಿಂದ ಗಮನಿಸಿದವರು. ಯಾರು ಅಹಿತರು ಈ ಮೂವರೊಳಗೆ? ಎಂದು ಪ್ರಶ್ನಿಸುತ್ತಲೆ, ಆ ಮೂವರ ಲೋಕೋತ್ತರ ಕಾರ್ಯಗಳನ್ನು ಜ್ಞಾಪಿಸುತ್ತಾರೆ.

ನೀನಿತ್ತ ಕಸ ನುಂಗಿ ರಸವನೀಯುವ ಮಣ್ಣೋ?
ಬೆಂಕಿಯೊಳು ಸುಟ್ಟು ಅಲಂಕಾರವಾಗುವ ಹೊನ್ನೋ?
ಬಾಳ ಹಣತೆಯೊಳಣ್ಣೆಯಾಗಿ ಉರಿಯುವ ಹೆಣ್ಣೋ?

ದಾಸರು ಜಗತ್ತನ್ನು ಮಿಥ್ಯೆಯೆಂದು ಭಾವಿಸಿದಂತೆ, ಕಾವ್ಯಾನಂದರು ಜಗತ್ತನ್ನು ವಾಸ್ತವ ಪ್ರಪಂಚವೆಂದು ಗ್ರಹಿಸುತ್ತಾರೆ. ಬದುಕಿನ ಸಾಂಗತ್ಯದಲ್ಲಿ ಎಲ್ಲವೂ ಮನುಷ್ಯನಿಗೆ ಹಿತವಾಗಿರುವಂತಹದೆ ಎಂಬ ನಿಲುವು ಅವರದು. ಹೊನ್ನು ಮಣ್ಣು ಎಂಬ ನಿರ್ಜೀವ ಪದಗಳೊಂದಿಗೆ ಹೆಣ್ಣು ಎಂಬ ಸಜೀವವನ್ನು ಜೋಡಿಸಿ, ಕೀಳೆಂದು ಭಾವಿಸುವ ಧಾರ್ಮಿಕ ನಾಯಕರ, ದಾಸರ ನಿಲುವನ್ನು ಕಾವ್ಯಾನಂದರು ಒಪ್ಪುವುದಿಲ್ಲ. ಅವರ ಇನ್ನೂ ಅನೇಕ ಪದ್ಯಗಳಲ್ಲಿ ಹೆಣ್ಣಿನ ಬಗೆಗಿನ ಗೌರವ-ಕಾಳಜಿ-ಭಕ್ತಿಯನ್ನು ಗುರುತಿಸಬಹುದಾಗಿದೆ.

ಪ್ರಕೃತಿಯ ವಸ್ತುಗಳೊಂದಿಗೆ ಕಾವ್ಯಾನಂದರು ನಡೆಸುವ ಅನುಸಂಧಾನ ಇಲ್ಲಿ ರೂಪಕವಾಗಿ ಹೊರಹೊಮ್ಮಿರುವುದನ್ನು ನೋಡಬಹುದು. ಉದಾ:

ಬೇರು ಮರಕ್ಕೆ ಹೇಳುತ್ತದೆ– 'ನಿನ್ನ ಭಾರವನ್ನು ಹೊತ್ತು, ನಿನಗೆ ಸಾರಜನಕವನ್ನಿತ್ತು, ಯಾರಿಗೂ ಗೊತ್ತಾಗದಂತೆ ಇದ್ದೇವೆ ನಾವು-ಬೇರುಗಳು.'

ಮರ ಬೇರಿಗೆ– 'ಚಳಿ, ಮಳೆ, ಗಾಳಿ, ಬಿಸಿಲುಗಳನ್ನೆಲ್ಲ, ಕೊಡಲಿ ಕುಡುಗೋಲುಗಳನ್ನೆಲ್ಲ ನಾನೇ ಸಹಿಸಿಕೊಂಡು ನಿಮಗೆ ನೋವಾಗದಂತೆ ನೋಡಿಕೊಳ್ಳುತ್ತಲಿದ್ದೇನೆ. ನನ್ನನ್ನು ಕಡಿದೊಯ್ದರೂ ನೀವಾದರೂ ಉಳಿದು, ವಂಶ ಉಳಿಸಲೆಂಬ ಆಸೆಯಿಂದ ಎಲ್ಲ ಕ್ಲೇಶಗಳನ್ನು ಸಹಿಸಿಕೊಂಡು ಬದುಕಿದ್ದೇನೆ.'

ಕಸ್ತೂರಿ ಮೃಗ: 'ನಾನೆಂಥ ಬೆಪ್ಪು ಕಸ್ತೂರಿ ನನ್ನ ನಾಭಿಯಲ್ಲಿಯೇ ಇದ್ದರೂ ಇನ್ನೆಲ್ಲಿಯೋ ಇರಬೇಕೆಂದು ಅಡವಿ ಅಡವಿ ಅಲೆದೆ!'

ಮನುಷ್ಯ : 'ನಿನಗಿಂತ ಬೆಪ್ಪು ನಾನಿಲ್ಲಿದ್ದೇನೆ. ಈ ಮೃಣ್ಮಯದಲ್ಲಿಯೇ ಚಿನ್ಮಯನಿದ್ದರೂ ಅವನಿಗಾಗಿ ಕ್ಷೇತ್ರ ತೀರ್ಥಗಳನ್ನೆಲ್ಲಾ ಅಲೆದು ಬಂದೆ!'



ಕಸ್ತೂರಿ ಮೃಗ ತನ್ನ ಹೊಕ್ಕುಳದಲ್ಲಿಯೇ ಕಸ್ತೂರಿಯನ್ನಿಟ್ಟುಕೊಂಡು ಕಾಡನೆಲ್ಲ ಅಲೆಯುವಂತೆ, ತನ್ನೊಳಗಿನ ಅರಿವನ್ನು ಅರಿಯದ ಮನುಷ್ಯ ಕಸ್ತೂರಿ ಮೃಗದಂತೆ ತೀರ್ಥ ಕ್ಷೇತ್ರಗಳನ್ನು ಅಲೆದ ಸಾದೃಶ್ಯದ ಮೂಲಕ ಇಬ್ಬರ ಹುಡುಕಾಟದ ವ್ಯರ್ಥತೆಯನ್ನು ಧ್ವನಿಸುತ್ತಾರೆ. ಇದು ಅಕ್ಕಮಹಾದೇವಿಯ 'ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ, ತಮ್ಮೊಳಗಿರ್ದ ಮಹಾಘನವನರಿಯರು' ಎಂಬ ವಚನವನ್ನು ನೆನಪಿಸುತ್ತದೆ.

ಅರಮನೆ ಗುಡಿಸಲಿಗೆ – 'ಪಾಪ, ನಿನಗೆ ಮಣ್ಣಿ ಹಣತೆಯೂ ಇಲ್ಲವಾಯಿತೇ? ನನ್ನ ಲೆಕ್ಕವಿಲ್ಲದಷ್ಟು ದೀಪಗಳಲ್ಲಿ ಒಂದನ್ನು ಕೊಡಲೇ?'

ಗುಡಿಸಲು ಅರಮನೆಗೆ– ಹೊರಗಿನ ಬೆಳಕಿನಲಿ ಒಳಗಿನ ಹುಳುಕನ್ನು ಮುಚ್ಚಿಕೊಂಡಿರುವ ಅರಮನೆಯೆ, ಹೊರಗೆ ಸಾವಿರ ದೀಪಗಳು ಝಗಝಗಿಸುತ್ತಲಿದ್ದರೂ ನಿನ್ನೆದೆಯೊಳು ಕತ್ತಲೆಯಿದೆ, ಹೊರಗೆ ಕತ್ತಲೆಯಿದ್ದರೂ ನನ್ನೆದೆಯೊಳು ಬೆಳಕಿದೆ–ನನಗದೇ ಸಾಕು!'

ಇಲ್ಲಿ ಕಾವ್ಯಾನಂದರ ಕಲ್ಪನೆ ಎಷ್ಟು ಉದಾತ್ತವೂ ಆದರ್ಶವೂ ಆಗಿರುವುದನ್ನು ಕಾಣಬಹುದು.

ಈ ಬಂಡಿಗೆ ಯಾವ ಎತ್ತುಗಳನ್ನು ಹೂಡಲಿ?
ಈ ರಥಕ್ಕೆ ಯಾವ ಕುದುರೆಗಳನ್ನು ಕಟ್ಟಲಿ?
ಈ ಕ್ಷಿಪಣಿಗೆ ಯಾವ ನಿಯಂತ್ರಣಕನನ್ನು ನಿಯಮಿಸಲಿ?
ಹೂಡುವವನೆ,
ಹೂಡು ನಿನ್ನನೆ ಮೊದಲು ಹದುಳದ ಬಂಡಿಗೆ!
ಕಟ್ಟುವವನೆ,
ಕಟ್ಟು ನಿನ್ನನೆ ಮೊದಲು ಲೇಸಿನ ರಥಕೆ!
ನಿಯಮಿಸುವವನೆ,
ನಿಯಮಿಸು ಮೊದಲು ನಿನಗೊಬ್ಬ ನಿಯಂತ್ರಕನನ್ನು!

ಮನುಷ್ಯ ತನ್ನನ್ನು ತಾನು ಅರಿತುಕೊಳ್ಳದೆ ಲೋಕದ ಡೊಂಕನ್ನು ಸರಿಪಡಿಸಲು ಹೆಣಗಾಡುತ್ತಾನೆ. ಲೋಕದ ಡೊಂಕು ತಿದ್ದಲು ಹೊರಟವರೇ ಬಹಳ ಜನ, ನಿಮ್ಮ ಮನವ, ನಿಮ್ಮ ತನುವ ಮೊದಲು ಸಂತೈಸಿಕೊಳ್ಳಿ ಎನ್ನುತ್ತಾರೆ ಬಸವಣ್ಣನವರು. ಈ ವಚನದ ಭಾವವನ್ನೆ ಕಾವ್ಯಾನಂದರ ಮೇಲಿನ ಪದ್ಯವೂ ನಿನದಿಸುತ್ತದೆ.

ಕೇದಗೆಯ ಚಂದನದ ಗಂಧವನು ಬಯಸುವೊಡೆ
ಸರ್ಪಗಳ ವಿಷದಂತಕಂಜಬೇಡ
ಸಾಗರದ ಸಿಂಪುಗಳ ಮುತ್ತುಗಳ ಬಯಸುವೊಡೆ
ಘೋರ ಜಲಪ್ರಾಣಿಗಳಿಗಂಜಬೇಡ
ಜೇಂಗೊಡದ ಸವಿಜೇನಿನಾಸ್ವಾದ ಬಯಸುವೊಡೆ
ಜೇನುಹುಳುಗಳ ಕಡಿತಕಂಜಬೇಡ
ಜೀವನದ ಮಾಧುರ್ಯ ಸೌಂದರ್ಯ ಬಯಸುವೊಡೆ
ಜೀವನದ ಕಹಿ, ವಿಕೃತಿಗಂಜಬೇಡ

ಮೇಲಿನ ನುಡಿಗಳು ಅಕ್ಕಮಹಾದೇವಿಯ 'ಬೆಟ್ಟದ ಮೇಲೊಂದು ಮನೆ ಮಾಡಿ'

ವಚನವನ್ನು ನೆನಪಿಸುತ್ತದೆ. ಅಕ್ಕನ ಧಾಟಿಯಲ್ಲಿಯೇ ಒಳಿತನ್ನು ಪಡೆಯಬೇಕಾದರೆ, ವಿಕೃತಿಯನ್ನು ಎದುರಿಸಲೇಬೇಕು ಎಂಬ ಭಾವ ಇಲ್ಲಿದೆ.

ಮಲ್ಲಿಗೆ ಕಣಗಿಲೆಗೆ– ನನಗೆ ನಿನ್ನ ಬಣ್ಣವಿಲ್ಲ

ಕಣಗಿಲೆ ಮಲ್ಲಿಗೆಗೆ– ನನಗೆ ನಿನ್ನ ಪರಿಮಳವಿಲ್ಲ

ಕೇದಗೆ ಗುಲಾಬಿ– ನನಗೆ ಬಣ್ಣ ಪರಿಮಳಗಳೆರಡೂ ಇದ್ದೂ ಮುಳ್ಳ ಪಂಜರದಲ್ಲಿ ನರಳುತ್ತಲಿರುವೆವಲ್ಲ.

ಇಲ್ಲಿ ಕಾವ್ಯಾನಂದರು ಸೂಚ್ಯವಾಗಿ ನಮ್ಮಲ್ಲಿ ಇಲ್ಲದುದನ್ನು ಬಿಟ್ಟು ಇರದುದರ ಕುರಿತು ಹೆಚ್ಚು ಚಿಂತಿಸುತ್ತೇವೆ ಎಂಬುದನ್ನು ಹೇಳುತ್ತಾರೆ. ಆದರೆ ಇಲ್ಲಿ ಅಹಂಕಾರವಿಲ್ಲ– ಮಮಕಾರವಿದೆ. ನಿನ್ನಲ್ಲಿರುವುದು ನನ್ನಲ್ಲಿ ಇಲ್ಲ ಎಂಬ ಕೊರಗಿದೆ.  ಅದೇ ಅಹಂಕಾರ ತುಂಬಿದ ನುಡಿಗಳ ಇನ್ನೊಂದು ರೂಪಕ ಇಲ್ಲಿದೆ–

ಕೋಗಿಲೆ– 'ಗಿಳಿಯೆ, ನಿನಗೆ 'ಆ' ಎನ್ನಲೂ ಬರುವುದಿಲ್ಲ–ನಿನಗೆ ಪಂಡಿತವಕ್ಕಿ ಎಂದು ಯಾರು ಹೆಸರಿಟ್ಟರು?'

ಗಿಳಿ– 'ಕೋಗಿಲೆ, ನಿನ್ನಂತೆ ಹಾಡಬಲ್ಲ ಹಕ್ಕಿಗಳು ಹಲವಿವೆ, ಆದರೆ ನನ್ನಂತೆ ಮಾತಾಡಬಲ್ಲ ಹಕ್ಕಿ ನಾನೊಂದೇ! ನೆನಪಿರಲಿ!'

ಒಂದು ಸಂದೇಶವನ್ನು ಕೆಲವೇ ನುಡಿಗಳಲ್ಲಿ ಹೇಳಿ, ಅದರ ಅರ್ಥವ್ಯಾಪ್ತಿಯನ್ನು ವಿಸ್ತಾರಗೊಳಿಸುವ ಕಲೆ ಕಾವ್ಯಾನಂದರಿಗೆ ಸಿದ್ಧಿಸಿತು. ಉದಾ–

ಸತ್ಯ ಕೇಳಿತು– ಮಿಥ್ಯೆ, ನೀನು ನನಗಿಂತಲೂ ಹೇಗೆ ಜನಪ್ರಿಯಳಾದೆ.

ಮಿಥ್ಯೆ ಉತ್ತರವಿತ್ತುತು– 'ಸತ್ಯದ ಸೋಗು ಹಾಕಿ'

ಹೀಗೆ ಎರಡೆ ನುಡಿಗಳಲ್ಲಿ ಅರ್ಥವತ್ತಾದ ಮೌಲ್ಯವನ್ನು ಅರಿಹುವ ಕಾವ್ಯಾನಂದರ ದೃಷ್ಟಿ ವಿಶೇಷವೆನ್ನಬೇಕು.

'ಪ್ರಜ್ಞಾ ಪ್ರವಾಹದಲ್ಲಿ ಮೂಡಿ ಮರೆಯಾಗುವ ತೆರೆಗಳೆಲ್ಲವನ್ನೂ ಸೆರೆ ಹಿಡಿದಿಡುವುದು ಸಾಧುವೂ ಅಲ್ಲ, ಸಾಧ್ಯವೂ ಅಲ್ಲ 'ಕಲ್ಲೋಲಮಾಲೆ'ಯಲ್ಲಿ ಕೆಲವು ವಿಶೇಷ ರೀತಿಯ ತೆರೆಗಳು ಸರಗೊಂಡಿವೆ' ಎಂದು ಕಾವ್ಯಾನಂದರು ಈ ಕೃತಿಯ ಕುರಿತು ಹೇಳುತ್ತಾರೆ.

'ಒಂದೊಂದು ಮಾತನ್ನೂ ಮೆಲಕು ಹಾಕಿದಂತೆ ಅವರ ಉದಾತ್ತ ವಿಚಾರಗಳು ಹೊರಹೊಮ್ಮುತ್ತವೆ. ಹಲವು ಸಲ ಈ ಸಾಲುಗಳನ್ನು ನೆನೆಯುವುದೆಂದರೆ ಜೀವನದ ಕಷ್ಟಗಳನ್ನೇ ಮರೆತಂತೆ. ಈ ಸುಂದರವಾದ ಕಾವ್ಯ ಬಿಂದುಗಳು, ಸದ್ಭಾವ ಸುಗಂಧವನ್ನು ಪ್ರೇಮ ಮಧುವನ್ನು ತುಂಬಿ ತಂದಿವೆ' ಎಂಬ ಸದಾಶಿವ ಒಡೆಯರ ಅವರ ನುಡಿಗಳು ಈ ಕೃತಿಯ ವೈಶಿಷ್ಟ್ಯವನ್ನು ಸಾದರಪಡಿಸುತ್ತವೆ.



## ೮

'ಮೊದಲು ಮಾನವನಾಗು' ಕಾವ್ಯಾನಂದರ ಮತ್ತೊಂದು ಮಹತ್ವದ ಸಂಕಲನ. ೧೯೬೯ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ೪೩ ಕವಿತೆಗಳಿವೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ವಿ.ಕೃ.ಗೋಕಾಕರು ಈ ಸಂಕಲನಕ್ಕೆ ಅಪರೂಪದ ಮುನ್ನುಡಿ ತೋರಣ ಕಟ್ಟಿದ್ದಾರೆ. ಈ ನಾಡು ಭೂಗೋಲಿಕವಾಗಿ ಏಕೀಕರಣವಾಗಿತ್ತು. ಆದರೆ ಮನಸ್ಸು ಮನಸ್ಸುಗಳಲ್ಲಿ ಏಕೀಕರಣವಾಗಬೇಕೆಂದು 'ಅವಿಭಕ್ತಂ ವಿಭಕ್ತೇಷು' ಕವನದಲ್ಲಿ ಕರೆ ನೀಡಿದ್ದಾರೆ. ಈ ಕವನ ರಚಿಸಲು ಅವರಿಗೆ–

ಸರ್ವಭೂತೇಷು ಯೇ ನೈಕಂ ಭಾವಮವ್ಯಯಮೀಕ್ಷತೆ
ಅವಿಭಕ್ತಂ ವಿಭಕ್ತೇಷು ತದ್‌ಜ್ಞಾನಂ ಸಾತ್ವಿಕಂ ಸ್ಮೃತಂ

ಎಂಬ ಆರ್ಷವಾಣಿ ಪ್ರೇರಣೆ ನೀಡಿದೆ. ಕಾಶ್ಮೀರ ಕಣಿವೆ, ಕೇರಳದ ಕುಟೀರ ಯಾವುದೇ ಸ್ಥಳದಲ್ಲಿರಲಿ, ಎಲ್ಲೆ ಇರಲಿ, ಏನೇ ಮಾಡಿದರೂ 'ಅವಿಭಕ್ತಂ ವಿಭಕ್ತೇಷು' ಮಂತ್ರ ನಾದ ಕೇಳುತ್ತಿರಬೇಕೆಂದು ಕವಿ ಬಯಸುತ್ತಾರೆ. ಭೇದವಣಿಸದೆ, ವಾದ ಮಾಡದೆ ಆಸೇತು ಹಿಮಾಚಲ ಒಂದೇ ಎಂಬ ಭಾವ ಮಾಡಬೇಕಾದರೆ ಅವಿಭಕ್ತಂ ಹಾಡು ಹಾಡಬೇಕು. ಗಡಿ ನುಡಿ ಯಾವುದೇ ಇರಲಿ, ಯಾವುದೇ ದೇವರು–ಧರ್ಮವಿರಲಿ, ಏನೇ ಉಡಲಿ, ಏನೇ ಉಣಲಿ ಈ ನುಡಿ ಸರ್ವಾಂತರ್ಯಾಮಿಯಾಗ ಬೇಕೆಂದು ಕವಿ ಬಯಸುತ್ತಾರೆ. ಅನೇಕತೆಯಲ್ಲಿ ಏಕತೆ, ವಿವಿಧತೆಯಲ್ಲಿ ಭಾವೈಕ್ಯವನ್ನು ಕಾಣುವ ಹಂಬಲ ಕಾವ್ಯಾನಂದರದ್ದು.

ಕಾವ್ಯಾನಂದರು ೧೯೬೨ರಲ್ಲಿ ಚೀನಾ ಭಾರತದ ಮೇಲೆ ದಾಳಿ ಮಾಡಿದಾಗ 'ಯುದ್ಧಶ್ವ' ಎಂಬ ಕವನ ರಚನೆ ಮಾಡಿದ್ದಾರೆ. ವೈರಿಪಡೆ ಜನ್ಮಭೂಮಿ ಮೇಲೆ ಆಕ್ರಮಣ ಮಾಡಿದಾಗ ಕವಿಯ ಹೃದಯ ಕ್ರೋಧಾಗ್ನಿಯಿಂದ ಜ್ವಾಲಾಮುಖಿಯಾಗಿದೆ. ದೇಶಕ್ಕಾಗಿ ಎಲ್ಲವನ್ನು ಸರ್ವಾರ್ಪಣ ಮನೋಭಾವದಿಂ ಸಮರ್ಪಿಸಬೇಕೆಂಬ ಕಳಕಳಿ ಕಾವ್ಯಾನಂದರದು. ಕನ್ನಡದ ಹೆಣ್ಣುಮಕ್ಕಳಲ್ಲಿ ಕಿತ್ತೂರು ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಒನಕೆ ಒಬ್ಬವ್ವ ಮೊದಲಾದವರ ಕೆಚ್ಚು ಮೂಡಲಿ, ಪ್ರತಿಮನೆಯಲ್ಲೂ ದುರ್ಗೆ ಅವತಾರ ತಾಳಲಿ, ಈ ಯುದ್ಧಶ್ವಕ್ಕೆ ಸರ್ವಸ್ವವನ್ನು ಅರ್ಪಿಸಿದರೆ ವಿಶ್ವವೇ ಬೆರಗಾಗುತ್ತದೆ ಎಂಬ ನಂಬಿಕೆ ಅವರದು.

೧೯೬೫ರಲ್ಲಿ ಪಾಕಿಸ್ತಾನದ ದಾಳಿ ನಡೆದಾಗ 'ಕೈಗೆ ಬರಲಿ ಕೋವಿ' ಎಂಬ ಕವನ ಕಾವ್ಯಾನಂದರಿಂದ ಮೂಡಿಬಂದಿದೆ.

ಕರೆಯುತಿಹಳು ರಣಭೈರವಿ
ಕೈಗೆ ಬರಲಿ ಕೋವಿ!
ಅದೊ ಹಳದಿಯ ರಕ್ತಬೀಜ
ದನುಜನಾದ ನಿನ್ನ ಅನುಜ
ಸಿಡಿದೇಳಲಿ ಕ್ಷಾತ್ರತೇಜ

ಸುಟಟುರುಳಲಿ ಅರಿಸಮಾಜ!
ಬರಲಿ ಬಲವು ತೀವಿ
ಕೈಗೆ ಬರಲಿ ಕೋವಿ

ಎಂದು ಪ್ರಾರಂಭವಾಗುವ ಕವನ 'ರಾಷ್ಟ್ರಜೀವಿ' ಆಗು ಎಂದು ಸಾರುತ್ತದೆ. ರಾಷ್ಟ್ರರಕ್ಷಣೆಗಾಗಿ ನಾವೆಲ್ಲ ತನು-ಮನ-ಧನದಿಂದ ಸಮರ್ಪಿತಗೊಳ್ಳಬೇಕೆಂಬ ಕಾಳಜಿ ಕಾವ್ಯಾನಂದರದು.

ಕನ್ನಡದ ಬಗ್ಗೆ ಕಾವ್ಯಾನಂದರಿಗೆ ಎಷ್ಟು ಹೇಳಿದರೂ ತೃಪ್ತಿಯಿಲ್ಲ. ನಾಡು-ನುಡಿ ಕುರಿತು ಅವರು ಬರೆದ ಕವಿತೆಗಳ ಒಂದು ಪ್ರತ್ಯೇಕ ಸಂಕಲನವಾಗುವಷ್ಟು ಕವಿತೆಗಳು ಅವರಿಂದ ರಚನೆಯಾಗಿವೆ. ಅಂಥ ಅಪರೂಪದ ಕವಿತೆಗಳಲ್ಲಿ 'ಕನ್ನಡಕುಲ' ಒಂದು.

ನಂಬು ಕನ್ನಡವನ್ನು ನಂಬು ಕನ್ನಡ ಜನವ
ನಂಬು ಕನ್ನಡ ನಾಡ ಭವಿತವ್ಯವನ್ನು
ನಂಬು ಕನ್ನಡ ಕುಲವ ನಂಬು ಕನ್ನಡ ಕಲೆಯ
ನಂಬು ಕನ್ನಡದಮಲ ಕಾವ್ಯವನ್ನು

ಕನ್ನಡ ಕುಲದ ಬಗ್ಗೆ ಕಾವ್ಯಾನಂದರಿಗೆ ಅಪಾರ ಗೌರವ-ಅಭಿಮಾನ. ನೂರು ಕುಲಗಳೆಲ್ಲ ಸೇರಿ ಕನ್ನಡ ಕುಲವಾಗಿ ಭಾರತಕ್ಕೆ ಬಲವಾಗಿ ಬೆಳಗುತ್ತಿದೆ ಎಂಬ ಭಾವನೆ ಅವರದು.

ಏನಾದರೂ ಗಳಿಸು ಎಂತಾದರೂ ಬಳಸು
ಕನ್ನಡದ ಕುಲವನ್ನು ಮಾತ್ರ ಉಳಿಸು
ಕನ್ನಡದ ಮೂಲಕವೆ ಕನ್ನಡಿಗನುದ್ಧಾರ
ಕನ್ನಡದಿ ನಂಬಿಕೆಯನುಳಿಸಿ ಬೆಳೆಸು
ಕನ್ನಡ ಬಲವಕ್ಕೆ ಕನ್ನಡಕೆ ಗೆಲವಕ್ಕೆ
ಕನ್ನಡದ ಕುಲ ನಿತ್ಯ ಸತ್ಯವಕ್ಕೆ
ಕನ್ನಡದ ಪ್ರೇಮವೇ ಕನ್ನಡಿಗನುಸಿರಕ್ಕೆ
ಬರದಿರಲಿ ಎಂದಿಗೂ ಕನ್ನಡಕ್ಕೆ ಧಕ್ಕೆ!

ಕಾವ್ಯಾನಂದರು ತುಂಗಭದ್ರಾ ಜಲಾಶಯ ನಿರ್ಮಾಣವಾದಾಗ ಅದನ್ನು ಕಂಡು ಇತಿಹಾಸದ ನೆನಪು ಮರುಕಳಿಸಿದೆ. ವಿಜಯನಗರ ಸಾಮ್ರಾಜ್ಯದ ಉಗಮವಾದುದು ಈ ತುಂಗ-ಭದ್ರೆಯ ದಡದಲ್ಲಿ. ಹಂಪಿ ಕನ್ನಡದ ಕಾಶಿ. ಅಲ್ಲಿಯ ವಿರೂಪಾಕ್ಷ ಕನ್ನಡದ ಆರಾಧ್ಯ ದೈವ. ಆದರೇನು ಸಾಮ್ರಾಜ್ಯ ಸಮಾಧಿಯಾಯಿತು. ಹಂಪೆ ಹಾಳು ಕೊಂಪೆಯಾಯಿತು.

ಈ ಜಲಾಶಯದ ಹುಟ್ಟು
ಮರುಹುಟ್ಟು ಹಂಪೆಗೆ
ಮತ್ತೆ ಮಹಿಮೆಯು ಬಂತು
ಈ ಹಾಳು ಕೊಂಪೆಗೆ

ಎಂದು ಸಂಭ್ರಮಿಸುತ್ತಾರೆ.



ಬರದ ಬಾನಲೆ ಸೊಗದ ಹಕ್ಕಿ ಹಾರಾಡಲಿ
ಕೊರತೆಯ ಒರತೆಯಲ್ಲಿಯೆ ಸುಖದ ಸೆಲೆ ಮೂಡಲಿ
ತುಂಗಭದ್ರೆ ಸುಖದ ಮುದ್ರೆಯೊತ್ತಲಿ
ಈ ಅಭಾವ ಪೀಡಿತ ಪ್ರದೇಶಕ್ಕೆ
ಆಯ್ದುಕೊಳ್ಳಲಿ ಕನ್ನಡ ನಾಡನ್ನೆ
ಸಮೃದ್ಧಿಶ್ರೀ ತನ್ನ ನಿವಾಸಕ್ಕೆ

ತುಂಗಭದ್ರಾ ಜಲಾಶಯದಿಂದ ಈ ಭಾಗದ ರೈತರ ಬದುಕು ಬಂಗಾರವಾಗಲಿ, ಸಮೃದ್ಧಿಯಾಗಲಿ ಎಂದು ಹಾರೈಸುತ್ತಾರೆ.

ಕಾವ್ಯಾನಂದರು ಬೆಂಗಳೂರಿನಲ್ಲಿ ನೆಲೆನಿಂತ ಮೇಲೆ, ಬೆಂಗಳೂರಿನಲ್ಲಿ ಪರಭಾಷಾ ಜನರ ದಬ್ಬಾಳಿಕೆ, ಶೋಷಣೆ, ಕನ್ನಡ ಭಾಷೆ-ಸಂಸ್ಕೃತಿಗಳ ಕುರಿತ ನಿರ್ಲಕ್ಷ್ಯ ಕಂಡು 'ನಮ್ಮ ಮನೆಯಲ್ಲಿಯೇ ಹೆರವರಾದೆವು ನಾವು!' ಎಂಬ ಕವನ ಬರೆದು, ತಮ್ಮ ಅಂತರಂಗದ ಪರಿತಾಪವನ್ನು ತೋಡಿಕೊಂಡಿದ್ದಾರೆ.

ಬಂದ ಅತಿಥಿಯೇ ಇಂದು ಒಡೆಯನು
ಅವನಿಗೇ ಹಿಡಿ ನೀನು ಕೊಡೆಯನು
ಕಲಿತು ಬಿಡು ನೀ ಅವನ ನುಡಿಯನು
ಕಲಿತು ಬಿಡು ನೀ ಅವನ ನಡೆಯನು

ಎನ್ನುವ ಪರಿಸ್ಥಿತಿ ನಮಗೆ ಬಂದಿದೆ. ನಮ್ಮ ಮನೆಯಲ್ಲಿ ನಾವು ಹೆರವರಾಗಿ ಬದುಕುವ ದುಸ್ಥಿತಿ ಬಂದಿರುವುದು ಖೇದಕರ ಎನ್ನುತ್ತಾರೆ.

'ಕಾಲ' ಕುರಿತಾದ ಎರಡು ಕವನಗಳು ನಮ್ಮ ಗಮನ ಸೆಳೆಯುತ್ತವೆ. ದಾರ್ಶನಿಕ ಹಿನ್ನೆಲೆಯಿಂದ ಮೂಡಿ ಬಂದ ಈ ಕವನಗಳಲ್ಲಿ ಕಾವ್ಯಾನಂದರ ಅಧ್ಯಾತ್ಮದ ವಿಚಾರ ಲಹರಿ ಹರಿದು ಬಂದಿದೆ.

ಋಣ ಸ್ಮರಣ ಕವನ ವಿಶೇಷವಾಗಿದೆ. ಋಣದ ಜಾಲವನಂತ; ಕರ್ಮ ಚಕ್ರವನಂತ ಎನ್ನುವಂತೆ ಕವಿ ಋಣವಿಮುಕ್ತರಾಗುವದರತ್ತ ಸಾಗಬೇಕೆಂದು ಕಾವ್ಯಾನಂದರು ಬಯಸುತ್ತಾರೆ. ಮನುಷ್ಯ ಮಾತ್ರವಲ್ಲ, ಪ್ರಾಣಿ ಗಿಡಮರಗಳನ್ನು ವಂಚಿಸಿ, ಶೋಷಿಸಿ ಬದುಕು ಪಡೆದಿದ್ದೇವೆ. ಇಷ್ಟಾಗಿಯೂ ಮಾನವ ತಾನು ಉಪಕಾರಿ ಎಂದು ಬಿಂಬಿಸಿಕೊಳ್ಳುತ್ತಾನೆ.

ಋಣವ ನೀ ಸ್ಮರಿಸಿಕೋ ಋಣವ ನೀ ಸ್ಮರಿಸಿಕೋ
ಋಣಮುಕ್ತಿಗಾಗಿಯೇ ಶ್ರಮಿಸು ಸತತ
ರಿಣಗೂಳು ತಿನ್ನುತ್ತ ಕಳೆದೆಯಾದರೆ ಹೊತ್ತ
ಕೊಳೆಯಬೇಕಾದೀತು ಋಣದಿ ನಿರುತ!

ಎಂದು ಎಚ್ಚರಿಕೆ ಸಂದೇಶ ನೀಡುತ್ತಾನೆ.

ಕಾವ್ಯಾನಂದರು ಕೊಡಗಿನಲ್ಲಿ ಜಿಲ್ಲಾಧಿಕಾರಿಗಳಾಗಿದ್ದ ಸಂದರ್ಭದಲ್ಲಿ, ಅದರ ಪ್ರಕೃತಿ ಸೊಬಗನ್ನು ನೋಡಿ 'ಹಸಿರು ಹರಿದು ಬಂತು' ಎಂಬ ಕವನ ರಚಿಸಿದ್ದಾರೆ.

ಹಸಿರು ಹರಿದು ಬಂತು ಕೊಡಗಿನಲಿ ಇಂತು!
ಬೆಟ್ಟದಿಂದ ಕೆಳಗೆ ಉರುಳಿ ಘಟ್ಟದಲ್ಲಿ ತೆವಳಿ
ಬೆಟ್ಟನೇರಿ ಕಣಿವೆಗಿಳಿದು ಬಂಡೆಗಳಲಿ ನುಸುಳಿ
ಹಸಿರು ಹರಿದು ಬಂತು ಕೊಡಗಿನಲ್ಲಿ ಇಂತು

ಕೊಡಗಿನ ಕಾಫಿ ತೋಟ, ಕಿತ್ತಳೆ ಮರಗಳು, ಏಲಕ್ಕಿಯ ಘಮಘಮ, ಕಾವೇರಿ, ತಲಕಾವೇರಿಯ ಉಗಮಸ್ಥಾನ, ಅಲ್ಲಿಯ ಸುಂದರ ಪ್ರಕೃತಿ ವಿಸ್ಮಯ ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ವರ್ಣಿಸುವ ರೀತಿ ಅನನ್ಯವಾಗಿದೆ.

'ಬಾಗಿಲನು ತೆರೆಯೊ' ಎಂಬ ಕವನದಲ್ಲಿ ಭಾವಪೂರ್ಣವಾಗಿ ಕನಕದಾಸರ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದ್ದಾರೆ. ಕನಕಣ್ಣ ರಾಗದ್ವೇಷವ ನೀಗಿ, ಯೋಗ ಮತಿಯನು ನೀಡು, ಮನಸ್ಸನ್ನು ಜಾಗರಗೊಳಿಸು, ತೆರೆಸು ತಿಳಿವಿನ ಕಣ್ಣು ಎಂದು ಪ್ರಾರ್ಥಿಸುತ್ತಾರೆ. ವೇದ ವಾದಗಳಲ್ಲಿ, ಓದು ವಿದ್ಯೆಗಳಲ್ಲಿ ಸಾಧನೆಯ ಹಾದಿಯನೆ ತೋರು ಅನುಭಾವಿ ಕನಕಣ್ಣ ಎನ್ನುತ್ತಾರೆ.

'ಬಸವನ ಬೆಳಕೆ' ಒಂದು ಸುದೀರ್ಘ ಕವನ. ಬಸವನ ಬೆಳಕು ಮಾಡಿದ ಪರಿಣಾಮವನ್ನು, ನಾಡಿಗೆ ಸಮುದಾಯಕ್ಕೆ ಆ ಬೆಳಕು ನೀಡಿದ ಪ್ರಭಾವವನ್ನು ಕುರಿತು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಬಸವನ ಬೆಳಕೆ ಎಲ್ಲಾಡಿ ಬಂದೆ?
ಭಾರತವೆಲ್ಲವ ಸುತ್ತಾಡಿ ಬಂದೆ!
ನಿಟ್ಟುಸಿರೆದೆಯನು ಬೆಳಗಿಸಿ ಬಂದೆ
ನಿರಾಶೆಯೆದೆಯನು ತೊಳಗಿಸಿ ಬಂದೆ
ಹೆಣ್ಣಿನ ಕಂಬನಿ ಬತ್ತಿಸಿ ಬಂದೆ
ಆಶಾ ಜ್ಯೋತಿಯ ಹೊತ್ತಿಸಿ ಬಂದೆ
ದೀನರ ಬಾಳನು ಮುಸುಕಿದ ಕಾಳವ
ಕಬಳಿಸಿ ಬಂದೆ! ಧವಳಿಸಿ ಬಂದೆ

ಬಸವಣ್ಣನವರ ಆತ್ಮಜ್ಯೋತಿಯ ಬೆಳಕು ವಚನ ಕುಸುಮಗಳನ್ನು ಮಲರಿಸಿ, ಹಾಡುಗಬ್ಬಗಳನ್ನು ಅಲರಿಸಿ ಬಂದಿತು. ಬಸವನ ಬೆಳಕು ಇಡೀ ವಿಶ್ವವೆಲ್ಲವೂ ನನ್ನದೆ ಎಂದಿತು. ಇಂಥ ಉದಾತ್ತ ಭಾವ ಕವಿಯ ಕಲ್ಪನೆಯ ಕೂಸಾಗಿ ಇಲ್ಲಿ ಸೊಗಸಾಗಿ ಮೂಡಿ ಬಂದಿದೆ.

ಈ ಸಂಕಲನದ ಕೊನೆಯ ಪದ್ಯ 'ಮೊದಲು ಮಾನವನಾಗು'. ಕಾವ್ಯಾನಂದರ ಅನುಭಾವದ ಅಂತರಂಗದಲ್ಲಿ ಅರಳಿದ ಮಂದಾರಪುಷ್ಪವದು.

ಓದಿ ಬ್ರಾಹ್ಮಣನಾಗು ಕಾದಿ ಕ್ಷತ್ರಿಯನಾಗು
ಶೂದ್ರ ವೈಶ್ಯನೆ ಆಗು ದುಡಿದು ಗಳಿಸಿ
ಏನಾದರೂ ಆಗು ನಿನ್ನೊಲವಿನಂತಾಗು
ಏನಾದರೂ ಸರಿಯೆ– ಮೊದಲು ಮಾನವನಾಗು!
ಹಿಂದು ಮುಸ್ಲಿಮನಾಗು ಬೌದ್ಧಕ್ರೈಸ್ತನೆ ಆಗು



ಚಾರ್ವಾಕನೇ ಆಗು ಭೋಗ ಬಯಸಿ
ಏನಾದರೂ ಆಗು ಹಾರೈಸಿದಂತಾಗು
ಏನಾದರೂ ಸರಿಯೆ, ಮೊದಲು ಮಾನವನಾಗು!
ರಾಜಕಾರಣಿಯಾಗು ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರೂ ಆಗು ನೀ ಬಯಸಿದಂತಾಗು
ಏನಾದರೂ ಸರಿಯೇ ಮೊದಲು ಮಾನವನಾಗು!

'ಮೊದಲು ಮಾನವನಾಗು' ಎಂಬ ಕವನ ಈ ಸಂಗ್ರಹದಲ್ಲಿ ಸೇರಿದ ಕೊನೆಯ ಕವನ. ಕವಿತೆಯ ಮೂರು ಪದ್ಯಗಳಲ್ಲಿ 'ಮೊದಲು ಮಾನವನಾಗು' ಎಂಬ ಚರಣ ಸಲ್ಲಲಿತ ಪಲ್ಲವಿಯಾಗಿ ನುಡಿದಿದೆ; ಕೇಂದ್ರ ಭಾವವಾಗಿ ಮಿಡಿದಿದೆ. ಈ ಕವಿತೆಯು ಭಾರತೀಯ ಸಂಸ್ಕೃತಿಯ ನಿಲವನ್ನೂ ಸಾರವತ್ತಾಗಿ ತಿಳಿಸುತ್ತದೆ. ಮಾನವನಿಗೆ ಮಾನವೀಯತೆ ಮುಖ್ಯ. ಆತನ ಅಂತಃಕರಣ ಅರಳಿದಷ್ಟೂ ಮಾನವತೆ ವಿಕಾಸವಾಗುವುದು. ನಮ್ಮ ಜೀವನ ವೃತ್ತಿ ಯಾವುದೇ ಇರಲಿ, ನಮ್ಮ ಸಂಪ್ರದಾಯ, ಧರ್ಮ–ಪಂಥ ಪಂಗಡಗಳು ಯಾವುದೇ ಆಗಿರಲಿ, ನಮ್ಮ ನಮ್ಮ ವೈಯಕ್ತಿಕ ಆಸಕ್ತಿ, ಗತಿ ಮತಿಗಳು ಯಾವುವೇ ಆಗಿರಲಿ; ಮಾನವೀಯತೆ ಮಾನವನ ವಿಶಾಲ ಜೀವನದ ಧರ್ಮವಾಗಬೇಕು; ಮೊದಲು ಮಾನವನಾಗುವುದೇ ಮಾನವ ಜೀವನದ ಮರ್ಮ ಈ ಕವಿತೆ.

ಈ ಪದ್ಯದಲ್ಲಿ ಯಾವ ಧರ್ಮವಾದರೇನು ಮೊದಲು ಮಾನವನಾಗು ಎಂಬುದನ್ನು ಕೆಲವರು 'ಧರ್ಮವಿರುವುದೇ ನಮ್ಮನ್ನು ಮಾನವರನ್ನಾಗಿ ಮಾಡುವುದಕ್ಕೆ ಧರ್ಮವಿಲ್ಲದೆ ಮಾನವರಾಗುವುದು ಹೇಗೆ?' ಎಂದು ಆಕ್ಷೇಪ ವ್ಯಕ್ತಪಡಿಸಿದ್ದರು. ಆ ಆಕ್ಷೇಪಣೆಗಳಿಗೆ ಕಾವ್ಯಾನಂದರು ಸೂಕ್ತವೂ ಸಮರ್ಥವೂ ಆದ ಉತ್ತರವನ್ನು ನೀಡಿದರು–

'ಇದಕ್ಕೆ ನಾನು ಕೊಡುವ ಉತ್ತರ ಅಲ್ಲಮಪ್ರಭು ಮಾಯೆಗೆ ಕೊಟ್ಟ ಉತ್ತರವೇ ಆಗಿದೆ; 'ಕಬ್ಬುನವು ಪರುಷ ಸ್ಪರ್ಶದಿಂದ ಚಿನ್ನವಾದೀತು; ಹಳೆ ಹೆಂಚು ಹೊನ್ನಾಗಬಲ್ಲುದೆ?' ಮೂಲ ಅರ್ಹತೆ ಮಾನವತೆ, ಅದಿಲ್ಲದಿದ್ದರೆ ಯಾವ ಧರ್ಮದ ಪರುಷ ಸೋಂಕಿ ಯಾವ ಪ್ರಯೋಜನವಾದೀತು? 'ಸಗಣಿಯ ಬೆನಕಂಗೆ ಸಂಪಿಗೆಯ ಅರಳಲ್ಲಿ ಪೂಜಿಸಿದರೆ ರಂಜನೆಯಿಲ್ಲದೆ ಅದರ ಗಂಜಳ ಬಿಡದಣ್ಣ... ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ ಕೆಟ್ಟವನೇಕೆ ಸದ್ಭಕ್ತನಹನು?'

ಧರ್ಮ ನಮ್ಮನ್ನು ಉದ್ಧರಿಸಲಿಲ್ಲವೆಂದು ವ್ಯರ್ಥವಾಗಿ ಹಲುಬುತ್ತೇವೆ; ಅದು ನಮ್ಮನ್ನು ಉದ್ಧರಿಸಬೇಕಾದರೆ ನಮ್ಮಲ್ಲಿ ಮೂಲ ಅರ್ಹತೆ ಮಾನವತೆಯಿರಬೇಕೆಂಬುದನ್ನು ಮರೆಯುತ್ತೇವೆ. ಪರಿಪೂರ್ಣ ಮಾನವತೆಯಿಲ್ಲದಿದ್ದರೆ ಹೋಗಲಿ, ಸಾಮಾನ್ಯ ಮಾನವತೆಯಾದರೂ ಇದ್ದರೆ ಧರ್ಮದಿಂದ ಪರಿಪೂರ್ಣ ಮಾನವತೆ. ಅದಕ್ಕೂ ಮುಂದಿನ ಮೆಟ್ಟಲು ದೇವತ್ವ ದೊರೆತೀತು. ಮೂಲವೇ ಸೊನ್ನೆಯಾದರೆ ಅದಕ್ಕೆ ಬೆಲೆ ತರುವುದು ಹೇಗೆ?

ಎಲ್ಲರೂ ಮಾನವರಾದರೆ, ಮಾನವ ಸಹಜವಾದ ಸ್ನೇಹ, ಕರುಣೆ, ಸಹಕಾರ,

ಸಹನೆ ಮೊದಲಾದ ಗುಣಗಳನ್ನು ಮೈಗೂಡಿಸಿಕೊಂಡರೆ, ನಿತ್ಯಜೀವನದಲ್ಲಿ ಅಳವಡಿಸಿಕೊಂಡರೆ ಈ ಲೋಕವೇ ನಾಕವಾದೀತೆಂಬ ನಂಬಿಕೆ ಕವಿಗೆ. ಆ ನಂಬಿಕೆಯ ಸಂಕೇತ ಈ ಶೀರ್ಷಿಕೆ, ಅಷ್ಟೆ'.

ಮೊದಲು ಮಾನವನಾಗು ಪದ್ಯ ಎಷ್ಟು ಜನಪ್ರಿಯಗೊಂಡಿತೆಂದರೆ ಇದನ್ನು ಹಾಡದ ಗಾಯಕರೇ ಇಲ್ಲ. ಜೆ.ಎಚ್.ಪಟೇಲರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಬೆಳಗಾವಿಯಲ್ಲಿ ವಿಶ್ವೇಶ್ವರಯ್ಯಾ ತಾಂತ್ರಿಕ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಿತು. ವಿಶ್ವವಿದ್ಯಾಲಯದ ಲಾಂಛನದಲ್ಲಿ 'ಮೊದಲು ಮಾನವನಾಗು' ಎಂಬ ಕಾವ್ಯಾನಂದರ ಉಕ್ತಿಯನ್ನು ಹಾಕಿರುವುದು ತುಂಬ ಔಚಿತ್ಯಪೂರ್ಣವಾದುದು. ಕಾವ್ಯಾನಂದರ ಕಾವ್ಯಶಕ್ತಿಗೆ ಇದೊಂದು ಬಹುದೊಡ್ಡ ಗೌರವವೆಂದು ನಾನು ಭಾವಿಸಿದ್ದೇನೆ. ತಂತ್ರಜ್ಞಾನದ ಫಲಿತಗಳಿಂದ ಜಗತ್ತು ತುಂಬ ವೇಗವಾಗಿ ಬೆಳೆಯುತ್ತಿದೆ. ಜಾಗತೀಕರಣದ ಸುಳಿಗಾಳಿಯಿಂದ ಮಾನವತೆಯ ಸಂಬಂಧಗಳೆಲ್ಲ ನುಚ್ಚು ನೂರಾಗಿವೆ; ಬಿಚ್ಚಿ ಬೇರಾಗಿವೆ. ಇಂಥ ಸಂಕ್ರಮಣ ಕಾಲದಲ್ಲಿ ಕಾವ್ಯಾನಂದರ ಈ ನುಡಿಗಳು ಲೋಕದ ಜನತೆಯ ಕಣ್ಣು ತೆರೆಸುವ ಕೆಲಸ ಮಾಡುತ್ತವೆ ಎಂದರೆ ಅತಿಶಯೋಕ್ತಿಯಲ್ಲ.

ವಿಮರ್ಶಕರು ಏನೇ ಹೇಳಲಿ, ಕಾವ್ಯಾನಂದರ ಕವಿತೆಗಳು ಜನಸಾಮಾನ್ಯರ ನಾಲಿಗೆಯ ತುದಿಯಲ್ಲಿ ಹರಿದಾಡುತ್ತಿವೆ. ಅವರ ಅನೇಕ ಕವನಗಳು ಇಂದಿಗೂ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿಲ್ಲ. ವಿಮರ್ಶಕ ವಲಯದ ದಿವ್ಯ ನಿರ್ಲಕ್ಷ್ಯದ ನಡುವೆಯೂ ಕಾವ್ಯಾನಂದರ ಕವನ ಸಂಕಲನಗಳು ಹಲವಾರು ಮುದ್ರಣಗಳನ್ನು ಕಂಡಿವೆ. ಈಗ ಸಮಗ್ರ ಕಾವ್ಯ, ಸಮಗ್ರ ವಚನಗಳು ಪ್ರಕಟಗೊಂಡು ಓದುಗ ಜಿಜ್ಞಾಸುಗಳಿಗೆ ತುಂಬ ಸಹಾಯಕವಾಗಿವೆ.

'ಕಾವ್ಯಾನಂದರ ಕಾವ್ಯದ ಮೇಲೆ ವಿಶೇಷವಾಗಿ ನಿಸರ್ಗೋಪಾಸನೆ ಹಾಗೂ ಮಾನವಾಂತಃಕರಣದ ಅಭಿವ್ಯಕ್ತಿಯಲ್ಲಿ ಒಡಮೂಡುತ್ತದೆ. ಮಾನವಂತಾಃಕರಣವೇ ಈ ಸಂಗ್ರಹದ ಪ್ರಧಾನ ವಸ್ತುವಾಗಿದೆ. ಮೊದಲು ಮಾನವನಾಗು ಎಂಬಲ್ಲಿಯ ಉತ್ಕಟ ಬಿನ್ನಹ, ಅವಿಭಕ್ತಂ ವಿಭಕ್ತೇಷು ಎಂಬಲ್ಲಿಯ ವಿಶಾಲ ಪ್ರಜ್ಞೆ, ಕಾಲದ ಕರೆಯಲ್ಲಿಯ ವಿಶ್ವಪ್ರಜ್ಞೆ, ಕೊಟ್ಟುಬಿಡು ಕಾಲ! ಎಂಬಲ್ಲಿಯ ಆಶಾವಾದ. ಈ ರೀತಿಯಾಗಿ ಹೃದಯದ ಮಿಡಿತವನ್ನು ಇಲ್ಲಿ ಚೆನ್ನಾಗಿ ಗುರುತಿಸಬಹುದು' ಎಂದು ವಿ.ಕೃ.ಗೋಕಾಕ ಅವರು ಹೇಳಿದ ಮಾತುಗಳು ನಿಜಕ್ಕೂ ಮೌಲಿಕವಾಗಿವೆ.

## ೬

'ಚರಗ' ಕಾವ್ಯಾನಂದರ ಆರನೆಯ ಕವನ ಸಂಕಲನ. 'ಮೊದಲು ಮಾನವನಾಗು' ಎಂಬ ಸಂಕಲನ ಪ್ರಕಟವಾಗಿ ೧೮ ವರ್ಷಗಳ ನಂತರ 'ಚರಗ' ಪ್ರಕಟವಾಯಿತು. ಈ ಕಾಲಘಟ್ಟದಲ್ಲಿ ನವ್ಯ ಕಾವ್ಯದ ಕತೆಯೂ ಮುಗಿದು, ದಲಿತ ಬಂಡಾಯಗಳ ವಿಜೃಂಭಣೆಯ ಸಂದರ್ಭವದು. ನವೋದಯದ ಛಾಯೆಯಲ್ಲಿ ಬೆಳೆದು ಬಂದ ಕಾವ್ಯಾನಂದರಿಗೆ ನಂತರದ ಯಾವ ಕಾವ್ಯಮಾರ್ಗಗಳು ಹಿಡಿಸಲಿಲ್ಲ. ಅವರದು ಸಾತ್ವಿಕ ಬಂಡಾಯ,



ಅವರದು ಒಟ್ಟು ಶೋಷಿತರ ಬಗೆಗಿನ ಕಳಕಳಿ. ಹೀಗಾಗಿ ಅವರ ಕಾವ್ಯವನ್ನು ಬಿಡಿಬಿಡಿಯಾಗಿ ನೋಡಿದರೆ ಯಾವುದೇ ಕಾವ್ಯಮಾರ್ಗದ ರೂಪಗಳು ಕಾಣದೇ ಇರಬಹುದು, ಆದರೆ ಅವರ ಕಾವ್ಯವನ್ನು ಇಡಿಯಾಗಿ ನೋಡಿದಾಗ ಒಡಲಾಳದಲ್ಲಿ ಈ ಎಲ್ಲ ಮಾರ್ಗಗಳು ಹೊಕ್ಕಳುಬಳ್ಳಿಯಾಗಿ ಕೂಡಿಕೊಂಡಿರುವುದನ್ನು ಕಾಣಬಹುದು. ಅದಕ್ಕೆ ಸಾಕ್ಷಿಯಾಗಿ ಚರಗ ಮತ್ತು ಹಾಲ್ದೆನೆ ಎಂಬ ಸಂಕಲನಗಳನ್ನು ಉದಾಹರಿಸಬಹುದು. ದಲಿತ ಬಂಡಾಯ ಮಾರ್ಗಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ, ಕಾವ್ಯಾನಂದರು ಆಧುನಿಕ ವಚನರಚನೆ ಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹೀಗಾಗಿ ಅವರು ನವೋದಯ ಮಾರ್ಗದ ಕವಿಗಳೆಂದೇ ನಾವು ಅವರನ್ನು ಗುರುತಿಸಬೇಕು.

'ಚರಗ' ಸಂಕಲನದಲ್ಲಿ ೪೧ ಕವಿತೆಗಳಿವೆ. ಗಾಂಧೀಜಿ ಅವರ ಸ್ಮರಣೆಯೊಂದಿಗೆ ಕೃತಿ ಪ್ರಾರಂಭವಾಗುತ್ತದೆ. ಇಷ್ಟೊತ್ತಿಗೆ ಗಾಂಧೀಜಿ ಹೆಸರು ನೇಪಥ್ಯಕ್ಕೆ ಸರಿಯುತ್ತಿತ್ತು; ರಾಜಕಾರಣದಲ್ಲಿ ಭ್ರಷ್ಟತೆ ಹೊಗೆಯಾಡುತ್ತಿತ್ತು. ಇಂಥ ಸಂದರ್ಭದಲ್ಲಿ ಗಾಂಧೀಜಿ ಯವರಿಂದ 'ಆಯ್ತು ಜಗವೆ ಪವಿತ್ರವು' ಎಂಬ ಕಾವ್ಯನಮನ ಸಲ್ಲಿಸಿದ್ದಾರೆ. ಗಾಂಧೀಜಿ ಹುಟ್ಟಿದ ಪರಿಣಾಮ ಮರ್ತ್ಯದಿಂದ ಸ್ವರ್ಗದತ್ತ ಹರಿದಳು ಹೊಸ ಜಾಹ್ನವಿ, ಭುವಿಯ ಬಾನಿನಲ್ಲಿ ಮೂಡಿ ನೆಗೆದ ನಭಕೆ ಹೊಸ ರವಿ ಎನ್ನುತ್ತಾರೆ.

ಹಿಂಸೆಗೆ ಅಜ್ಞಾತವಾಸ
ದ್ವೇಷಕೆ ವನವಾಸವು
ಬಂದತೊಮ್ಮೆ ಗಾಂಧಿ ಹುಟ್ಟೆ
ಹುಸಿಗೆ ಬಂದಿವಾಸವು

ಗಾಂಧೀಜಿಯಿಂದ ಸಾಮಾನ್ಯತೆಗೆ ಅಸಾಮಾನ್ಯತೆ ಪಟ್ಟ ದಕ್ಕಿತು. ದೇಶದ ಕುಂಭಕರ್ಣ ನಿದ್ರೆಯಿಂದ ಎದ್ದನು, ಸೋತ ಬ್ರಿಟಿಷರು ಗಾಂಧಿಸ್ತವನ ಮಾಡಿದರು. ಇದರಿಂದ 'ಗಾಂಧಿ ನಡೆದ ನೆಲವೆ ಅಲ್ಲ– ಆಯ್ತು ಜಗವೆ ಪವಿತ್ರವು' ಎನ್ನುತ್ತಾರೆ ಕಾವ್ಯಾನಂದರು.

'ಎಡೆಯೂರು ಆತ್ಮಶ್ರೀ' ೧೫ನೇ ಶತಮಾನದಲ್ಲಿ ವಿರಕ್ತಯುಗಕ್ಕೆ ನಾಂದಿ ಹಾಡಿದ ತೋಂಟದಸಿದ್ಧಲಿಂಗ ಯತಿಗಳನ್ನು ಕುರಿತ ಕವನ. 'ಸೂರ್ಯನ ಬೆಳಗಿಂಗೆ ಕೊಳ್ಳಿಯ ಬೆಳಗ ಹಿಡಿಯಲುಂಟೆ ಮರುಳೆ?' ಎಂಬಂತೆ ಸಿದ್ಧಲಿಂಗ ಯತಿಗಳನ್ನು ಬಣ್ಣಿಸಲು ಸಾಧ್ಯವಿಲ್ಲ ಎನ್ನುತ್ತಾರೆ ಕಾವ್ಯಾನಂದರು.

ಅಲ್ಲಮನ ಅಪರಾವತಾರಿಯೆನಿಸಿ
ಶಿವಯೋಗ ಸಾಮ್ರಾಜ್ಯ ಸಾಮ್ರಾಟನೆನಿಸಿ
ಅನುಭಾವ ಶ್ರೀಗಿರಿಯ ಶಿಖರ ತಾನೆನಿಸಿ
ಅರಿವೆನಿಸಿ, ಗುರುವೆನಿಸಿ, ಪರತತ್ತ್ವವೆನಿಸಿ
ಜಗವ ಬೆಳಗಿದ ಸಿದ್ಧಲಿಂಗನಿಗೆ ಮನಸೋತೆ
ಇದನೆ ಬಣ್ಣಿಸಹೊರಟು ಸೋತಿಹುದು ಈ ಗೀತೆ
ಉಲುಹಡಗಿ ಇರ್ದೊಡೇಂ ಎಲೆಗಳೆದ ಈ ವೃಕ್ಷ?

ಊರ್ಧ್ವ ಮೂಲದ ಅಧಶ್ಶಾಖೆಗಳ ಆತ್ಮವೃಕ್ಷ?
ಎಲೆ ಕಾಯ ಹಂಗಿರದೆ ಫಲ ಕೊಡುವ ಕಲ್ಪವೃಕ್ಷ?
ಯುಗಯುಗವು ಕಳೆದರೂ ಹಳೆಯದಾಗದ ವೃಕ್ಷ?

ಸಿದ್ಧಲಿಂಗಯತಿಗಳ ಭೂಮ ವ್ಯಕ್ತಿತ್ವವನ್ನು ಅರ್ಥವತ್ತಾದ ಯುಕ್ತಶಬ್ದಗಳಿಂದ ವಿವರಿಸುತ್ತಾರೆ.

ಕವಿ ಕಾವ್ಯಾನಂದರಿಗೆ ಈ ದೇಶ ಭೂಮಿ ಆಕಾಶಗಳೆತ್ತರಕ್ಕೆ ಬೆಳೆಯಬೇಕೆಂಬ ಅದಮ್ಯ ಅಭೀಪ್ಸೆ. ಅದಕ್ಕಾಗಿ ಭಾರತ ಅದಮ್ಯವಾಗಬೇಕು, ಅಜೇಯವಾಗಬೇಕು, ಅಭೇದ್ಯವಾಗಬೇಕು, ಬಲಾಢ್ಯವಾಗಬೇಕು, ಗುಣಾಢ್ಯವಾಗಬೇಕು. ಜಾತಿ ವಿಷಕೆ ಗರುಡನಾಗಿ, ದ್ವೇಷಾಗ್ನಿಗೆ ವರುಣನಾಗಿ, ಮೌಢ್ಯತಮಕೆ ಅರುಣನಾಗಿ ಬೆಳಗಬೇಕು. ಸಾಧನೆಯಲಿ ಅನಂತವಾಗಿ, ಶಕ್ತಿಯಾಗಿ, ಋದ್ಧಿಯಾಗಿ, ವಿದ್ಯೆಯಾಗಲಿ ಭಾರತ ಒಟ್ಟಾರೆ 'ಅಜೇಯವಾಗು ಭಾರತ' ಎಂದು ಆಶಿಸುತ್ತಾರೆ.

'ಅವಿಭಾಜ್ಯವಿರಲಿ ದೇಶ!' ಎಂಬ ಪದ್ಯದಲ್ಲಿ ಬಿಂದ್ರೇನವಾಲಾ ಅವರಂಥ ಮದಾಂಧರು ಪ್ರತ್ಯೇಕ ಖಿಜಕಿಸ್ತಾನದ ಬೇಡಿಕೆಯಿಟ್ಟು ಸುವರ್ಣಮಂದಿರದಲ್ಲಿ ಕುಳಿತು ಭಯೋತ್ಪಾದನೆಯ ಅಟ್ಟಹಾಸ ಮೆರೆದ ಘಟನೆಗೆ ಪೂರಕವಾಗಿ ಈ ದೇಶ ಅಖಂಡವಾಗಿರಲಿ, ಒಕ್ಕೂಟ ವ್ಯವಸ್ಥೆಯನ್ನು ನಾವೆಲ್ಲ ಗೌರವಿಸೋಣ ಎಂಬ ಭಾವನೆ ಮೂಡಲೆಂಬ ಕಾರಣಕ್ಕಾಗಿ ಈ ಕವನವನ್ನು ಹೊಸೆದಿದ್ದಾರೆ.

ಹಲವು ಧರ್ಮ, ಹಲವು ಭಾಷೆಗಳಿಂದ ಕೂಡಿದ ಈ ದೇಶದಲ್ಲಿ ರಾಷ್ಟ್ರವಿಭಜನೆ ಎಂಬ ಸತ್ತವಾದಕ್ಕೆ ಮತ್ತೇಕೆ ಜೀವ ಬರಿಸುವಿರಿ 'ಇರುಳು ಕಂಡ ಬಾವಿಯಲಿ ಹಗಲೆ ಕಣ್ಮುಚ್ಚಿ ಬೀಳಬಹುದೆ?' ಎಂದು ಪ್ರಶ್ನಿಸುತ್ತಾರೆ.

ಒಂದೆ ದೇಶವಿದು
ಒಂದೆ ದೇಶವಿದು
ಒಂದೆ ದೇಶವೆನ್ನಿ!
ನಾವೆಲ್ಲ ಒಂದೆ
ನಾವೆಲ್ಲ ಒಂದೆ
ನಾವೆಲ್ಲ ಒಂದೆ ಎನ್ನಿ
ರಾಜ್ಯ ರಾಜ್ಯದಲಿ ವ್ಯಾಜ್ಯ ಸಹಜ
ಅವಿಭಾಜ್ಯವಿರಲಿ ದೇಶ

ಎಂಬ ಕಳಕಳಿ ಕಾವ್ಯಾನಂದರದು.

ಭಾರತ ಬೇರೆ ದೇಶದಿಂದ ನಿರಾಶ್ರಿತರಾಗಿ ಬಂದವರಿಗೆ ಆಶ್ರಯ ನೀಡಿದೆ. ಟಿಬೇಟಿನಿಂದ ಬಂದ ಬೌದ್ಧಧರ್ಮೀಯರಿಗೆ, ಬಾಂಗ್ಲಾದಿಂದ ಬಂದ ಮುಸ್ಲಿಂ ಬಂಧುಗಳಿಗೆ ಭಾರತ ಅನ್ನ-ಆಶ್ರಯ ನೀಡಿ ಸಾಕಿ ಸಲುಹಿದೆ. ನಿರಾಶ್ರಿತರಾಗಿ ಬಂದವರ ಅಂತರಂಗದ ನುಡಿಗಳನ್ನು ಕಾವ್ಯಾನಂದರು 'ನಾವು ನಿರಾಶ್ರಿತರು' ಎಂಬ ಕವನದಲ್ಲಿ ಸವರೆಹಿಡಿದ್ದಾರೆ. 'ರಾಷ್ಟ್ರವಿಭಜನೆ ಹೆತ್ತ ಅನಾಥ ಸಂತತಿ ನಾವು, ದ್ವಿರಾಷ್ಟ್ರ ವಾದಕ್ಕಿತ್ತ



ಆಹುತಿಯು ನಾವು' ಎಂದು ತಮ್ಮ ಅಳಲನ್ನು ತೋಡಿಕೊಳ್ಳುವ ನಿರಾಶ್ರಿತರು ಅನುಭವಿಸಿದ ನೋವು ಸಂಕಟ ಅಪಾರ. ಫುಟ್‌ಪಾಥೆ ಮಂಚ ಬಾಣತಿಗೆ, ಪಾಷಾಣ ತೊಟ್ಟಿಲವು ಹಸುಗೂಸಿಗೆ! ಭೂಮಿಯೇ ಹಾಸಿಗೆಯು, ಆಕಾಶ ಹೊದಿಕೆ, ಚಿಂದಿಯೇ ಸೀರೆ, ಕೇಶಗಳೆ ರವಿಕೆ, ಅಳಲೆ ಆಹಾರ, ಕಂಬನಿಯೆ ಪಾನಿಯ, ನಿಟ್ಟುಸಿರೆ ಔಷಧ, ನಿರಾಶೆಯೇ ಉಪಾಯವಾಗಿತ್ತು ನಿರಾಶ್ರಿತರಿಗೆ. ಅದಕ್ಕಾಗಿ ಅವರು ಭಾರತ ದೇಶವಾಸಿಗಳಲ್ಲಿ– 'ಅಲ್ಲಿ ಬಿದ್ದು ಹದ್ದಿಗೆ ಆಹಾರವಾಗುವ ದಕ್ಕಿಂತ ಇಲ್ಲಿ ಬಿದ್ದು ನಿಮ್ಮ ಗದ್ದೆಗೆ ಗೊಬ್ಬರವಾಗುವೆವು; ನೆರವು ನೀಡಿರಿ–ತಾಯ್ತಂದೆಗಳಿರ, ಬಂದುಗಳಿರ...ನಾವು ನಿರಾಶ್ರಿತರು, ನಿರ್ಗತಿಕರು' ಎಂದು ಬೇಡಿಕೊಳ್ಳುತ್ತಾರೆ. ನಿರಾಶ್ರಿತರ ಕರುಣಾಜನಕ ಬದುಕನ್ನು ಕುರಿತು ಕಾವ್ಯಾನಂದರು ತುಂಬ ಭಾವನಾತ್ಮಕವಾಗಿ ಇಲ್ಲಿ ಕವನ ಕಟ್ಟಿದ್ದಾರೆ.

ಬಡತನದ ಬಗ್ಗೆ ಕಾವ್ಯಾನಂದರಿಗೆ ಬಾಲ್ಯದಿಂದಲೂ ಕಟು ಅನುಭವ. ಅಂತೆಯೆ ಅವರ ಮೊದಲ ಕವನ ಸಂಕಲನ 'ಜಲಪಾತ'ದಿಂದ ಹಿಡಿದು, 'ಹಾಲ್ದೆನೆ' ವರೆಗಿನ ಸಂಕಲನಗಳಲ್ಲಿ ಬಡತನ ಕುರಿತು ಕವನಗಳನ್ನು ಬರೆಯುತ್ತ ಬಂದಿದ್ದಾರೆ. 'ಏ ಬಡತನವೇ, ಹೊರಟು ಹೋಗು' ಎಂಬ ಪದ್ಯ ಈ ಸಂಕಲನದಲ್ಲಿದೆ. ಇಂದಿರಾ ಗಾಂಧಿ 'ಗರೀಬಿ ಹಟಾವ್' ಎಂದು ಘೋಷಿಸಿದ ಹದಿನೈದು ವರ್ಷಗಳ ನಂತರ ಈ ಕವನ ಬರೆಯುತ್ತ–

ಏ ಬಡತನವೇ, ಹೊರಟು ಹೋಗು!
ದೂರ ತೊಲಗು, ದೂರ ತೊಲಗು, ತೊಲಗು!
ಅಮ್ಮನ ಆಜ್ಞೆ ಹೊರಟು
ಹದಿನೈದು ವರ್ಷಗಳಾದರೂ
ಇನ್ನೂ ಮುಂದೆಯೇ ನಿಂತಿರುವೆಯಾ
ಹಲ್ಲು ಕಿರಿಯುತ್ತ, ಜೊಲ್ಲು ಸುರಿಸುತ್ತ?
ಹೋಗು ಹೋಗು ಹೋಗು!
ಎಲ್ಲಿಗಾದರೂ ಹಾಳಾಗಿ ಹೋಗು

ಎಂದು ಹೇಳುತ್ತ ಬಡತನವೇ ನೀನು ಹಳ್ಳಿಗಳಿಗೆ ಹೋಗು, ನಗರಗಳ ಕೊಳೆಗೇರಿಗಳಿಗೆ ಹೋಗು, ಆದಿಜನರ ಕೇರಿಗಳಿಗೆ, ನಿರ್ಗತಿಕರ ಮನೆಗೆ ಹೋಗು ಎಂದು ವಿಡಂಬಿಸುತ್ತಾರೆ. ರಾಜಕಾರಣಿಗಳು ಮತ್ತು ಅಧಿಕಾರಿಗಳು 'ಗರೀಬಿ ಹಟಾವ್' ಗೊತ್ತುವಳಿಯನ್ನು ವಿಂಧ್ಯಾದ್ರಿ ಹಿಮಾದ್ರಿಗಳಲ್ಲಿ ಜೀವಂತ ಹುಗಿದು ಬಿಡುತ್ತಾರೆ. ಒಂದು ಕಾಲಕ್ಕೆ ಬಡತನದ ಸಂತಾನ ಶ್ರೇಷ್ಠರೇ ಆಗಿದ್ದ ಈ ರಾಜಕಾರಣಿಗಳು, ಅಧಿಕಾರಿಗಳು ಇಂದು ಭವ್ಯ ಬಂಗ್ಲೆ ಕಟ್ಟಿಸಿದ್ದಾರೆ, ವಿದೇಶ ಕಾರುಗಳನ್ನಿಟ್ಟಿದ್ದಾರೆ. ಕಳ್ಳ ಸಂತೆ, ಕಲಬೆರಕೆ, ಬೆಲೆಯೇರಿಕೆ, ಕಂತ್ರಿನೋಟು, ಕಳ್ಳ ಸಾಗಾಣಿಕೆ ಮೊದಲಾದವುಗಳಲ್ಲಿ ಪಾರಂಗತರಾಗಿ ಬಡತನವನ್ನು ಹಳ್ಳಿಗಳಿಗೆ ಕಳಿಸಿಕೊಟ್ಟಿದ್ದಾರೆ. ಬಡತನ ಎಲ್ಲಿಂದ ಹೋಗಿದೆ ಎಂಬುದನ್ನು ಇನ್ನೂ ರಸವತ್ತಾಗಿ ವಿವರಿಸುತ್ತಾರೆ ಕೇಳಿ:

ಉದ್ಯಮಪತಿಗಳ ಮಹಲುಗಳಿಂದ,
ಮಂತ್ರಿ ಶಾಸಕ ಪ್ರಶಾಸಕರ ಭವ್ಯ ಭವನಗಳಿಂದ

ಗುತ್ತಿಗೆದಾರ, ಕಳ್ಳಸಾಗಾಣಿಕೆದಾರ
ಕಾಳಸಂತೆಚೋರ ಎಲ್ಲ ಹರಾಮಖೋರರ
ಸಿರಿಸುರಿವ, ಸಿರಿಹರಿವ ಸದನಗಳಿಂದ
ಹೊರದೂಡಿದ್ದೇವೆ ನಿನ್ನನ್ನು

ಬಡವರ ಬಡತನವನ್ನು ಹೋಗಲಾಡಿಸುತ್ತೇವೆಂದು ಬಲವ ಬೆಳೆಸಿಕೊಂಡ ದುಷ್ಟಜನರ ಚಿತ್ರಣವನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಅಂಥ ಜನರನ್ನು 'ಹರಾಮಖೋರ' ಎಂದು ಟೀಕಿಸುವಲ್ಲಿಯೂ ಅವರು ಹಿಂದೆ ಮುಂದೆ ನೋಡಿಲ್ಲ.

'ಜೀರ್ಣೋದ್ಧಾರ' ಎಂಬ ಕವಿತೆಯಲ್ಲಿ, ದೇವಸ್ಥಾನದ ಜೀರ್ಣೋದ್ಧಾರ ಮಾಡುವ ಸಾಧಕ-ಬಾಧಕಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಪುರಾತತ್ವ ಇಲಾಖೆಗೆ ಈ ದೇವಸ್ಥಾನವನ್ನು ಒಪ್ಪಿಸಿದರೆ, ಅವರು ಐತಿಹಾಸಿಕವೆಂದು ಪರಿಗಣಿಸಿ ನಿರ್ಲಕ್ಷಿಸಿ ಬಿಡುತ್ತಾರೆ. ಅಥವಾ ಅದನ್ನು ಜೀರ್ಣೋದ್ಧಾರ ಮಾಡುವ ನೆಪದಲ್ಲಿ ಅಮೂಲ್ಯವಾದ ಶಿಲ್ಪಕಲೆಗಳನ್ನು ಕದ್ದು ವಿದೇಶಕ್ಕೆ ಮಾರುತ್ತಾರೆ. ಅಲ್ಲದೆ ಹಾಳು ಬಿದ್ದ ದೇವಸ್ಥಾನ ಚೋರರ, ಜೂಜುಗಾರರ, ಕುಡುಕರ, ಕದೀಮರ, ಹದಿಹರೆಯದ ಜಾರ ಜಾರೆಯರ ಆಶ್ರಯಸ್ಥಾನವಾಗಿರುತ್ತದೆ. ಅಲ್ಲದೆ ಇಲಿ, ಹೆಗ್ಗಣ, ಹಾವು, ಬಾವುಲಿಗಳ ಆಶ್ರಯಸ್ಥಾನವೂ ಆಗಿರುತ್ತದೆ. ಅದಕ್ಕಾಗಿ-

ಅವ್ಯವಸ್ಥೆಯಿದ್ದರೇ ಲಾಭ ಜಾಸ್ತಿ ನಮಗೆ
ಅಂತೆಯೇ, ಅವ್ಯವಸ್ಥೆಯಲ್ಲಿಯೇ ಆಸ್ಥೆ ನಮಗೆ!
ಇರಲಿ ಬಿಡಿ ಅವ್ಯವಸ್ಥೆ
ಅಸ್ತವ್ಯಸ್ತತೆಯೇ ಇಂದಿನ ವ್ಯವಸ್ಥೆ
ಹೀಗಿರುವಾಗ-
ಏಕೆ ಜೀರ್ಣೋದ್ಧಾರ?
ಆಗಲಿ ಮೊದಲು ನಮ್ಮ ಉದ್ಧಾರ!

ಎಂದು ಕಾವ್ಯಾನಂದರು ಆಶಿಸುತ್ತಾರೆ.

ಕಾವ್ಯಾನಂದರು ರೈತರ ಕಷ್ಟ ನಷ್ಟಗಳನ್ನು ತುಂಬ ಹತ್ತಿರದಿಂದ ಕಂಡವರು. ಅಧಿಕಾರದಲ್ಲಿದ್ದಾಗ ರಾಜಕಾರಣಿಗಳ ಬೂಟಾಟಿಕೆಯನ್ನು ಸಮೀಪದಿಂದ ಕಂಡವರು. ಈ ಹಿನ್ನೆಲೆಯಲ್ಲಿ 'ರಾಯ್‌ಬರೇಲಿ ರೈತರ ಹಾಡು' ಎಂಬ ಸುದೀರ್ಘ ಕವನದಲ್ಲಿ ರೈತರ ಮನದಾಳದ ಆಕ್ರೋಶವನ್ನು ಹೊರಹಾಕಿದ್ದಾರೆ.

ರಾಮರಾಜ್ಯವೂ ಬೇಡ, ಗ್ರಾಮರಾಜ್ಯವೂ ಬೇಡ
ಪ್ರಜಾರಾಜ್ಯವೂ ಬೇಡ, ಸುಖೀರಾಜ್ಯವೂ ಬೇಡ
ನನ್ನ ರಾಜ್ಯವೇ ಬೇಕು, ಆಮೇಲೆ
ನನ್ನ ಮಗನ ರಾಜ್ಯ ಬೇಕೆನ್ನುವರ ಉರುಳಿಸುವೆವು
ಎಲ್ಲಿಂದ ಬಂದರೋ ಅಲ್ಲಿಗೇ ತೆರಳಿಸುವೆವು!
ನಾವು ರೈತರು ಇಂದು ಒಂದಾದೆವು
ಸುಲಿವವರ ಸದೆಬಡಿಯೆ ಮುಂದಾದೆವು!



ಎಲ್ಲ ರಾಜಕೀಯ ಪಕ್ಷಗಳು ಈ ದೇಶದ ಬಡರೈತರನ್ನು ಸುಲಿದಿವೆ. ಐದು ವರ್ಷಕ್ಕೊಮ್ಮೆ ಮುಖವ ತೋರಿಸುವವ ಮೋಸಗಾರರನ್ನು ಸದೆಬಡಿದು, ಬಡವರ ರಕ್ತ ಹೀರಿ ವಿದೇಶಿ ಕಾರುಗಳಲ್ಲಿ ತಿರುಗಿ, ಐಷಾರಾಮಿ ಜೀವನ ನಡೆಸುತ್ತಿರುವವರಿಗೆ ಬುದ್ಧಿ ಕಲಿಸಲು ರೈತರೆಲ್ಲ ನಾವು ಒಗ್ಗಟ್ಟಾಗುವೆವು. ರೈತರನ್ನು ಮಣಿಸಲು ತುರ್ತು ಪರಿಸ್ಥಿತಿ, ಬಿ.ಎಸ್.ಎಫ್, ರಿಜರ್ವ ಪೋಲಿಸ್ ಯಾವ ವ್ಯವಸ್ಥೆಗೂ ಸಾಧ್ಯವಿಲ್ಲ ಎಂಬ ರೈತರ ಹೃದಯದ ಭಾಷೆಯನ್ನು ಕಾವ್ಯಾನಂದರು ಇಲ್ಲಿ ಚಿತ್ರಿಸಿದ್ದಾರೆ.

ಕಾವ್ಯಾನಂದರಿಗೆ ಈ ವ್ಯವಸ್ಥೆಯ ಬಗ್ಗೆ ಜಿಗುಪ್ಸೆ ಬಂದಿರಬಹುದು. ಅದರಲ್ಲೂ ಸಾಹಿತ್ಯಿಕ ಗುಂಪುಗಾರಿಕೆ, ನವ್ಯದ ಇಳಿಮುಖ, ದಲಿತ ಬಂಡಾಯಗಳ ಅಬ್ಬರದ ನಡುವೆ ಯಾವುದನ್ನು ಬರೆಯಬಾರದೆಂಬ ಕಾರಣಕ್ಕೆ ಕವನ ಕಟ್ಟದೆ ಸುಮ್ಮನೆ ಕುಳಿತ ಪರಿಸ್ಥಿತಿಯನ್ನು 'ಕಾವ್ಯಾನಂದ ಕಾಣೆಯಾಗಿದ್ದಾನೆ!' ಎಂಬ ಕವನದಲ್ಲಿ ತುಂಬ ಸ್ವಾರಸ್ಯವಾಗಿ ವಿವರಿಸಿದ್ದಾರೆ. 'ನಾಲ್ಕು ದಶಕಕ್ಕೂ ಮಿಕ್ಕಿ ನೋಡಿಕೊಂಡವರಿಗೆ, ನಾಲ್ಕು ಸಾಲು ಬರೆದಿಟ್ಟು ಹೋಗಬೇಡವೆ?... ಎಂಥ ವಿಚಿತ್ರ ವ್ಯಕ್ತಿ ಈ ಕಾವ್ಯಾನಂದ, ಧಡಧಡ ಬಂದ, ಬಡಬಡ ಹೋದ! ಎಂದು ವ್ಯಂಗ್ಯವಾಗಿ ಬರೆಯುತ್ತಾರೆ. ಯಾಕೆ ಹೊರಟು ಹೋಗಿರಬಹುದು ಎಂಬುದನ್ನು ಅವರೇ ಹೀಗೆ ವಿವರಿಸುತ್ತಾರೆ- 'ವಾರ್ಧಕ್ಯಕ್ಕೇಕೆ ವಾರ್ಧಿಕ ಷಟ್ಪದಿ; ದಣಿದ ಮನದ ವನದಲ್ಲೇಕೆ ಕವನ ಷಟ್ಪದಿ, ಎಂದೆಣಿಸಿ, ಹರೆಯನರಸಿ ಹೋಗಿರಬಹುದೆ?

ಶುಕಪಿಕ ಅಂಚೆಕೊಂಚೆ ಮಾವು ಮಲ್ಲಿಗೆಗಳ ಮಾತನಾಡಿದರೆ
ಹಳಬನೆಂದಾರೆಂದು ಹೆದರಿ ಬಾಯ್ಮುಚ್ಚಿಕೊಂಡಿದ್ದು
ಉಸಿರು ಕಟ್ಟಿದಂತಾಗಿ ಹತಾಶನಾಗಿ ಹೋಗಿರಬಹುದೆ?
ಗುಣಕ್ಕೆ ಸಲ್ಲಬೇಕಾದ ಸಲ್ಲುದ ಕಂಡು
ನಿರಾಶನಾಗಿ ಹೋಗಿರಬಹುದೆ?

ತಮ್ಮ ಕಾಲಘಟ್ಟದಲ್ಲಿ ನಡೆಯುತ್ತಿದ್ದ ಸಾಮಾಜಿಕ-ಸಾಹಿತ್ಯಿಕ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಕಾವ್ಯಾನಂದರು ಅವುಗಳಿಗೆ ತೋರಿದ ಪ್ರತಿಕ್ರಿಯೆಗಳು ಇಲ್ಲಿ ಕವನ ರೂಪ ತಾಳಿವೆ. ೧೯೮೫ರಲ್ಲಿ ಮೈಸೂರಿನಲ್ಲಿ ವಿಶ್ವಕನ್ನಡ ಸಮ್ಮೇಳನ ಜರುಗಿತು. ಆಗ ಭೀಕರ ಬರಗಾಲವಿತ್ತು. ಜನರು, ಬರಗಾಲವಿದ್ದಾಗ ಸಮ್ಮೇಳನ ಯಾಕೆ? ಎಂದು ಕೇಳಿದರು. ಆಗ ಜ್ಞಾನಪೀಠ ಪ್ರಶಸ್ತಿ ಪಡೆದ ಶಿವರಾಮ ಕಾರಂತರು. 'ಬರಗಾಲ ಬಿದ್ದಿದೆ ಎಂದು ಮಸಾಲೆ ದೋಸೆ ತಿನ್ನುವುದನ್ನು ಬಿಟ್ಟಿಲ್ಲ' ಎಂಬ ಉಢಾಪೆಯ ಪ್ರತಿಕ್ರಿಯೆ ನೀಡಿದ್ದರು. ನಗರವಾಸಿಗಳು ದೋಸೆ ತಿನ್ನಬಹುದು, ಆದರೆ ಹಳ್ಳಿಗಳಲ್ಲಿಯ ಜನರ ಪಾಡು ಅವರಿಗೇನು ಗೊತ್ತು. ಈ ಘಟನೆಗೆ ಕಾವ್ಯಾನಂದರು ವ್ಯಂಗ್ಯವಾಗಿ 'ಬುದ್ಧಿಯ ಬರ' ಕವನದಲ್ಲಿ ಬರದ ಸೊಲ್ಲು ಎತ್ತಿದ ರೈತನಿಗೆ ಬುದ್ಧಿ ಹೇಳುತ್ತಾರೆ-

ಜನ ಮಸಾಲೆ ದೋಸೆ ತಿನ್ನುವುದನ್ನು
ನಿಲ್ಲಿಸಿಲ್ಲ-

ಆದುದರಿಂದ ಈ ನಾಡಿನಲ್ಲಿ
ಬರವಿಲ್ಲ
ಎತ್ತದಿರು ಬರದ ಸೊಲ್ಲ
ಏ ಹುಚ್ಚ ಮಲ್ಲ

ಎಂದು ವಿಡಂಬನೆಯಿಂದ ಸಾಗುವ ಈ ಕವನದಲ್ಲಿ ಬುದ್ಧಿ ಇದ್ದವರು ಆರಾಮಾಗಿ ಬದುಕುತ್ತಾರೆ. ನಿನ್ನಂಥ ಬುದ್ಧಿಗೇಡಿಗಳಿಗೆ ದುಡಿತ, ಹಸಿವೆ, ಜಾಡ್ಯ, ಮೌಢ್ಯವೇ ಗತಿ. ಇಷ್ಟೆಲ್ಲ ಇರುವಾಗ ನಿನಗೆ ಬುದ್ಧಿಯ ಬರ ಮಾತ್ರವಿದೆ. 'ಬುದ್ಧಿಯಿದ್ದ ಹಲವರ ಸೇವಿಸಿ ಪಡೆಯಿರಿ ವರ! ಇನ್ನೆಲ್ಲಿಯ ಬ್ಬರ?' ಎಂದು ಹೇಳುತ್ತಾರೆ.

'ಇದು ಬೆಂಗಳೂರು' ಎಂಬ ಕವನದಲ್ಲಿಯೂ ಬೆಂಗಳೂರು ನಗರದ ಪರಿಸರ ಮಾಲಿನ್ಯ ಕುರಿತು, ಮತ್ತು ತಮಿಳು, ತೆಲಗು, ಸಿಂಧಿ-ಹಿಂದಿ, ಪಂಜಾಬಿ ಭಾಷೆಗಳ ದಬ್ಬಾಳಿಕೆಯಲ್ಲಿ ಕನ್ನಡ ಕಣ್ಮರೆಯಾಗುತ್ತಿರುವುದನ್ನು ಸೂಚಿಸಿದ್ದಾರೆ.

ಕಲ್ಲೋಲ ಮಾಲೆಯ ಸಂಕಲನದಲ್ಲಿರುವಂಥ ಅನೇಕ ರೂಪಕಗಳು ಇಲ್ಲಿಯೂ ಸ್ಥಾನ ಪಡೆದಿವೆ. ಇಂದು ಗೋ ರಕ್ಷಣೆ ವಿಷಯದಲ್ಲಿ ರಾಜಕೀಯ ನಡೆಯುತ್ತಿದೆ. ಈ ವಿಷಯವಾಗಿ ಮೂರು ದಶಕಗಳ ಹಿಂದೆಯೇ ಅದ್ಭುತವಾದ ರೂಪಕವನ್ನು ಕಟ್ಟಿಕೊಟ್ಟಿದ್ದಾರೆ ಕಾವ್ಯಾನಂದರು–

ಹಸು : ನನ್ನಲ್ಲಿ ಹಾಲಿದೆ,
ಕರೆದು ಕೋ ಕಟುಕ!
ನನ್ನ ನೆತ್ತರನ್ನೇಕೆ ಹರಿಸುವಿ,
ನನ್ನ ಮಾಂಸವನ್ನೇಕೆ ಮಾರುವಿ?'

ಕಟುಕ : 'ನನಗೆ ನಿನ್ನ ಹಾಲೂ ಬೇಕಿಲ್ಲ
ನನಗೆ ನೆತ್ತರು ಮಾಂಸಗಳೂ ಬೇಕಿಲ್ಲ
ನನಗೆ ಬೇಕು ರೊಟ್ಟಿ ಚಟ್ನಿ!
ಆದರೆ ನನ್ನ ಅಂಗಡಿಗೆ ಬರುವವರು
ಹಾಲು ಬೇಡಿ ಬರುವುದಿಲ್ಲ
ಮಾಂಸ ಬೇಡಿ ಬರುತ್ತಾರೆ!
ನಾನೇನು ಮಾಡಲಿ?'

ಹಸು : 'ಬೇರೆ ಅಂಗಡಿ ತೆರೆ,
ಬೇರೆ ಕಾಯಕ ಮಾಡು!'

ಇಂಥ ಅನೇಕ ರೂಪಕ ಉಪಮೆಗಳನ್ನು ಈ ಸಂಕಲನದಲ್ಲಿ ಕಾಣಬಹುದು. 'ಇಪ್ಪತ್ತೊಂದನೆಯ ಶತಮಾನಕ್ಕೆ' ಎಂಬ ಪದ್ಯದಲ್ಲಿ ಹೊಸ ಯುಗಕ್ಕೆ ಹೋಗುವ ಮಹತ್ವಾಕಾಂಕ್ಷೆಯ ತುಡಿತವಿರುವುದನ್ನು ಕಾಣಬಹುದು.

೧೯೮೭ರ ಸಂದರ್ಭದಲ್ಲಿ ಅಂದಿನ ಕೇಂದ್ರ ಸರಕಾರ ವಿಶ್ವಬ್ಯಾಂಕಿನಿಂದ ಬೃಹತ್ ಪ್ರಮಾಣದಲ್ಲಿ ಸಾಲ ಪಡೆದಾಗ 'ಸಾಲದ ಜಾಲ' ಎಂಬ ಕವನ ಬರೆದು 'ಸಾಲದ ಹಿರಿ ಜಾಲದತ್ತ ಧಾವಿಸುತಿದೆ ದೇಶ, ಬಿಗಿಯುತ್ತಿದೆ ಭಾರತವನ್ನು ಋಣದ ಕ್ರೂರ ಪಾಶ' ಎಂದು ಹೇಳುತ್ತಾರೆ.



ನಮ್ಮ ರಾಜಕಾರಣಿಗಳು ಮಾಡುವ ಹಲಾಲಕೋರತನವನ್ನು ಕಾವ್ಯಾನಂದರು 'ಬರೇ ಹೆಚ್ಚ ಮಾಡೀವಾ; ಕಡಿಮೆ ಮಾಡಿಲ್ವಾ?' ಎಂಬ ಪದ್ಯದಲ್ಲಿ ತುಂಬ ವ್ಯಂಗ್ಯವಾಗಿ ಚಿತ್ರಿಸಿದ್ದಾರೆ. ಜನ ಸಾಮಾನ್ಯರು, ಯಾವಾಗಲೂ ಈ ರಾಜಕಾರಣಿಗಳ ಕುರಿತು ಎಲ್ಲ ಬೆಲೆಗಳನ್ನು ಹೆಚ್ಚ ಮಾಡಿದರು. ಕಾಳಿನ ದರ, ದಿನಸಿ ಬೆಲೆ, ನೀರಿನ ದರ, ಬಸ್ಸಿನ ದರ, ವಿದ್ಯುತ್ ದರ ಹೆಚ್ಚು ಮಾಡಿದರು. ಸಾಲದ ಹೊರೆ, ನಿರಕ್ಷರತೆ, ನಿರುದ್ಯೋಗ, ಲಂಚ, ಕಲಬೆರಕೆ, ಕಪ್ಪುಹಣ ಹೆಚ್ಚು ಮಾಡಿದಿರಿ, ಜಾತಿಯ ದಂಗೆ, ಗೋಲಿಬಾರು ಹೆಚ್ಚು ಮಾಡಿದಿರಿ ಎಂದು ಆರೋಪಿಸುತ್ತಾರೆ. ಅದಕ್ಕೆ ಹೊಣೆಗೇಡಿ, ಭ್ರಷ್ಟ ರಾಜಕಾರಣಿ ನೀಡುವ ಉತ್ತರ ಕೇಳಿ ನೀವು ನಿಜಕ್ಕೂ ಸೋಜಿಗಗೊಳುವಿರಿ.

ದರಗಳನ್ನು ಹೆಚ್ಚು ಮಾಡಿದ್ರಿ
ಇನ್ನೂ ಏನೇನೋ ಹೆಚ್ಚು ಮಾಡಿದ್ರಿ ಅಂತಾ
ಯಾಕ ಹೊಡಕೋತೀರಿ ಬಾಯಿ ಬಾಯಿ?
ನಾವು ಬರೇ ಹೆಚ್ಚ ಮಾಡೀವಾ
ಏನೂ ಕಡಿಮೆ ಮಾಡಿಲ್ಲಾ?
ಇದಕ ಅನೋದು
ಜನರಿಗೆ ಸ್ಮರಣಶಕ್ತಿ ಕಡಿಮೆ ಅಂತಾ
ತುಸು ನೆನಪಿಸಿಕೊಳ್ಳಿ
ನಾವು ಬಂದ ಮೇಲೆ
ರೂಪಾಯಿ ಬೆಲೆ ಕಡಿಮೆ ಮಾಡಿಲ್ಲಾ?
ಮನಸ್ಸೇರ ಕಿಮ್ಮತ್ತು ಕಡಿಮೆ ಮಾಡಿಲ್ಲಾ?
ಗ್ರಾಮಾರಣ್ಯ ಭೀಮಾರಣ್ಯ
ಎಲ್ಲಾ ಅರಣ್ಯ ಕಡಿಮೆ ಮಾಡಿಲ್ಲಾ?
ಮಳೆ ಬೆಳೆ ಕಡಿಮೆ ಮಾಡಿಲ್ಲಾ
ಕರ್ತವ್ಯಬುದ್ಧಿ, ಸೇವಾಬುದ್ಧಿ ಕಡಿಮೆ ಮಾಡಿಲ್ಲಾ,
ಇನ್ನೇನು ಕಡಿಮೆ ಮಾಡಬೇಕ್ರೋ
ನಮ್ಮಲ್ಲಿ ನಿಮ್ಮ ವಿಶ್ವಾಸನ
ಕಡಿಮೆ ಮಾಡಿಲ್ವಾ

ಭಾರತದ ಜನಪ್ರತಿನಿಧಿಗಳ ಮನಸ್ಥಿತಿಯನ್ನು ತುಂಬ ಹತ್ತಿರದಿಂದ ಕಂಡ ಕಾವ್ಯಾನಂದರಿಗೆ ಇಂಥ ಕವನಗಳನ್ನು ಬರೆಯುವುದು ಸಹಜವೆನಿಸಿದೆ. 'ಎಂಥ ಭಾರತವ ಬಿಟ್ಟು ಹೋಗುವಿರಿ?' ಎಂಬ ಮತ್ತೊಂದು ಕವನದಲ್ಲಿಯೂ ಕವಿ ತಮ್ಮ ಪರಿತಾಪವನ್ನು ಹೀಗೆ ತೋಡಿಕೊಂಡಿದ್ದಾರೆ:

ಎಂಥ ಭಾರತವ ಬಿಟ್ಟು ಹೋಗುವಿರಿ
ನಮ್ಮ ನಾಯಕರೆ ಹೇಳಿ?
ನಿಮ್ಮ ಎದುರಿಗೇ ನಿತ್ಯ ನಡೆಯುತಿದೆ
ನಮ್ಮ ಆಸೆಗಳ ಹೋಳಿ!
ಬದುಕು ಎಂಬುದೇ ಬೇಡವೆನಿಸುತಿದೆ
ಬೆಲೆಗಳೇರಿಕೆಯಲಿ

ಕಾಳ ಸಂತೆಗಳ, ಕಪ್ಪು ಹಣದ ಅತಿ
ಕರದ ಹೇರಿಕೆಯಲಿ

ನಮ್ಮ ರಾಜಕಾರಣಿಗಳು ಈ ದೇಶವನ್ನು ಲೂಟಿ ಮಾಡುತ್ತಿರುವ ನೈಜ ಚಿತ್ರಣವನ್ನು ಕಾವ್ಯಾನಂದರು ಇಲ್ಲಿ ವಿವರಿಸಿದ್ದಾರೆ.

೧೯೮೦ರಲ್ಲಿ ಡಾ. ಫ.ಗು.ಹಳಕಟ್ಟಿಯವರ ಜನ್ಮಶತಮಾನೋತ್ಸವ ಜರುಗಿತು. ಆ ಸಂದರ್ಭದಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನದವರು 'ಮಣಿಹ' ಎಂಬ ಸ್ಮರಣ ಗ್ರಂಥ ಪ್ರಕಟಿಸಿದರು. ಈ ಸಂಪುಟಕ್ಕೆ ಹಳಕಟ್ಟಿಯವರನ್ನು ಕುರಿತು ಕಾವ್ಯಾನಂದರು ಬರೆದ 'ಕರುನಾಡ ಕಾರಣಿಕ' ಕವನ ಇಲ್ಲಿ ಸ್ಥಾನ ಪಡೆದಿದೆ. ಹಳಕಟ್ಟಿಯವರ ಬಹುಮುಖ ವ್ಯಕ್ತಿತ್ವವನ್ನು ಅರ್ಥಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ–

ಹಗಲೆಲ್ಲ ಹುಟ್ಟುವರೆ
ಹಳಕಟ್ಟಿಯಂಥವರು
ಶತಕ ಸುಕೃತದ ಸತ್ವ
ತೊಟ್ಟು ನಿಂತವರು.
ಈ ನಾಡ ಭಾಗ್ಯತರು
ಬಿಟ್ಟಮೃತ ಫಲವೊಂದು
ಸವಿದರೂ ಸವೆಯದಿದೆ
ಕೋಟಿ ಶುಕ ಬಂದು
ಶರಣ ಕುಲದೀಪಕನು
ಜ್ಞಾನ–ದಾಸೋಹಿ
ಕರುನಾಡ ಕಾರಣಿಕ
ಕೀರ್ತಿ ನಿರ್ಮೋಹಿ

ಡಾ. ಹಳಕಟ್ಟಿಯವರು ನಾಡಿನ ಏಳ್ಗೆಗಾಗಿ ಕನ್ನಡದ ಮಂತ್ರವನ್ನು ಜಪಿಸಿದರು. ಶಿಕ್ಷಣ–ಸಾಹಿತ್ಯ–ಸಹಕಾರ ಕ್ಷೇತ್ರದಲ್ಲಿ ಅನನ್ಯವಾದ ಕಾರ್ಯ ಮಾಡಿದರು. ಬರಗಾಲದ ನಾಡೆಂದು ಖ್ಯಾತವಾದ ವಿಜಯಪುರದ ದುರ್ಭಿಕ್ಷವನ್ನು ಹೋಗಲಾಡಿಸಿದ ಧೀಮಂತ ವ್ಯಕ್ತಿ ಡಾ. ಹಳಕಟ್ಟಿಯವರು ಶೋಧನೆ–ಬೋಧನೆ–ಸಾಧನೆಯ ಮೂಲಕ ಕರುನಾಡ ಕಾರಣಿಕರಾದರೆಂದು ಕಾವ್ಯಾನಂದರು ಹೃದಯಂಗಮವಾಗಿ ಚಿತ್ರಿಸಿದ್ದಾರೆ.

'ಸುದ್ದಿ ಬಂದಿದೆ!' ಎಂಬ ಕವನ ವರ್ತಮಾನ ಪತ್ರಿಕೆಗಳಲ್ಲಿ ಬಂದ ಒಂದು ಸುದ್ದಿಯನ್ನು ಗಮನಿಸಿ ಬರೆದ ಕವಿತೆಯಾಗಿದೆ. 'ಮಲೆನಾಡಿನ ಮಡಿಲಿನಲ್ಲಿಯೇ ಶುವ ಸುಡಲು ಸೌದೆಯಿಲ್ಲ' ಎಂಬ ಸುದ್ದಿಯನ್ನು ಓದಿ, ನಮ್ಮ ಜನರು ಕಾಡು ಕಡಿದು ನಾಡನ್ನು ಮಾಡುವ ಬರದಲ್ಲಿ ಮಾಡುತ್ತಿರುವ ಪರಿಸರ ನಾಶ ಘೋರವಾಗಿದೆ ಎನ್ನುತ್ತಾರೆ. ಹಿಮಾಲಯದ ಮೈಯಿಂದಲೂ ವೃಕ್ಷ ರೋಮಗಳ ಬೋಳಿಸುತ್ತಿರು ವರಂತೆ, ವಿಂಧ್ಯಾದ್ರಿಯ ನೆತ್ತಿ ಬೊಕ್ಕವಾಗಿದೆಯಂತೆ ಎನ್ನುತ್ತ ದ್ರೌಪದಿಯ ವಸ್ತ್ರಾಪ ಹರಣವಾಗುವಾಗ ಕೃಷ್ಣನಾದರೂ ಇದ್ದ, ಈಗ ಪ್ರಕೃತಿ ಮಾತೆಯ ಹರಣ ವಾಗುತ್ತಿರುವಾಗ ಯಾರಿದ್ದಾರೆ? ಎಂದು ಹಳುತ್ತ ಸುಂದರಲಾಲ ಬಹುಗುಣರಂಥ ಹಿರಿಯ ಪರಿಸರವಾದಿಗಳು 'ಚಿಪ್ಕೊ'



'ಅಪ್ಕೊ' ಚಳವಳಿಗಳ ಮೂಲಕ ಮಾಡುತ್ತಿರುವ ಪರಿಸರ ರಕ್ಷಣೆ ಅನನ್ಯವೆಂದು ಕವಿ ಭಾವಿಸುತ್ತಾರೆ.

೧೧

'ಮರುಳಸಿದ್ಧನ ಕಂತೆ' ಕಾವ್ಯಾನಂದರ ಒಂದು ಅನನ್ಯ ಪ್ರಯೋಗಕೃತಿ. ಚೌಪದಿಗಳಲ್ಲಿ ಮೂಡಿರುವ ಈ ಪದ್ಯಗಳು ಜೀವನ ಮೌಲ್ಯಗಳನ್ನು ಪ್ರತಿಪಾದಿಸುವ ನೀತಿ ಸಂಹಿತೆಗಳಾಗಿವೆ. ಕನ್ನಡ ಸಾಹಿತ್ಯದಲ್ಲಿ ಡಿ.ವಿ.ಜಿ ಅವರ ಮಂಕುತಿಮ್ಮನ ಕಗ್ಗ ಸರ್ವ ಜನಾದರಣೀಯ ಕೃತಿಯಾಗಿದೆ. ನಾಲ್ಕು ಸಾಲಿನ ಪದ್ಯದಲ್ಲಿ ಅವರು ಪ್ರತಿಪಾದಿಸಿದ ಮೌಲ್ಯಗಳು ಸಾರ್ವಕಾಲಿಕವೆನಿಸಿವೆ. ಡಿ.ವಿ.ಜಿ. ಅವರ ಪ್ರಭಾವ ಮತ್ತು ಪ್ರೇರಣೆ ಕಾರಣವಾಗಿ ಪಿ. ಬಸವಣ್ಣನವರು (ಕುಮಾರ ನಿಜಗುಣರು) ಬೋಳಬಸವನ ಬೊಂತೆ ಎಂಬ ಸಂಕಲನವನ್ನು ಪ್ರಕಟಿಸಿದರು. ಇದೇ ಕಾರಣದಿಂದ ಕಾವ್ಯಾನಂದರು 'ಮರುಳಸಿದ್ಧನ ಕಂತೆ'ಯನ್ನು ರಚಿಸಿದರು. ಇತ್ತೀಚೆಗೆ ಮರೆಗುದ್ದಿ ನಿರುಪಾಧೀಶ್ವರ ಸ್ವಾಮಿಗಳು 'ಅಡವಿಸಿದ್ಧನ ಅಂಚೆ' ಬರೆದಿದ್ದಾರೆ. ಕೆ.ಶಿ. ಶಿವಪ್ಪನವರು 'ಮುದ್ದುರಾಮನ ಮನಸ್ಸು' ಮತ್ತು 'ಮುದ್ದುರಾಮನ ಬೆಳಕು' ಎಂಬ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಡಿ.ವಿ.ಜಿಯವರ ಕಗ್ಗ ಮತ್ತು ಮುದ್ದುರಾಮನ ಮನಸ್ಸು ನಾಡಿನ ಜನರಿಗೆ ಚಿರಪರಿಚಿತವಾಗಿವೆ. ಡಿ.ವಿ.ಜಿಯವರ ಕಗ್ಗ ಸಂಸ್ಕೃತ ಭೂಯಿಷ್ಠ ಪದಗಳಿಂದ ರಚನೆಗೊಂಡಿದ್ದರೂ, ಅದು ವಿಧಿವಾದವನ್ನು, ಕರ್ಮ ಮತ್ತು ಪುನರ್‌ಜನ್ಮ ಸಿದ್ಧಾಂತವನ್ನು ಪ್ರತಿಪಾದಿಸುವುದರಿಂದ ಭಾವುಕ ಜನರಿಗೆ ಅದು ಜನಪ್ರಿಯ ಕೃತಿಯಾಗಿದೆ. ಶರಣರು ಪ್ರತಿಪಾದಿಸಿದ ಶುದ್ಧ ವೈಚಾರಿಕ ಚಿಂತನೆಯ ತಳಹದಿಯ ಮೇಲೆ ರೂಪಗೊಂಡ ಕಾವ್ಯಾನಂದರ 'ಮರುಳಸಿದ್ಧನ ಕಂತೆ' ಪ್ರಾಯಶಃ ಪ್ರಚಾರದ ಕೊರತೆ ಕಾರಣವಾಗಿ ಅದು ಜನಾದರಣೀಯಗೊಂಡಿಲ್ಲ. ಕಗ್ಗದಂತೆ ಇಲ್ಲಿ ಕ್ಲಿಷ್ಟವಾದ ಪದಗಳ ಬಡಿದಾಟವಿಲ್ಲ. ಸರಳ ಶಬ್ದಗಳಿಂದ ಹೇಳಬೇಕಾದುದನ್ನು ಹೇಳುವ ಒಂದು ಅಪರೂಪದ ಕಲೆ ಕಾವ್ಯಾನಂದರಿಗೆ ದೈವದತ್ತವಾಗಿ ಒಲಿದು ಬಂದಿದೆ.

'ಮಂಕುತಿಮ್ಮ'ನಿಗೊಬ್ಬ ತಮ್ಮನನು ತಂದಿರುವೆ;
ಶಂಕೆ ಬೇಡಿವ ಸ್ಪರ್ಧಿಯಲ್ಲವನಿಗೆ
ಸಂಕಲ್ಪವಿವಹಿಲ್ಲ ವಿಸ್ತರದ ದರ್ಶನದ
ಡೊಂಕುಗಳೊ? ಸಾಕಷ್ಟು! ಮರುಳಸಿದ್ಧ

ಮಂಕುತಿಮ್ಮನ ಕಗ್ಗದ ಪ್ರೇರಣೆಯಿಂದಲೇ ಈ ಕಾವ್ಯವನ್ನು ಹೊಸೆದೆ ಎಂದು ವಿನಮ್ರಭಾವದಿಂದ ಕಾವ್ಯಾನಂದರು ಹೇಳುತ್ತಾರೆ.

'ಮರುಳಸಿದ್ಧ'ನು ಯಾರು? 'ಅರಿತಿಹೆನು' ಎನ್ನುವನೆ!
ಹುರುಳೆಷ್ಟೊ ಅವನೊರೆದ ಈ ಕಂತೆಯಲ್ಲಿ!
ದೊರೆಯ ಕಿಂಚಿತ್ತಿಲ್ಲಿ ಸವಿ ಬೆಳಕು ಸೊಗಸುಗಳು,
ಹರಸಿರವನನು ನೀವು–ಮರುಳಸಿದ್ಧ

ನಾನು ಕವಿಯಲ್ಲ, ವಿಜ್ಞಾನಿಯಲ್ಲ, ಬರಿ ತಾರಾಡಿ ಎಂದು ಡಿ.ವಿ.ಜಿ. ಹೇಳಿಕೊಂಡಂತೆ, ಕಾವ್ಯಾನಂದರು ನಾನು ಬಹಳ ಬಲ್ಲಿದನಲ್ಲ ಎನ್ನುತ್ತಾರೆ.

ಹೊಗಳಿಕೆಯ ಉನ್ಮಾದದಲ್ಲಿ ತೇಲಬಾರದೆಂಬ ಪ್ರಜ್ಞೆ ಕವಿಗಿದೆ. ತಮ್ಮನ್ನು ಸುವಿವೇಕಿ, ದಾರ್ಶನಿಕ, ಕಲೆಗಾರ, ರಸಋಷಿ ಎಂದು ಕರೆಯದೆ, ಕೇವಲ ಕವಿಯೆಂದರೆ ಸಾಕು ಎನ್ನುತ್ತಾರೆ. ಸಕ್ಕರೆ ಖಡ್ಗವೆಂದು ಮುಕ್ಕದಿರುವುದೆ ಇರುವೆ? ನೆಕ್ಕುವುದೆ ಪ್ಲಾಸ್ಟಿಕ್ ಪುಷ್ಪಗಳ ದುಂಬಿ, ಲೆಕ್ಕಿಪುದೆ ಕವಿ ಕೃತಿಯ ಆಕೃತಿಯ, ಗಾತ್ರವನು? ಸಿಕ್ಕರಾಯಿತು ಸವಿಯು' ಎಂದು ಮತ್ತೊಂದು ಪದ್ಯದಲ್ಲಿ ಹೇಳುತಾರೆ. ಸಕ್ಕರೆಯಿಂದ ಮಾಡಿದ ಖಡ್ಗವೆಂದು ಇರುವೆ ಬರುವುದು ಬಿಡುವುದಿಲ್ಲ. ಹಾಗೆಯೇ ಪ್ಲಾಸ್ಟಿಕ್‌ನಿಂದ ನಿರ್ಮಾಣ ಮಾಡಿದ ಪುಷ್ಪಗಳನ್ನು ದುಂಬಿಗಳು ಮೂಸುವುದಿಲ್ಲ. ಹಾಗೇ ಕವಿಯ ರೂಪ–ಆತನ ಕವನದ ಗಾತ್ರಗಳನ್ನು ನೋಡಿ ಅಳೆಯದೆ, ಅದರಲ್ಲಿರುವ ರಸದ ಸವಿಯನ್ನು ಸವಿಯಿರಿ ಎನ್ನುತ್ತಾರೆ.

**ಜೀವನದ ಪ್ರತಿಬಿಂಬ, ಜೀವನದ ಗತಿಬಿಂಬ**
**ಯಾವುದೇ ಆಗಿರಲಿ ಸಾಹಿತ್ಯವು**
**ಜೀವನಕೆ ಹೊರತಾಗಿ ಜೀವ ತಳೆವುದೆ ಹೇಳು?**
**ಜೀವನದ ಸಾರವದು–ಮರುಳಸಿದ್ಧ**

ಸಾಹಿತ್ಯ ಜೀವನದ ಗತಿಬಿಂಬ ಎಂದು ಜಿ.ಎಸ್.ಎಸ್. ಕರೆದರು. ಅದಕ್ಕೆ ಕಾವ್ಯಾನಂದರು ಅದು ಪ್ರತಿಬಿಂಬವೂ ಹೌದು, ಗತಿಬಿಂಬವೂ ಹೌದು ಒಟ್ಟಾರೆ ಜೀವನದ ಸಾರ ಎನ್ನುತ್ತಾರೆ.

ಕಾವ್ಯಾನಂದರು ತಮ್ಮ ಬರವಣಿಗೆಯು ಹೇಗೆ ಇರಬೇಕೆಂದು ತುಂಬ ಅರ್ಥಪೂರ್ಣವಾಗಿ ಹೇಳುತ್ತಾರೆ. 'ಬಾಲಕರು ನಲಿವಂತೆ ಬರೆವುದನು ಕಲಿಸಯ್ಯ', 'ಜನಪದರು ಕುಣಿವಂತೆ ಬರೆವುದನು ಕಲಿಸಯ್ಯ' ಎಂದು ಮರುಳಸಿದ್ಧನಲ್ಲಿ ವಿನಂತಿಸಿ ಕೊಳ್ಳುತ್ತಾರೆ.

ಸೃಷ್ಟಿಯ ರಚನೆ, ಅದರ ಆಳ–ವಿಸಾರ–ವೈವಿಧ್ಯ–ವೈಚಿತ್ರ್ಯಗಳನ್ನು ಕುರಿತು ದಾರ್ಶನಿಕ ಹಿನ್ನೆಲೆಯಲ್ಲಿ ಅನೇಕ ಚೌಪದಿಗಳನ್ನು ರಚಿಸಿದ್ದಾರೆ.

**ಏನಿದೆಯೊ ಬಾನಾಚೆ, ಆಚೆಗೂ ಆಚೆಯಿದೆ**
**ಜ್ಞಾನಕಾಮೆಯ ಗತಿಯು; ಸ್ಪರ್ಧಿಸುವುದೆಂತು**
**ಆನಂತ್ಯದೊಡನೆಯೆ? ತಿಳಿದಷ್ಟು ತಿಳಿದುಕೋ!**
**ಮೌನವಿದೆ ಆಮೇಲೆ–ಮರುಳಸಿದ್ಧ**

ಉಪನಿಷತ್ತುಗಳಲ್ಲಿ ಅರುಹುವ ಸೃಷ್ಟಿಯ ಸೊಬಗವನ್ನು, ವೈಚಿತ್ರ್ಯ ವಿಲಾಸವನ್ನು ವಿವರಿಸುವುದು ಕಷ್ಟ ಎಂದು ಹೇಳಲಾಗಿದೆ. ನಿರಂತರ ಅನ್ವೇಷಣೆಯ ನಂತರ ದೊರೆಯುವುದು ಶಾಂತಿಪೂರ್ಣವಾದ 'ಮೌನ'. ಮೌನವೇ ಒಂದು ಯೋಗ. ಅದು ಅನುಭಾವವೊಂದರ ಅಭಿವ್ಯಕ್ತರೂಪ. ಆತ್ಮಶುದ್ಧಿ ಇಲ್ಲದವನಿಗೆ ವಾಕ್ ಸಿದ್ಧಿ ಇಲ್ಲ. ವಾಕ್‌ಸಿದ್ಧಿ ಪಡೆಯಲು ಆತ್ಮನಿಗೆ ಮೌನದ ತೀರ್ಥಸ್ನಾನವಾಗಬೇಕು. ಮೌನದಿಂದ



ಆತ್ಮಶೋಧ, (Self enquiry) ಆತ್ಮ ಸಾಕ್ಷಾತ್ಕಾರ (Self realisation) ಎರಡೂ ಏಕಕಾಲದಲ್ಲಿ ಸಿದ್ಧಿಸುತ್ತವೆ. ಅಂತಹ ಸವ್ಯಸಾಚಿತ್ವವನ್ನು ಸಂಪಾದಿಸಿಕೊಳ್ಳುವ ತುಡಿತ ಕಾವ್ಯಾನಂದರಲ್ಲಿದೆ. ರಮಣ ಮಹರ್ಷಿಗಳು ಮೌನವನ್ನು ವ್ಯಾಖ್ಯಾನಿಸುತ್ತಾ 'ಮೌನ ವೆಂಬುದು ನಿರಂತರ ವಾಚಾಳಿತನ, (Silence is unceasing eloquence) ಅದು ಸಂತತ ಮಾತುಗಾರಿಕೆ (Constant speech) ಅದು ಅತ್ಯಂತ ಪ್ರಭಾವಶಾಲಿ ಭಾಷೆ (The best and effective language) ಎನ್ನುತ್ತಿದ್ದರು. ಅದು ಅವರ ಸ್ವಾನುಭಾವದ ಮಾತು. ಅಂಥ ಸಿದ್ಧಿವಡೆದ ನುಡಿ ಈ ಮರುಳಸಿದ್ಧನ ಕಂತೆಯಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಮೌನದಲಿ ಕಾಯಕವ ಮಾಡು, ಮೌನದಿ ಮಾಗು, ಮೌನದಲಿ ಧ್ಯಾನಿಸು, ಮೌನದಲಿ ಹಾನಿವೃದ್ಧಿಗಳನ್ನು ಸಮಚಿತ್ತದಿಂದ ಪರಿಭಾವಿಸು ಎಂಬ ಬಯಕೆ ಕವಿಯದು.

ಮನುಷ್ಯ ಕುಶಲತೆಯನ್ನು ಬೆಳೆಸಿಕೊಳ್ಳಬೇಕು. 'ಕೆಸರು ಬಂದರೆ ದಾಟಿ ಹೋಗುವುದು ಜಾಣತನ: ಕೆಸರಾಟಕಿಳಿಯುವುದು ಹುಂಬತನವು; ಕೆಸರಿನಲ್ಲಿಯೆ ಕಮಲ ಬೆಳೆಯುವುದು ಶರಣತನ, ಕುಶಲತನವಿದ ಗಳಿಸು–ಮರುಳಸಿದ್ಧ' ಕೆಸರಿನಲ್ಲಿ ಕಮಲಪತ್ರ ಹುಟ್ಟಿದಂತೆ ಪದ್ಮಪತ್ರದ ಜಲಬಿಂದುವಿನಂತೆ ನಮ್ಮ ಬದುಕು ಸಾಗಬೇಕೆಂದು ಕವಿ ಬಯಸುತ್ತಾನೆ.

**ಜೀವನವು ಜೋಕಾಲಿ, ನೋವೆ ಹಿಂಜೀಕೆಂಬೆ**
**ಭಾವಿಸಲು ಮುಂಜೀಕು ನಲವು–ನಗೆಯು**
**ಯಾವುದು ಬಿಡುವಿಯೀ ಎರಡು ಜೀಕುಗಳಲ್ಲಿ?**
**ಆ ವಿಚಾರವನೆ ಬಿಡು–ಮರುಳಸಿದ್ಧ**

ಜೀವನವೆಂಬುದು ಜೋಕಾಲಿಯಂತೆ. ಕಷ್ಟ ಸುಖಗಳು ಒಮ್ಮೆ ಏರು ಒಮ್ಮೆ ಇಳುವು ಕಾಣುತ್ತವೆ. ಏರಿಳಿತಗಳು ಎರಡೂ ಬೇಕು. ಆಗಲೇ ಜೀವನದ ಅರ್ಥ ನಮಗಾಗುವುದು.

ಬದುಕು ನಮನ್ನು ಅರಳಿಸಿದೆ, ನರಳಿಸಿದೆ, ಕೆರಳಿಸಿದೆ, ಆದರಿಸಿದೆ, ಮೃದುಗೊಳಿಸಿದೆ, ಹದಗೊಳಿಸಿದೆ ಆದ್ದರಿಂದ ಬದುಕಿಗಿಲ್ಲ ವಿಕಲ್ಪ ಎಂದು ಮತ್ತೊಂದು ಪದ್ಯದಲ್ಲಿ ತಿಳಿಸಿದ್ದಾರೆ.

ರಾಷ್ಟ್ರಕವಿ ಕುವೆಂಪು ಅವರು ನೂರುಮತದ ಹೊಟ್ಟು ತೂರಿ, ವಿಶ್ವಮಾನವ ಸಂದೇಶವನ್ನು ಸಾರಿದ್ದರು. ಅಂಥದೇ ಒಂದು ಅಪರೂಪದ ಸಂದೇಶವನ್ನು ಕಾವ್ಯಾನಂದರು ಕೆಲವು ಪದ್ಯಗಳಲ್ಲಿ ನೀಡುತ್ತಾರೆ–

**ಯಾವ ಮತವೂ ಕೊನೆಯ ಮತವಲ್ಲ, ಅಂತೆಯೇ**
**ಯಾವ ಗ್ರಂಥವು ಕೊನೆಯ ಗ್ರಂಥವಲ್ಲ!**
**ಜೀವನಿಗೆ ಹೊಸಮತಿಯ ದೇವ ಕೊಡುತಿರುವನಕ**
**ಸಾವಿಲ್ಲ ಹೊಸ ಕೃತಿಗೆ–ಮರುಳಸಿದ್ಧ**
**ಒಂದು ಮತದವರೆಲ್ಲ ಹಿತವಾಗಿ ಬಾಳುವರೆ?**
**ತಂದಿಕ್ಕದೇ ಸ್ವಾರ್ಥ ಸಂಘರ್ಷಗಳನು?**
**ತಂದೆಯೊಬ್ಬನೆ, ನೂರು ಮತಗಳೇಕೆ? ಸಾಕು**
**ಒಂದೆ ಮತ, ಮನುಜಮತ–ಮರುಳಸಿದ್ಧ**

ಮನುಷ್ಯನ ಮತಿಗಳೆಷ್ಟೋ ಅಷ್ಟು ಮತಗಳಿರಬಹುದು. ಕುವೆಂಪು ಎಷ್ಟು ಕೋಟಿ ಜನರಿದ್ದಾರೋ ಅಷ್ಟು ಮತಧರ್ಮಗಳಿರಲಿ. ಅವರವರ ಧರ್ಮಕ್ಕೆ ಅವರೇ ಸ್ಥಾಪಕರಾಗಿರಲಿ, ಯಾರನ್ನೂ ಅನುಕರಿಸುವುದು ಬೇಡ, ಯಾರಿಗೂ ಅನುಯಾಯಿ ಆಗುವುದು ಬೇಡ ಎಂದಿದ್ದರು. ಬಲವಂತದಿಂದ ಯಾವುದೇ ಮತ-ಪಂಥ ಸ್ವೀಕರಿಸುವುದರಿಂದ ಮನುಜ ಮತ ವಿಶ್ವಪಥವಾಗಲಾರದು ಎಂಬುದು ಕಾವ್ಯಾನಂದರ ಅನಿಸಿಕೆ.

ಮಾನವನೆ ಮಾನವನ ಭವಿತವ್ಯ, ಗಂತವ್ಯ;
ಮಾನವೀಯತೆಯೊಂದೆ ನಿಜ ಧರ್ಮವು
ಮಾನವರು ಕೆಟ್ಟರೂ ಮಾನವತೆ ಉಳಿಯುವುದು
ಮಾನವರ ಮೇಲೆತ್ತೆ-ಮರುಳಸಿದ್ಧ

ಯಾವ ಧರ್ಮವೂ ಮಾನವರನ್ನು ಉದ್ಧರಿಸಲಾರವು. ಮಾನವೀಯತೆ ಒಂದೇ ನಿಜವಾದ ಧರ್ಮ ಎನ್ನುವುದು ಅವರ ಅಭಿಮತ. ಅಂತೆಯೆ ಅವರು 'ಮೊದಲು ಮಾನವನಾಗು' ಎಂದು ಕರೆಕೊಟ್ಟಿರುವುದು.

'ಧರ್ಮ'ವನ್ನು ಕುರಿತು ಚಿಂತನೆ ಮಾಡುವ ಕಾವ್ಯಾನಂದರು– ಕೈಗಿತ್ತ ಕಾಯಕವನ್ನು ನಿಷ್ಠೆಯಿಂದ ಮಾಡಿ, ದೊರೆತುದನ್ನು ಹಂಚಿತಿನ್ನುವುದು ನನ್ನ ನಿಜ ಧರ್ಮವಾಗಿದೆ ಎನ್ನುತ್ತಾರೆ. ಮತ್ತೊಂದು ಕಡೆ, ದೇಶ ಸೇವೆಯೇ ಧರ್ಮ, ಸಂವಿಧಾನವೇ ಶಾಸ್ತ್ರ, ಶೋಷಣೆಯ ನಾಶವೇ ಈಶ ಪೂಜೆ, ವೈಷಮ್ಯವಿಲ್ಲದ ಸರ್ವಸಮತೆಯೆ ನೀತಿ, ಸರ್ವರಿಗೂ ಲೇಸು ಬಯಸುವುದೇ ಕಾಶಿಯಾಗಿದೆ ಎನ್ನುತ್ತಾರೆ. ಹಂಚಿ ಉಣ್ಣುವುದು ಧರ್ಮ, ಕ್ಷಮಿಸುವುದು ಧರ್ಮ, ಗಾಂಧಿ ಬಸವ-ಬುದ್ಧರಂತೆ ಬದುಕುವುದು ನಿಜಧರ್ಮ, ನಮ್ಮನ್ನು ಕಾಣಲು ಕನ್ನಡಿ ಬೇಕಾಗುವಂತೆ ನಮ್ಮ ನಿಜರೂಪ, ನಜದರಿತ ತೋರಿಸುವುದು ಧರ್ಮ ಎನ್ನುತ್ತಾರೆ. ಹುಳುತಿಂದ ಬೀಜದಿಂದ ಬೆಳೆಯಲಾಗುವುದಿಲ್ಲ, ಕೊಳೆತ ಕಟ್ಟಿಗೆಯಿಂದ ಮೂರ್ತಿ ಕೆತ್ತಲಾಗುವುದಿಲ್ಲ. ಹಾಗೆಯೆ ದುರ್ಗುಣಗಳನ್ನು ತುಂಬಿಕೊಂಡ ಮನುಷ್ಯ ಧರ್ಮದಿಂದ ಬದುಕಲಾರ ಎನ್ನುತ್ತಾರೆ.

ಮನುಷ್ಯನಿಗೆ ಬದುಕಿನಲ್ಲಿ 'ನಂಬಿಕೆ' ಎಂಬ ಮೌಲ್ಯ ಬಹಳ ಆವಶ್ಯಕ. 'ನಂಬರು ನೆಚ್ಚರು ಬರಿದೆ ಕರೆವರು, ನಂಬಲರಿಯರು ಲೋಕದ ಮನುಜರು' ಎಂಬ ಬಸವಣ್ಣನವರ ನುಡಿಯಂತೆ, ಈ ಜಗತ್ತಿನಲ್ಲಿ ಜನರು ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ಜಗತ್ತು ನಡೆಯುವುದೇ ನಂಬಿಕೆಯ ಆಧಾರದಲ್ಲಿ. ಆದರೆ ಇಂದು 'ನಂಬಿಕೆ' ಅಪಮೌಲ್ಯಗೊಳ್ಳುತ್ತಿರುವುದನ್ನು ಕುರಿತು ಕಾವ್ಯಾನಂದರು ಆತಂಕಪಟ್ಟು, ಏನಾದರೂ ನಂಬುವುದನ್ನು ಕಲಿ ಎಂದು ಉಪದೇಶಿಸುತ್ತಾರೆ.

ದೇವನನೆ ನಂಬು, ಜೀವಿತವನೇ ನಂಬು, ಸ
ದ್ಭಾವನೆಯ ನಂಬು, ಸದ್ಗುಣವ ನಂಬು
ಆವುದಾದರೂ ಒಂದು ಆದರ್ಶವನು ನಂಬು
ಜೀವನದ ಸಫಲತೆಗೆ– ಮರುಳಸಿದ್ಧ



'ನಂಬೆ ನಾನೇನನೂ' ಎಂಬುದೂ ನಂಬಿಕೆಯೆ
ನಂಬದೆಯೆ ಏನುವನು ಇರಲಾರೆ ನೀನು
ತುಂಬು ಬಾಳಿಗೆ ಬೇಕು ನಂಬಿಕೆಯ ನೆಮ್ಮದಿಯು
ಇಂಬಿರಲಿ ನಂಬಿಕೆಗೆ – ಮರುಳಸಿದ್ಧ

ನಂಬಿಕೆ ಎಂಬ ಮೌಲ್ಯವನ್ನು ನಾವು ನಂಬಿ ಬದುಕಬೇಕು. ಬದುಕಿನಲ್ಲಿ ಹೇಳುವವರು ಹಲವು ಜನ, ಆದರೆ ನಮ್ಮರಿವಿಗೆ ನಮ್ಮ ನಂಬಿಕೆಗೆ ಬದ್ಧವಾದುದನ್ನು ಸ್ವೀಕರಿಸಿ, ಬದುಕಲು ಕಲಿಯಬೇಕು. ಇಂದು ಒಬ್ಬರಿಗೊಬ್ಬರು ನಂಬದಂಥ ವಾತಾವರಣ ನಿರ್ಮಾಣವಾಗಿ ಬಿಟ್ಟಿದೆ. ನಂಬಿ ಕೆಟ್ಟವರಿದ್ದಾರ, ನಂಬದೆಯೆ ಕೆಟ್ಟವರೂ ಈ ಲೋಕದಲ್ಲಿದ್ದಾರೆ. ಆದ್ದರಿಂದ ಮೊದಲು ತಮ್ಮನ್ನು ತಾವು ನಂಬುವುದನ್ನು ಕಲಿಯಬೇಕೆಂಬ ಬಯಕೆ ಕಾವ್ಯಾನಂದರದು.

'ಮರಣ'ವೇ ಮಹಾನವಮಿ ಎಂದು ಶರಣರು ಹೇಳುತ್ತಾರೆ. ಮರಣವನ್ನು ಮಹಾನವಮಿಯಾಗಿ ಸಂಭ್ರಮಿಸಿದವರು ಶರಣರು. ಕಾವ್ಯಾನಂದರು ಮರಣವನ್ನು ಕುರಿತು ಹದಿನೈದು ಪದ್ಯಗಳನ್ನು ರಚಿಸಿದ್ದಾರೆ. ಸಾವು ಹಗೆಯೆಂದರೆ ಜೀವನ ವ್ಯಥೆ, ಸಾವು ಸುಖವೆಂದರೆ ಬದುಕು ಸೊಗಸು ಎನ್ನುತ್ತಾರೆ.

ಯೌವನವು ಬೇಕೆನಗೆ, ವೃದ್ಧಾಪ್ಯ ಬೇಡನನೆ
ಜೀವನವು ಕೇಳುವುದೆ? ಅನಿವಾರ್ಯವೆರಡೂ!
ಸಾವಿಗೂ ಸನ್ನದ್ಧನಾಗಿಯೇ ಬದುಕಿಲ್ಲಿ
ನೋವಿರಲಿ, ನಲಿವಿರಲಿ–ಮರುಳಸಿದ್ಧ

ಕೇವಲ ಯೌವನವೇ ಇರಲಿ, ವೃದ್ಧಾಪ್ಯ ಬೇಡ ಎಂದರೆ ನಡೆದೀತೆ? ಮುಪ್ಪು ವಯಸ್ಸಾದಂತೆ ಅಡರುವುದೇ. ಅದನ್ನು ತಪ್ಪಿಸಲು ಸಾಧ್ಯವಿಲ್ಲ. ಮುಪ್ಪು ಬಂದ ನಂತರ ಮರಣ ಬರಲೇಬೇಕು! ಆದ್ದರಿಂದ ಮರಣಕ್ಕೂ ಸಿದ್ಧರಾಗಿರಲೇ ಬೇಕು. ಬದುಕಿನಲ್ಲಿ ನೋವು ಮತ್ತು ನಲಿವು ಎರಡೂ ಇದ್ದರೇ ಸ್ವಾರಸ್ಯವೆನ್ನುತ್ತಾರೆ.

'ಸ್ವದೇಶ ಚಿಂತನ' ತಲೆಬರೆಹದಡಿಯಲ್ಲಿ ಅನೇಕ ಚೌಪದಿಗಳನ್ನು ರಚಿಸಿ ರಾಷ್ಟ್ರಪ್ರೇಮ-ದೇಶಭಕ್ತಿಯ ಕುರಿತು ತಮಗಿರುವ ಅನನ್ಯವಾದ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಚೌಕಟ್ಟು ಚಿನ್ನದ್ದು, ಹಳೆಯದೆಂದು ಬೀಸಾಡಬಹುದೆ, ಅದರೊಳಗೆ ಹಳೆಯ ಚಿತ್ರ ತೆಗೆದು, ನಮಗೆ ಬೇಕಾದ ಚಿತ್ರವೊಂದನ್ನು ಹಾಕುವಂತೆ, ಲೋಕೋತ್ತರವಾದ ಭವ್ಯಭಾರತದ ಪ್ರಾಚೀನ ಪರಂಪರೆಯ ಚೌಕಟ್ಟಿಗೆ ವರ್ತಮಾನದ ಸೊಗಸನ್ನು ಸೇರಿಸಿ ಜೋಕೆಯಿಂದ ಉಳಿಸಿಕೋ ಎನ್ನುತ್ತಾರೆ.

ಸ್ವದೇಶ ಚಿಂತನದಲ್ಲಿ ನಮ್ಮ ರಾಜಕಾರಣಿಗಳು, ಅಧಿಕಾರಿ ವರ್ಗದವರು ಮಾಡುತ್ತಿರುವ ದೇಶದ್ರೋಹವನ್ನು ಕುರಿತು ವ್ಯಂಗ್ಯ ವಿಡಂಬನೆಯಿಂದ ಟೀಕಿಸುತ್ತಾರೆ. ಯೋಜನೆಗಳನ್ನು ರೂಪಿಸಿ, ದೇಶದ ಸಂಪತ್ತನ್ನು ಯಾವ ರೀತಿ ದೋಚುತ್ತಾರೆ ಎಂಬುದನ್ನು ಈ ಚೌಪದಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಜಾತಿ ಜಗಳ ಹಚ್ಚಿ, ಕೋಮು

ಸಾಮರಸ್ಯ ಹಾಳು ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಕುರಿತು ಕವಿಗೆ ವಿಷಾದವಿದೆ.

'ತಾಯ್ನಾಡ ಸ್ತವನ' ಎಂಬ ಶೀರ್ಷಿಕೆಯಲ್ಲಿ ಕನ್ನಡ ನಾಡು ನುಡಿ ಕುರಿತಾದ ಅಪರೂಪದ ಚಿಂತನೆಯ ನುಡಿಗಳನ್ನು ಕೊಟ್ಟಿದ್ದಾರೆ.

ಕನ್ನಡಿಗ ಮರೆತೆಯಾ ನಿನ್ನ ಭಾಗ್ಯವ ನೀನು?
ಹೊನ್ನು ರೇಷ್ಮೆಯ ದಂತ ಚಂದನದ ನಾಡು
ಇನ್ನಾರಿಗಿದೆಯಣ್ಣ? ಇದ ನೆನೆದು ಕನ್ನಡದಿ
ಉನ್ನತಿಯ ಗಳಿಸಿಕೋ–ಮರುಳಸಿದ್ಧ

ಕನ್ನಡ ನಾಡಿನಲ್ಲಿರುವ ಕಬ್ಬಿಣದ ಅದಿರು, ರೇಷ್ಮೆಯ ಬೆಳೆ, ಆನೆಯ ದಂತಗಳು, ಚಂದನದ ಗಿಡಗಳ ಸಮೃದ್ಧತೆಯಿದೆ. ಇಂಥ ಅಮೂಲ್ಯ ವಸ್ತುಗಳು ಇರುವ ಮತ್ತೊಂದು ರಾಜ್ಯ ಇಲ್ಲ. ಆದ್ದರಿಂದ ಇಲ್ಲಿಯೇ ನಿನ್ನ ಉನ್ನತಿ ಗಳಿಸಿಕೋ ಎಂದು ಆಶಿಸುತ್ತಾರೆ.

ಸಿರಿಗನ್ನಡಂ ಗೆಲ್ಗೆ, ಕರುನಾಡು ನಿಡು ಬಾಳ್ಗೆ
ಸಿರಿನಾಡಿನಿದ ಸದಾ ಕನ್ನಡಿಗರಾಳ್ಗೆ!
ಗುರಿದೋರಿ ಲೋಕಕ್ಕೆ ಬೆಳಕೀವ ಗರಿಮೆಯು
ಕರುನಾಡಿಗೊದಗಲಿ–ಮರುಳಸಿದ್ಧ

ಎಂದು ಮನದುಂಬಿ ಆಶಿಸುತ್ತಾರೆ.

'ಆತ್ಮನಿವೇದನ' ಎಂಬ ಶೀರ್ಷಿಕೆಯಲ್ಲಿ ಇನ್ನೂ ಮೌಲಿಕವಾದ ರಚನೆಗಳನ್ನು ನೀಡಿದ್ದಾರೆ. ಕೊನೆಯಲ್ಲಿ ಸ್ವಸ್ತಿವಾಚನವಿದೆ. ಅಲ್ಲಿಯ ನಾಲ್ಕು ಪದ್ಯಗಳು ಹೀಗಿವೆ:

ಬರಲಿ ಬಡವರ ಯುಗವು; ಬರಲಿ ದುಡಿವಗೆ ಸೊಗವು
ಮುರಿದು ಬೀಳಲಿ ಅವರ ಹೆಗಲ ನೊಗವು!
ಕರಿಕಾಗಿ ಹೋಗಲಿ ಮೇಲು ಕೀಳುಗಳೆಲ್ಲ!
ಹರಡಲಿ ಸಮಾನತೆಯು–ಮರುಳಸಿದ್ಧ
ಹೃದಯದಲಿ ಒಲವಿರಲಿ, ವದನದಲಿ ಚೆಲುವಿರಲಿ
ಸದನದಲಿ ಸುಖ ಶಾಂತಿ ಸೌಹಾರ್ದವಿರಲಿ
ಸದಯತೆಯ ಸ್ವರ್ಗದಲಿ ಸುರರಾಗಿ ಬಾಳಲಿ
ಸದುಗುಣದ ಸಜ್ಜನರು–ಮರುಳಸಿದ್ಧ
ಮತಿ ಮತವನಾಳಲಿ, ಹಿತ ಕೃತಿಯನಾಳಲಿ
ಖತವಾಳಲೆಲ್ಲವನು; ಪ್ರೀತಿ ನೀತಿ
ಜೊತೆಯಾಗಿ ಆಳಲೀ ಬದುಕನ್ನು; ಶಿವರತಿಯೆ
ವ್ರತವಾಗಲೆಲ್ಲರಿಗೆ ಮರುಳಸಿದ್ಧ
ಲೀನವಾಗಲಿ ಎಲ್ಲ ಮತ ಪಥದ ನದಿಗಳೂ
ಮಾನವ್ಯಶರಧಿಯಲಿ ಪ್ರೇಮಚಂದ್ರ
ಜಾನತ್ತ ಸೆಳೆಯುತಿರಲದನು; ಸಿಂಪಿಗೆ ಸ್ವಾತಿ
ದಾನಗೈಯುತ್ತಿರಲಿ–ಮರುಳಸಿದ್ಧ

ಇಂಥ ಉದಾತ್ತ ಸಂದೇಶವನ್ನು ಸಾರುವ ಮರುಳಸಿದ್ಧನ ಕಂತೆಯನ್ನು ಅವಲೋಕಿಸುತ್ತಾ ಹೋದಂತೆ ಮಾನವ ಜೀವನದ ಸಮಗ್ರ ದರ್ಶನವೇ ಆಗುತ್ತದೆ.



ಜೀವನ ಸೌಂದರ್ಯ ನಮ್ಮ ಮನಸ್ಸನ್ನು ಮುದಗೊಳಿಸುತ್ತದೆ. ಇಲ್ಲಿ ಸರ್ವಧರ್ಮದ ದರ್ಶನವಾಗುತ್ತದೆ. ಗೀತೆ–ಉಪನಿಷತ್ತು–ವೇದ–ಬೌದ್ಧ–ಸಿದ್ಧ–ನಾಥ ಮೊದಲಾದ ಪಂಥಗಳ ಚಿಂತನೆಗಳು ಇಲ್ಲಿ ಎಡೆಪಡೆದಿವೆ. ಬೆಳಕು ಜಗತ್ತಿನ ಯಾವ ಮೂಲೆಯಿಂದರೂ ಬಂದರು ಸೈ ಎನ್ನುವ ಮನೋಧರ್ಮ ಕಾವ್ಯಾನಂದರದು. ಅಂತೆಯೇ ಅವರ ಈ ಪದ್ಯಗಳಲ್ಲಿ ಖಲೀಲ ಗಿಬ್ರಾನ್, ತಿರುವಳ್ಳರ್, ಸರ್ವಜ್ಞ–ವಚನಕಾರರು, ಸೂಫಿಗಳು, ಸಂತರು ಮಹಂತರು–ದಾರ್ಶನಿಕರು, ಕವಿಗಳು–ವಿಜ್ಞಾನಿಗಳು–ತತ್ವಜ್ಞಾನಿಗಳು ಎಲ್ಲರೂ ಸಮಾವೇಶಗೊಂಡಿದ್ದಾರೆ. ತಮ್ಮ ಆಳವಾದ ಅನುಭಾವದ ಅಧ್ಯಯನದಿಂದ ದಾರ್ಶನಿಕ ಪ್ರತಿಭೆಯಿಂದ ಇಂದಿನ ಯುಗಧರ್ಮಕ್ಕೆ ಅನ್ವಯವಾಗುವ ಮೌಲ್ಯಗಳನ್ನು ಪ್ರಸ್ತುತ ಕೃತಿಯಲ್ಲಿ ನಿರೂಪಿಸಿದ್ದಾರೆ.

'ಬದುಕಿನ ವಾಸ್ತವ ಚಿತ್ರವನ್ನು ನಮ್ಮ ಕಣ್ಣು ಮುಂದಿರಿಸಿ, ಪರಿಚಿತ ದೃಷ್ಟಾಂತಗಳೊಂದಿಗೆ ತತ್ವಮಥನ ಮಾಡುತ್ತ ವಿವೇಚಿಸುವುದು, ನಮ್ಮನ್ನು ಆಲೋಚಿಸುವಂತೆ ಮಾಡುವುದು. ಮನುಷ್ಯನ ಇತಿಮಿತಿಗಳನ್ನು ಗುರುತಿಸಿ 'ಬದುಕು' ಸ್ವೀಕಾರಾರ್ಹ ಎನ್ನುವ ತತ್ವ ಒಟ್ಟಾಗಿ ಕಂತೆಯ ಪದ್ಯಗಳಲ್ಲಿ ಪ್ರತಿಪಾದಿತವಾಗಿದೆ. ಸತ್ಯ–ಸ್ನೇಹ, ಭೋಗ–ಯೋಗ–'ಉಪಯೋಗ'– ದೈವಶ್ರದ್ಧೆ, ಪ್ರಗತಿ ಹೀಗೆ ಹತ್ತಾರು ವಿಷಯಗಳತ್ತ ನಮ್ಮ ಗಮನ ಹರಿಯುವಂತೆ ಮಾಡಿ, ಸಮಸ್ಯೆಗಳಿಗೆ ಸಮಂಜಸ ಪರಿಹಾರವನ್ನು ಕವಿ ನೀಡುವುದು ಕಂತೆಯ ಪದ್ಯಗಳ ಅಗ್ಗಳಿಕೆ ಎನ್ನಬಹುದು. ಇಲ್ಲಿಯ ತತ್ವ ಸನಾತನವಾದರೂ ಹೇಳುವ ವಿಧಾನ ನಿತ್ಯನೂತನವಾದುದು. ಇಲ್ಲಿಯ ಪದ್ಯಗಳು ಸಮಕಾಲೀನ ಬದುಕನ್ನು ಸಂಸ್ಪರ್ಶಿಸಿ, ಸ್ಪಂದಿಸಿ, ಜೀವನ ಸೌಂದರ್ಯದ ದಿಕ್ಕನ್ನು ತೋರಿಸುವ ಕೈದೀವಿಗೆಗಳು. ಪರಿಣತ, ಪರಿಪಕ್ವ, ದಾರ್ಶನಿಕ ಮನಸ್ಸಿನಿಂದ ಮೂಡಿಬಂದ ಅರಿವಿನ ಬೆಳಕಿನ ಕಿರಣಗಳು. ಇಲ್ಲಿ ಕವಿಯ ಪ್ರತಿಯೊಂದು ಪದ್ಯವೂ ಆಳವಾದ ಆಧ್ಯಾತ್ಮಿಕ ಚಿಂತನೆಯಿಂದ ದರ್ಶನ ದೀಪ್ತಿಯಿಂದ, ಅನುಭವದ ಆಳದಿಂದ ಹೊರಟು ಜ್ಯೋತಿರ್ಲಿಂಗವಾಗಿ ಕಾಣುತ್ತದೆ.' ಎಂಬ ಷಣ್ಮುಖಯ್ಯ ಅಕ್ಕೂರಮಠ ಅವರ ನುಡಿಗಳು ಅಕ್ಷರಶಃ ನಿಜ.

ಕಾವ್ಯಾನಂದರ ದರ್ಶನ ಪ್ರತಿಭೆಯಿಂದ ಮೂಡಿಬಂದ ಈ ತತ್ವದ ಕಂತೆ ವಿಮರ್ಶಕರ ಗಮನ ಸೆಳೆಯದಿರುವುದು ವಿಷಾದ ಪಡುವ ಸಂಗತಿಯಾಗಿದೆ.

೧೨

ಕೊನೆಯದಾಗಿ ಕಾವ್ಯಾನಂದರ ಕಾವ್ಯಶೈಲಿಯ ಕುರಿತು ಒಂದೆರಡು ಮಾತುಗಳು. ಕಾವ್ಯಾನಂದರು ಸಂಸ್ಕೃತ, ಇಂಗ್ಲಿಷ್, ಹಿಂದಿ, ಉರ್ದು ಮೊದಲಾದ ಭಾಷೆಗಳನ್ನು ಆಳವಾಗಿ ಅಧ್ಯಯನ ಮಾಡಿದವರು. ಹೀಗಾಗಿ ಸಂಸ್ಕೃತ ಶ್ಲೋಕಗಳು, ಉರ್ದು ದೋಹೆಗಳು ಅವರಿಗೆ ಕರತಲಾಮಲಕವಾಗಿದ್ದವು. ತಮ್ಮ ಕಾವ್ಯದಲ್ಲಿ ಅವರು ಹೊಂದಿಕೆಯಾಗುವ ಯಾವುದೋ ಪದವನ್ನು ಯಾವುದೇ ಭಾಷೆಯಿಂದ ಬಳಸುತ್ತಾರೆ. ಪದಗಳ ಬಳಕೆಯಲ್ಲಿ ಅವರು ಮಡಿವಂತಿಕೆಯನ್ನು ಪಾಲಿಸುವುದಿಲ್ಲ. ತಮ್ಮ ಅಭಿವ್ಯಕ್ತಿಗೆ

ತತ್ಸಮ ಹೊಳೆದ ಬೇರೆ ಭಾಷೆಯ ಪದವನ್ನೂ ಅವರು ನಿರಾಯಾಸವಾಗಿ ಬಳಸುತ್ತಾರೆ. 'ನವಯುಗ ಲಕ್ಷ್ಮಿ' ಎಂಬ ಕವನದಲ್ಲಿ ಅವರು ಸಂಸ್ಕೃತ ಪದಗಳನ್ನು ಬಳಸುವ ರೀತಿ ನೋಡಿ:

ಹಿರಿಮಾತಾಡುವೆಯಾದೊಡು ನವಯುಗ ನಿನ್ನಿರವಿದು ಪಲಂ
ಮಧುತಿಷ್ಠತಿ ಜಿಹ್ವಾಗ್ರೇ ಹೃದಯೇಷು ಹಾಲಾಹಲಂ
ದುರ್ಬಲತೆಯೆ ಅನ್ಯಾಯವು ನ್ಯಾಯವು ಜಗದಲಿ ಬಲಂ
ಬಲವಾರದೊ ಗೆಲವರದು ಅವರದೆ ಈ ನೆ ಜಲಂ

(ನವಯುಗಲಕ್ಷ್ಮಿ : ಸಮಗ್ರ ಕಾವ್ಯ ಪು. ೧೯)

ಈ ದೇಶದ ಒಟ್ಟು ಪರಿಸ್ಥಿತಿಯನ್ನು ವಿವರಿಸುವ ಒಂದು ಕವನದಲ್ಲಿ ವಿಶ್ವಕವಿ ರವೀಂದ್ರರ ಮೂಲ ಬಂಗಾಲಿ ನುಡಿಗಳನ್ನು ಬಳಸುತ್ತಾರೆ.

ಹೇ ಮೋರ ದುರ್ಭಾಗ್ಯ ದೇಶ ಜಾಧೇರ ಕರೇಛ ಅಪಮಾನ,
ಅಪಮಾನೇ ಹೋತೇ ಹಬೇ ತಾಹಾದೇರ ಸಭಾರ ಸಮಾನ
ಮಾನುಷೇರ ಅಧಿಕಾರೇ ವಂಚಿತ ಕರೇಛ ಜಾರೇ
ಸಮ್ಮುಖೇ ದಾಂಡಾಯೇ ರೇಖೇ
ತಬೂಕೋಲೇ ದಾನು ನಾಯಿ ಸ್ಥಾನ
ಅಪಮಾನೇ ಹೋತೇ ಹಬೇ ತಾಹಾದೇಶ ಸಬಾರ ಸಮಾನ!

('ಏಳ್ಕೋಟಿಗೇಳ್ಕೋಟಿಗೇಳ್ಕೋಟಿಗೋ' ಸಮಗ್ರ ಕಾವ್ಯ ೨೪)

ಜ್ಞಾನ-ಪ್ರೇಮ ಶಬ್ದಗಳ ತುಲನೆ ಮಾಡುವ ಕಾಲಕ್ಕೆ ಸಂಸ್ಕೃತ ಶ್ಲೋಕಗಳನ್ನು ಬಳಸುವ ರೀತಿ ಹೀಗಿದೆ:

ಸರ್ವಂ ಜ್ಞಾನ ಪ್ಲವೇನೈವ ವೃಜಿನಂ ಸಂತರಿಷ್ಯತಿ
ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ
ಪ್ರಜ್ಞಾನೇತ್ರೇ ಲೋಕಃ ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ
ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ॥

ನ್ಯಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾಶ್ರುತೇನ
ಯಮೇವೈಷ ವೃಣುತೇ ತೇನಲಭ್ಯ
ಸ್ತಸ್ಯೈಷ ವಿವೃಣುತೇ ತನೂಂ ಸ್ವಾಮ್

(ಜ್ಞಾನ-ಪ್ರೇಮ : ಸಮಗ್ರ ಕಾವ್ಯ ೩೩)

ಕಾವ್ಯಾನಂದರ ಕಾವ್ಯದಲ್ಲಿ ಜಾನಪದ ಸಾಹಿತ್ಯದ ಸೊಗಸನ್ನು ಕಾಣಬಹುದು.

ದುಡದುಡದು ಬ್ಯಾಸತ್ತು ಬಂದಾಗ
ಕೈತುಂಬ ಕೂಲಿಯ ತಂದಾಗ
ಮನದಾಗ ತನನನ ಅಂದಾಗ
ಜೀವ ಕೇಳಬೇಕನತ ಕಿವಿಮಾತ
ಜೇನಿನ ಹನಿಗಿಂತ ಸವಿಮಾತ (ಕಿವಿಮಾತು : ಸಮಗ್ರ ಕಾವ್ಯ ಪು. ೭೪)

ಮತ್ತೆ ಕೆಲವು ಕವನಗಳಲ್ಲಿ ಜಾನಪದದ ಪ್ರಭಾವದೊಂದಿಗೆ ಬೇಂದ್ರೆಯವರ ಕಾವ್ಯಛಾಯೆಯನ್ನೂ ಗುರುತಿಸಬಹುದು.



ನಾನೀಗೇನ ಮಾಡ್ಲಿ?
ಈ ಪೇಚಿನಾಗಿಂದಾ ಹ್ಯಾಂಗ್ ಪಾರಾಗ್ಲಿ?
ಯಾವ್ದೋ ಗುಳಿಗೀ ಗಳಿಗ್ಯಾಗ
ಕವಿತಾ ಕಳಿಸ್ತೀನಿ ಅಂತಾ
ಮಾತು ಕೊಟ್ಟು ಬಿಟ್ಟೆ;

(ನಾನೀಗೇನ ಮಾಡ್ಲಿ? ಪು. ೩೮೨)

ಬೇಂದ್ರೆ ಪ್ರಭಾವ:
ತೇಲಾಡತಾವ
ಓಲಾಡತಾವ
ಲೋಲಾಡತಾವ ಮೋಡ
ಹೊಯ್ದಾಡತಾವ
ಹಾಯ್ದಾಡತಾವ
ಕಾಯ್ದಾಡತಾವ ಮೋಡ (ಸಮಗ್ರ ಕಾವ್ಯ ೪೨೦)

ಒಟ್ಟಾರೆ ಕಾವ್ಯಾನಂದರು ಭಾಷೆಯನ್ನು ಬಳಸುವ ರೀತಿ ಅನನ್ಯವಾಗಿದೆ.ಅವರು ಬಳಸುವ ಭಾಷೆಯಿಂದ ಕಾವ್ಯಕ್ಕೆ ಒಂದು ಕಮನೀಯತೆ ಪ್ರಾಪ್ತವಾಗಿದೆ. ಒಟ್ಟಂದದಲ್ಲಿ ಕಾವ್ಯಾನಂದರು ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಪ್ರಮುಖ ಕವಿಗಳಲ್ಲಿ ಒಬ್ಬರಾಗಿ ಪರಿಗಣಿತರಾಗಿದ್ದಾರೆ.

'ಸಿದ್ಧಯ್ಯ ಪುರಾಣಿಕರ ಸಮಸ್ತ ಕಾವ್ಯವನ್ನು ಅಧ್ಯಯನ ಮಾಡಿದ ನಂತರ 'ಕಾವ್ಯಾನಂದ' 'ಸಿದ್ಧಯ್ಯ' ಎಂಬ ಕಾವ್ಯನಾಮ ಹಾಗೂ ನಿಜನಾಮಗಳು ಅನ್ವರ್ಥವೆಂದೇ ಹೇಳಬೇಕಾಗಿದೆ....ತಾವು ರೂಪಿಸಿದ ಕಾವ್ಯನೀತಿಯನ್ನವರು ತಮ್ಮ ಕೃತಿಗಳಲ್ಲಿ ಜಾರಿಗೊಳಿಸಿದ್ದಾರೆ. ಹೊಸ ಹೊಸ ಕಲ್ಪನೆಗಳು, ಹೊಸ ಹೊಸ ಉಪಮಾನ ರೂಪಕಗಳು, ಹೊಸ ಹೊಸ ಛಂದಸ್ಸಿನ ಲಾಸ್ಯತಾಂಡವಗಳು, ವಿನೂತನ ಶಬ್ದಮಾಧುರ್ಯ ಲಾಲಿತ್ಯಗಳಿಂದೊಡಗೂಡಿದ ಮೋಹಕ ಶೈಲಿ, ನೂತನ ಭಾವಾನುಭಾವ ಚಿಂತನಗಳು, ಸಾಮಾಜಿಕ ಪ್ರಜ್ಞೆ-ಇವು ಪುರಾಣಿಕರ ಕಾವ್ಯಗಳಲ್ಲಿ ಕಾಣುವ ವೈಶಿಷ್ಟ್ಯಗಳು' ಎಂಬ ದೇಜಗೌ ಅವರ ನುಡಿಗಳು ಕಾವ್ಯಾನಂದರ ಕಾವ್ಯಶ್ರದ್ಧೆಗೆ ಹಿಡಿದ ಕನ್ನಡಿಯಾಗಿವೆ.

ಕಾವ್ಯಾನಂದರ ಕಾವ್ಯವನ್ನು ಕುರಿತು ಎಷ್ಟು ಹೇಳಿದರೂ ಕಡಿಮೆಯೇ. ಅದು ಅನಂತ ಆಕಾಶ, ಆಳ ವಾರಿಧಿ ಇದ್ದಂತೆ. ಅನುಭಾವಿ ಕವಿ ಮಧುರಚೆನ್ನರ ನುಡಿಯೊಡನೆ ಕಾವ್ಯಾನಂದರ ಕಾವ್ಯರಸಗ್ರಹಣವನ್ನು ಮುಕ್ತಾಯಗೊಳಿಸುವೆ:

ಅನ್ನಬಹುದೇನಯ್ಯ ಹಾಡು ಮುಗಿಯಿತ್ತೆಂದು
ಜನ್ಮದಾಕಾಶದಲ್ಲದರ ಬೇರು
'ಕನ್ನಡಿಯೊಳೆಷ್ಟು ಹಿಡಿಸೀತು ಕನಕಾಚಲವು
ಕೊಡಕೆ ಹಿಡಿಸೀತೆಷ್ಟು ಕಡಲ ನೀರು.

■■

ಕನ್ನಡ ಸಾಹಿತ್ಯದಲ್ಲಿ ಡಾ.ಸಿದ್ದಯ್ಯ ಪುರಾಣಿಕರದು ಬಹು ಎತ್ತರದ ಹೆಸರು. ಹಿರಿಯ ಐ.ಎ.ಎಸ್ ಅಧಿಕಾರಿಯಾಗಿ ರಾಜ್ಯ ಸರ್ಕಾರದ ವಿವಿಧ ಹುದ್ದೆಗಳಲ್ಲಿ ಅತ್ಯಂತ ದಕ್ಷವಾಗಿ ಕಾರ್ಯನಿರ್ವಹಿಸಿದ ಡಾ.ಪುರಾಣಿಕರು ಅದರ ಜೊತೆಗೇ ಸಾಹಿತ್ಯ ಕೃಷಿಯನ್ನು ಕೂಡ ನಿರಂತರವಾಗಿ ಮಾಡಿಕೊಂಡು ಬಂದರು. ಅವರ ಬದುಕು ಹಾಗೂ ಬರಹ ಕುರಿತು ಪ್ರಕಾಶ ಗಿರಿಮಲ್ಲನವರ ಬರೆದಿರುವ ಈ ಕೃತಿ ಅಪರೂಪದ ಮಾಹಿತಿಗಳನ್ನು ಒಳಗೊಂಡಿದೆ. ಇಂಥ ಕೃತಿಯನ್ನು ಬರೆದುಕೊಟ್ಟ ಗಿರಿಮಲ್ಲನವರ ಅವರಿಗೆ ಅಭಿನಂದನೆಗಳು. ಓದುಗರಿಗೆ ಈ ಕೃತಿ ಇಷ್ಟವಾಗುತ್ತದೆ ಎಂಬ ನಂಬಿಕೆ ನನ್ನದು.

ಡಾ.ಮನು ಬಳಿಗಾರ್
ಅಧ್ಯಕ್ಷರು

ರೂ.೧೦೦/-

**ಕನ್ನಡ ಸಾಹಿತ್ಯ ಪರಿಷತ್ತು**
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.